# ಮಹಾಯೋಗಿ ವೇಮನ
# ಮತ್ತು
# ಅಲ್ಲಮಪ್ರಭು

**ಡಾ. ಆರ್. ಬಿ. ಚಿಲಮಿ**
ಅಧ್ಯಾತ್ಮ ಚಿಂತಕರು, ಸಾಹಿತಿಗಳು
ಧಾರವಾಡ

**2024**

**ಮಹಾಯೋಗಿ ವೇಮನ ಪೀಠ**
**ಕರ್ನಾಟಕ ವಿಶ್ವವಿದ್ಯಾಲಯ,**
**ಧಾರವಾಡ–03**

**ಮಹಾಯೋಗಿ ವೇಮನ ಮತ್ತು ಅಲ್ಲಮಪ್ರಭು**

ಲೇಖಕರು : ಡಾ. ಬಿ. ಆರ್. ಚಿಲಮಿ,
ನಿವೃತ್ತ ಪ್ರಾಧ್ಯಾಪಕರು ಹಾಗೂ ಪ್ರಾಚಾರ್ಯರು,
'ಹೊಂಬೆಳಕು', ಮನೆ ನಂ.3,
ಓಂ ಶಾಲೆ ಎದುರುಗಡೆ, ಜಲದರ್ಶಿನಿ ನಗರ,
ಧಾರವಾಡ. ಮೊ: 9880206032

ಪ್ರಕಾಶಕರು : ಮಹಾಯೋಗಿ ವೇಮನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
© : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಪ್ರಥಮ ಮುದ್ರಣ : 2024

ಬೆಲೆ : ರೂ.120/–

ಪ್ರತಿಗಳು : 500

ಆಕಾರ : 1/8 ಡೆಮಿ

ಕಾಗದ : 70 ಜಿಎಸ್ಎಮ್ ಮ್ಯಾಪ್ಲಿಥೋ

ಪುಟ ಸಂಖ್ಯೆ : x+150

ಡಿ.ಟಿ.ಪಿ. : ಆರ್. ಕೆ. ಹೆಗಡೆ, ಧಾರವಾಡ

ಮುಖಪುಟ : ದೀಪಕ ಕೆ.ಬಿ., ಚಿತ್ತಾರ ಗ್ರಾಫಿಕ್ಸ್, ಧಾರವಾಡ

ಮುದ್ರಕರು : ಸಂಗಮ ಮುದ್ರಣಾಲಯ, ಧಾರವಾಡ

# ಕುಲಪತಿಗಳ ನುಡಿ

ವಿಶ್ವವಿದ್ಯಾಲಯಗಳು ಪ್ರಪಂಚದ ವಿವಿಧ ವಿಷಯಗಳ ಜ್ಞಾನವನ್ನು ಸಮಗ್ರವಾಗಿ ಒಟ್ಟುಗೂಡಿಸಿ ಜನಸಮುದಾಯಕ್ಕೆ ತಲುಪಿಸುವ ಉದ್ದೇಶದಿಂದ ಸ್ಥಾಪಿತವಾದವುಗಳು. ಸಂಶೋಧನೆಗಳಿಂದ ಪ್ರಕಟವಾಗುವ ಹೊಸ ಹೊಸ ಜ್ಞಾನವನ್ನು ಸರ್ವರಿಗೂ ತಲುಪಿಸಿ ಮನುಕುಲದ ಸರ್ವತೋಮುಖ ಏಳ್ಗೆ ಮಾಡುವುದರ ಜೊತೆಗೆ ಆಧ್ಯಾತ್ಮಿಕ ಚಿಂತನೆಯನ್ನೂ ಸಹ ಬೆಳೆಸಲು ಪ್ರೇರಣೆ ಮಾಡುವುದು ವಿಶ್ವವಿದ್ಯಾಲಯಗಳ ಗುರಿ.

ಶ್ರೇಷ್ಠವಾದ ತತ್ವ ಚಿಂತನೆಗಳನ್ನು ಮಾನವ ಕುಲಕ್ಕೆ ನೀಡಿದ ತೆಲುಗಿನ ಮಹಾಯೋಗಿ ವೇಮನರು ಕನ್ನಡದ ಸರ್ವಜ್ಞನಂತೆ. ಸರಳ ಭಾಷೆಯಲ್ಲಿ ಸಾಮಾನ್ಯ ವಿಷಯದಿಂದ ಗಹನವಾದ ವಿಷಯದವರೆಗೆ ಜನಹಿತ ವಿಷಯಗಳನ್ನೇ ಸಾರಿದ ಸಂತ ಕವಿ. ಈ ಪ್ರಜಾ ಕವಿಯು ಸಾವಿರಾರು ಪದ್ಯಗಳನ್ನು ರಚಿಸಿದ್ದು ಅವುಗಳನ್ನೆಲ್ಲ ಒಟ್ಟುಗೂಡಿಸಿ ಕನ್ನಡಕ್ಕೆ ತರ್ಜುಮೆ ಮಾಡಿ "ವೇಮನರ ವಿಶ್ವಗೀತೆ" ಎಂಬ ಹೆಸರಿನಡಿಯಲ್ಲಿ ಪ್ರಕಟಿಸಿದವರು ಹುಲಕೋಟಿಯ ಶ್ರೀ ಎಸ್. ಆರ್. ಪಾಟೀಲ ಅವರು.

ತತ್ವ ಚಿಂತಕರ ಚಿಂತನೆಗಳನ್ನು, ದರ್ಶನಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದರಿಂದ ಹೊಸ ಚಿಂತನೆಗಳು ಉದ್ಭವವಾಗಲು ಸಹಕಾರಿಯಾಗುತ್ತದೆ ಎಂಬ ಚಿಂತನೆಯೊಂದಿಗೆ ಮಹಾಯೋಗಿ ವೇಮನ ಮತ್ತು ಸರ್ವಜ್ಞ ಹಾಗೂ ಮಹಾಯೋಗಿ ವೇಮನ ಮತ್ತು ತರುವಳ್ಳುವರ್ ತತ್ವಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಮಹಾಯೋಗಿ ವೇಮನ ಪೀಠದ ವತಿಯಿಂದ ಪ್ರಕಟಿಸಿರುವ ಡಾ. ಆರ್. ಬಿ. ಚಿಲಮಿ ಅವರು ಅಭಿನಂದನಾರ್ಹರು. ಕನ್ನಡ ಭಾಷೆಯ ನಿವೃತ್ತ ಪ್ರಾಧ್ಯಾಪಕರು, ಶ್ರೇಷ್ಠ ಚಿಂತಕರು ಮಹಾವಿದ್ಯಾಲಯದ ಪ್ರಾಚಾರ್ಯರಾಗಿಯೂ ಒಳ್ಳೆಯ ಕೆಲಸ ಮಾಡಿದವರು. ನಿವೃತ್ತಿಯ ನಂತರವೂ ನಿರಂತರ ಬರವಣಿಗೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಅವರ ಶ್ರೇಷ್ಠ ಚಿಂತನೆಯ ಫಲವಾಗಿ ಈಗ "ಮಹಾಯೋಗಿ ವೇಮನ ಮತ್ತು ಅಲ್ಲಮಪ್ರಭು" ಎಂಬ ಈ ಗ್ರಂಥವು ಪ್ರಕಟವಾಗುತ್ತಿರುವುದು ಅತ್ಯಂತ ಸ್ತುತ್ಯರ್ಹ.

ಪ್ರಪಂಚದ ವಿವಿಧ ತತ್ವ ಚಿಂತಕರ ಚಿಂತನೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವವರಿಗೆ ಇದೊಂದು ಮಾರ್ಗದರ್ಶಕ ಗ್ರಂಥವಿದ್ದಂತೆ. ಇದನ್ನು ಮುದ್ರಿಸಿ

ಜನಸಮುದಾಯಕ್ಕೆ ದೊರೆಯುವಂತೆ ಮಾಡಿರುವ ಮಹಾಯೋಗಿ ವೇಮನ ಪೀಠಕ್ಕೆ ಅಭಿನಂದನೆಗಳು. ಇದೇ ರೀತಿ ಮಹಾಯೋಗಿ ವೇಮನ ಪೀಠವು ತನ್ನ ಕಾರ್ಯಚಟುವಟಿಕೆಗಳನ್ನು ವಿಭಿನ್ನ ಆಯಾಮಗಳಲ್ಲಿ ವಿಸ್ತರಿಸಿಕೊಳ್ಳುವ ಮೂಲಕ ಮಾನವ ಕಲ್ಯಾಣದ ಕೆಲಸವನ್ನು ಮುಂದುವರಿಸಲೆಂದು ಹಾರೈಸುತ್ತೇನೆ.

ಧಾರವಾಡ
೧೬-೬-೨೦೨೪

**ಪ್ರೊ. ಕೆ. ಬಿ. ಗುಡಸಿ**
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಸಂಯೋಜಕರ ನುಡಿ

ಮಹಾಯೋಗಿ ವೇಮನರು ಭಾರತೀಯ ದಾರ್ಶನಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಶ್ರೇಷ್ಠ ಸಂತಕವಿ. ಪರಮಜ್ಞಾನಿ. ಸ್ಥಾಪಿತ ಧರ್ಮ, ಜಾತಿ, ಜನಾಂಗ, ದೇಶ, ಭಾಷೆ ಮತ್ತು ವ್ಯಕ್ತಿ ಪ್ರಚಾರದಂತಹ ಮಾನವ ಕಲ್ಪಿತ ವಿಷಯಗಳನ್ನು ಮೀರಿ ಇರುವ ಶಾಂತಿಯನ್ನು ದರ್ಶಿಸಲು ಮಾರ್ಗ ತೋರಿಸಿದವರು. ಇವರು ಯಾವುದೇ ಸಂಘ–ಸಂಸ್ಥೆಗಳನ್ನು ಮತ–ಸಂಪ್ರದಾಯಗಳನ್ನು ಸ್ಥಾಪಿಸದೇ ಕೇವಲ ಸತ್ಸಂಗದ ಮೂಲಕ ಸಮಾನ ಮನಸ್ಕರನ್ನು ಆಕರ್ಶಿಸಿ ಸಾಧನಾ ಪಥವನ್ನು ಉಪದೇಶಿಸಿದ್ದಾರೆ.

ಇವರನ್ನು ಕನ್ನಡ ನಾಡಿಗೆ ಪರಿಚಯಿಸಲು ತಮ್ಮ ಜೀವನವನ್ನೇ ಸಮರ್ಪಿಸಿದ ಹುಲಕೋಟಿಯ ಪೂಜ್ಯ ಶ್ರೀ ಎಸ್. ಆರ್. ಪಾಟೀಲರು ತೆಲುಗಿನಲ್ಲಿರುವ ವೇಮನರ ಬಹುಭಾಗ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಿದರು. ಈ ಸಾಹಿತ್ಯವು ಸರ್ವರಿಗೂ ದೊರೆಯಲು ಸಹಾಯಕವಾಗುವಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಹಾಯೋಗಿ ವೇಮನಪೀಠವನ್ನು ಸ್ಥಾಪಿಸಿದರು. ವೇಮನರ ಸುಮಾರು ೪೦೦೦ ಪದ್ಯಗಳನ್ನು ಕನ್ನಡಕ್ಕೆ ಅನುವಾದಿಸಿ "ವೇಮನ ವಿಶ್ವಗೀತೆ", ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ.

ಮಹಾಯೋಗಿ ವೇಮನ ಪೀಠವು ವೇಮನರ ತತ್ವ ಸಿದ್ಧಾಂತಗಳನ್ನು ಜನಸಮುದಾಯಕ್ಕೆ ತಲುಪಿಸಲು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇದರ ಭಾಗವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರಚಾರೋಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. 'ಮಹಾಯೋಗಿ ವೇಮನ ಮತ್ತು ಅಲ್ಲಮಪ್ರಭು' ಎಂಬ ಈ ಪುಸ್ತಕವನ್ನು ಬರೆದಿರುವ ಡಾ. ಆರ್. ಬಿ. ಚಿಲಮಿ ಅವರು ಈ ನಾಡಿನ ಸಾಹಿತಿಗಳಲ್ಲಿ ಪ್ರಮುಖರಾದವರು. ಭಾರತೀಯ ಆಧ್ಯಾತ್ಮಿಕ ಮತ್ತು ಶರಣ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹೊಂದಿರುವ ಇವರು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಇವರೇ ರಚಿಸಿರುವ 'ಮಹಾಯೋಗಿ ವೇಮನ ಮತ್ತು ಸರ್ವಜ್ಞ' ಹಾಗೂ 'ಮಹಾಯೋಗಿ ವೇಮನ ಮತ್ತು ತಿರುವಳ್ಳುವರ್' ಪುಸ್ತಕಗಳು ಈಗಾಗಲೇ ಮಹಾಯೋಗಿ ವೇಮನ ಪೀಠದಿಂದ ಪ್ರಕಟವಾಗಿವೆ.

ಡಾ. ಆರ್.ಬಿ.ಚಿಲಮಿಯವರು ನಿವೃತ್ತ ಪ್ರಾಚಾರ್ಯರು, ಕನ್ನಡ ಭಾಷೆಯ ಪ್ರಾಧ್ಯಾಪಕರಾಗಿ ಅಮೋಘ ಕಾರ್ಯ ಮಾಡಿದವರು. ನಿವೃತ್ತಿಯ ನಂತರವೂ ಸದಾ ಲವಲವಿಕೆಯಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿರುವವರು. ಇವರ

ಅಧ್ಯಯನ ಮತ್ತು ಚಿಂತನೆಯಲ್ಲಿ ಪ್ರಕಟವಾಗಿರುವ ಈ ಪುಸ್ತಕದ ಜ್ಞಾನವು ಸರ್ವರಿಗೂ ತಲುಪಿ ಅವರ ಜೀವನವು ಆನಂದಮಯವಾಗಲಿ ಎನ್ನುವುದು ಮಹಾಯೋಗಿ ವೇಮನ ಪೀಠದ ಆಶಯ.

ಅಮೂಲ್ಯವಾದ ಈ ಕಾರ್ಯವನ್ನು ನೆರವೇರಿಸಲು ಅನುಮತಿಯನ್ನಿತ್ತ ಮಹಾಯೋಗಿ ವೇಮನ ಪೀಠದ ಸಲಹಾ ಸಮಿತಿಯ ಸರ್ವ ಸದಸ್ಯರಿಗೂ ಗೌರವಾನ್ವಿತ ಕುಲಪತಿಗಳಿಗೂ, ಕುಲಸಚಿವರಿಗೂ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಮುದ್ರಣ ಮಾಡಿಕೊಟ್ಟ ಸಂಗಮ ಮುದ್ರಣಾಲಯ, ಧಾರವಾಡ ಅವರಿಗೂ ಪ್ರಣಾಮಗಳು. ಈ ಕೃತಿಯ ಡಿಟಿಪಿ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿರುವ ಶ್ರೀ ಆರ್. ಕೆ. ಹೆಗಡೆ ಅವರಿಗೂ ಹಾಗೂ ಮುಖಪುಟ ವಿನ್ಯಾಸ ಮಾಡಿದ ಶ್ರೀ ದೀಪಕ ಕೆ.ಬಿ. ಚಿತ್ತಾರ ಗ್ರಾಫಿಕ್ಸ್ ಧಾರವಾಡ ಅವರಿಗೂ ನನ್ನ ಅನಂತ ಕೃತಜ್ಞತೆಗಳು. ಪರೋಕ್ಷ ಮತ್ತು ಅಪರೋಕ್ಷವಾಗಿ ಈ ಕಾರ್ಯಕ್ಕೆ ಸಹಕರಿಸಿದ ಸರ್ವರಿಗೂ ವಂದನೆಗಳು.

ಸಂಯೋಜಕರು
**– ಡಾ. ಎಚ್. ಬಿ. ನೀಲಗುಂದ**
ಮಹಾಯೋಗಿ ವೇಮನಪೀಠ
ಕ.ವಿ.ವಿ., ಧಾರವಾಡ.

# ಲೇಖಕರ ನುಡಿ

**ಓಂ ತತ್ಸತ್**

ಪ್ರತಿಷ್ಠಿತ ಕರ್ನಾಟಕ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳವರು ಪ್ರಸಾರಾಂಗದ ನಿರ್ದೇಶಕರು, ವೇಮನ ಪೀಠದ ಸಂಯೋಜಕರ ಸಹಕಾರದೊಂದಿಗೆ ವೇಮನಾಲ್ಲಮರ ತತ್ತ್ವ–ಸಿದ್ಧಾಂತಗಳನ್ನು ಅವರವರ ಪದ–ಪದ್ಯ–ವಚನಗಳ–ನಾಧ್ಯಯನಗೈದು ಎನ್ನ ಮತಿಗೆ ಹೊಳೆದಷ್ಟು ಅಧ್ಯಾತ್ಮದ ಸುವಿಚಾರಗಳನ್ನು ತಿಳಿಯಪಡಿಸಿರುವೆ! ಮೇಲ್ಕಾಣಿಸಿದ ಅಧಿಕಾರಿಗಳು ನೀಡಿರುವ ಸದಾವಕಾಶದಿಂದಲಿ; ಪರಮ ಪವಿತ್ರ ಭಕ್ತಿ–ಯುಕ್ತಭರಿತ ಶ್ರದ್ಧೆಯಿಂದಲಿ... ಮಹಾಯೋಗಿ ವೇಮನಾಲ್ಲಮರ ಚರಿತೆ–ಸಿದ್ಧಿ–ಸಾಧನೆಗಳನ್ನು ಧರ್ಮ–ನ್ಯಾಯ ನಿಷ್ಠೆ–ಸತ್ಯ–ಪ್ರಾಮಾಣಿಕತೆ ವ್ರತದಿಂದಲಿ ಬರೆದು ತಮ್ಮೆದುರಿಗೆ ಈ ಗ್ರಂಥವನ್ನು ಆದರಭಾವದಿಂದಲಿ ಸಾದರಪಡಿಸಿರುವೆನು; ತಾವಿದನು ಪವಿತ್ರ ಭಾವದಿಂದಲೋದಿ ಹರಸಿರೆನ್ನನು ಎಂದು ತಮ್ಮೆಲ್ಲರಲಿ ಪ್ರಾರ್ಥಿಸಿಕೊಳ್ಳುವೆನು!! ಇದೋ ಅವಕಾಶವಿತ್ತೆಲ್ಲ ಮೇಲಾಧಿಕಾರಿಗಳಿಗಾನು ಉಪಕೃತನಾಗಿಹೆನು! ಅದು ಕಾರಣ ತಮ್ಮೆಲ್ಲರಿಗೂ ಎನ್ನ ನುಡಿ ನಮನಗಳು! ವಿಶ್ವಧಾಬಿರಾಮ ಕೇಳು ವೇಮನಾಲ್ಲಮ ಗುಹೇಶ್ವರ!!

**– ಡಾ. ಆರ್. ಬಿ. ಚಿಲಮಿ**
ಹಿರಿಯ ಸಾಹಿತಿಗಳು
ಧಾರವಾಡ.

# ವಿಷಯಾನುಕ್ರಮಣಿಕೆ

* ಕುಲಪತಿಗಳ ನುಡಿ

* ಸಂಯೋಜಕರು ನುಡಿ

* ಲೇಖಕರ ನುಡಿ

ಅಧ್ಯಾಯಗಳು

| | | | |
|---|---|---|---|
| ಅಧ್ಯಾಯ–ಒಂದು | : | ವಿಷಯ ಪ್ರವೇಶ | 1 |
| ಅಧ್ಯಾಯ–ಎರಡು | : | ಮಹಾಯೋಗಿ ವೇಮನ: ಜೀವನ ವೃತ್ತಾಂತ | 10 |
| ಅಧ್ಯಾಯ–ಮೂರು | : | ಮಹಾಯೋಗಿ ವೇಮನರ ಪದಗಳ ವೈಶಿಷ್ಟ್ಯ | 23 |
| ಅಧ್ಯಾಯ–ನಾಲ್ಕು | : | ಅಲ್ಲಮಪ್ರಭುದೇವರ: ಜೀವನ ವೃತ್ತಾಂತ | 29 |
| ಅಧ್ಯಾಯ–ಐದು | : | ಅಲ್ಲಮಪ್ರಭುದೇವರ ವಚನಗಳ ವೈಶಿಷ್ಟ್ಯ | 39 |
| ಅಧ್ಯಾಯ–ಆರು | : | ವೇಮನಾಲ್ಲಮರ ಸಾಹಿತ್ಯದಲ್ಲಿ ಭಕ್ತ–ಭಕ್ತಿ | 44 |
| ಅಧ್ಯಾಯ–ಏಳು | : | ವೇಮನಾಲ್ಲಮರ ಸಾಹಿತ್ಯದಲ್ಲಿ ಗುರು ಕಾರುಣ್ಯ ಸ್ಥಲ: ಗುರು ಮಹಿಮೆ | 73 |
| ಅಧ್ಯಾಯ–ಎಂಟು | : | ವೇಮನಾಲ್ಲಮರ ಸಾಹಿತ್ಯದಲ್ಲಿ ದೇವರು | 93 |
| ಅಧ್ಯಾಯ–ಒಂಭತ್ತು | : | ವೇಮನಾಲ್ಲಮರ ಸಾಹಿತ್ಯದಲ್ಲಿ ಮೋಕ್ಷ | 122 |
| ಅಧ್ಯಾಯ–ಹತ್ತು | : | ಸಮಾರೋಪ | 144 |
| | | ಸಹಾಯಕ ಗ್ರಂಥಗಳು | 149 |

# ಅಧ್ಯಾಯ – ಒಂದು

# ವಿಷಯ ಪ್ರವೇಶ

**ಧರ್ಮ–ಜ್ಞಾನದ ಜಿಜ್ಞಾಸೆ :**

ಮಾನವ ಜನ್ಮ ತಳೆದು ಆತ ಬೆಳೆದು ದೊಡ್ಡವನಾಗುತ್ತಿದ್ದಂತೆಯೇ ಧರ್ಮ–ಜ್ಞಾನದ ಕುರಿತು ತಿಳುವಳಿಕೆ ನೀಡುವುದು ಅಂದಂದಿನ ಕಾಲಘಟ್ಟದಲ್ಲಿರುವ ಗುರು–ಹಿರಿಯರ ಕರ್ತವ್ಯವಾಗಿದೆ. ಧರ್ಮದ ನಡೆ ಅತ್ಯವಶ್ಯಕ. ಅದುವೇ ಮಾನವನ ಬದುಕಿಗೆ ಭದ್ರ ಬುನಾದಿ. ಧರ್ಮ–ಧ್ಯಾನ–ಜ್ಞಾನ–ಅಧ್ಯಾತ್ಮ ಇವೆಲ್ಲವೂ ವಿಶಾಲಾರ್ಥದಲ್ಲಿ ಸರ್ವಾಂಗೀಣ ಪ್ರಗತಿಗೆ ಕಾರಣವಾಗುವ ಉತ್ತಮ ಅಂಶಗಳು. ಇವುಗಳಿಲ್ಲದ ಮಾನವನ ಬದುಕು ಅಸಂಗತ, ಅನಾಗರಿಕವಾದುದು. ಧರ್ಮ–ಜ್ಞಾನವಿಲ್ಲದ ಬದುಕು ಕುರುಡು ಇದ್ದಂತೆ! ಕಣ್ಣಿದ್ದೂ ಕಾಣದರಿಯದಂತೆ! ಸೃಷ್ಟಿಕರ್ತ ಚರಾಚರ ವಸ್ತುಗಳೆಲ್ಲವನ್ನೂ ಕರುಣಿಸಿದಾಗ ಅವುಗಳ ಸದುಪಯೋಗ ಮಾಡಿಕೊಳ್ಳದಿದ್ದರೆ ಮಾನವನಾಗಿ ಹುಟ್ಟಿ ಏನು ಪ್ರಯೋಜನ? ಅದು ಕಾರಣ ನಾವು ಗುರು–ಹಿರಿಯರ, ಸಾಧಕರ, ಚಿಂತಕರ, ಅಧ್ಯಾತ್ಮ–ತತ್ತ್ವವೇತ್ತರ ಕಡೆಗೆ ಗಮನ ಹರಿಸುವುದು ಆರೋಗ್ಯಕರ ಲಕ್ಷಣವೆಂದು ನಾನು ಭಾವಿಸಿದ್ದೇನೆ. ಋಷಿಮುನಿಗಳು, ಯೋಗಿಗಳು, ತ್ಯಾಗಿಗಳು, ವಿರಾಗಿಗಳು, ಮಹಾಯೋಗಿಗಳು, ಶಿವಯೋಗಿಗಳು ಈ ದಿಸೆಯತ್ತ ಮುನ್ನಡೆದು ನಮಗೆಲ್ಲ ದಾರಿದೀಪವಾದವರು. ಅವರು ಬರೆದಿದಿಟ್ಟ ಅಪಾರವಾದ ಧರ್ಮ ಗ್ರಂಥಗಳು ಅಸಂಖ್ಯಾತವಾಗಿ ವಿವಿಧ ಭಾಷೆಗಳಲ್ಲಿವೆ. ನಮ್ಮ ನಮ್ಮ ಭಾಷೆಯಲ್ಲಿ ಅವುಗಳ ಸಾರವನ್ನು ಸವಿಯುವುದೇ ನಮ್ಮೆಲ್ಲರ ಕರ್ತವ್ಯವಾಗಬೇಕೆಂದು ನನ್ನ ಆಲೋಚನೆಯಾಗಿದೆ.

ಭಾರತೀಯ ಸಂಸ್ಕೃತಿಯ ಬೇರು ದೇವರು, ಧರ್ಮ, ಅಧ್ಯಾತ್ಮ ಎಂದು ಹೇಳುತ್ತಾರೆ. ಇವುಗಳ ಜ್ಞಾನವಿಲ್ಲದವನ ಬದುಕು ಬರಿದು. ಅಧಿ–ಆತ್ಮ=ಅಧ್ಯಾತ್ಮ (ಆಧ್ಯಾತ್ಮ)! ಎರಡು ಎರಡಕ್ಷರವೆಂಬ ಮೋಕ್ಷಕ್ಕೆ ತಳಪಾಯವಿದ್ದಂತೆ. ಅಂದರೆ ಆತ್ಮವು ಪರಮಾತ್ಮನ ಸಮೀಪಕ್ಕೆ ಹೋಗುವುದೇ ಅಧ್ಯಾತ್ಮವಾಗಿದೆಯೆಂದು ಅಧ್ಯಾತ್ಮ ಚಿಂತಕರ ಹೇಳಿಕೆಯಾಗಿದೆ. ದೇಹವು ಸುಪುಷ್ಟವೂ, ಸುಂದರವೂ, ಆರೋಗ್ಯಕರವೂ ಆಗಿರಬೇಕಾದರೆ ಅಧ್ಯಾತ್ಮದ ಕಡೆಗೆ ಮುಖ ಮಾಡಬೇಕು. ಯೋಗ ಮಹಾಯೋಗಗಳ

ಸಾಧನೆಯೊಂದಿಗೆ ಅಧ್ಯಾತ್ಮದ ನೀತಿ–ನಿಯಮಗಳು ಧರ್ಮ ಮಾರ್ಗದಲ್ಲಿರುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಅದು ಭಕ್ತಿ, ಶ್ರದ್ಧೆ, ನೀತಿ–ನಿಯಮಗಳ ತಾತ್ತ್ವಿಕ ಸಿದ್ಧಾಂತಗಳ ನೆಲೆಗಟ್ಟಿನ ಮೇಲೆಯೇ ಅವಲಂಬಿತವಾಗಿರುತ್ತದೆಯೆಂಬುದು ಸತ್ಯ. ಸತ್ಯವೇ ದೇವರು ಮಿಥ್ಯವೇ ರಾಕ್ಷಸ (ದೆವ್ವ). 'ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂದು ಗೋವಿನ ಹಾಡಿನಲ್ಲಿ ಹೇಳಿದ್ದುದು ಇದೇ ಅರ್ಥದಲ್ಲಿಯೇ! ಅಂದರೆ ಮಾನವನಾಗಿ ಹುಟ್ಟಿ ಬಂದ ಮೇಲೆ ಸತ್ಯ ಧರ್ಮ ವ್ರತ, ನ್ಯಾಯ–ನಿಷ್ಠೆಯಿಂದ, ಪರೋಪಕಾರಿಯಾಗಿ ಬದುಕುವುದು, ಗುರು–ಹಿರಿಯರಿಗೆ ಪ್ರೀತ್ಯಾದರಗಳನ್ನು ಸಲ್ಲಿಸುವುದು, ಹೆತ್ತ ತಂದೆ–ತಾಯಿಗಳೇ ದೇವರೆಂದು ಬಗೆದು ಪಾಲನೆ ಮಾಡುವುದು, ಇವನಾರವ ಇವನಾರವ ಎಂದೆನ್ನದೇ ಇವ ನಮ್ಮವ ಇವ ನಮ್ಮವನೆಂಬುದಾಗಿ ನೆರೆಹೊರೆಯವರನ್ನು ಪ್ರೀತಿ ಮಮತೆಯಿಂದ ಕಾಣುವುದು– ಈ ಮುಂತಾದ ಮಾನವೀಯ ಮೌಲ್ಯಗಳುಳ್ಳಾತನೇ ಅಧ್ಯಾತ್ಮದ ಗುರು, ಸಮಾಜದ ನಿಜವಾದ ಚಿಂತಕ ಎಂದು ಕರೆಯಲಾಗಿದೆ. ಈ ಗುಣಗಳನ್ನು ತಾನು ಅಳವಡಿಸಿಕೊಂಡು ಇತರರಿಗೆ ಹಂಚುವವನು ಎಂದರ್ಥ. ಇಂತಹ ಮಹಾತ್ಮರುಗಳು, ಸಂತ–ಮಹಂತರು, ಋಷಿ–ಮುನಿಗಳು, ಶರಣರು–ದಾಸರು, ಸೂಫಿಗಳು–ಅಸಂಖ್ಯಾತರು ಈ ಭಾರತ ದೇಶದಲ್ಲಿ ಆಗಿ ಹೋಗಿದ್ದಾರೆ ಎಂಬುದಕ್ಕೆ ಸಾಕಷ್ಟು ಚರಿತ್ರೆಗಳು, ಸಾಹಿತ್ಯದ ಧರ್ಮ ಗ್ರಂಥಗಳಲ್ಲಿ ಕಾಣಸಿಗುತ್ತವೆ. ಅವುಗಳತ್ತ ನಾವು–ನೀವೆಲ್ಲರೂ ಮುಖ ಮಾಡಬೇಕಾಗಿದೆಯಿಂದು! ಕೇವಲ ಸಂಕಟ ಬಂದಾಗ ವೆಂಕಟರಮಣನನ ಸ್ಮರಣೆಯಂತಾಗಬಾರದು. ನಿರಂತರವೂ ಬದುಕು ಇರುವವರೆಗೂ ಸೃಷ್ಟಿಸಿದಾತನ, ಆ ಕರುಣಾಕರ ದಾತಾರನ ಸ್ಮರಣೆ ಯಾವತ್ತೂ ಇರಬೇಕಾಗುತ್ತದೆ. ಅಂದಾಗ ಮಾನವನ ಇಹದ ಬಾಳು ಸುಂದರವಾಗುತ್ತದೆ. ಬದುಕಿನ ಜಂಜಾಟದಲ್ಲಿ ಅನೇಕ ಅನೇಕಾನೇಕ ಎಡರು–ತೊಡರು, ಸಂಕಟ–ನೋವು, ಕಷ್ಟ–ನಷ್ಟ, ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವುಗಳನ್ನು ಧೈರ್ಯದಿಂದ ಮೆಚ್ಚಿ ನಿಲ್ಲಲು ಈ ಅಧ್ಯಾತ್ಮ ತತ್ತ್ವವೇ ಕಲಿಸುತ್ತದೆ, ಧೈರ್ಯ ತುಂಬುವುದಷ್ಟೇ ಅಲ್ಲ ಸನ್ಮಾರ್ಗದತ್ತ ಸಾಗಲು ಬೋಧಿಸುತ್ತದೆ. ಹರಿಶ್ಚಂದ್ರ ಮಹಾರಾಜನ ಕಥೆ ಲೋಕಪ್ರಸಿದ್ಧವಾಗಿದೆ. ಈ ಮಹಾರಾಜನ ಕಥೆಯನ್ನನುಸರಿಸಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಸ್ವಾರ್ಥರಹಿತ ಜೀವನ ಸಾಗಿಸಿ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲಿಲ್ಲವೇ? ಆದುದರಿಂದ ನಾವು–ನೀವೆಲ್ಲರೂ ಅಧ್ಯಾತ್ಮದತ್ತ ಮುಖ ಮಾಡುವುದೊಳಿತು ಎಂಬ ಅಭಿಪ್ರಾಯ ನನ್ನದಾಗಿದೆ.

**"ದೈವಂ ಮಾನುಷ್ಯ ರೂಪಂ"** ಅಂದರೆ ದೈವವೇ ಮನುಷ್ಯ ರೂಪ. ದೈವೀ ಶಕ್ತಿ ಮನುಷ್ಯನಲ್ಲಿರುವಾಗ ಅಧ್ಯಾತ್ಮ ಮಾರ್ಗದ ಮೂಲಕವಾಗಿ ದೇವನಲ್ಲಿ

ಒಂದಾಗುವುದೇ ಮೋಕ್ಷ, ಮುಕ್ತಿ ಅಥವಾ ಕೈವಲ್ಯ ಇಲ್ಲವೆ ಸ್ವರ್ಗವಾಗಿದೆ. ಸಾಮಾನ್ಯವಾಗಿ ನಡೆ ಶುದ್ಧ, ನುಡಿ ಶುದ್ಧ, ತನು ಶುದ್ಧ, ಮನ ಶುದ್ಧ, ಭಾವ ಶುದ್ಧ, ಅಂತರಂಗ ಶುದ್ಧ, ಬಹಿರಂಗ ಶುದ್ಧ – ಈ ಸಪ್ತ ಶುದ್ಧಾಂಗಳನ್ನು ಯಾವಾತನು ನಿತ್ಯವೂ ಅನುಸರಿಸುತ್ತಾನೆಯೋ ಆತನೇ ದೈವ ಮಾನುಷ ರೂಪನು ಎನ್ನಲಾಗಿದೆ. ಈ ಅವಕಾಶವಿರುವುದು ಮನುಷ್ಯನಿಗೇ ಮಾತ್ರ. ಈ ಮಾತಿಗೆ ಪೂರಕ ಮತ್ತು ನಿದರ್ಶನವೆನ್ನುವಂತೆ ವಿಶ್ವಗುರು ಬಸವಣ್ಣನವರು ತಮ್ಮದೊಂದು ವಚನದಲ್ಲಿ ನೀತಿಯ ಮಾರ್ಗಸೂಚಿಯನ್ನು ಹೀಗೆ ಪ್ರತಿಪಾದಿಸಿದ್ದಾರೆ.

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,**
**ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,**
**ತನ್ನ ಬಣ್ಣಿಸಲು ಬೇಡ, ಇದಿರು ಹಳಿಯಲು ಬೇಡ,**
**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,**
**ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ!**

ಇವೇ ಅವರು ಪ್ರತಿಪಾದಿಸಿದ ಸಪ್ತ ಸೂತ್ರಗಳು! ಇವು ಎಲ್ಲಾ ಧರ್ಮ ಗ್ರಂಥಗಳಲ್ಲೂ ಇವೆ. ಇವರು ಇವುಗಳನ್ನು ನಡೆದು–ನುಡಿದ ಆಚಾರ್ಯ ಪುರುಷರಾದುದರಿಂದ ಅವರ ಈ ಹೇಳಿಕೆಗಳಿಗೆ ಬೆಲೆ ಇದೆ. ನಡೆ–ನುಡಿ, ಆಚಾರ–ವಿಚಾರಗಳೆರಡೂ ಒಂದಾದರೆ ಮಾತ್ರ ನಡವಳಿಕೆಗೆ ಗೌರವ ಬರುತ್ತದೆ. ಅಲ್ಲದೇ ತನಗೇ ಬೇಕೆಂದು ಆ ಪರಮಾತ್ಮನು ಮೆಚ್ಚಿ ತನ್ನೆಡೆಗೇ ಬೇಕೆಂದು ಬರಮಾಡಿಕೊಳ್ಳುತ್ತಾನೆ. ಆದುದರಿಂದ ಸಕಲವನ್ನು ಕರುಣಿಸಿದ ಆ ಪರಮಾತ್ಮನನ್ನು ನೆನೆಯುವುದೇ ಸದ್ಧರ್ಮ. ನಿಮ್ಮ ನೆನವೇ ಗತಿಯೆಮಗೆ, ಇಹ–ಪರ ಸುಖದ ಪ್ರಾಪ್ತಿಗೆ ನಿಮ್ಮನ್ನು ಅನವರತವೂ ಸ್ತುತಿಸುವುದೇ ನಮಗುಳಿದ ಮುಮ್ಮಾರ್ಗ.

**ನಿಮ್ಮ ನೆನೆದಾಗಲೇ ಉದಯ**
**ನಿಮ್ಮ ಮರೆದಾಗಲೇ ಅಸ್ತಮಾನ.**

ಎಂದು ಶರಣರು ನುಡಿದಂತೆ ನಡೆದರೆ, ದೇವರ ಸ್ವರೂಪದಲ್ಲಿರುವ ಗುರುವನ್ನು ನೆನೆಯುವುದು ಗುರುಮುಖೇನ ಪಡೆದ ಸನ್ಮಾರ್ಗ, ಅಧ್ಯಾತ್ಮ ಮಾರ್ಗ, ವಿದ್ಯೆ ಬದುಕಿಗೆ ಕಳೆ ತರುವುದು, ನಿಮ್ಮ ನೆನಹು ಗತಿ–ಮತಿ ಎನ್ನುವಲ್ಲಿ ಗುರುವಿನ ನಿರಂತರ ನೆನಹು ಉತ್ತಮ ಮಾರ್ಗ ತೋರಿ, ಉತ್ತಮ ಜ್ಞಾನ ಪಡೆಯುವಲ್ಲಿ ನೆರವಾಗುತ್ತದೆಯೆಂದು ಹೇಳಲಾಗಿದೆ. 'ನಿಮ್ಮ ನೆನಹು ಜಪ–ತಪವು ಸಕಲ ಪರಮ ತತ್ತ್ವ ಅದುವೇ ನಿತ್ಯ ಸತ್ಯ ಸತ್ಯ ವ್ಯಕ್ತ ಕೈಲಾಸ' ಎಂಬುದನ್ನು ಗಮನಿಸಿದರೆ ಗುರುವಿನ ನೆನಹು ತಪಸ್ಸಿಗೆ ಸಮ, ಜಪಕ್ಕೆ ಸಮ ಎಂದು ಹೇಳುವಲ್ಲಿ ನೆನಹಿನ ಶ್ರೇಷ್ಠತೆಯ ಅರಿವನ್ನು ಮಾಡಿಕೊಡುತ್ತದೆ. ತಪಸ್ಸು ಎಂದರೆ ಅಪಾರವಾದ ಜ್ಞಾನ

ಸಂಪಾದನೆ, ಗುರುವಿನಿಂದ ಅನುಸಂಧಾನ. ಗುರುಮುಖೇನ ಬರುವ ವಿಚಾರಗಳನ್ನು ಆಲಿಸಿ ಆಚರಿಸಿದರೆ ಅದು ಜಪಕ್ಕೆ, ತಪಕ್ಕೆ ಸರಿ ಸಮಾನ! ಇಲ್ಲಿ ಶ್ರದ್ಧೆ, ಭಕ್ತಿ, ನಿಷ್ಠೆ, ಸತ್ಯ, ಪ್ರಾಮಾಣಿಕತೆಗಳೇ ಪ್ರಮುಖವಾದ ಅಂಶಗಳು. ಇವುಗಳನ್ನು ಅಳವಡಿಸಿಕೊಳ್ಳಲಾರದ ಮಾನವನ ಬದುಕು ನಿರರ್ಥಕ, ವ್ಯರ್ಥ!

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗೆಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ಪರ್ಯಾಸವೇ ಸರಿ. ಹನ್ನೆರಡನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಂಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ. ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತ ಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ, ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ ಮತ ಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ಥರಗಳ ಜನತೆ, ಅದರಲ್ಲಿಯೂ ದೀನ–ದಲಿತರು–ಶೋಷಿತರು–ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ ಇಪ್ಪತ್ತು–ಇಪ್ಪತ್ತೊಂದನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಚರಿತ್ರೆ ಮಾನವನಿಂದ ನಿರ್ಮಿತವಾದದ್ದು. ಅದು ಪಶುಪಕ್ಷಿಗಳಿಂದಲ್ಲ. ಪಶು–ಪಕ್ಷಿಗಳಿಗೆ ಚರಿತ್ರೆಯನ್ನು ನಿರ್ಮಿಸಿಕೊಳ್ಳುವ ಶಕ್ತಿಯಿಲ್ಲ. ಚರಿತ್ರೆಯ ಪ್ರಜ್ಞೆ ಮಾನವನ ಪರಿಪೇಕ್ಷದಲ್ಲಿ ಮಾತ್ರವಿದೆ. ಆದುದರಿಂದ ಅದು ಪ್ರಜ್ಞೆ ಜನ್ಯವಾದದ್ದು. ಪಶು–ಪಕ್ಷಿಗಳಿಗೆ ಬುದ್ಧಿಯಿದೆ. ನಿಜ, ಆದರೆ, ಪ್ರಜ್ಞೆಯಿಲ್ಲ. ಮನುಷ್ಯನಿಗೆ ಪ್ರಜ್ಞೆ ಇರುವುದರಿಂದ ಅವನು ಬೇರೆಲ್ಲ ಜೀವಿಗಳಿಗಿಂತ ವಿಶಿಷ್ಟನಾಗಿರುವನು. ಸಂಸ್ಕೃತಿ ಮೈದಾಳಿದ ಬಗೆ ಮತ್ತು ಅದರ ಪರಿಪರ್ತನಾಶೀಲತೆಯ ರೂಪಗಳನ್ನು ಚರಿತ್ರೆಯು ನಿರ್ವಚಿಸಬಲ್ಲದು. ಆದುದರಿಂದ 'ಸಂಸ್ಕೃತಿ' ಸಂಗತಿಯಲ್ಲಿ ಚರಿತ್ರೆಯ ಪಾತ್ರ ಹಿರಿದಾಗಿ ನಿಲ್ಲುತ್ತದೆ. ಸಂಸ್ಕೃತಿ ಬೇರೆಯಲ್ಲ ಧರ್ಮ ಬೇರೆಯಲ್ಲ. ಅವು ಬದುಕುವ ಜೀವನ ವಿಧಾನವನ್ನು ತಿಳಿಸಿಕೊಡುತ್ತವೆ. ಸಂಸ್ಕೃತಿ ಮೂಲರೂಪ ಪಡೆದುಕೊಳ್ಳುವಲ್ಲಿ ಚರಿತ್ರೆಯ ಕೆಲವರು ಬಹಳ ಮುಖ್ಯರಾಗುತ್ತಾರೆ. ಆ ಪ್ರಕ್ರಿಯೆ ಹಿಂದೆ ಕೆಲವು ವ್ಯಕ್ತಿಗಳ ಸತ್ಸಂಕಲ್ಪಗಳಿರುತ್ತವೆ. ಆದುದರಿಂದ ಸಂಸ್ಕೃತಿಯು ಅಮೂರ್ತವಾಗಿ ಮೂರ್ತಗೊಳ್ಳುತ್ತದೆ. ನಮ್ಮ ಸಂದರ್ಭದಲ್ಲಿ ಅದೆಷ್ಟೋ ಕೆಲವರು ಮಹಾತ್ಮರೂ ಆಗಿ ಹೋಗಿದ್ದಾರೆ. ಅವರನ್ನು ಚರಿತ್ರೆ ಬಹಳ ಕಾಳಜಿಯಿಂದ ಅರ್ಥೈಸುತ್ತದೆ. ಅಂಥವರು ಚರಿತ್ರೆಯ

ಮೈಲುಗಲ್ಲಾಗುತ್ತಾರೆ. ಸಂಸ್ಕೃತಿ ವಿಕಾಸದ ಅಂತರಂಗದ ಹರಿಕಾರರಾಗುತ್ತಾರೆ. ಅವರು ಜೀವನದ ಯಾವ ರಂಗದಲ್ಲಿಯಾದರೂ ಇರಬಹುದು. ರಾಜಕೀಯ ನಾಯಕರಿರಬಹುದು, ಧಾರ್ಮಿಕ, ಸಾಮಾಜಿಕ, ಆರ್ಥಿಕ, ವೈಜ್ಞಾನಿಕ ರಂಗದಲ್ಲಿ ಯಾವುದೋ ಒಂದರ ಮಹತ್ತರ ಸಾಧನೆಯ ರೂವಾರಿಯಾಗಿರುತ್ತಾರೆ. ಅಂಥವರನ್ನು ಜನತೆ "ಶಕ ಪುರುಷ"ರೆಂದು ಗುರುತಿಸುತ್ತಾರೆ. ಮಾನವ ಸಂಸ್ಕೃತಿಗೆ ಅವರು ರೂಪಿಸಿದ ಹೊಸ ಆಯಾಮವು ಜನರಿಂದ ಅವರನ್ನು ಹಾಗೆ ಗುರುತಿಸುವಂತೆ ಪ್ರೇರೇಪಿಸುತ್ತದೆ.

ನಮ್ಮ ಚರಿತ್ರೆಯ ಸಂದರ್ಭದಲ್ಲಿ ಇಂತಹ ಹಲವಾರು ಶಕ ಪುರುಷರನ್ನು ಕಾಣುತ್ತೇವೆ. ಪ್ರತಿಯೊಬ್ಬನೂ ಒಂದೊಂದು ಶಕವನ್ನು ಆರಂಭಿಸಿರುವುದು ಕಂಡುಬರುತ್ತದೆ. ಆದರೆ ಶಕ ಆರಂಭಗೊಳ್ಳುವುದು ಶಕಪುರುಷರಿಂದಲ್ಲ, ಅವರ ಅನುಯಾಯಿಗಳಿಂದ. ಏಸುಕ್ರಿಸ್ತನು ಬಯಲಾಗಿ ಅದೆಷ್ಟೋ ವರ್ಷಗಳ ತರುವಾಯ ಕ್ರಿಸ್ತಶಕ ಆರಂಭಗೊಂಡಿತು. ಮಹಮ್ಮದ್ ಪೈಗಂಬರರ ನಂತರದಲ್ಲಿ ಹುಟ್ಟಿಕೊಂಡ ಹಿಜಿರಾ ಶಕೆ ಪ್ರಾರಂಭಗೊಂಡಿತು. ಹಾಗೆಯೇ ಹಿಂದೂಗಳಲ್ಲಿ ವಿಕ್ರಮ ಶಕೆ, ಬಸವ ಶಕೆ ಇತ್ಯಾದಿ ಶಕಗಳನ್ನು ಸಾಮಾನ್ಯವಾಗಿ ಅಧ್ಯಯನ ಮಾಡಿದರೂ ಅದರ ಹಿಂದೆ ಒಂದು ಸಾಂಸ್ಕೃತಿಕ ಕುರುಹು (Cultural Significance) ಇರುವುದು ಗೊತ್ತಾಗುತ್ತದೆ. ಎಷ್ಟೊಂದು ಶಕ ಪುರುಷರು ಹುಟ್ಟಿಕೊಳ್ಳಬಹುದಿತ್ತು! ಆದರೆ, ಅದು ಆಗಲಿಲ್ಲ. ಇತಿಹಾಸದ ಕಾಲಚಕ್ರದಲ್ಲಿ ಕೋಟಿಗಟ್ಟಲೇ ಜನ ಭೂಮಿಯ ಮೇಲೆ ಜನಿಸಿ ತಮ್ಮ ಜೀವ ಸವೆಯಿಸಿ ಹೋಗಿರುವರು ಹಾಗೂ ತಮ್ಮ ತತ್ತ್ವಗಳನ್ನು ತಮ್ಮ ಗ್ರಂಥಗಳ ಮೂಲಕ ಬಿತ್ತಿ ಹೋಗಿರುವರು. ಆದರೆ, ಅವರ್‍ಯಾರೂ ಶಕ ಪುರುಷರಾಗಲೇ ಇಲ್ಲ. ಇಂದಿಗೂ ಕೇವಲ ಬೆರಳೆಣಿಕೆಯಷ್ಟು ಶಕ ಪುರುಷರಿದ್ದಾರೆ. ಅಂತಹ ಶಕ ಪುರುಷರಾಗಿಯೂ ಶರಣರಲ್ಲಿ ಬಸವಾಲ್ಲಮ, ಮಹಾಯೋಗಿ ವೇಮನರು ಪರಿಗಣಿತರಾಗಿರುವರು.

ಧರ್ಮವಿರುವುದೊಂದೇ. ಹಿಂದೆ, ಇಂದು, ಮುಂದು ಅದು ಒಂದೇ ಆಗಿರುವುದು. ಅದು ಸನಾತನವಾದುದು. ಸನಾತನ ಧರ್ಮ ತಿಳಿಸಿದವರಲ್ಲಿ ಕನಕದಾಸರಂಥ ಭಕ್ತರಿರಬಹುದು, ಗಾಂಧೀಜಿಯವರಂಥ ಕರ್ಮಿಗಳಿರಬಹುದು ಮತ್ತು ಅಲ್ಲಮಪ್ರಭು–ಮಹಾಯೋಗಿ ವೇಮನರಂತಹ ವಿರಾಗಿ ಜ್ಞಾನಿಗಳಿರಬಹುದು. ಭಕ್ತನು ಶಿವ–ಕೇಶವ ಒಂದೇ ಎಂದು ನಂಬುತ್ತಾನೆ. ಕರ್ಮಿ ರಾಮ–ರಹೀಮರೊಂದೇ ಎಂಬುದನ್ನು ಪ್ರಪಂಚದಲ್ಲಿ ಗುರುತಿಸುತ್ತಾನೆ. ಜ್ಞಾನಿ ವಿಷ್ಣು, ಹರ, ಎನ್ನುವ ಭಾವ ಪ್ರಕಾರಗಳನ್ನು ಒಂದಾಗಿ ಅನುಭವಿಸುತ್ತಾನೆ. ಈ ಯಾವುದೇ ಮಾರ್ಗ ಒಂದರಿಂದ ಇನ್ನೊಂದು ಬೇರೆಯಲ್ಲ. ಒಂದರಲ್ಲಿ ಒಂದು ಬೆರೆತುಕೊಂಡಂತೆ. ಆದರೆ, ಯಾವುದೋ

ಒಂದು ಹೆಚ್ಚು ಪ್ರಭಾವಿಯಾಗಿ, ಒಬ್ಬೊಬ್ಬರಲ್ಲಿ ತೋರಬಹುದಷ್ಟೇ! ಧರ್ಮದರ್ಶನ ಸಾಹಿತ್ಯಕ್ಕೆ ತಕ್ಕ ಇಲ್ಲವೆಂದಾಗಲಿ ಯಾರೂ ತಿಳಿಯಕೂಡದು. ಈ ಗ್ರಂಥದಲ್ಲಿ ಮಹಾಯೋಗಿಗಳೂ, ವೀರವಿರಕ್ತರೂ, ಸರ್ವಸಂಗ ಪರಿತ್ಯಾಗಿಗಳಾಗಿ ಅಮರರಾದ ಹನ್ನೆರಡನೆಯ ಶತಮಾನದ ಅಲ್ಲಮಪ್ರಭುದೇವರು ಮತ್ತು 15ನೆಯ ಶತಮಾನದ ವೇಮನರ ಜೀವನ–ಸಾಧನೆಯ ಕುರಿತಾಗಿ ಈ ಗ್ರಂಥದಲ್ಲಿ ನಿರೂಪಿಸಲು ಪ್ರಯತ್ನಿಸಲಾಗಿದೆ.

ತಮಿಳು ಸಾಹಿತ್ಯದಲ್ಲಿ ತಿರುವಳ್ಳವರರಿಗೂ, ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ–ಬಸವಣ್ಣ ಹಾಗೂ ಸರ್ವಜ್ಞನಿಗೂ, ಮಹಾರಾಷ್ಟ್ರದ ಮರಾಠಿ ಸಾಹಿತ್ಯದಲ್ಲಿ ರಾಮದಾಸನಿಗೂ, ಹಿಂದೀ ಸಾಹಿತ್ಯದಲ್ಲಿ ಕಬೀರದಾಸನಿಗೂ ಇರುವ ಸ್ಥಾನವೇ ತೆಲುಗು ಭಾಷೆಯಲ್ಲಿ ವೇಮನನಿಗೂ ಇದೆ ಎಂದು ಅನೇಕ ವಿದ್ವಾಂಸರ ಮತವಾಗಿದೆ. ಕನ್ನಡ ಭಾಷೆಯಲ್ಲಿ ಬಸವಣ್ಣ ಮತ್ತಿತರ ಶರಣರ ವಚನಗಳು, ಸರ್ವಜ್ಞನ ತ್ರಿಪದಿ ರೂಪದ ವಚನಗಳು, ಪುರಂದರ ಕನಕದಾಸರು ಹಾಗೂ ಮತ್ತಿತರ ಹರಿದಾಸರ ಕೀರ್ತನೆ', ಕೃತಿಗಳು ಪ್ರಮುಖವಾಗಿ ಧಾರ್ಮಿಕ ಆಚಾರ ವಿಚಾರಗಳನ್ನು ತಿಳಿಯಪಡಿಸುವ ಮೌಲಿಕ ಸಾಹಿತ್ಯದ ಅಮರಜ್ಞಾನ ಶಾಖೆಯ ಕೃತಿಗಳಾಗಿವೆ. ಇವುಗಳಲ್ಲಿ ಅಡಗಿರುವ ಸತ್ಯಾರ್ಥ ಗರ್ಭಿತವಾದ ತತ್ತ್ವಗಳು ಜನರನ್ನು ಹೇಗೆ ಆಕರ್ಷಿಸಿ ಅವರಿಗೆ ಜ್ಞಾನದೀವಿಗೆಗಳಾಗಿವೆಯೋ ಹಾಗೆಯೇ ತೆಲುಗು ಭಾಷೆಯಲ್ಲಿ ಮಹಾಯೋಗಿ, ಜ್ಞಾನ, ಅಧ್ಯಾತ್ಮದ ರಸ ಋಷಿ ವೇಮನರ ತತ್ತ್ವಗಳು ಜ್ಞಾನ ಜ್ಯೋತಿಗಳಾಗಿ ಬೆಳಗುತ್ತಿವೆ.

ಈ ಮಹಾಯೋಗಿಗಳು ಜೀವನದ ನಾನಾ ಕ್ಷೇತ್ರಗಳನ್ನು ಕಂಡುಂಡು, ತಾವು ಕಂಡುದನೆಲ್ಲ ವಿಮರ್ಶಿಸಿ, ತಮ್ಮ ಅಭಿಪ್ರಾಯಗಳನ್ನು ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ, ಇವರೀರ್ವರ ವಚನಗಳಲ್ಲಿರುವ ಸಕಲ ವೇದೋಪನಿಷತ್ತುಗಳ ಸಾರವೇನೋ ಎಂಬಂತಿವೆ. ಅವರು ನೀಡುವ ಉಪಮಾನಗಳು ಎಲ್ಲರಿಗೂ ಸುಲಭವಾಗಿ ಅನುಭವಕ್ಕೆ ಬರುವಂಥವು. ಹೇಳುವ ಮಾತುಗಳು ನೇರ, ದಿಟ್ಟ ನುಡಿಗಳಲ್ಲಿವೆ. ಅವು ಚಿತ್ತಾಕರ್ಷಕವಾಗುವಂತಿವೆ. ಪರಿಶುದ್ಧ ಹೃದಯದಿಂದ ಚಿಮ್ಮಿ ಬಂದಿರುವ ನುಡಿಮುತ್ತುಗಳು, ಪ್ರತಿಯೊಂದೂ ಒಂದೊಂದು ಸೂತ್ರದಂತಿವೆ. ವೇಮನರ ವಚನಗಳು ಸರಳ ಶೈಲಿಯಲ್ಲಿದ್ದರೆ, ಅಲ್ಲಮರ ವಚನಗಳ ಶೈಲಿ ಬೆಡಗಿನರ್ಥದಲ್ಲಿವೆ. ಇವರಿಬ್ಬರ ವಚನಗಳಲ್ಲಿ, ಪದ್ಯಗಳಲ್ಲಿ ದೈವ ಸ್ವರೂಪ ಚಿಂತನೆ, ಭಕ್ತಿ, ಧರ್ಮ ನೀತಿಗಳ ನಿರೂಪಣೆಯಲ್ಲದೇ ಜಾತಿ, ಕುಲ, ಸಾಮಾಜಿಕ ತೊಡಕು, ದುರಾಚಾರ, ಕಾಪಟ್ಯ, ನೀಚತನ, ಅಹಂಕಾರ, ಅಂಧವಿಶ್ವಾಸ, ಡಂಭಾಚಾರ ಇತ್ಯಾದಿ ದುರ್ಗುಣಗಳನ್ನು, ಟೀಕಿಸಿರುವರು. ಇಂತಹ ಮಹಾಯೋಗಿ ತ್ಯಾಗಿಗಳ ಉದಾತ್ತ

ಭಾವನೆಗಳು, ಇವರಿತ್ತ ಸಂದೇಶಗಳು ನಮ್ಮ ಇಂದಿನ ಪೀಳಿಗೆಗೆ ಪ್ರಸಾರವಾಗುವುದು ರಾಷ್ಟ್ರದ ಹಿತದ ದೃಷ್ಟಿಯಿಂದ ಮತ್ತು ಶ್ರೇಯಸ್ಸಿನ ದೃಷ್ಟಿಯಿಂದ ಅತ್ಯಗತ್ಯವೆಂದು ಭಾವಿಸಲಾಗಿದೆ.

ಸಂಸಾರಿಗಳಿಗಿಂತಲೂ ತ್ಯಾಗಿ–ಯೋಗಿಗಳ, ಮಹರ್ಷಿ–ತಪಸ್ವಿಗಳ ಜೀವನ ಕಠಿಣವಾದುದು. ಇಹಲೋಕ–ಪರಲೋಕಗಳೆರಡರಲ್ಲಿಯೂ ಅವರು ಸಹಿ ಎನಿಸಿ–ಕೊಳ್ಳಬೇಕಲ್ಲ? ಅವರು ಮಾಡುವ ಪ್ರಯಾಣ ತಮಗಷ್ಟೇ ಅಲ್ಲ ಸಾರ್ವತ್ರಿಕವಾದುದು. ಲೋಕ ಕಲ್ಯಾಣವೇ ಅವರ ಗುರಿ ಮತ್ತು ಧ್ಯೇಯವಾಗಿರುತ್ತದೆ. ಅವರು ಭಾರತ ದೇಶದ ಆಸೇತು ಹಿಮಾಚಲ ಪರ್ಯಂತ ಪ್ರಚಲಿತವಿರುವ ಯಾವುದೇ ಸಂಘಟಿತ ಧರ್ಮಕ್ಕೆ ಸೇರದೆ, ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳಂತೆ, ಅಧ್ಯಾತ್ಮದ ದಿಗಂತದಲ್ಲಿ ಹಾರಾಡುವ ಈ ಸಂತ–ತ್ಯಾಗಿಗಳು ಉಲಿದ ಭಾಷೆ, ನಡೆದಾಡಿದ ಪ್ರದೇಶ ಹಾಗೂ ಅವರು ಬಾಳಿದ ಕಾಲಘಟ್ಟಗಳನ್ನು ಕುರಿತು ಇದುವರೆಗೆ ಶೋಧಿಸಲ್ಪಟ್ಟ ಸಂಗತಿಗಳನ್ನು ಹೀಗೆ ಹೇಳಬಹುದು.

| **ನಂ.** | **ಹೆಸರು** | **ಭಾಷೆ** | **ಪ್ರದೇಶ** | **ಕಾಲ** |
|---|---|---|---|---|
| 1. | ತಿರುವಳ್ಳುವರ್ | ತಮಿಳು | ತಮಿಳುನಾಡು | 100–200 |
| 2 | ಅಲ್ಲಮಪ್ರಭುದೇವ | ಕನ್ನಡ | ಕರ್ನಾಟಕ | 1100–1200 |
| 3 | ಸರ್ವಜ್ಞ | ಕನ್ನಡ | ಕರ್ನಾಟಕ | 1500– |
| 4 | ವೇಮನ | ತೆಲುಗು | ಆಂಧ್ರ | 1500 |
| 5 | ಕಬೀರದಾಸ | ಹಿಂದೀ | ಉತ್ತರ ಪ್ರದೇಶ | 1399–1520 |
| 6 | ತುಕಾರಾಮ | ಮರಾಠಿ | ಮಹಾರಾಷ್ಟ್ರ | 1608–1650 |

ಈ ಮಹಾಯೋಗಿಗಳು, ಸಂತ ಕವಿಗಳು ಬದುಕಿನಲ್ಲಿ ಅವರು ಏನೆಲ್ಲ ಕಷ್ಟ–ಕೋಟಲೆಗಳನ್ನು, ದುಃಖ–ನೋವುಗಳನ್ನು ಅನುಭವಿಸಿದವರು. ಅವರೇನೂ ತಮಗಾಗಿ ಸ್ವಾರ್ಥಜೀವಿಯಾಗಿ ಬದುಕಿದವರಲ್ಲ. ಲೋಕೋದ್ಧಾರದ ಮಣಿಹ ಹೊತ್ತು ಭೂಮಿಗೆ ಬಂದ ಭಗವಂತನವತಾರಿಗಳು. ಅವರಿಂದ ಅಂತಃಸ್ಫುರಣೆಯಾದಾಗ, ಒಳದನಿಯ ವೈಖರಿಯ ರೂಪ ತಾಳಿದಾಗ, ಅವರ ಶಿಷ್ಯ ಬಳಗದವರು, ಅವುಗಳನ್ನು ಕೇಳಿ ಬರೆದುಕೊಂಡರೆಂದೂ ತಿಳಿದು ಬರುತ್ತದೆ. ಅವರ ವಾಣಿಗಳು ಅಮರವಾಣಿ–ಗಳಾದವು.

ಅಲ್ಲಮ ವೇಮನರು ಭಾರತೀಯ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ ದಿವ್ಯ ಮಹಾಪುರುಷರು. ಅವರು ನಿಷ್ಕಾಮ ಕರ್ಮ ಮತ್ತು ಜ್ಞಾನಗಳ ಜಿಗಿತದ

ಹಲಗೆಯನ್ನು ಮೀಟಿ, ಧ್ಯಾನ, ತಪಸ್ಸು, ಯೋಗ ಶಕ್ತಿಯಿಂದ ಪರಾಭಕ್ತಿಯ ಈಜುಗೊಳದಲ್ಲಿ ಪುಟಿದು ಈ ಜಾಡಿದ ವಿರಳ ಸಿದ್ಧ ಪುರುಷರು, ಮಹಾಪುರುಷರು. ಇವರಿಬ್ಬರ ಕಾಲಘಟ್ಟವು ವ್ಯತ್ಯಾಸವಾದರೂ ತತ್ತ್ವಗಳು ಒಂದೇ ಎನ್ನುವಂತಿವೆ. ಆಯಾಯ ಕಾಲಮಾನಕ್ಕೆ ತಕ್ಕಂತೆ ಜನಮನವನ್ನು ತಿಳಿಗೊಳಿಸಿ ಅಧ್ಯಾತ್ಮ ಮತ್ತು ಧರ್ಮ ಮಾರ್ಗದತ್ತ ಕೊಂಡೊಯ್ಯುವಲ್ಲಿ ಪ್ರೇರೇಪಿಸಿದ್ದಾರೆಂದು ಹೇಳಬೇಕು. ಇಂತಿವರು ಚಾರಿತ್ರಿಕ ವ್ಯಕ್ತಿಗಳಾದರೂ ಅವರ ಸಮಗ್ರ ಜೀವನ ಚರಿತ್ರೆಯ ಕುರಿತು ದಾಖಲೆಗಳು ಸಿಗುವುದು ಅತೀ ವಿರಳ. ಕ್ರಾಂತಿಯ ಕಹಳೆಯನ್ನೂದಿದ ಈ ಸಮಾಜ ಸುಧಾರಕರು ಶೋಷಿತ ವರ್ಗದಿಂದ ಬಂದವರಾದುದರಿಂದ ಆಯಾ ಕಾಲದ ಮೇಲು ವರ್ಗದ ತಿರಸ್ಕಾರ ಮತ್ತು ಅಸಡ್ಡೆಗೂ ಒಳಗಾಗಿದ್ದಾರೆ. ಪಾಶ್ಚಾತ್ಯರು ನಮ್ಮ ದೇಶಕ್ಕೆ ಆಗಮನವಾಗುವವರೆಗೆ ಇವರ ಬಗೆಗೆ ಗಂಭೀರವಾದ ಅಧ್ಯಯನವು ನಡೆಯಲೇ ಇಲ್ಲ. ಇವರ ರಚನೆಗಳು ದೊರೆಯದಂತಾದರೂ, ಚರಿತ್ರೆ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ದೊರಕದಿರುವುದು ಖೇದದ ಸಂಗತಿ. ಆದರೂ ದಿ. ಶ್ರೀ ಎಸ್.ಆರ್.ಪಾಟೀಲರು ಮೂಲ ತೆಲುಗಿನಲ್ಲಿರುವ ಪದ್ಯಗಳನ್ನು ತಾವು ಅಭ್ಯಸಿಸಿ. ಅನುವಾದ ಮಾಡಿ "ವೇಮನರ ವಿಶ್ವಗೀತೆ"ಯಲ್ಲಿರುವ ಚರಿತಾಮೃತ ಮತ್ತು ಅವರ ಪದಗಳನ್ನು ಆಧಾರವಾಗಿಟ್ಟುಕೊಂಡು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಅದೇ ರೀತಿಯಾಗಿ ಸಮಗ್ರ ವಚನ ಸಂಪುಟದ ಆಧಾರದೊಂದಿಗೆ (ಸಂಪುಟ–2) ಅಲ್ಲಮ ಪ್ರಭುದೇವರ ಜೀವನ ಚರಿತ್ರೆ ಮತ್ತು ಅವರ ವಚನಗಳ ಕುರಿತು ಅಧ್ಯಯನ ಮಾಡಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಇವರದು ಜ್ಞಾನವೊಂದೇ ಪ್ರಬಲವಾದ ಅಸ್ತ್ರವಾಗಿತ್ತು. ವ್ಯಕ್ತಿ ಡಾಂಭಿಕತೆಯಿಂದ ದೂರಾಗಿ ಗೊಡ್ಡು ಆಚರಣೆಗಳನ್ನು ತಿರಸ್ಕರಿಸಿ ಸರಳವಾದ ಜೀವನ ನಡೆಸಿ ಸಾತ್ವಿಕತೆಯನ್ನು ಮೈಗೂಡಿಸಿಕೊಂಡು ಪಾರಮಾರ್ಥ ಸಾಗಿಸುವ ಪರಮ ಮಾರ್ಗವನ್ನು ಸಹಜವಾಗಿ ಕಂಡುಕೊಂಡವರು. ಜನರನ್ನು ಅಜ್ಞಾನವೆಂಬ ಅಂಧಕಾರದಲ್ಲಿರಿಸಿ ಅವರನ್ನು ಶೋಷಿಸುತ್ತಿದ್ದ ವರ್ಗ ಶ್ರೀ ಸಾಮಾನ್ಯರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿ ಬ್ರಹ್ಮವಿದ್ಯೆ ಬೋಧಿಸಿದ ಅನುಭಾವಿಗಳ ಜೀವನ ಹಾಗೂ ಸಂದೇಶ ಹೆಚ್ಚು ಪ್ರಚುರಗೊಳ್ಳಲು ಅಡ್ಡಿಯಾದರೆ ಆಶ್ಚರ್ಯಪಡುವಂತಿಲ್ಲ.

ಇವರು ಜಾತಿಯ ಇಲ್ಲವೆ ಮತೀಯ ಸಂಘ–ಸಂಸ್ಥೆಗಳನ್ನು ಕಟ್ಟಿದವರಲ್ಲ. ಆದರೆ ಜಾತಿ–ಮತಗಳಿಂದ ದೂರವಾಗಿದ್ದುಕೊಂಡು ಸಮಾಜದ ಹಿತವನ್ನೇ ಬಯಸಿ ಸತ್ಸಂಗದಲ್ಲಿ ಸಮಾನ ಮನಸ್ಕರನ್ನು ಆಕರ್ಷಿಸಿ, ಸಾಧನ ಪಥಿಕರಾಗಿ ನಿರ್ದೇಶಿಸುತ್ತಿದ್ದರು. ಅಲ್ಲಮ ಮತ್ತು ವೇಮನರ ವಚನಗಳು – ಪದಗಳು ಮನುಕುಲದ ನೀತಿಯ ಉಪದೇಶಾಮೃತಗಳಾಗಿವೆ. ಧರ್ಮ ಮಾರ್ಗದಿಂದ ನಡೆದು ಮೋಕ್ಷ

ಸಂಪಾದನೆಗೆ ಹಂಬಲಿಸಲು ಬೋಧಿಸಿದ್ದಾರೆ. ವೇಮನರ ಪದಗಳಲ್ಲಿ ಚತುರ್ವಿಧ ಪುರುಷಾರ್ಥಗಳ ಬಗೆಗೆ ವಿವರಣೆಯು ಹರಳುಗಟ್ಟಿದೆ. ಅವರು ತಮ್ಮ ಪದಗಳ ಮೂಲಕ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಕೈವಶ ಮಾಡಿಕೊಳ್ಳುವ ಶಕ್ತಿ ಸಾಮರ್ಥ್ಯ ಮನುಷ್ಯನಿಗಿದೆ ಎಂಬುದನ್ನು ಹೇಳಿರುವ ಕ್ರಮವಿದೆ. ಇವರಿಬ್ಬರೂ ಮಹಾಯೋಗಿಗಳು, ಮಹರ್ಷಿಗಳಾಗಿರುವರು ಎಂಬುದರಲ್ಲಿ ಸಂದೇಹವೇ ಇಲ್ಲ. ಇವರಿಬ್ಬರ ಚರಿತ್ರೆ ಸಂಕ್ಷಿಪ್ತವಾಗಿ ದೊರೆತಿದ್ದರೂ, ಅದನ್ನು ಗಮನಿಸಿದಾಗ ತಿಳಿದು ಬರುವುದೇನೆಂದರೆ ಇವರಿಬ್ಬರ ವ್ಯಕ್ತಿತ್ವ ಅಗಾಧವಾದುದು ಎಂಬುದಾಗಿ ತಿಳಿದು ಬರುತ್ತದೆ. ಇಂತಹ ವರ ಮಹಾಪುರುಷರ ಬಗೆಗೆ ತಿಳಿದುಕೊಳ್ಳುವುದು ಮತ್ತು ಅವರ ಸಾಧನೆ–ಸಿದ್ಧಿಯನ್ನಲ್ಲದೇ ಸಾಹಿತ್ಯದ ಕೊಡುಗೆಗಳನ್ನು ಚರ್ಚಿಸುವುದು ಹಾಗೂ ಅವರ ವಚನ, ಪದಗಳಿಂದ ಆಯ್ದ ತತ್ತ್ವಜ್ಞಾನದ ತಿರುಳನ್ನು ತೌಲನಿಕವಾಗಿ ಪರಾಮರ್ಶಿಸುವುದು ನನ್ನ ಉದ್ದೇಶವಾಗಿದೆ. ಅವರವರ ಪದ–ಪದ್ಯಗಳಿಂದಾಯ್ದು ಕೊಂಡು ಸಮಾಜ ನೀತಿಯ ಬೋಧನೆ, ಧರ್ಮ, ದೇವರು, ಆತ್ಮ ಪರಮಾತ್ಮರ ಸಂಬಂಧ, ಸಾಮಾಜಿಕ, ಧಾರ್ಮಿಕ ಬೋಧನೆಗಳನ್ನು ಅವರವರ ಅಭಿಪ್ರಾಯಗಳನ್ನು ಕೊಡಲು ಪ್ರಯತ್ನಿಸಿದ್ದೇನೆ. ಅವರು ಭಾರತ ದೇಶಕ್ಕೆ ಅಷ್ಟೇ ಅಲ್ಲ ಇಡೀ ವಿಶ್ವಕ್ಕೆ ಕೊಟ್ಟ ಆತ್ಮಜ್ಞಾನದ, ತತ್ತ್ವಜ್ಞಾನದ ಕೊಡುಗೆಯನ್ನು ಕೂಲಂಕಷವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ.

❖❖❖

# ಅಧ್ಯಾಯ – ಎರಡು

# ಮಹಾಯೋಗಿ ವೇಮನ: ಜೀವನ ವೃತ್ತಾಂತ

(1412 ರಿಂದ 1480)

ವೇಮನ–ಅಲ್ಲಮರಿಬ್ಬರೂ ಜನಾನುರಾಗಿಗಳೇ! ಅಲ್ಲಮರು ಬೆಡಗಿನ ವಚನಗಳಲ್ಲಿ ನೀತಿಯ ಮಾತು ಹೇಳಿದರೆ; ವೇಮನ ಚೌಪದಿಯಲ್ಲಿ ಅನುಭವದ ಕಲಸ ತುಂಬಿದ ಆಶುಕವಿ. ಇವರಿಬ್ಬರಿಂದ ಕ್ರಮವಾಗಿ ಕರ್ನಾಟಕ–ಆಂಧ್ರ ಪ್ರದೇಶಗಳು, ಕನ್ನಡ–ತೆಲುಗು ಭಾಷೆಗಳು ಶ್ರೀಮಂತಗೊಂಡಿವೆಯೆಂಬುದರಲ್ಲಿ ಸಂಶಯವೇ ಇಲ್ಲ. ಆದುದರಿಂದ ಇವರು ಕೀರ್ತಿಶೇಷರು. ವೇಮನನನ್ನು ತಿಳಿಯದವರು ಯಾರೂ ಇರಲಿಕ್ಕಿಲ್ಲ. ಅನುದಿನದ ಮಾತಿನಲ್ಲಿ, ಸಭೆ–ಸಮಾರಂಭಗಳಲ್ಲಿ, ಭಾಷಣ ಪ್ರವಚನಗಳಲ್ಲಿ ವೇಮನ ಹಲವಾರು ಸಂದರ್ಭಗಳಲ್ಲಿ ಸಾಕಾರಗೊಳ್ಳುತ್ತಾನೆ. ಅಂತಹ ಜನಪ್ರಿಯ ಮತ್ತು ಅಧ್ಯಾತ್ಮ ಮಹಾಯೋಗಿಯ ಜೀವನಾಮೃತ ಅದ್ಭುತವಾದುದು. ವೇಮನ ತಮ್ಮ ಚೌಪದಿಗಳಲ್ಲಿ ಸಾಮಾಜಿಕ ಪ್ರಜ್ಞೆಯಿಂದ, ವೈಚಾರಿಕ ಬುದ್ಧಿಯಿಂದ ಸಾವಿರಾರು ಪದ್ಯಗಳನ್ನು ಸೃಷ್ಟಿ ಮಾಡಿಕೊಟ್ಟ ಮಹಾಯೋಗಿ, ತೆಲುಗು ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಸಾವಿರಾರು ಜನ ಕವಿಗಳಲ್ಲಿ ಆಂಧ್ರದ ಗಡಿಯನ್ನು ದಾಟಿ ಕರ್ನಾಟಕ ಮತ್ತು ತಮಿಳು ನಾಡುಗಳಲ್ಲಿ ಪರಿಚಿತವಾಗಿರುವಂತಹ ಜನಪ್ರಿಯ ಕವಿ ವೇಮನ, ತಾತ್ವಿಕ ನೆಲೆಯಿಂದ ಅತ್ಯಂತ ಮುಖ್ಯವಾಗಿರುವ ವೇಮನರು; ಸಾಮಾಜಿಕ ಕಳಕಳಿಯ ವಿಶಿಷ್ಟ ಕವಿಯಾಗಿಯೂ ಮುಖ್ಯವಾಗಿ ಕಾಣುತ್ತಾರೆ. ಆತ ಮೌಖಿಕ ಸಂಪ್ರದಾಯದ ಆಶುಕವಿ, ಅವನು ಒಂದೇ ಸ್ಥಳದಲ್ಲಿ ಕುಳಿತುಕೊಂಡು ಪದ್ಯ ಬರೆದವನಲ್ಲ. ಆತನ ಪರಮ ಶಿಷ್ಯ ರಾಮರೆಡ್ಡಿ–ನೀಲಕಂಠ ಇವರಿಬ್ಬರೂ ಬರೆದುಕೊಳ್ಳುತ್ತಿದ್ದರು ಎಂಬುದು ತಿಳಿದು ಬರುತ್ತದೆ. ವೇಮನರು ದೇಶೀಯ ಛಂದಸ್ಸಿನ ಅಟಲವೇದಿ, ಕಂದ, ಸೀಸ, ತೇಟ ಎಂಬ ಪದ್ಯಗಳಲ್ಲಿ ಹೇಳುತ್ತಿದ್ದರೆಂಬುದನ್ನು ಅವರ ಶಿಷ್ಯರೇ ಹೇಳಿದ್ದುಂಟು. ಆದುದರಿಂದ ಅಂತಹ ಪದ್ಯಗಳನ್ನು ಯಾರು ಬೇಕಾದರೂ ಅರ್ಥೈಸಿಕೊಳ್ಳಬಹುದು. ಈ ಕವಿಯು 15 ನೆಯ ಶತಮಾನದಲ್ಲಿದ್ದವನು. ವೇಮನನ ಕಾಲ–ದೇಶಗಳ ಬಗೆಗೆ ತಿಳಿದುಕೊಳ್ಳುವದು ಬಲು ಕಷ್ಟವಾದರೂ ತನ್ನದೊಂದು ಪದ್ಯದಲ್ಲಿ ಹೀಗೆ ಹೇಳಿದ್ದಾನೆ.

**ಊರು ಕೊಂಡವೀಡು ವಾಸ ಪಶ್ಚಿಮವೀಧಿ**
**ಮೂಗು ಚಿಂತಪಲ್ಲೆ ಮೊದಲ ಮನೆಯು**
**ಎಟ್ಟಿ ರಡ್ಡಿ ಕುಲವು ಅದನೇನು ಹೇಳ್ವುದು?**
**ವಿಶ್ವದಾಭಿರಾಮ ಕೇಳು ವೇಮ**

ಈ ಪದ್ಯವನ್ನು ಗಮನಿಸಿದರೆ ಮೂಗಚಿಂತಪಲ್ಲಿ ಗ್ರಾಮದ ಒಂದು ಹೊರವಲಯದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದರೆಂಬುದೂ ತಿಳಿದು ಬರುತ್ತದೆ. ವೇಮನನು ರಾಜವಂಶಸ್ಥ ಮನೆತನಕ್ಕೆ ಸೇರಿದವನು. ರೆಡ್ಡಿ ರಾಜವಂಶದ ಮಾಚರೆಡ್ಡಿ, ವೇಮರೆಡ್ಡಿ, ಮಲ್ಲರೆಡ್ಡಿ ಎಂಬ ಮೂರು ಶಾಖೆಗಳಿವೆ. ಶ್ರೀಶೈಲದ ಮಲ್ಲಿಕಾರ್ಜುನನೇ ಈ ವಂಶದ ಆರಾಧ್ಯ ದೇವರು. ತಿರುಮಲ ತಿಮ್ಮಪ್ಪ ಅಥವಾ ವೆಂಕಟಪತಿಯೂ ಈ ಕುಲದ ದೇವರೂ ಹೌದು.

ವೇಮನನ ಅಜ್ಜ ವೇಮರಡ್ಡಿಯೇ ಈ ವಂಶದ ಮೂಲ ಪುರುಷನೆಂಬುದಾಗಿ ತಿಳಿದು ಬರುತ್ತದೆ. ಈತನು ಯುದ್ಧ ಪ್ರವೀಣನೂ ಮತ್ತು ರಾಜ ರಕ್ಷಣಾ ನಿಪುಣನೂ ಆಗಿದ್ದನು. ಈತ ಶ್ರೀಶೈಲದ ಸಮೀಪವಿರುವ ಕೊಂಡವೀಡಿನಲ್ಲಿ ಕ್ರಿ.ಶ. 1324 ರಲ್ಲಿ ರಾಜ್ಯ ಸ್ಥಾಪಿಸಿದ್ದನಂತೆ. ವೇಮರೆಡ್ಡಿಯ ಮಗನೇ ಕುಮಾರಗಿರಿ ರೆಡ್ಡಿಯು, ಕುಮಾರ ಗಿರಿರೆಡ್ಡಿಯೇ ರಾಜವಂಶದ ಕೊನೆಯ ಕೊಂಡಿ ಎಂದೂ ಹೇಳಲಾಗಿದ್ದು; ರೆಡ್ಡಿ ವಂಶದವರು ಒಂದು ಶತಮಾನವೆಂದರೆ ಒಂದು ನೂರು ವರುಷ ಆಳ್ವಿಕೆ ಮಾಡಿದ ದಾಖಲೆಗಳಿವೆ. ಕೊನೆಯ ಯುದ್ಧದಲ್ಲಿ ಸೋಲು ಕಂಡ ಕುಮಾರಗಿರಿರೆಡ್ಡಿಯು ಕೊಂಡವೀಡು ಬಿಟ್ಟು-ಸಿದ್ದಾಪುರಕ್ಕೆ ಬಂದು ನಲೆಸಿದನೆಂದು ತೋರುತ್ತದೆ. ಕುಮಾರಗಿರಿರೆಡ್ಡಿಯ-ಮಹಾರಾಣಿ ಮಲ್ಲಾಂಬೆ! ಇವರಿಬ್ಬರ ಮಕ್ಕಳೇ ಭರಮರಡ್ಡಿ ಮತ್ತು ವೇಮರಡ್ಡಿ ಮತ್ತು ಇವರಿಗೆ ಒಬ್ಬಳು ಸಹೋದರಿಯಿದ್ದಳಂತೆ. ವೇಮರಡ್ಡಿಯೇ ಮುಂದೆ ಮಹಾಯೋಗಿ ವೇಮನ ವೇಮಣ್ಣನಾದ. ಭರಮರಡ್ಡಿಯ ಧರ್ಮಪತ್ನಿಯೇ ಹೇಮರಡ್ಡಿ ಮಲ್ಲಮ್ಮ ಈಕೆಯೇ ವೇಮಣ್ಣನಿಗೆ ಅತ್ತಿಗೆಯಾಗಿ, ತಾಯಿಯಾಗಿ, ಗುರುವಾಗಿ, ಮಹಾಮಾತೆಯಾಗಿ ಬಂದವಳು. ಇವರಿಬ್ಬರಲ್ಲಿ ತಾಯಿ-ಮಗನಂತಹ ಪ್ರೀತಿ-ವಾತ್ಸಲ್ಯವಿತ್ತು. ಮಲ್ಲಮ್ಮನ ಊರು ಶ್ರೀಶೈಲದ ದಕ್ಷಿಣಕ್ಕಿರುವ ವೆಲ್ಲಟೂರು ಜಿಲ್ಲೆಗೆ ಸೇರಿದ ರಾಮಾಪುರ ಮಲ್ಲಮ್ಮನ ಹುಟ್ಟೂರು. ನಾಗರೆಡ್ಡಿ-ಗೌರಮ್ಮ ದಂಪತಿಗಳೇ ಮಲ್ಲಮ್ಮನ ತಂದೆ-ತಾಯಿಗಳು. ಇವರೂ ಶ್ರೀಶೈಲ ಮಲ್ಲಿಕಾರ್ಜುನನ ಪರಮ ಭಕ್ತರು. ಈ ದೇವನ ವರಪ್ರಸಾದದಿಂದ ಹುಟ್ಟಿದವಳೇ ಮಲ್ಲಮ್ಮ. ಈಕೆಯನ್ನು ಹೇಮರಡ್ಡಿ ಮಲ್ಲಮ್ಮ ಎಂದು ಕರೆಯುತ್ತಾರೆ. ಆಕೆ ರಾಮಾಪುರದಿಂದ ಕುಮಾರರೆಡ್ಡಿಯಿರುವ ಸಿದ್ದಾಪುರಕ್ಕೆ ಹಿರಿಯ ಮಗನಾದ ಭರಮರೆಡ್ಡಿಯ ಸತಿಯಾಗಿ ಬರುತ್ತಾಳೆ, ವೇಮನನ ಸೋದರತ್ತೆ (ತಂದೆಯ ತಂಗಿ) ನರಸಾಂಬೆಯು ರಾಜ

ಮಹೇಂದ್ರದ ಮಹಾರಾಣಿ, ಅಲ್ಲಿಯ ಕಾಟಿಯವೇಮಾರಡ್ಡಿಯ ಮಹಾರಾಣಿ. ವೇಮಣ್ಣನೆಂದರೆ ಸೋದರತ್ತೆಗೆ ಬಲು ಪ್ರೀತಿ, ವೇಮನ ಹುಟ್ಟಿದಾಗ ಅಣ್ಣ (ಕುಮಾರಗಿರಿರೆಡ್ಡಿ) ನ ಮಗನನ್ನು ನೋಡಿ ಆನಂದಿಸಲು ಬಂದದ್ದುಂಟು. ಈ ಮಗುವಿನ ಮುಖ ಮುದ್ರೆಯನ್ನು ಕಂಡ ದೊರೆಸಾನಿ ನರಸಾಂಬೆ ಜ್ಯೋತಿಷಿಯಿಂದ ಕುಂಡಲಿ ತೆಗೆಯಿಸಿ ಕೇಳುತ್ತಾಳೆ. ಜ್ಯೋತಿಷಿ ಹೇಳಿದ್ದುದೇನೆಂದರೆ ಈ ಮಗು ಮಹಾಯೋಗಿಯಾಗುವ ಯೋಗವಿದೆ ಮತ್ತು ಈತನಿಂದ ಲೋಕ ಕಲ್ಯಾಣವಾಗುವುದಿದೆ. ಅಲ್ಲದೆ ಮಹಾಕವಿಯೂ ಆಗುತ್ತಾನೆಂದು ಅವನು ಹೇಳಿದಂತೆಯೇ ಆದವನು ಮಹಾಯೋಗಿ ವೇಮನ!!

**ರೆಡ್ಡಿ ರಾಜಮನೆತನದ ಇತಿಹಾಸ:**

ರೆಡ್ಡಿ ರಾಜ್ಯವು ವಿಜಯನಗರ ಸಾಮ್ರಾಜ್ಯದಲ್ಲಿ ಒಂದಾಗಿ ಎಲ್ಲ ಸಾಮ್ರಾಜ್ಯಗಳೂ ಒಂದಾಗಿ, ಇತಿಹಾಸದ ಕಥೆಯಾಗಿ ಮುಗಿಸಿ ಮರೆಯಾದವು. ಆದರೂ ಒಂದು ಶತಮಾನದಷ್ಟು ಕಾಲ ಆಳ್ವಿಕೆ ಮಾಡಿದ ರಾಜ ಮನೆತನವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪೋಲಯ ವೇಮಾರಡ್ಡಿಯಿಂದ ಕ್ರಿ.ಶ. 1324 ರಲ್ಲಿ ಪ್ರಾರಂಭವಾದ ರಡ್ಡಿ ರಾಜವಂಶವು ರಾಚವೇಮಾರಡ್ಡಿಯವರೆಗೆ ಅಂದರೆ ಕ್ರಿ.ಶ. 1424 ರ ವರೆಗೆ ಒಂದು ನೂರು ವರುಷಗಳ ತನಕ ಆಳ್ವಿಕೆ ಮಾಡಿ ಮುಕ್ತಾಯವಾಯಿತು. ಈ ಮಾಹಿತಿಯು ಆಂಧ್ರುಲ ಚರಿತ್ರೆಯು(ಭಾಗ–ಪಟ150) ಗ್ರಂಥದಲ್ಲಿಯ ತೆಲುಗು ಚಾಟು ಪದ್ಯದಿಂದಲೂ ರಡ್ಡಿ ರಾಜರ ವಂಶಾವಳಿಯು ತಿಳಿದು ಬರುತ್ತದೆ. (ಹೆ.ಮ. ಚರಿತ್ರೆ ಪುಟ– 12) ಅಂದರೆ ಈ ಪದ್ಯದ ಪ್ರಕಾರ ರಡ್ಡಿ ರಾಜವಂಶವಿಂತಿದೆ.

1. ಪೋಲಯ ವೇಮನ – (17 ವರ್ಷಗಳ ಆಳ್ವಿಕೆ)
2. ಅನಪೂತ ವೇಮನ – (20 ವರ್ಷಗಳು)
3. ಅನವೇಮನ ವೇಮನ – ( 15 ವರ್ಷಗಳು)
4. ಕೊಮರಗಿರಿ ವೇಮನ – (14 ವರ್ಷಗಳು)
5. ಪೆಡಕೋಮಟಿ ವೇಮನ – (20 ವರ್ಷಗಳು)
6. ರಾಚವೇಮನ – (4 ವರ್ಷಗಳು)

ಮೇಲ್ಕಾಣಿಸಿದಂತೆ ಇವರೆಲ್ಲರೂ ಕ್ರಮವಾಗಿ 12,20,15,14,20,4, ಒಂದು ನೂರು ವರ್ಷಗಳ ಆಳ್ವಿಕೆ ಮಾಡಿದ್ದುದು ತಿಳಿದು ಬಂದ ಸಂಗತಿಯಾಗಿದೆ. (ಹೆ.ಮ.ಚ. – ಡಾ ಸಣ್ಣೆಲ್ಲಪ್ಪನವರ – ಪುಟ– 12–13).

**ವೇಮನನ ಶಿಕ್ಷಣ:**

ರಾಜವಂಶ ಪರಿವಾರದಲ್ಲಿಯೇ ವೇಮನನಿಗೆ ಪ್ರಾಥಮಿಕ ಹಂತದ ವಿದ್ಯೆ ದೊರೆತರೂ, ಇವ್ವಟೂರಿನ ಸೋಮಶೇಖರ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. ಆದರೆ, ವೇಮನ ಗುರು ಪೀಠದಲ್ಲಿದ್ದುಕೊಂಡು ಓದಲು ನಿರಾಸಕ್ತಿ ತಾಳಿ, ಪ್ರಕೃತಿ ಸೌಂದರ್ಯ ಸವಿಯುತ್ತ ಹೊಳೆ ಹಳ್ಳ ಕೊಳ್ಳಗಳು ಹರಿಯುತ್ತಿರುವುದನ್ನು, ಪಶು-ಪಕ್ಷಿಗಳ ಓಡಾಟ-ಹಾರಾಟ ಮತ್ತು ಅವುಗಳ ಕಲರವ ಧ್ವನಿಯನ್ನಾಲಿಸುವಲ್ಲಿ ವೇಮನ ಮಗ್ನನಾಗುತ್ತಿದ್ದ. ತನ್ನ ಕುಟುಂಬದ ಏಳು-ಬೀಳು, ಯಾದವೀ ಕಲಹ ಮತ್ತು ಅಧಿಕಾರ ದಾಹದಿಂದ ಪರಸ್ಪರರ ಕಚ್ಚಾಟವನ್ನು ಆತ ವಿದ್ಯಾರ್ಜನೆಯ ಸಂದರ್ಭದಲ್ಲಿಯೇ ಕಣ್ಣಾರೆ ಕಂಡು, ಕೇಳಿದ ಮನಸ್ಸು ವಿಹ್ವಲಗೊಂಡಿತ್ತು. ಸೋಮಶೇಖರ ಗುರುಗಳು ತುಂಬಾ ಪ್ರಭಾವಿಗಳು! ಹಾಗೆಯೇ ವೇಮನನ ಮೇಲೆ ಕರುಣೆ ಪ್ರೀತಿ-ವಾತ್ಸಲ್ಯವುಳ್ಳವರಾಗಿದ್ದರು. ಆಯಾ ಶಿಷ್ಯರಲ್ಲಿ ಹುದುಗಿದ ಸುಪ್ತ ಚೇತನವನ್ನು ಬಡಿದೆಬ್ಬಿಸುವವರಾಗಿದ್ದರು. ವೇಮನನಲ್ಲಿ ಕವಿಯಾಗುವಂತಹ ಸುಪ್ತ ಚೇತನವಿದೆಯೆಂಬುದನ್ನು ಗುರುಗಳು ಮನವಾರೆ ಕಂಡು ಅರಿತಿದ್ದರು. ಆದುದರಿಂದ ವೇಮನನಿಗೆ ಅದೇ ದಾರಿಯಲ್ಲಿ ಹೋಗುವಂತೆಯೂ ಅನುಗ್ರಹಿಸಿದ್ದರು.

**ಮೋಹದ ಮಡುವಿನಲ್ಲಿ ವೇಮನ:**

'ತಾನೊಂದು ಬಗೆದರೆ ದೈವವೊಂದು ಬಗೆಯಿತು' ಎಂಬಂತೆ ಗುರುಕುಲದಿಂದ ವೇಮನನು ಬೇಗನೇ ಮರಳಬೇಕಾಯಿತು. ಏಕೆಂದರೆ ಅವನ ಸೋದರತ್ತೆಯ ಮನೆಯಲ್ಲಾದ ರಾಜಕೀಯ ಸ್ಥಿತ್ಯಂತರಗಳು, ಯುದ್ಧದ ಪರಿಣಾಮಗಳು, ಸಾವು ನೋವು; ಇದಲ್ಲದೆ ತನ್ನ ತಂದೆಯು ತನ್ನ ಪ್ರೇಯಸಿ ಲಕುಮಾದೇವಿಯ ಜೊತೆಗೆ ನೃತ್ಯ-ಸಂಗೀತಗಳಿಗೆ ಲೋಲುಪನಾಗಿದ್ದುದನ್ನು ಹಾಗೂ ತನ್ನ ಹಿಂದಿನ ರಾಜ ಭೋಗದ ವೈಭವದಲ್ಲಿ ಮೆರೆಯುತ್ತಿರುವುದನ್ನು ಕಂಡಿದ್ದನು. ಹೀಗೆ ಈ ಎಲ್ಲ ಘಟನೆಗಳಿಂದ ತಂದೆಯ ಪ್ರೇಯಸಿ ಲಕುಮಾದೇವಿಯ ಮನೆ ಪರಿಸರದಲ್ಲಿ, ದೇವದಾಸಿ ಚಿತ್ತರಂಜನಿಯ ಸ್ನೇಹದಲ್ಲಿ ವೇಮನನು ಸಿಲುಕಿಕೊಂಡನು. ಈತನ ರೂಪು-ಯೌವನ, ಅಂಗ ಸೌಷ್ಟವವನ್ನು ಕಂಡ ದೇವದಾಸಿ ಕಂಡು ಬಹುವಾಗಿ ಮೆಚ್ಚಿದಳು. ವೇಮನನೂ ಮೆಚ್ಚಿದ. ಇದರಿಂದಾಗಿ ಮನೆಯೂ ಖಾಲಿ, ಮನೆಯೂ ಖಾಲಿಯಾಗುವಂತಾಯಿತು. ವೇಮನನಿಂದ ಸಕಲ ಭೋಗ-ಭಾಗ್ಯದ ವಸ್ತುಗಳನ್ನು ಪಡೆದಿದ್ದ ಚಿತ್ತರಂಜನಿಗೆ ಮಲ್ಲಮ್ಮನ (ಅತ್ತಿಗೆ) ವಜ್ರದ ನತ್ತಿನ ಮೇಲೆ ಕಣ್ಣು ಬಿತ್ತು. ಅದು ಮುತ್ತೈದೆಯರ ಪಾವಿತ್ರ್ಯದ ಆಭರಣ, ಮತ್ತೇನನ್ನಾದರೂ ಕೊಡಬಲ್ಲೆ ಆದರದನ್ನು ಕೇಳುವುದು ಉಚಿತವಲ್ಲವೆಂದು ವೇಮನ ಆಕೆಗೆ ಅದೆಷ್ಟು ಹೇಳಿದರೂ; ಅದು

ಬೇಕೆ ಬೇಕೆಂದು ಹಠ ಹಿಡಿದಳು. ಮನೆಗೆ ಬಂದು ಉಪವಾಸ ವ್ರತ ಕೈಕೊಂಡ. ವೇಮನನ ಇಂಗಿತದ ಮನೋಗತವನ್ನರಿತುಕೊಂಡ ಮಲ್ಲಮ್ಮ ತನ್ನ ಮೂಗುತಿಯನ್ನು ಆತನಿಗಿತ್ತು, ಕರಾರು ಹಾಕಿ ಇಂತೆಂದಳು. ಆಕೆ ಮಲಗುವ ಮಂಚಕ್ಕೆ ನಗ್ನಳಾಗಿ, ವಸ್ತ್ರಹೀನಳಾಗಿ ಮೂರು ಬಾರಿ ಪ್ರದಕ್ಷಿಣೆ ಹಾಕಬೇಕು. ವಜ್ರದ ಮೂಗುತಿಯನ್ನು ಹೊಸ್ತಿಲದ ಮೇಲಿಡು ಹಾಗೆ ಆಕೆ ಮಾಡಿದರೆ ಅದನ್ನವಳಿಗೆ ಕೊಡು ಎಂದಳು. ಅದಕ್ಕೆ ಹೂಂ ಗುಟ್ಟಿದ, ಚಿತ್ತರಂಜನಿಯಲ್ಲಿಗೆ ಹೋದ. ಅತ್ತಿಗೆ ಹೇಳಿದಂತೆಯೇ ಆಕೆಯ ಮುಂದೆ ಹೇಳಿದ. ಆಕೆಯು ನತ್ತಿನ ವ್ಯಾಮೋಹದಿಂದಾಗಿ ಒಪ್ಪಿಗೆಯಿತ್ತುದಲ್ಲದೇ ಮೂರು ಸುತ್ತು ಬೆತ್ತಲೆಯಾಗಿಯೇ ಸುತ್ತು ಹಾಕಿದಳು. ಆಕೆಯ ನಗ್ನವಾದ ದೇಹವನ್ನು ತದೇಕಚಿತ್ತದಿಂದ ದಿಟ್ಟಿಸುತ್ತಿದ್ದ ವೇಮನ; ಮೊದಮೊದಲು ವಸ್ತ್ರಾಲಂಕರಗಳಿಂದ ಸುಂದರವಾಗಿ ಕಾಣುತ್ತಿದ್ದ ವೇಶ್ಯೆ, ನಗ್ನತೆಯಿಂದ ಅಸಹ್ಯಪಟ್ಟುಕೊಂಡು ಲಜ್ಜಿತನಾದ ವೇಮನ ಅಲ್ಲಿಂದ ಪಲಾಯನವಾದ. ಮೂಗುತಿಯನ್ನು ಇಟ್ಟವನೇ ಹೊರಗೆ ಓಡಿದ, ಚಿತ್ತರಂಜನಿಯ ಸಹವಾಸದಿಂದ ಏನೆಲ್ಲ ಕಳೆದುಕೊಂಡ ವೇಮನ. ಈ ಘಟನೆಯಿಂದ ಮರಳಿ ಆಕೆಯ ಮನೆಯ ಹೊಸ್ತಿಲವನ್ನೇ ತುಳಿಯಲಿಲ್ಲ. ಅಂದಿನಿಂದ ಆತ ಮಹಾಯೋಗಿಯಾದ. ಆತನೂ ದಿಗಂಬರನಾದ. ಅದು ಅವನ ಪದ್ಯದಲ್ಲಿ ಕಂಡು ಬರುತ್ತದೆ.

**ತಾಯ ಗರ್ಭದಿಂದ ತಾಂ ಬರುವ ಸಮಯದಿ**
**ಮೊದಲು ವಸ್ತ್ರವಿಲ್ಲ ತುದಿಗುಮಿಲ್ಲ**
**ನಡುವೆ ಬಟ್ಟೆಯುಡುವುದೇಕೆಂದು ತಿಳಿಯಿರಿ**
**ವಿಶ್ವದಾಭಿರಾಮ ಕೇಳು ವೇಮ.**

ಮಲ್ಲಮ್ಮ ಅತ್ತಿಗೆಯಿಂದ ವೇಮನ ಯೋಗಿಯಾದ, ನಿಜವಾದ ಅರ್ಥದಲ್ಲಿ ಸನ್ಯಾಸಿ ವಿರಾಗಿಯಾದ, ಕಚ್ಚುಟವನ್ನು ಬಿಟ್ಟರೆ ತುಂಡು ಬಟ್ಟೆಯನ್ನು ಧರಿಸಲಾರದೇ ಊರುಕೇರಿಗಳನ್ನೆಲ್ಲವೂ ಸಂಚರಿಸಿದ. ಹುಟ್ಟಿದಾಗಲೂ ಬಟ್ಟೆಯಿರಲಿಲ್ಲ– ಸತ್ತಾಗಲೂ ಇರುವುದಿಲ್ಲ– ಮಧ್ಯದಲ್ಲಿ ಬಟ್ಟೆ ಏಕೆಂದು ಪ್ರಶ್ನಿಸಿದನು.

**ವೇಮನನ ಪರಿವರ್ತನ ಪರ್ವ: ಮಹಾಯೋಗಿಯ ದಿವ್ಯ ದರ್ಶನ:**

ಅತ್ತಿಗೆ ತಾಯಿಯ ಸ್ವರೂಪಳಾಗಿ ಕುಮಾರಗಿರಿರೆಡ್ಡಿಯ ಮನೆ ತುಂಬಿದ್ದು; ಅವಳ ಕೃಪೆಯಿಂದ, ಚಿತ್ತರಂಜನಿಯ ಸಂಗದಿಂದ ದೂರ ಉಳಿದದ್ದು ಅಲ್ಲದೆ ಆತನ ಮನಸ್ಸೇ ಪರಿವರ್ತನವಾಯಿತು. ವೇಮನನ ಮನಸ್ಸು ದೇವದಾಸಿಯ ಸಂಪರ್ಕದಿಂದ ರೋಸಿ ಹೋಗಿತ್ತು, ಲಜ್ಜಿತವಾಗಿತ್ತು. ಭೋಗದಲ್ಲಿಯೇ ಮೈಮರೆತಿದ್ದ ವೇಮನ ಮಲ್ಲಮ್ಮನ ಮಾರ್ಗದರ್ಶನದಿಂದ ಸತ್ಯದ ದರ್ಶನವಾಗಿ ಅಧ್ಯಾತ್ಮದತ್ತ, ಧ್ಯಾನ–ತಪಸ್ಸಿನತ್ತ ಸಾಗುವಂತೆ ಪ್ರಚೋದನೆಯಾಯಿತು. ತನ್ನನ್ನು ಕುರಿತು ತನಗೇ

ಹೀನ ಭಾವನೆಯುಂಟಾಗಿತ್ತು. ಶಾರೀರಿಕ ಮಾನಸಿಕವಾಗಿಯೂ ದೌರ್ಬಲ್ಯ-ವುಂಟಾಗಿತ್ತು. ಇದರಿಂದ ಮುಕ್ತಿ ಹೊಂದಲು ಮನಸ್ಸು ಹಾತೊರೆಯುತ್ತಿತ್ತು, ಹಂಬಲಿಸುತ್ತಿತ್ತು. ಆಗ ವೇಮನನಿಗೆ ನೆರವಿಗೆ ಬಂದವನು ಆಪ್ತಮಿತ್ರ, ಬಾಲ್ಯಸ್ನೇಹಿತ ಅಕ್ಕಸಾಲಿಗ ಅಭಿರಾಮವೆಂಬುವವನು. ಆತನಲ್ಲಿ ಮನದಾಳದ ನೋವನ್ನು ತೋಡಿಕೊಂಡ. ತನಗಿನ್ನು ಮೇಲಿನಿಂದ ಲೌಕಿಕ ಸುಖಬೇಡ; ಪಾರಮಾರ್ಥಿಕ ಪರಮಾನಂದ ಸುಖಬೇಕು, ಮತ್ತು ಅದರಿಂದ ಲೋಕಕ್ಕೂ ದಾರಿದೀಪವಾಗಬೇಕೆಂದು ತನ್ನ ಮನದಿಂಗಿತವನ್ನು ಆತನಲ್ಲಿ ತಿಳಿಯಪಡಿಸಿದ. ಆಪತ್ಕಾಲದಲ್ಲಿ ಆಪ್ತಮಿತ್ರ ಸನ್ಮಾರ್ಗ ತೋರಿದ.

ಶ್ರದ್ಧೆಯೇ ಜೀವನದ ಆಧಾರ, ಶ್ರದ್ಧೆಯಿಲ್ಲದಿದ್ದರೆ ಏನನ್ನೂ ಸಾಧಿಸಲಿಕ್ಕಾಗದು. ಶ್ರದ್ಧೆಯೊಂದು ಮಹಾನ್ ಶಕ್ತಿಯದು. ಆಶ್ರಯ ಸ್ಥಾನವಲ್ಲ. ತಾತ್ಕಾಲಿಕ ವೈರಾಗ್ಯದಿಂದ ಶ್ರದ್ಧೆ ಹುಟ್ಟಿತು. ಜೀವನದ ಗುರಿ ಸಾಧನೆಗೆ ನಿಜವಾದ ಶ್ರದ್ಧೆಯ ಜೊತೆ ಜೊತೆಗೆ ಸತತ ಪರಿಶ್ರಮಿಸುವ ಮನೋಬಲ ಬೇಕೇಬೇಕೆಂದು ಸ್ನೇಹಜೀವಿ ಅಭಿರಾಮ ಹೇಳಿದನಲ್ಲದೇ, ಆತನನ್ನು ಪರೀಕ್ಷಿಸಲಾರಂಭಿಸಿದ. ವೇಮನನಲ್ಲಿ ಬಂದಿದ್ದ ಬದಲಾವಣೆಗೆ ಅದೇನು ವೈರಾಗ್ಯದಂತಹ ತಾತ್ಕಾಲಿಕ ವೈರಾಗ್ಯವಾಗಿರಲ್ಲಿಲ್ಲ. ನಿಜವಾಗಿಯೂ ವೇಮನನ ಅಂತರಾಳ ಬೆಂದು ಪರಿಪಕ್ವವಾಗಿತ್ತು. ಪಾರಮಾರ್ಥ ಈತನಿಗೆ ಪ್ರಾಪ್ತವಾಗುವುದರಲ್ಲಿ ಸಂದೇಹವೇ ಇಲ್ಲವೆಂದೆನಿಸಿತು. ಮಿತ್ರ ಅಭಿರಾಮನಿಗೆ ಹಾಗೆಯೇ ಪರಮಾರ್ಥ ಸಾಧನೆಗೆ ನಿರ್ಭಯತೆ ಬೇಕು. ನಿರ್ಭಯತೆಯೆಂದರೆ ಮನೆಯಲ್ಲಿ, ಮನದಲ್ಲಿ, ಜನರಲ್ಲಿ, ಜೀವನದಲ್ಲಿ, ಸಾವಿನಲ್ಲಿ ಎಲ್ಲಿಯೂ ಭಯವಿಲ್ಲದಿರುವ ಸ್ಥಿತಿಯನ್ನು ತಲುಪಿದಾಗ ಪಾರಮಾರ್ಥಿಕ ಯಶಸ್ಸಿನ ಮಾರ್ಗ ಸುಲಭವಾಗುತ್ತದೆಯೆಂಬುದನ್ನು ಅಭಿರಾಮ ವೇಮನನಿಗೆ ಬಣ್ಣಿಸಿದನು. ಈತನ ಹಿತೋಕ್ತಿಯ ಮಾತುಗಳಿಂದಾಗಿ ವೇಮನನ ಮನೋಸ್ಥಿತಿ ಪಾರಮಾರ್ಥಿಕದ ಉನ್ನತ ಮಟ್ಟಕ್ಕೇರಿತ್ತು.

ಸತ್ವ, ರಜೋ, ತಮೋಗುಣಗಳೆಂಬ ತ್ರಿಗುಣಗಳು ಈ ವಿಶ್ವವನ್ನೇ ವ್ಯಾಪಿಸಿವೆ. ಮನಸ್ಸು ಕೂಡ ಈ ತ್ರಿಗುಣಾತ್ಮಕ ಆವರಣದಿಂದ ಆತ್ಮವನ್ನು ಮುಚ್ಚಿಬಿಟ್ಟಿದೆ. ಕ್ರಮವಾಗಿ ತಮದಿಂದ ರಜೋಗುಣಕ್ಕೇರಿ, ರಜೋಗುಣದಿಂದ ಸಾತ್ವಿಕತೆಯ ವಲಯದಲ್ಲಿ ಲೀನವಾಗಿ, ಕೊನೆಗೆ ಅದರಿಂದ ಬೇರ್ಪಟ್ಟು, ಆತ್ಮ ಸ್ವರೂಪದ ದರ್ಶನ ಪಡೆಯುವ ಪರಮ ಗುರಿಯತ್ತ ವೇಮನ ಸಾಗುತ್ತಿರುವುದನ್ನು ಸಾತ್ವಿಕೆಯ ಸಾಕಾರ ಮೂರ್ತಿಯಾಗಿದ್ದ ಅಭಿರಾಮ ಗುರುತಿಸಿದ. ಗುರುವಿನ ದರ್ಶನಕ್ಕೆ ಇದು ಪಕ್ವ ಮತ್ತು ಸಕಾಲವೆಂದು ಭಾವಿಸಿ; ಗುರುವಿನ ಶೋಧನೆಗಾಗಿ ಅಭಿರಾಮನೂ ವೇಮನನೊಂದಿಗೆ ಸಂಚರಿಸಲಾರಂಭಿಸಿದ. ವಿವಿಧ ಊರು-ಕೇರಿ, ಬೆಟ್ಟದ

ಸಾಲುಗಳನ್ನು ತುಳಿಯುತ್ತ ರಾಜ ಮಹೇಂದ್ರಿಯ ಹೊರವಲಯದ ಬೆಟ್ಟದ ಕಡೆಗೆ ಬರುತ್ತಾರೆ. ಬೆಟ್ಟದ ಶ್ರೇಣಿಯಲ್ಲಿರುವ ಗುಹೆಯೊಂದರಿಂದ ಓಂಕಾರನಾದವು ಕೇಳಲಾರಂಭಿಸಿತು. ಆ ಓಂಕಾರ ನಾದದತ್ತ ವೇಮನನು ಆಕರ್ಷಿತನಾಗಿ ಆಲಿಸುತ್ತ ಅಲ್ಲಿಯೇ ಮೈಮರೆತು ಕುಳಿತ, ವೇಮನನ ಈ ಭಂಗಿಯನ್ನು ಕಂಡು ಚಕಿತನಾದ. ಈತನನ್ನು ಜಾಗೃತಾವಸ್ಥೆಗೆ ತರುವಲ್ಲಿ ಅಭಿರಾಮ ವಿಫಲನಾದ. ಅಷ್ಟರಲ್ಲಿಯೇ ಅಭಿರಾಮ ಅಚ್ಚರಿಗೊಂಡು ಹಿರಿಯರನ್ನು ಕರೆತರಲು ತೆರಳಿದ. ಕೆಲಕಾಲದ ನಂತರ ಗುಹೆಯಿಂದ ದಿವ್ಯ ಪ್ರಕಾಶ ಹೊರಹೊಮ್ಮಿತು. ಅಲ್ಲಿ ಮಹಾಯೋಗಿಯೊಬ್ಬ ಕಾಣಿಸಿಕೊಂಡರು. ಅವರು ವೇಮನನನ್ನು ನೋಡಿ; ಬಾ ಮಗು – ಬಹಳ ಹೊತ್ತು ನಿನ್ನನ್ನು ನಾನು ಕಾಯಿಸಿದೆಯಲ್ಲವೆ? ಬೇಗ ಬರಬಾರದಿತ್ತೆ? ಎಂದು ಯೋಗಿವರ್ಯ ನುಡಿದರು. ಮುಗ್ಧತೆಯಿಂದ ವೇಮನ ಸುಮ್ಮನಿದ್ದ. ಯೋಗಿಯು ಅಂತಃಕರಣದಿಂದ ತಲೆಯ ಮೇಲೆ ಕೈಯಿಟ್ಟು; ತಾವು ಆರ್ಜಿಸಿದ ತಪಃಶಕ್ತಿಯನ್ನು ವೇಮನನಿಗಿತ್ತು ಆಶೀರ್ವದಿಸುತ್ತ ಧಾರೆಯೆರೆದರು. ವೇಮನನಿಗೆ ಇದೆಲ್ಲವೂ ಅರಿವಿಗೆ ಬರುವುದಕ್ಕೆ ಮೊದಲೇ "ಓಂ ನಮಃ ಶಿವಾಯ" ಎಂಬ ಓಂಕಾರ ನಾದದೊಂದಿಗೆ ಕಣ್ಮರೆಯಾಗಿದ್ದ. ಅಂದಿನಿಂದ ಈ ಗುರುವಿನ ಶಿಷ್ಯೋತ್ತಮನಾಗಿ ಆತನಾಶೀರ್ವಾದದ ಬಲವನ್ನು ಮುನ್ನಡೆಸಲು ಪಣ ತೊಟ್ಟ!!

ಆದರೆ ಆ ಯೋಗ ಗುರುವಿನ ಹೆಸರು 'ಎಲ್ಲಿಯೂ ಉಲ್ಲೇಖವಾಗಿಲ್ಲವಾದುದು ವಿಷಾದನೀಯ! ಆತನ ಕೃಪಾಶೀರ್ವಾದದ ಬಲದಿಂದ ವೇಮನ ಸಂಪೂರ್ಣ ಬದಲವಾಣೆಯಾಗಿದ್ದ. ಮೇಲಾಗಿ ಆತನಿಗೆ ಸಿದ್ಧಿಗಳು ಸುಲಭವಾಗಿ ಸಿದ್ಧಿಸಿದ್ದವು. ಗುರುವಿನ ದಿವ್ಯ ತೇಜ ವೇಮನನ ಮುಖ ಮಂಡಲದಲ್ಲಿ ರಾರಾಜಿಸುತ್ತಿತ್ತು. ನಡೆದುದೆಲ್ಲವನ್ನೂ ಅಭಿರಾಮನಿಗೆ ತಿಳಿಸಿದ. ಸನ್ಮಾರ್ಗದಲ್ಲಿಯೇ ನಡೆಯುವ ನಿರ್ಧಾರವನ್ನು ತಳೆದ. ಜೊತೆಯಾಗಿ ನಡೆದು ನಡೆಸಿದ ಮಿತ್ರ ಅಭಿರಾಮನನ್ನು ಎಂದೆಂದಿಗೂ ಲೋಕ ಮರೆಯದಂತೆ ಮಾಡಲು ವೇಮನ ಮನದಲ್ಲಿ ಅಚ್ಚೊತ್ತಿಸಿಕೊಂಡ, ಸ್ನೇಹಿತನ ಉಪಕಾರವನ್ನೆಂದೂ ಮರೆಯಬಾರದೆಂಬಂತೆ ತನ್ನ ಪದ ಪದ್ಯಗಳಿಗೆ **"ವಿಶ್ವದಾಭಿರಾಮ ಕೇಳು ವೇಮ"** ಎಂಬ ಅಂಕಿತವನ್ನು ಇಟ್ಟುಕೊಂಡು ರಚಿಸಿರಬೇಕೆಂಬ ಊಹೆ ನನ್ನದು! ಇದು ಸರಿಯೋ ತಪ್ಪೋ ವಿದ್ವಾಂಸರು ನಿರ್ಧರಿಸಬೇಕಷ್ಟೇ! ಇದು ಆತ್ಮೀಯ ಸ್ನೇಹಿತನ ನೆನಪಿನ ಕಾಣಿಕೆಯೇ ಸರಿ. ಆದರೆ ತಪೋಬಲವನ್ನು ಕರುಣಿಸಿದ ಗುರುವಿನ ಹೆಸರಿಸದಿರುವುದು ವಿಷಾದನೀಯ–ವಾದುದೆಂದೇ ಹೇಳಬೇಕು.

**ಪರಿವ್ರಾಜಕನಾಗಿ ವೇಮನ:**

ಪರಿಪೂರ್ಣ ಯೋಗಿಯಾದ ವೇಮನ ತನ್ನ ಹುಟ್ಟೂರು, ತಂದೆತಾಯಿ–ಬಂಧು–ಬಳಗದ ಪರಿವಾರವೆಲ್ಲವನ್ನು ತೊರೆದು ಗುಡ್ಡ–ಬೆಟ್ಟ–ಕಾಡು ಮೇಡು, ಆ

ಊರು ಈ ಊರು ಎಂದೆನ್ನದೇ ಲೆಕ್ಕಿಸದೇ ಸತ್ಯದ ಹುಡುಕಾಟಕ್ಕಾಗಿ ನಡೆದೇ ಬಿಟ್ಟನಂತೆ! ಮತ್ತೊಂದು ಹೇಳಿಕೆಯೇನೆಂದರೆ ಅವನು ತನ್ನ ಅಣ್ಣ ಭರಮರಡ್ಡಿಯಿಂದ ಕೆಲವು ಭೂಮಿಯನ್ನು ಪಡೆದುಕೊಂಡು ಅದನ್ನು ತಾನೇ ಊಳುತ್ತಾ ಬಸವಾದಿ ಶಿವಶರಣರಂತೆ ಕಾಯಕ ತತ್ಪರನಾಗಿ ಜೀವಿಸಹತ್ತಿದನೆಂದೂ ಹೇಳಲಾಗಿದೆ. ಗುಹೆಯಲ್ಲಿದ್ದ ಶಿವಯೋಗಿಯ ಅನುಗ್ರಹವಾದ ಮೇಲೆ ಆತ ತೀವ್ರ ಬದಲಾವಣೆಯಾದ. ಅವನು ಶಿವಶರಣರಂತೆ ಬಾಳು ಸಾಗಿಸಲು ಮುಂದಾದ. ಅವನು ಸಾಮಾನ್ಯ ಯೋಗಿಗಳಂತೆ ಸಂಸಾರವನ್ನು ತ್ಯಜಿಸಿ ಭಿಕ್ಷೆಯ ಮೇಲೆ ಅವಲಂಬಿಸಲಿಲ್ಲವೆಂದೂ ಉಲ್ಲೇಖವಿದೆ. ಲಿಂಗಾಯತ ಶಿವಯೋಗಿಯಂತೆ ಕಾಯಕದಿಂದಲೇ ಉಪಜೀವಿಸುವವ–ನಾಗಿದ್ದನು. ಅಂದಿನಿಂದ ವೇಮನನು ಸ್ವತಂತ್ರ ಧೀರ ಯೋಗಿಯಾಗಿ, ಶಿವಯೋಗಿಯಾಗಿ, ಚರಜಂಗಮನಾಗಿ ಸಂಚರಿಸಿ ಆಂಧ್ರ ತಮಿಳುನಾಡು– ಕರ್ನಾಟಕದ ತುಂಬೆಲ್ಲ ಸಂಚರಿಸಿ ತಮ್ಮ ಉನ್ನತ ವಿಚಾರಗಳಿಂದ ಬೆಳಗಿ ಯೋಗ ಸಾಮ್ರಾಜ್ಯ ಕಟ್ಟಿದರೆಂಬುದು ಅವನ ಚೌಪದಗಳಿಂದ ತಿಳಿದು ಬರುತ್ತದೆ.

**ಕಳ್ಳಗುರು ಕಟ್ಟುವನೆಲ್ಲ ಕರ್ಮಗಳನು**
**ಮಧ್ಯಮ ಗುರು ಕಟ್ಟುವ ಮಂತ್ರ ತಂತ್ರ**
**ಉತ್ತಮ ಗುರು ಕಟ್ಟುವನು ಯೋಗ ಸಾಮ್ರಾಜ್ಯದ**
**ವಿಶ್ವದಾಭಿರಾಮ ಕೇಳು ವೇಮ**

ಎಂಬ ಪದ್ಯ ಇಂದಿನ ಸರ್ವಧರ್ಮಗಳ ಗುರುಗಳಿಗೂ ಸಹ ಮಾರ್ಗದರ್ಶಕ ವಾಗಿದೆ. **'ಏಳು ಮತಗಳಲಿ ಎಣಿಸಿ ನೋಡಿದಾಗ–ಮತ್ತೆ ಲಿಂಗಮತವೇ ಮಿಗಿಲಿಹುದು'** ಎಂದು ಮಹಾಯೋಗಿ ವೇಮನನ ವಚನ ಸಂದೇಶವನ್ನು ಲಿಂಗವಂತರು ಕರೆದು ನೋಡುವಂತಿದೆ.

ಯೋಗಿಯಾದ ಮೇಲೆ ವೇಮನನು ಕೊಂಡವೀಡು, ತಂದೆ–ತಾಯಿ, ಪರಿವಾರವೆಲ್ಲವನ್ನು ತೊರೆದು ನಡೆದೇ ಬಿಟ್ಟನು. ಒಂದು ಮಾತನ್ನು ತಂದೆತಾಯಿ–ಅಣ್ಣ–ಅತ್ತಿಗೆಗೂ ಹೇಳಲಿಲ್ಲವಂತೆ! ಮಗನ ದಿಗಂಬರತ್ವವನ್ನು ತಾಯಿಯು ಒಪ್ಪದಾದಳು. ತಾಯಿ–ಮಗನ ಅಗಲುವಿಕೆಯಲ್ಲಿ ಸಾಕಷ್ಟು ಅನುತಾಪವಿತ್ತು. ರಾಜವೈಭವದಲ್ಲಿದ್ದ ಮಗನನ್ನು ಬಹು ಪ್ರೀತಿ–ಮಮತೆಯಿಂದ ಬೆಳೆಸಿದ್ದಳು. ತನ್ನ ಮಗ ವೇಮನನು ದೇವದಾಸಿಯ ಸಂಗದೊಡನಾಟದಲ್ಲಿದ್ದಾಗ, ರಾಜ ಕುಟುಂಬಕ್ಕೆ ಆ ವೃತ್ತಿ ರೂಢಿಗತವಾದುದರಿಂದ ಅವಳ ಮನಸ್ಸು ಕ್ಷೋಭೆಗೊಂಡಿರಲಿಲ್ಲ. ತನ್ನ ನಾದಿನಿ ಮಲ್ಲಾಂಬೆಯ ಮಗಳಾದ ಮಲ್ಲಮ್ಮನ ಬುದ್ಧಿ ಕೌಶಲ್ಯದಿಂದ ಮಗನು ಸನ್ಮಾರ್ಗದ ಹಾದಿ ಹಿಡಿದಾಗ ಸಮಾಧಾನದ ಉಸಿರು ಬಿಡುವಂತಾಗಿತ್ತು. ಇನ್ನೇನು

ಎಲ್ಲವೂ ಸರಿ ಹೋಗುತ್ತದೆಯೆನ್ನುವಷ್ಟರಲ್ಲಿಯೇ ವೇಮನನ ದೀಕ್ಷೆ–ದಿಗಂಬರತ್ವಗಳ ಆಘಾತಕರ ಸುದ್ದಿಯಿಂದ ತಾಯಿಯು ವಿಹ್ವಲವಾಗಿಬಿಟ್ಟಳು. ಇಷ್ಟೆಲ್ಲವಾದ ಬಳಿಕ, ದಿಗಂಬರದಲ್ಲಿದ್ದ ಮಗನನ್ನು ನೋಡುವುದೇ ಬೇಡವೆಂದು ಆತ ವಾಸವಾಗಿರುವ ಗವಿಯ ಕಡೆಗೂ ಹೋಗಿರಲಿಲ್ಲ. ಕೊನೆಗೆ ಮನಸ್ಸಿನ ಸಮಾಧಾನಕ್ಕಾಗಿ ಕಾಶಿಯಾತ್ರೆಯನ್ನು ಕೈಕೊಂಡಳೆಂದು ತಿಳಿದು ಬರುತ್ತದೆ.

**ಲೋಕ ಸಂಚಾರಿ ವೇಮನ:**

ಸಂತ–ಮಹಂತರನೇಕರು ಈ ಲೋಕವೇ ನನ್ನ ಮನೆ ಇಲ್ಲಿರುವವರೆಲ್ಲರೂ ನನ್ನ ಬಂಧು–ಬಳಗದವರು, ಇವನಾರವ ಇವನಾರವ ಎಂದೆನ್ನದೆ ಇವರು ನಮ್ಮವರು ಇವರು ನಮ್ಮವರು ಎನ್ನುತ್ತಲೇ ಬಾಳಿ ಲೋಕ ಕಲ್ಯಾಣದ ಮಣಿಹ ಹೊತ್ತು ಬಂದವರು. ಧ್ಯಾನ–ತಪಸ್ಸು–ಯೋಗ ಸಾಧನೆಯಲ್ಲಿ ತಲ್ಲೀನನಾದ ವೇಮನ ಅಲ್ಲಲ್ಲಿ ಯೋಗ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿದ. ಕೊಂಡವೀಡುವಿನಿಂದ ತಂಜಾವೂರು ಮಧ್ಯದಲ್ಲಿರುವ ಹಲವಾರು ಗ್ರಾಮಗಳ ಸಮೀಪವಿರುವ ಗುಡ್ಡ ಬೆಟ್ಟಗಳ ಗುಹೆಗಂಹ್ವರಗಳಲ್ಲಿ, ಧರ್ಮಶಾಲೆ ಛತ್ರಗಳಲ್ಲಿ, ಆಲದ–ಬೇವಿನ–ಹುಣಸೇ ಮರದ ನೆರಳಿನಲ್ಲಿರುವ ಬಯಲಿನಲ್ಲಿಯೇ ವಾಸಿಸುತ್ತಿರಲಿಲ್ಲ. ತಮಗಾಗಿ ಒಂದು ಮಠಮಂದಿರವನ್ನು ಕಟ್ಟಿಸಲಿಲ್ಲ, ಕಟ್ಟಿಸಲು ಆಸ್ಪದವನ್ನು ಕೊಡಲಿಲ್ಲ. ವೇಮನರು ಎಲ್ಲಿ ವಾಸವಾಗುತ್ತಿದ್ದರೋ ಅಲ್ಲಿ ಸತ್ಸಂಗಕ್ಕೆಂದು, ತತ್ತ್ವ–ಜಿಜ್ಞಾಸೆಗೆಂದು ಜನ ಸೇರುತ್ತಿತ್ತು. ಕೂಡಿದ ಜನತೆ ನೀವೆಲ್ಲಿಯವರೆಂದು ಕೇಳಿದರೆ ವೇಮನ ಒಗಟಿನ ರೂಪದಲ್ಲಿ ಹೀಗೆನ್ನುತ್ತಿದ್ದರು.

**ಊರು ಕೊಂಡವೀಡು ವಾಸ ಪಶ್ಚಿಮವೀಧಿ**
**ಮೂಗ ಚಿಂತಪಲ್ಲೆ ಮೊದಲ ಮನೆಯು**
**ಎಟ್ಟಿ ರೆಡ್ಡಿ ಕುಲವು ಅದನೇನು ಹೇಳ್ವುದು**
**ವಿಶ್ವದಾಭಿರಾಮ ಕೇಳು ವೇಮ.**

ಎನ್ನುತ್ತಿದ್ದರು. ದೇವರು ಕರೆದರೆ ಎಲ್ಲವೂ ಸರಿ ಹೋಗುತ್ತದೆಯೆಂದೆನ್ನುತ್ತಿದ್ದರು. ತಾವು ಸಂಕಲ್ಪಿಸಿದರೆ ಅದೆಲ್ಲ ಸಾಧ್ಯ ಸ್ವಾಮಿ? ಎಂದೊಬ್ಬ ಹಿರಿಯ ಭಕ್ತ!
ಅದಕ್ಕೆ ವೇಮನನ ಉತ್ತರವಿಂತಿದೆ– ಮಳೆ ಬಾರದ್ದಕ್ಕೆ ಕಳವಳಗೊಂಡ ಹಿರಿಯ ಭಕ್ತನು ಕೇಳಿದುದಕ್ಕೆ ಪ್ರತ್ಯುತ್ತರವಿಂತಿದೆ.

**ಹನಿಯು ಬೀಳುವಂದ, ಹರಣ ತೊಲಗುವಂದ**
**ತಿಳಿಯಲಾರ ಘನನು ತಾನಿರಲು**
**ತಿಳಿಯಲಾಗ ಕಲಿಯುಗ ಉಳಿಯುವುದೆಂತು?**
**ವಿಶ್ವದಾಭಿರಾಮ ಕೇಳು ವೇಮ**

**ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ**
**ನಿಶ್ಚಲಾಗಿ ಭಕ್ತಿ ನಿಲಿಸಿದವನು**
**ಸರ್ವ ಮುಕ್ತನಿಹನು ಸರ್ವ ತಾನಾಗುವ**
**ವಿಶ್ವದಾಭಿರಾಮ ಕೇಳು ವೇಮ.**

ನೆರೆದವರೆಲ್ಲರೂ ಮೌನ ತಾಳಿದರು. ವಾತಾವರಣದ ಪ್ರಶಾಂತತೆಯು ಮೂಡಿ ಗಾಢವಾಯಿತು. ಒಂದು ವಿಚಾರ ಇನ್ನೊಂದು ವಿಚಾರದ ಒಂದು ಘಟನೆ ಇನ್ನೊಂದು ಘಟನೆಯ ಮಧ್ಯಂತರ ಅವಧಿಯ ಮಾನಸಿಕ ಕಲ್ಪನೆಯ ಕಾಲವಷ್ಟೆ! ವೇಮನರ ಸೇವಾ ಕಾರ್ಯದಲ್ಲಿ ಪರಮ ಶಿಷ್ಯರಾಗಿ ರಾಮರೆಡ್ಡಿ ಮತ್ತು ನೀಲಕಂಠ ಎಂಬಿಬ್ಬರು ಸದಾ ಸನ್ನದ್ಧರಾಗುತ್ತಾರೆ. ಇವರು ಭಿಕ್ಷಾಟನೆ ಮಾಡಿ ತಂದು ವೇಮನರಿಗೆ ಪ್ರಸಾದ ಮಾಡಿಸುತ್ತಿದ್ದರೆಂದುದಾಗಿ ಎಸ್. ಆರ್. ಪಾಟೀಲರು ಸಂಪಾದಿತ ಗ್ರಂಥದಲ್ಲಿ ಕಂಡರಣೆಗೊಂಡಿದೆ. ಯೋಗಿವರ್ಯರು ಸದಾವಕಾಲವೂ ಧ್ಯಾನ, ತಪಸ್ಸು ಚಿಂತನೆಗಳಲ್ಲಿಯೇ ಮಗ್ನರಾಗುತ್ತಿದ್ದರೆ ಆಗ ಅನೇಕ ಪವಾಡಗಳನ್ನು ಬೀರಿದ್ದುಂಟು! ಅದು ಇಲ್ಲಿ ಅಪ್ರಸ್ತುತವೆನಿಸುತ್ತದೆ.

ಲೋಕ ಸಂಚಾರಿ ಯಾರಿಗೂ ಹೆದರಲಾರನೆಂಬಂತೆ ವೇಮನ ಅಲೆದಾಡಿದ ಊರು–ಕೇರಿ, ಗಿರಿ–ಗಂಹ್ವರ–ಗುಹೆ–ಧರ್ಮಛತ್ರ– ಆಲ–ಬೇವು– ಹುಣಸೆಮರ, ಈ ಮುಂತಾದವುಗಳ ಲೆಕ್ಕವಿಟ್ಟವರಾರು? ಆದರೂ ಅವರು ತಂಜಾವೂರಿನಿಂದ ಗುಂಟುಪಲ್ಲಿಗೆ, ನೆಲ್ಲೂರು, ಗಂಡಿಕೋಟ, ರಾಜ ಮಹೇಂದ್ರಗಿರಿಗೆ, ಚಂದನೂಲು, ನೆಲ್ಲಚೆರುವು, ಕಟಾರ್ಲುಪಲ್ಲಿ, ಬಳ್ಳಾರಿಯ ಅಲಿಪುರಕ್ಕೆ ಬಂದು ತಂಗಿದರು. ಚಂದನೂರು ಮತ್ತು ಕಟಾರ್ಲುಪಲ್ಲಿ – ಪಾಮೂರುಗಳಲ್ಲಿ ಯೋಗ ಧ್ಯಾನದ ತರಬೇತಿಯ ಕೇಂದ್ರಗಳನ್ನು, ಪ್ರಯೋಗ ಶಾಲೆಗಳನ್ನು ಸ್ಥಾಪಿಸಿದರು. ಸತ್ಸಂಗಗಳನ್ನು ಮೇಳೈಸಿದರು. ಪಾಮೂರು ಗುಹೆಯಲ್ಲಿಯೇ ವಾಸಿಸಿದರು. ಅಲ್ಲಿಯೂ ಈ ತರಬೇತಿಯ ಕೇಂದ್ರವನ್ನು ಸ್ಥಾಪಿಸಿದರು. ಇವರಿರುವೆಡೆಯಲ್ಲ ಭಕ್ತಸ್ತೋಮ ಸೇರುತ್ತಿತ್ತು. ಅನೇಕರು ಯೋಗ–ಧ್ಯಾನಕ್ಕಾಗಿ ವೇಮನರಿಂದ ದೀಕ್ಷೆ ಪಡೆದರು. ಎಲ್ಲ ಜಾತಿಯವರಿದ್ದರು. ಸಾಯಂಕಾಲ ಸತ್ಸಂಗದ ಸವಿಜೇನು ನಡೆಯುತ್ತಿತ್ತು. ಅಲ್ಲಿ ಯೋಗಾಭ್ಯಾಸದ ಶುಚಿ–ರುಚಿ ಯಶಸ್ವಿಯೂ ಆಯಿತು. ಅನೇಕರಿಗೆ ವೇಮನ ಮಹಾಯೋಗಿಯ ದಿವ್ಯ ದರ್ಶನವಾಗಿ ಅವರ ಮನೆತನವೇ ಉದ್ಧಾರವಾಗುವಂತಾಯ್ತು ಎಂದು ಬೇರೆ ಹೇಳಬೇಕಾದುದಿಲ್ಲ. ಸಕ್ಕರೆಗೆ ಇರುವೆ ಮುತ್ತುವಂತೆ ಶ್ರೀ ವೇಮನರ ಮಹಾನ್ ದರ್ಶನಕ್ಕೆಂದು ಜನ ವಿಪರೀತ ಸಂಖ್ಯೆಯಲ್ಲಿ ಬರುತ್ತಿತ್ತು. ನೆರೆದವರೆಲ್ಲರೂ ಭೂಮಿಗೆ ಬಂದ ಭಗವಂತ ಎಂದು ಹಣೆ ಹಚ್ಚಿ ನಮಿಸುತ್ತಿದ್ದರು.

ಯೋಗ ಬಲದಿಂದ ವೇಮನರ ದೇಹವು ಗಟ್ಟಿ ಮುಟ್ಟಾಗಿದ್ದರೂ ವಯಸ್ಸು ಸರಿಯುತ್ತ ಬಂದಿತು. ಅರುವತ್ಮೂರರ ವಸಂತ ಕಾಲ. ಅವರು ವಿವಿಧ ಊರುಗಳಿಗೆ ಹೋಗಿ, ಅಲ್ಲಿ ತಿಂಗಳೆರಡು ತಿಂಗಳು ಇದ್ದು ಬರುತ್ತಿದ್ದರಾದರೂ ಮಳೆಗಾಲದಲ್ಲಿ ಮಾತ್ರ ಪಾಮೂರಿನ ಗುಹೆಯಲ್ಲಿಯೇ ವಾಸಿಸುತ್ತಿದ್ದರು. ಪಾಮೂರ ಗ್ರಾಮವೇ ಅವರಿಗೆ ಆಪ್ಯಾಯಮಾನವಾಗಿತ್ತು. ಅಲ್ಲಿಯೇ ವೇಮನರ ಕಾರ್ಯಚಟುವಟಿಕೆ ಸೀಮಿತವಾಗಿತ್ತು. ಯೋಗಿವರ್ಯರು ಹೆಚ್ಚು ಹೆಚ್ಚಾಗಿ ಅಂತರ್ಮುಖಿಗಳಾದಂತೆ, ಅವರ ಪ್ರಭಾವ, ಪವಾಡ ಹೆಚ್ಚು ಹೆಚ್ಚುತ್ತಾ ನಡೆಯಿತು. ಮುಂದೆ ಬರಬರುತ್ತಾ ಮುಂದಿನ ನಾಲ್ಕಾರು ವರ್ಷಗಳಲ್ಲಿ ವೇಮನರ ತತ್ವವು ಸಾಕಷ್ಟು ಪ್ರಚಾರ ಪಡೆಯಿತು. ವೇಮನ ಪಾಮೂರಿನಲ್ಲಿರುತ್ತ ಕ್ರಿಷ್ಟಿ ಪಾಡ್, ಮಿನಿಕೊಂಡ, ಚಿಟೇಲ, ಕೊಂಡವೀಡು, ಬಳ್ಳಾರಿ,ಕರ್ನೂಲಗಳಿಗೂ,ಇನ್ನಿತರ ಪೂರ್ವ ಪರಿಚಿತ ಪ್ರದೇಶಗಳಿಗೂ ವರ್ಷದಲ್ಲಿ ಒಂದೆರಡು ಸಲವಾದರೂ ಭೆಟ್ಟಿ ಕೊಡುತ್ತಿದ್ದರು. ಮೌನ, ಧ್ಯಾನ, ವ್ಯಾಖ್ಯಾನಗಳ ಮೂಲಕ ಸಾಧಕರ ಮನದಲ್ಲಿರುವ ಸಂಶಯಗಳನ್ನು ನಿವಾರಿಸುತ್ತಿದ್ದರು. ಒಗಟು ಒಗಟಾಗಿ ಪದಗಳಲ್ಲಿ ಹೇಳುತ್ತಿದ್ದರು. ಈ ಮಧ್ಯೆ ನೆಲ್ಲಚರುವು, ಕಟಾರ್ಲುಪಲ್ಲಿಗಳಿಗೆ ಒಂದೆರಡು ಬಾರಿ ಹೋಗಿ ಬಂದಿದ್ದರು. ತಮ್ಮ ಕೊನೆಯ ದಿನಗಳು ಅಂದರೆ ಅರುವತ್ತೆಂಟನೆಯ ವಯಸ್ಸಿನವರೆಗೂ ಅವರು ಕಟಾರ್ಲುಪಲ್ಲಿಯಲ್ಲಿಯೇ ನೆಲೆಸಿದರು. ಅಲ್ಲಿಂದ ಬೇರೆ ಕಡೆಗೆ ಎಲ್ಲಿಯೂ ಹೋಗಲಿಲ್ಲ.

**ಯೋಗಿಯ ನಿರ್ವಾಣ:**

1480ರ ಕಾಲವಾಗಿತ್ತು. ವೇಮನರು ತಮ್ಮ ದೇಹ ತ್ಯಾಗದ ವಿಷಯವನ್ನು ಪರಮ ಶಿಷ್ಯ ರಾಮರೆಡ್ಡಿಗೆ ತಿಳಿಸಿದ್ದರು. ಅವರ ಆಣತಿಯಂತೆ ಸಮಾಧಿ ರಚನೆಯೂ ಸಿದ್ಧತೆಯಾಗಿತ್ತು. ಅದೂ ಕಟಾರ್ಲುಪಲ್ಲಿಯ ಹೊರವಲಯದ ದಿನ್ನೆಯ ಮೇಲೆ, ಅಸಂಖ್ಯಾತ ಜನರು ಅಲ್ಲಿ ಸೇರಿದ್ದರು. ಜನರು ಸಮಾಧಿ ಸ್ಥಳವನ್ನು ಕಣ್ಣಾರೆ ಕಂಡು ನಿಬ್ಬೆರಗಾದರು. ವೇಮನರು ಇಂದು ತಮ್ಮ ಕುಟೀರದಲ್ಲಿ ಆ ದಿನ ವಿಶೇಷ ಸ್ನಾನ ಮಾಡಿ, ನಿತ್ಯದಂತೆ ಧ್ಯಾನಾದಿ ಕ್ರಿಯೆಗಳನ್ನು ಮುಗಿಸಿದರು. ರಾಮರೆಡ್ಡಿ ಕೊಟ್ಟ ಒಂದು ಬಟ್ಟಲು ಹಾಲು ಸೇವಿಸಿದರು. ಆತ ಅವರಿಗೆ ಹಾಲಿನ ಬಟ್ಟಲು ಕೊಡುವಾಗ ಇದೇ ಕೊನೆಯ ಸೇವೆಯೆಂದು ನೆನಪಾಗಿ ಕಣ್ಣೀರಿಟ್ಟ. ಹೊರಗೆ ಜನರ ಗದ್ದಲವಿತ್ತು. ಮಹಾಯೋಗಿ ವೇಮನ ಯೋಗಿಗಳಿಗೆ ಜಯವಾಗಲಿ!! ಪರಂಜ್ಯೋತಿ ವೇಮನ ಚಿರಾಯುವಾಗಲಿ, ಎಂಬ ಘೋಷಣಾ ವಾಕ್ಯಗಳು ಕೇಳಿ ಬರುತ್ತಿದ್ದವು. ವೇಮನರು ತಮಗಾಗಿ ಸಿದ್ಧಪಡಿಸಿದ, ಸಮಾಧಿ ಸ್ಥಳದತ್ತ ಹೆಜ್ಜೆ ಹಾಕಿದರು. ಜನರೂ ಅವರೊಂದಿಗೆ ಹಿಂಬಾಲಿಸಿದರು: ಕಣ್ಣೀರಿಡುತ್ತಾ– 'ನಮ್ಮನ್ನು ಅನಾಥರನ್ನಾಗಿ ಮಾಡಿದೆಯಾ ತಂದೆ? ನಮ್ಮನ್ನು ತೊರೆಯದಿರು, ತೊರೆಯದಿರು

ಎಂದು ಗೋರ್ಗರೆದರು. ಸಮಾಧಿಯನ್ನು ಪ್ರವೇಶಿಸಿ, ಕುಳಿತಲ್ಲಿಯೆ ಕಣ್ಣು ತೆರೆದರು. ನೆರೆದ ಜನಸ್ತೋಮದತ್ತ ಕಣ್ಣು ಬೀರಿದರು. ವರದ ಹಸ್ತವಿತ್ತು ಅಭಯ ಮುದ್ರೆ ದಯಪಾಲಿಸಿದರು. ಇದರಿಂದ ಜನತೆಗೆ ವಿದ್ಯುತ್ ಸಂಚಾರವಾದಂತಾಯಿತು. ಗಂಭೀರತೆ ಪಸರಿಸಿತು. ವೀರಾಸನದಲ್ಲಿಯೇ ಕುಳಿತು ಇನ್ನೊಮ್ಮೆ ಜನತಾ ಜನಾರ್ಧನನಿಗೆ ನಮಿಸಿ "ಓಂ ನಮಃ ಶಿವಾಯ' ಎಂದು ಶಿವ ಪಂಚಾಕ್ಷರಿ ಮಂತ್ರ ಪಠಿಸಿ ಕಣ್ಣು ಮುಚ್ಚಿದರು.

ಅನಂತರದಲ್ಲಿ ರಾಮರೆಡ್ಡಿಯು ಮುಂದಿನ ವಿಧಿ-ವಿಧಾನಗಳನ್ನು ಪೂರೈಸಿದರು. ಕೂಡಿದ ಜನತೆ ಒಕ್ಕೊರಲಿನಿಂದ-

**ವೇದಾತೀತನು ವೇಮನ ಯೋಗಿ ಕಾಣಾ**
**ವೇಮನ ಮಾತೇ ವೇದವು ಕಾಣಾ**
**ವೇಮನೆಂಬ ಯೋಗಿ ವಾಸಿಸಿದ ಲೋಕದಿ**
**ಪೂಜೆ ಸಲ್ಲಿಸಿದವರಿಗೆ ಪುಣ್ಯ ಪುರುಷರಿರಾ**
**ಸಲಿಸಿದಷ್ಟು ಪೂಜೆ ಸುಖ ಶ್ರೇಯ ಲಭ್ಯ**
**ವಿಶ್ವದಾಭಿರಾಮ ಕೇಳು ವೇಮ**

ಎಂದು ಪದ-ಪದ್ಯಗಳನ್ನು ಉಚ್ಚರಿಸುತ್ತಾ ವೇಮನಯೋಗಿ ಮಹಾಯೋಗಿ ಚಿರಾಯುವಾಗಲಿ. ಅವರ ಕೃಪಾಶೀರ್ವಾದ ನಮ್ಮೆಲ್ಲರ ಮೇಲಿರಲಿ; ಎಂದು ಘೋಷಿಸಿದರು.

ವೇಮನರು ಸಮಾಧಿ ಸ್ಥಿತಿಯಲ್ಲಿದ್ದಾಗಲೂ ಹೇಳಿದ ಪದಗಳು ಇಂತಿವೆ.

1 **ಹುಟ್ಟುವವರು ಯಾರು? ಹುಟ್ಟಿದವರು ಯಾರು?**
**ಹುಟ್ಟಿ ಹುಟ್ಟದಂಥ ಪುರುಷರಾರು?**
**ಹುಟ್ಟಿ ಹುಟ್ಟದಿಹುದ ಬೋಧಿಸಲು ಕಾಣಿಭೋ**
**ವಿಶ್ವದಾಭಿರಾಮ ಕೇಳು ವೇಮ.**

2 **ಬದುಕುವವರು ಯಾರು? ಬದುಕದವರು ಯಾರು?**
**ಬದುಕಿ ಬದುಕದಂಥ ಪ್ರಾಣಿ ಯಾರು?**
**ಬದುಕು ಇರದ ಭ್ರಮೆಯಳಿದು ಕಾಣಿರೋ**
**ವಿಶ್ವದಾಭಿರಾಮ ಕೇಳು ವೇಮ.**

3 **ಕಟ್ಟುವವರಾರು? ಕಟ್ಟದವರು ಯಾರು?**
**ಕಟ್ಟಿ ಕಟ್ಟದಂಥ ಕರ್ಮಿ ಯಾರು?**
**ಗಟ್ಟಿಹಿಡಿದು ಲೇಸ ಕಣ್ಣು ಬಿಟ್ಟು ನೋಡಿಕೋ**
**ವಿಶ್ವದಾಭಿರಾಮ ಕೇಳು ವೇಮ**

**4 ನೀಡುವವರು ಯಾರೋ? ನೀಡದವರು ಯಾರೋ?**
**ನೀಡಿ ನೀಡದಂಥ ನಿಷ್ಠರಾರೋ?**
**ಪಟ್ಟು ಹಿಡಿದು ಇದರ ಗುಟ್ಟ ಭಾವಿಸಿಕೋ?**
**ವಿಶ್ವದಾಭಿರಾಮ ಕಳು ವೇಮ**

ಎಂದು ಉಸುರಿದವರೇ ಕಣ್ಣು ಮುಚ್ಚುತ್ತಾ ಮುಚ್ಚುತ್ತಾ ಓಂ ಶಾಂತಿಃ ಓಂ ಶಾಂತಿಃ ಓಂ ಶಾಂತಿಃ ಎಂದು ಮಂತ್ರ ಪಠಿಸುತ್ತಲೇ ಕೊನೆಯ ಉಸಿರೆಳೆದರು. ಸಮಾಧಿಯಲ್ಲಿಯೇ ಚಿನ್ಮಯಾನಂದ ಸುಖಿಯಾದರು.

❖❖❖

# ಅಧ್ಯಾಯ – ಮೂರು
# ಮಹಾಯೋಗಿ ವೇಮನರ ಪದಗಳ – ವೈಶಿಷ್ಟ್ಯ

ತೆಲುಗು ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹಾನ್ ಚಿಂತಕ ವೇಮನನು ಚೌಪದಗಳಲ್ಲಿ ಸಹಜವೆಂಬಂತೆ ಸಾವಿರಾರು ಪದಗಳನ್ನು ರಚಿಸಿದ ಮಹಾಕವಿ. **"ವಿಶ್ವದಾಭಿರಾಮ ಕೇಳು ವೇಮ"** ಎಂಬ ಅಂಕಿತವನ್ನಿಟ್ಟುಕೊಂಡ ಆತನ ಎಲ್ಲ ಪದಗಳೂ ಮಹೋನ್ನತ ಗುಣವನ್ನು ಹೊಂದಿವೆ. ಪಂಡಿತರಿಗೂ ಅಚ್ಚರಿ ಮೂಡಿಸುವಂತಿವೆ. ಪ್ರಿಯ–ಜನಪ್ರಿಯವಾಗಿವೆ. ಅಟವೇಲದಿ, ಕಂದ, ಸೀಸ ಮತ್ತು ತೇಟಗಳೆಂಬ ಛಂದೋ ಪ್ರಕಾರಗಳಲ್ಲಿದ್ದು; ಜನರಾಡುವ ಪಡೆನುಡಿ ಗಾದೆ–ಮಾತುಗಳನ್ನು ತೆಲುಗಿನ ಭಾಷೆಯಲ್ಲಿಯೇ ರಚಿತಗೊಂಡಿವೆ. ತೆಲುಗು ದೇಶದ ಜನರು ಸಾಮಾನ್ಯವಾಗಿ ವೇಮನರ ಪದ್ಯಗಳನ್ನು ಕಂಠಸ್ಥ ಮಾಡಿ ಸಮಯಾನುಸಾರ ಅವುಗಳನ್ನು ಹೇಳಿ ಯಾವುದಕ್ಕೂ ಉದಾಹರಣೆ ನೀಡುತ್ತಾರೆ. ಇವರ ಶೈಲಿ ಸುಲಭ ಮತ್ತು ಜನ ಗ್ರಾಹ್ಯವಾದುದು. ಅವರು ಅಂಕಿತದೊಂದಿಗೆ ಪ್ರತಿ ಪದ್ಯವನ್ನು ಮುಕ್ತಾಯಗೊಳಿಸಿದ ಪದ್ಧತಿಯಿದೆ. ನಾಲ್ಕು ಸಾಲಿನ ಪದ್ಯಗಳಲ್ಲಿ ಅನುಭವಾಮೃತವನ್ನು ತುಂಬಿ, ಇದು ಒಳ್ಳೆಯದು, ಒಳ್ಳೆಯದಲ್ಲ ಎಂಬುದನ್ನು ದೃಷ್ಟಾಂತಗಳೊಂದಿಗೆ ವೇಮನರು ಬಿಂಬಿಸಿದ್ದುದು ರಚಿಸಲಾರದ ವಿಷಯಗಳೇ ಉಳಿದಿಲ್ಲವೆನ್ನುವಂತೆ ಅವರ ಪದ್ಯಗಳ ವ್ಯಾಪ್ತಿಯಿದೆ. ಜನರ ಹಿತೋಪದೇಶಗಳೊಂದಿಗೆ ಜನೋಪಯೋಗಿ ಪದ್ಯಗಳು ಇಲ್ಲಿ ಉದಾಹರಣೆಗಳೊಂದಿಗೆ ಹರಳುಗಟ್ಟಿವೆ. ಜನಪದ, ಶಿಕ್ಷಣ, ಕೃಷಿ, ಕಾಯಕ, ಧರ್ಮ, ಅಧ್ಯಾತ್ಮ, ದೇವರು, ದಾನ, ಅರ್ಥ, ಕಾಮ, ಮೋಕ್ಷ, ರಾಜಕೀಯ, ಸಮಾಜ ಬೋಧನೆ, ಸಮಾಜ ನಿಂದನೆ, ರಾಜಾಡಳಿತೆ, ಸರಕಾರ, ತೀರ್ಥಯಾತ್ರೆ, ವಿರಾಗಿಗಳು, ತೀರ್ಥ ಕ್ಷೇತ್ರಗಳು, ಗುಡಿ–ಗುಂಡಾರ, ಗೃಹಸ್ಥರ ಬಾಳು. ಮಹಿಳೆಯರ ಪಾತ್ರ, ಕರ್ಮ, ಕರ್ಮಫಲ, ಸಂಗ, ಸಜ್ಜನರ ಸಂಗ. ಸತ್ಸಂಗ, ಧ್ಯಾನ, ಯೋಗ, ತಪ, ಜ್ಞಾನ–ಅಜ್ಞಾನ, ಮಾತು, ಪ್ರೀತಿ, ಮಮತೆ, ಗುರು–ಶಿಷ್ಯ, ಗುರು–ಶಿಷ್ಯರ ಸಂಬಂಧ, ಬಂಧು–ಬಳಗ, ಮಿತ್ರ ವರ್ಗ, ಅರಿಷಡ್ವರ್ಗಗಳು, ಸಪ್ತ ವ್ಯಸನಗಳು, ಅಷ್ಟಮದಗಳು, ಅರ್ಥಸಂಗ್ರಹ, ಕೆಟ್ಟ ಸ್ನೇಹ, ಬ್ರಹ್ಮ ವಿದ್ಯೆ, ಮೇಲು–ಕೀಳರಿಮೆ, ಶೂದ್ರ, ಪುರೋಹಿತ ವರ್ಗ, ಒಕ್ಕಲಿಗ, ಬಲ್ಲವ, ಶ್ರೀಮಂತಿಕೆ, ಮಾನವ–ದಾನವ, ಕಾಪು–ಬಡತನ, ಚತುರ್ವರ್ಣ, ಜಾತಿ–ವಿಜಾತಿ, ಮಾತಿನ ಒಲುಮೆ, ಕಾಮ–

ಪ್ರೇಮ, ಸಂಸಾರ ಕಲಹ, ದಾಂಪತ್ಯದಲ್ಲಿ ವಿರಸ, ಚೋರತನ, ಜಾರತನ, ವೇಶ್ಯೆಯರು, ವಿಟಪುರುಷರು, ದೇವದಾಸಿಯರು, ಜೀವನ ಮತ್ತು ಸಾಧನೆ, ಗುರುದೀಕ್ಷೆ, ಮೋಕ್ಷ ಮಾರ್ಗ, ಬೋಧನೆ, ಯೋಗ ಸಾಧನೆ, ಅಷ್ಟಾಂಗ ಯೋಗಗಳ ವಿವರಣೆ, ಧ್ಯಾನ, ಪೂಜೆ, ಯೋಗಾಭ್ಯಾಸ, ಸಾಧುಗಳ ಲಕ್ಷಣ, ಸಹಜ ಸಮಾಧಿ, ಜೀವನ್ಮುಕ್ತಿಯ ಸ್ಥಿತಿ, ಅವಧೂತ ಚರ್ಯೆ ಅಧ್ಯಾತ್ಮದ ಸುಖ ಬೋಧೆ, ಪಾಪ-ಪುಣ್ಯ, ಸ್ವರ್ಗ-ನರಕ, ಅಧ್ಯಾತ್ಮದ ಅನುಸಂಧಾನ - ಈ ಮುಂತಾದ ವಿಷಯಗಳ ಕುರಿತಾಗಿ ಮಹಾಯೋಗಿ ವೇಮನರು ತಮ್ಮ ಪದ-ಪದ್ಯಗಳಲ್ಲಿ ನಿರೂಪಿಸಿದ್ದಾರೆ. ಇಂತಹ ಹಲವಾರು ವಿಷಯಗಳ ದಿವ್ಯ ದರ್ಶನವನ್ನುಮಾಡುತ್ತವೆ ವೇಮನರ ಪದ್ಯಗಳು.

ವೇಮನರ ಜೀವನ ದರ್ಶನವನ್ನು ಗಮನಿಸಿದರೆ ಕಾಪು ಕೃಷಿ ಕುಟುಂಬದಲ್ಲಿ ಜನಿಸಿದ ಅವರು ಓದಿದ್ದು, ಬರೆದದ್ದು, ಕಲಿತದ್ದು ಅಷ್ಟಕ್ಕಷ್ಟೇ! ಆದರೆ ಯೋಗ-ಧ್ಯಾನ-ತಪಸ್ಸಿನ ಸಾಧನೆಯಲ್ಲಿ ಸೀಮಾಪುರುಷರೆನಿಸಿಕೊಂಡರು. ಅವರು ಆಡದ ಮಾತುಗಳೇ ಪದ್ಯದ ರೂಪದಲ್ಲಿರುತ್ತಿದ್ದವು. ಆದುದರಿಂದ ಅವರನ್ನು ಆಶುಕವಿ ಎಂದು ಕರೆದಿರುವರು. ಇವನ ಸುತ್ತಮುತ್ತಲಿರುವ ಶಿಷ್ಯ ಬಳಗವೇ ಇವರಾಡುವ ಪದ್ಯಗಳನ್ನು ಬರೆದುಕೊಂಡಿದ್ದಾರೆಂದು ಹೇಳಲಾಗಿದೆ. ಅಂದು ಅವರು ಬರೆದಿಟ್ಟ ಪದ್ಯಗಳನ್ನು ಎಂ.ದೇವರಕೊಂಡಪ್ಪ ಎಂಬುವವರು 1008 ವೇಮನ ಯೋಗಿಯ ಪದ್ಯಗಳುಳ್ಳ ಪುಸ್ತಕ ಪ್ರಕಟಿಸಿರುವರು. ಹಾಗೆಯೇ ವೇಮನ ಪೀಠ-ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇದರ ಸಂಸ್ಥಾಪಕ ಸಂಯೋಜಕರಾಗಿದ್ದ ದಿ|| ಶ್ರೀ ಎಸ್.ಆರ್.ಪಾಟೀಲ ಅವರು ತೆಲುಗಿನ ಮೂಲದಲ್ಲಿದ್ದವುಗಳನ್ನು ಅನುವಾದ ಮಾಡಿ ನಾಲ್ಕು ಸಾವಿರ ಪದಗಳನ್ನು ಅಡಕಗೊಳಿಸಿ **"ವೇಮನ ವಿಶ್ವಗೀತೆ"** ಎಂಬ ಹೆಬ್ಬೊತ್ತಿಗೆಯನ್ನು ಕ.ವಿ.ವಿ.ಪ್ರಸಾರಾಂಗದಿಂದಲೇ 1998 ರಲ್ಲಿಯೇ ಸಾವಿರಾರು ಪ್ರತಿಗಳನ್ನು ಪ್ರಕಟಿಸಿದ್ದಾರೆ. ತೆಲುಗು-ಕನ್ನಡ ಸೋದರ ಭಾಷೆಗಳ ನಂಟನ್ನು ಬಹು ಅರ್ಥವತ್ತಾಗಿ, ರಸವತ್ತಾಗಿ ಶ್ರೀ ಪಾಟೀಲ ಅವರು ಬಿಡಿಸಿಟ್ಟಿದ್ದಾರೆ. ಈ ಎರಡೂ ಭಾಷೆಗಳ ಮಧ್ಯೆ ಸಾಮಾನ್ಯತೆ ಬಿಡಿಸಿಟ್ಟಿದ್ದಾರೆ. ಈ ಎರಡೂ ಭಾಷೆಗಳ ಮಧ್ಯಯೆ ಸಾಮಾನ್ಯತೆಗಳು ಸಾಕಷ್ಟಿದ್ದರೂ ಅವು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಅದರಲ್ಲೂ ತೆಲುಗು ಭಾಷೆಯ ಶ್ರೇಷ್ಠ ದಾರ್ಶನಿಕ ಕವಿ, ಸಂತ, ಯೋಗಿ ವೇಮನರು ಅಟವೇಲದಿ ಛಂದಸ್ಸಿನಲ್ಲಿ ಬರೆದ ಕವನಗಳನ್ನು ಪಾಟೀಲ ಅವರು ಮೂಲಕ್ಕೆ ಚ್ಯುತಿ ಬರದಂತೆ, ಮೂಲದ ಸತ್ಯಕ್ಕೆ ಧಕ್ಕೆಯಾಗದಂತೆ ಅದನ್ನು ಕಾಪಾಡಿ, ಕನ್ನಡದ ಸಲಿಲತೆ, ಮಾಧುರ್ಯ, ಮೃದುಡಿಸಿ ಅನುವಾದ ಕಾರ್ಯ ಹಸನಾಗಿ ಮಾಡಿರುವರು. ಅವರಿಗೆ ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳ ಅನುಭವವಿರುವುದರಿಂದ ಈ ಕಾರ್ಯ ಸುಲಭವಾಗಿದೆ ಎಂದು ಹೇಳಬಹುದು. ಅವರು ಈ ಕೆಲಸವನ್ನು

ಒಂದು ತಪಸ್ಸು ಎಂದು ಮಾಡಿದುದರಿಂದಲೇ ಸುಮಾರು 4000 ಕವನಗಳು (ಪದ) ಭಾಷಾಂತರವಾಗಲು ಸಾಧ್ಯವಾಗಿದೆ. ಇವರ ಸಾಧನೆಯಿಂದಾಗಿ ಯೋಗಿ ವೇಮನರ ಜೀವನ ತತ್ತ್ವ–ಸಿದ್ಧಾಂತ ಸಂದೇಶಗಳನ್ನು ಕನ್ನಡಿಗರಿಗೆ ಸುಲಭವಾಗಿ ತಿಳಿಯುವಂತೆ ಮಾಡಿದ ಪಾಟೀಲ ಅವರಿಗೆ ಅಭಿನಂದನೆಗಳನ್ನು ನಾವೆಲ್ಲ ಹೇಳಲೇಬೇಕು. ವೇಮನರನ್ನು ದಕ್ಷಿಣದ ಕಬೀರರೆಂದೂ ಕರೆದಿದ್ದಾರೆ.

ವೇಮನರೇ ತಮ್ಮದೊಂದು ಪದ್ಯದಲ್ಲಿ ಹದಿನೈದು ಸಾವಿರ ಪದಗಳನ್ನು ರಚಿಸಿರುವುದನ್ನು ಹೇಳಿಕೊಂಡಿದ್ದಾರೆ. ಅವೆಲ್ಲವೂ ದೊರೆತಿದ್ದರೆ ಇನ್ನೂ ಉತ್ತಮ ಸಾಹಿತ್ಯದ ಬೆಳಕು ಕಾಣುವಂತಾಗುತ್ತಿತ್ತು. ವೇಮನರ ತೆಲುಗು ಪದ್ಯಗಳು ಹೆಚ್ಚು ಹೆಚ್ಚಾಗಿ ಅಟವೆಲದಿ ಛಂದಸ್ಸಿನಲ್ಲಿವೆ. ಅದರ ನಂತರದ ಸ್ಥಾನ ಕಂದ ಪದ್ಯಗಳದ್ದಾಗಿದೆ. ಸೀಸ ಪದ್ಯಗಳೂ, ಚಂಪೂ, ಮತ್ತೇಭವಿಕ್ರೀಡಿತ ವೃತ್ತಗಳೂ ಅಲ್ಲಲ್ಲಿ ಕಾಣಬರುತ್ತವೆ. ಕೆಲವೆಡೆ ಅಪವಾದಾತ್ಮಕವೆಂಬಂತೆ ರಗಳೆಗಳೂ ವೇಮನ ಕವಿ ಬಳಸಿರುವ ವಿಶೇಷ ಛಂದಸ್ಸು. ಇದು ನಾಲ್ಕು ಪಾದಗಳನ್ನು ಹೊಂದಿದ್ದು, ನಾಲ್ಕನೆಯ ಚರಣವು ಹೆಚ್ಚಾಗಿ ಮುಕುಟ ಚರಣವೇ ಆಗಿದೆ.

ಒಂದನೆಯ ಮತ್ತು ಮೂರನೆಯ ಚರಣಗಳಲ್ಲಿ ಮೂರು–ಮೂರು ಮಾತ್ರೆಗಳ ಆರು ಗಣಗಳು (3 x 6). ಒಂದನೆಯ ಮತ್ತು ನಾಲ್ಕನೆಯ ಗಣದ ಪ್ರಥಮಾಕ್ಷರಗಳು ಸಜಾತಿಯ ಶಬ್ದಗಳಾಗಿರಬೇಕು. ಹಾಗಿಲ್ಲದ ಪಕ್ಷದಲ್ಲಿ ಕನಿಷ್ಟ ನಂತರದ ಶಬ್ದವಾದರೂ ಸಜಾತೀಯವಿರಬೇಕು. ಇನ್ನು ಎರಡು ಮತ್ತು ನಾಲ್ಕನೇ ಚರಣಗಳು ಮೂರು ಮಾತ್ರೆಯ ಐದು ಗಣಗಳನ್ನು ಹೊಂದಿರಬೇಕಲ್ಲದೇ, ಮೊದಲನೆಯ ಮತ್ತು ನಾಲ್ಕನೆಯ ಗಣಗಳ ಆದ್ಯಕ್ಷರವು ಸಜಾತೀಯುವಿರಬೇಕು; ಇಲ್ಲವಾದರೆ ತದನಂತರದ ಅಕ್ಷರಗಳಾದರೂ ಸಜಾತಿಯವಾಗಿರಬೇಕು. ಇನ್ನು ಕಂದ ಛಂದಸ್ಸು ಕನ್ನಡ–ತೆಲುಗು ಭಾಷೆಗಳಿಗೆ ಸಾಮಾನ್ಯವಾಗಿದೆಯೆಂದು ಹೇಳಲಾಗಿದೆ. ತೆಲುಗು ಮೂಲವನ್ನೇ ಅನುಸರಿಸಿ ಅಲ್ಲಿರುವ ಬಲ್ಲವರಿಂದ ಕೇಳಿ ತಿಳಿದುಕೊಂಡು ಅನುವಾದಿಸಿದ ಕ್ರಿಯೆಯನ್ನು ಶ್ರೀಯುತರು ತಮ್ಮ ಮನದಾಳದ ಮಾತುಗಳನ್ನು ಗ್ರಂಥದ ಅರಿಕೆಯ ವಿಭಾಗದಲ್ಲಿ ನಿವೇದಿಸಿಕೊಂಡಿದ್ದಾರೆ. ಇದು ಸಾಹಸದ ಮಾತೇ ಸರಿ; ಎರಡೂ ಭಾಷೆಗಳ ಜ್ಞಾನವಿದ್ದವರಿಗೆ ಮಾತ್ರ ಸಾಧ್ಯವಾಗುವಂತಹದು. ಈ ಕಾರ್ಯವನ್ನು ಶ್ರೀಯುತರು ಸುಲಭವಾಗಿ ಆಗು ಮಾಡಿದ್ದಾರೆ. ಹೀಗೆ ತೆಲುಗು ಭಾಷೆಯ ಉಡುಗೆ–ತೊಡುಗೆ ಧರಿಸಿದ ವೇಮನರ ಸಾಹಿತ್ಯ ಕನ್ಯೆಯನ್ನು ಕನ್ನಡ ಭಾಷೆಯ ಉಡುಗೆ–ತೊಡುಗೆಯಲ್ಲಿ ಕಾಣುವಂತೆ ಮಾಡಿದ ಶ್ರೀಯುತರಿಗೆ ನಾಡವರ ಪರವಾಗಿ ಅಭಿನಂದನೆಗಳು.

ವೇಮನ ವಿಶ್ವಗೀತೆಯು ಇಪ್ಪತ್ತೇಳು ಅಧ್ಯಾಯಗಳಲ್ಲಿ ಸುಮಾರು ಒಂಭೈನೂರು (900) ಪುಟಗಳಲ್ಲಿ ಮಹಾಗ್ರಂಥದ ರೂಪದಲ್ಲಿ 1998 ರಲ್ಲಿಯೇ ಮುದ್ರಣಗೊಂಡಿದೆ.

ಪ್ರತಿಗಳು ಮುಗಿದು ಹೋಗಿರುವುದರಿಂದ ಈಗಿರುವ ಸಂಯೋಜಕರು ಡಾ. ಎಚ್.ಬಿ.ನೀಲಗುಂದ ಅವರು ಪ್ರಕಟನೆಯ ಕಾರ್ಯ ಮಾಡುತ್ತಲಿದ್ದಾರೆ. ವೇಮನ ಪೀಠವು ಈಗ ಕರ್ನಾಟಕ ವಿಶ್ವವಿದ್ಯಾಲದಯಲ್ಲಿ ರಾರಾಜಿಸುತ್ತಿದ್ದು ಅನೇಕ ಪುಸ್ತಕ ಪ್ರಕಟಣೆ ಮಾಡುತ್ತಿರುವುದರಿಂದ ಇಂದಿನ ಸಂಶೋಧನಾ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ತುಂಬಾ ಸಹಾಯವಾಗಿದೆ. ವೇಮನ ಸಾಹಿತ್ಯದ ಕೊರತೆಯನ್ನು ಇಂದಿನವರು ನೀಗಿಸುತ್ತಿರುವುದು ತುಂಬಾ ಶ್ಲಾಘನೀಯ. ವೇಮನರ ಸಾಹಿತ್ಯ ಅಪರೂಪವಾದುದು ಎಂದು ಈ ಮೂಲಕ ಹೇಳಬಯಸಿದೆನಷ್ಟೇ!

ವೇಮನರು ಹೇಳಿದ ನೈತಿಕ ವಿಭಾಗದ ಪದ್ಯಗಳನ್ನು ತಮ್ಮ ಅವಗಾಹನೆಗೆ ತರಲು ಬಯಸುತ್ತೇನೆ.

**ನೀತಿ–ವೈರಾಗ್ಯ–ಭಕ್ತಿ–ವಿನೀತ–ಜನರಿಗೆ**
**ಘಾತುಕರಿಗಲ್ಲದೆ ಜ್ಞಾನ ಸಂಕಲಿತ ಜನಕೆ**
**ಬರೆದಿರುವಂಥ ಪದ್ಯಗಳು ಸಾವಿರ ಸಂಖ್ಯೆ**
**ಚೇತನ ಹೊಂದಿ ವೇಮನ ಸಾರಿದಿಹದಿ.**

ಈ ಪದವನ್ನು ಗಮನಿಸಿದರೆ ನೀತಿ–ವೈರಾಗ್ಯ, ಭಕ್ತಿ ಕೇಂದ್ರಿತ ವಿಷಯಗಳಿಗಾಗಿ ಸಾವಿರಾರು ಪದಗಳನ್ನು ರಚಿಸಿರುವರು ಎಂಬುದು ವಿದಿತವಾಗುತ್ತದೆ.

**ಆತ್ಮ ಶುದ್ಧಿಯಿರದ ಆಚಾರವದೇಕೆ?**
**ಮಡಿಕೆ ಶುದ್ಧಿಯಿರದ ಅಡುಗೆಯೇಕೆ?**
**ಭಾವ ಶುದ್ಧಿಯಿರದ ದೇವ ಪೂಜೆಯೇಕೆ?**
**ವಿಶ್ವದಾಭಿರಾಮ ಕೇಳು ವೇಮ.**

ಇದು ತನುಶುದ್ಧಿ, ಭಾವ ಶುದ್ಧಿ, ಮನ ಶುದ್ಧಿಗೆ ಮಹತ್ವ ಕೊಟ್ಟ ಪದ್ಯ ನಮ್ಮ ಹೃದಯವು ನಿರ್ಮಲವಾಗದೇ ಹೊರಗೆ ನಡೆ–ನುಡಿ, ಆಚಾರ–ವಿಚಾರಗಳನ್ನು ಮಾಡಿದರೂ ನಿಷ್ಪ್ರಯೋಜಕ. ಅದು ಹೇಗೆಂದರೆ ಪಾತ್ರೆಯನ್ನು ಸ್ವಚ್ಛ ಮಾಡದೇ ಅದರಲ್ಲಿ ಅಡುಗೆ ಬೇಯಿಸಲು ಬರುತ್ತದೆಯೇ ಎಂಬಂತೆ. ಪೂಜೆ, ಅರ್ಚನೆ ಮಾಡಬೇಕಾದರೆ ಪತ್ರಿ–ಪುಷ್ಪ, ವಿಭೂತಿ–ಕುಂಕುಮ–ಗ್ರಂಥ–ಊದ–ಬತ್ತಿ, ಬತ್ತಿ–ಎಣ್ಣೆ, ಪ್ರಣತೆ ಮುಂತಾದ ಪರಿಕರಗಳಿಗಿಂತ ನಿರ್ಮಲವಾದ ಮನಸ್ಸು ಮುಖ್ಯವಾಗಿರಬೇಕಾಗುತ್ತದೆ ಎಂಬುದನ್ನು ಶ್ರೀ ಸಾಮಾನ್ಯನಿಗೂ ಅರ್ಥವಾಗುವಂತೆ ಪ್ರತಿಪಾದಿಸಿದ್ದಾರೆ.

**ತಾಮಸ ಗುಣದಿಂದ ಮಾಡಬೇಡ ಕಾರ್ಯ**
**ಮದದಿ ಜಿಗಿದಾಡಲು ವಿಷಮ ನೋಡು**
**ಕಸುಗಾಯಿಯ ತಂದು ಇರಿಸೆ ಮಾಗುವುದೆ?**
**ವಿಶ್ವದಾಭಿರಾಮ ಕೇಳು ವೇಮ.**

ಕ್ರೋಧ, ದ್ವೇಷ, ಅಸೂಯೇ, ಮದ, ಮತ್ಸರ, ಮುಂತಾದ ತಾಮಸ ಗುಣಗಳಿಂದ ಪ್ರಚೋದಿತರಾಗಿ ಯಾವುದೇ ಕಾರ್ಯಕ್ಕೆ ಕೈ ಹಾಕಬಾರದು. ಅದು ಯಶಸ್ಸು ಅಥವಾ ಫಲಕಾರಿಯಾಗಲಾರದು. ಇವುಗಳನ್ನು ತ್ಯಾಗ ಮಾಡಿದಾತನೆ ಜೀವನವನ್ನು ಸರಳವಾಗಿ ಸಾಗಿಸಬಲ್ಲ. ಅಹಂಕಾರವಿರಬಾರದು. ಅದರಿಂದ ಆತನಿಗೆ ಕೇಡೇ ಗತಿ–ಸಮಾಧಾನ, ಸದ್ಗುಣ ಚಿತ್ತದಿಂದಿದ್ದು ಒಳ್ಳೆಯದನ್ನು ಮಾಡಿ ಕೆಲಸ ಸಾಧಿಸಿಕೊಳ್ಳಬೇಕು. ಇದುವೇ ಯಶಸ್ಸಿನ ಗುಟ್ಟೆಂದುದಾಗಿ ಮನುಕುಲಕ್ಕೆ ಹಿತನುಡಿದಿರುವವರು ಯೋಗಿ ವೇಮನ.

**ಕುಲದೊಳೊಬ್ಬ ಗುಣವಂತನಾಗಲು**
**ಕುಲಕೆ ಶೋಭೆಯವನ ಗುಣಗಳಿಂದ**
**ಕಳೆಗಟ್ಟಿತು–ವನ ಗಂಧದ ಗಿಡದಿಂದ**
**ವಿಶ್ವದಾಭಿರಾಮ ಕೇಳುವೇಮ.**

ಯಾವುದೊಂದು ಕುಲದಲ್ಲಿ ಜನಿಸಿದವನೊಬ್ಬನು ಒಳ್ಳೆಯ ಗುಣವಂತನಾದರೆ, ಅವನು ಪ್ರಸಿದ್ಧಿಗೆ ಬರುವನು. ಅವನ ವರ್ತನೆ, ಜೀವನ, ಬೋಧನೆಗಳು ಚಿರಂತನವಾಗಿ ಸ್ಮರಿಸಲ್ಪಡುವವು. ಅವನು ಯಾರು ಎಂತು ಎಂದು ತಿಳಿಯುವುದರೊಂದಿಗೆ ಅವನ ಗುಣಗಳಾವವು? ಅವನ ಗುಣದ ಹಿರಿಮೆಯೇನು? ಎಂದುದಾಗಿ ಅರಿಯಲು ಅಪೇಕ್ಷಿಸುವರು. ಆದರೆ, ಅವನ ಸದ್ಗುಣಗಳ ಮಹಿಮೆಯಿಂದಾಗಿ ಅವನ ಕುಲಕ್ಕೆ, ಸಮಾಜಕ್ಕೆ ಹೆಚ್ಚಿನ ಶೋಭೆ ಬರುವುದು. ಅದ್ಹೇಗೆಂದರೆ – ಮಹಾ ಅಡವಿಯಲ್ಲಿ ಅದೆಷ್ಟೋ ಮರಗಳ ಸಮೂಹದಲ್ಲಿ ಒಂದು ಶ್ರೀಗಂಧದ ಮರವಿದ್ದರೆ, ಆ ಇಡೀ ಅಡವಿಗೆ ಶೋಭೆ ಬರುವುದಿಲ್ಲವೆ?

**ಭೂಮಿಯಲ್ಲಿ ಪುಣ್ಯಪುರುಷರಿಲ್ಲದಿರಲು**
**ಜಗವದೆಂತು ಬಿರಿಯದಿಹುದು.**
**ಅಂಥವರತಿಯಾಗಿ ದೊರಕರಲ್ಲಿಯಿಲ್ಲಿ**
**ವಿಶ್ವದಾಭಿರಾಮ ಕೇಳು ವೇಮ.**

ಭೂಮಿಯಲ್ಲಿರುವವರೆಲ್ಲರೂ ಲೋಭಿಗಳೂ, ಸ್ವಾರ್ಥಿಗಳೂ ಅಲ್ಲ ಕೆಲವರು ಉದಾತ್ತ ಚರಿತರೂ, ಪುಣ್ಯ ಕಾರ್ಯನಿರತರೂ ಇರುತ್ತಾರೆ. ಅಂಥವರು ಜನತೆಯಲ್ಲಿರುವ ವಿಷಮತೆಯನ್ನು ತೊಡೆದು ಸಮತೆ–ಸೈರಣೆ–ಸಮಾಧಾನಗಳನ್ನು ಸ್ಥಾಪಿಸುತ್ತಾರೆ. ಅವರು ಇರದೇ ಹೋಗಿದ್ದರೆ ಜಗತ್ತಿನಲ್ಲಿ ಧನಿಕರು–ದರಿದ್ರರು, ಮೇಲು–ಕೀಳೆಂಬ ಭೇದ ಭಾವ ಬೆಳೆದು ಜಗತ್ತೇ ಎರಡು ಭಾಗಗಳಾಗಿ ನಿಲ್ಲುತ್ತಿತ್ತು; ಹೀಗೆ ಜಗತ್ತು ಇಬ್ಭಾಗವಾಗಿ ಬಿರಿಯದೇ ಇರುತ್ತಿರಲಿಲ್ಲ. ಮಾನವನಾಗಿ ಜನ್ಮ ಧರಿಸಿದ ಮೇಲೆ ಪುಣ್ಯ ಕಾರ್ಯಗಳನ್ನೇ ಮಾಡಬೇಕೆಂದಿದ್ದಾರೆ. ಅದಕ್ಕೆ ವೇಮನರು ಆಲದ ಮರದ ದೃಷ್ಟಾಂತ ಕೊಟ್ಟು ಹೀಗೆ ಹೇಳಿದ್ದಾರೆ.

**ಚಿತ್ತ ಶುದ್ಧಿ ಹೊಂದಿ ಗೈದ ಪುಣ್ಯ ಕಾರ್ಯ**
**ಕೊಂಚವಾದರೇನು ಕ್ಷುಲ್ಲಕವಲ್ಲ**
**ಆಲದ ಮರವೆಷ್ಟು? ಅದರ ಬೀಜವೆಷ್ಟು?**
**ವಿಶ್ವದಾಭಿರಾಮ ಕೇಳುವೇಮ.**

ಆಲದ ಮರವು ಅತೀ ದೊಡ್ಡದು, ಮಹಾವೃಕ್ಷ. ಆದರೆ ಅದರ ಹಣ್ಣು ಮತ್ತು ಬಹಳ ಚಿಕ್ಕದು. ಸಾಸಿವೆ ಕಾಳಿನಷ್ಟು ಬೀಜದಿಂದ ಇಂಥ ಮಹಾವೃಕ್ಷ–ವಾಗುವುದೆಂದರೆ ನಂಬಲೂ ಕಷ್ಟ. ಆದರೆ ನಮ್ಮೆದುರು ಬೀಜ ಬಿದ್ದು ಸಸಿಯಾಗಿ, ಮರವಾಗಿ, ಹೆಮ್ಮರವಾಗಿ ಬೆಳೆಯುತ್ತಿರುವುದನ್ನು ನಾವು ನಿತ್ಯ ನೋಡುವುದರಿಂದ ಇದು ಸಂಭವನೀಯ ಮತ್ತು ಸತ್ಯವೆನಿಸುತ್ತದೆ. ಅದೇ ರೀತಿ ನಾವು ಸದುದ್ದೇಶದಿಂದ ಮಾಡುವ ಕಾರ್ಯವನ್ನು ನಿರ್ಮಲ ಚಿತ್ತದಿಂದ ಮಾಡಿದರೆ, ಅದು ಎಷ್ಟೇ ಚಿಕ್ಕ ಕಾರ್ಯವಾಗಿರಲಿ, ಮಹಾಫಲವೀಯುವುದು ಎಂದು ಉಪದೇಶಿಸಿದ್ದಾರೆ.

ಹೀಗೆ ತಮ್ಮ ಧ್ಯಾನ–ತಪೋಬಲದಿಂದ ಜ್ಞಾನ ಸಂಪಾದನೆ ಮಾಡಿಕೊಂಡ ಮೇಲೆ ತನ್ನ ಬಂಧು–ಬಾಂಧವರನ್ನೆಲ್ಲ ತೊರೆದು, ದಾರಿ ತಪ್ಪಿ ನಡೆಯುವವರನ್ನು ಸನ್ಮಾರ್ಗದೆಡೆಗೆ ಸಾಗಿಸಿ ನಡೆಸಿದ ಕೀರ್ತಿ ವೇಮನರದು. ಇವರು ಬಹು ಸ್ವಾಭಿಮಾನಿ. ತಪ್ಪದೇ ಕರ, ಕಂದಾಯ ಪಾವತಿಸುವವರು ಹಾಲಿನಂಥ ಮನಸ್ಸುಗಳ್ಳವರು. ಪರರಿಗಾಗಿ ಉತ್ತಿ–ಬಿತ್ತಿ ಬೆಳೆಯುವವರು ಕಾಪು ಜನರು ಎಂದು ತನ್ನ ವಂಶಸ್ಥರನ್ನು ವೇಮನರು ಸಮರ್ಥಿಸಿಕೊಂಡಿದ್ದಾರೆ. ಸಾಧ್ವಿ ಶಿರೋಮಣಿಯಂತಹ ಪತ್ನಿ ಇದ್ದರೆ ಸ್ವರ್ಗ ಸುಖವು. ಬೇರಿಲ್ಲ ಕಾಣಿರೋ ಎಂದಿದ್ದಾರೆ. ಶೀಲವಿಲ್ಲದ ಹೆಂಡತಿಯ ಸಹವಾಸ ಯಮದೂತನ ಸಖ್ಯ ಮಾಡಿದಂತೆ ಎಂದುದಾಗಿ ಪದ್ಯದಲ್ಲಿ ಹೇಳಿ ಆತಂಕಪಟ್ಟಿದ್ದಾನೆ. ಸಂತ ವೇಮನರ ಪದ್ಯಗಳು ಜನಸಾಮಾನ್ಯರ, ಬಲ್ಲಿದರ, ಶ್ರೀಮಂತರ ನಾಲಿಗೆಯಲ್ಲಿ ಹರಿದಾಡುತ್ತಾ ಮುದ ನೀಡುತ್ತಿರುವುದು ಸಣ್ಣ ಮಾತೇನಲ್ಲ. ವೇಮನರ ಪ್ರತಿಯೊಂದು ಪದ್ಯವೂ ವೇದ ವಾಕ್ಯವಿದ್ದಂತೆ. ವೇಮನ ಮಹಾಯೋಗಿಯ ಮತ್ತಷ್ಟು ಪದಗಳನ್ನು ಮುಂದಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

❖❖❖

# ಅಧ್ಯಾಯ – ನಾಲ್ಕು

# ಅಲ್ಲಮಪ್ರಭು ದೇವರ ಜೀವನ ವೃತ್ತಾಂತ

ಹನ್ನೆರಡನೆಯ ಶತಮಾನ ಭಕ್ತಿ ಬೆಳವಿನ ಕಾಲ, ಕರ್ನಾಟಕದಲ್ಲಿ ಸಾವಿರಾರು ಶರಣರು; ಅವರ ಕೈಯಲ್ಲಿ, ಮನದಲ್ಲಿ ಭಕ್ತಿ, ಮಾತಿನಲ್ಲಿ ಲಿಂಗಕಳೆ, ಅಲ್ಲಮ ಅವರ ಮಧ್ಯದ ಜ್ಞಾನ ಚಂದ್ರಮ ಮಾಯೆ ಮುಟ್ಟದಮೈ; ಮೋಹ ಸೋಂಕದ ಹೃದಯ; ಮರವೆಯನರಿಯದ ಮತಿ, ದೇಹ ದೇವಾಲಯ; ಜೀವ ದೇವ ಅವನು ಸಾಧಿಸದ ಯೋಗವಿಲ್ಲ ಹಠದಲ್ಲಿ ಹಠಯೋಗಿ; ಮಂತ್ರದಲ್ಲಿ ಪ್ರಣವಸಿದ್ದು ಧ್ಯಾನದಲ್ಲಿ ಅನಿಮಿಷ; ಲಿಂಗ ಮಾರ್ಗದಲ್ಲಿ ಶಿವಯೋಗಿ, ಪ್ರಸನ್ನತೆಯೇ ಮೂರ್ತಿಗೊಂಡ ಸಂತ ಮಹಂತ ಎಂದು ಪ್ರತಿಪಾದಿಸಿದ ಅಲ್ಲಮಪ್ರಭುದೇವರ ಕುರಿತು ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಅಭಿಪ್ರಾಯ ತಕ್ಕದಾಗಿದೆ. (ಅಲ್ಲಮಪ್ರಭುದೇವ ವಚನ ನಿರ್ವಚನ ನುಡಿ ನಿವೇದನದ ಮಾತುಗಳಿಂದ).

ಹನ್ನರಡನೆಯ ಶತಮಾನವು ವೈಚಾರಿಕತೆ, ಧಾರ್ಮಿಕ, ಸಾಮಾಜಿಕ ಕ್ರಾಂತಿಗೆ ಬಹಳಷ್ಟು ಕಾರಣವಾದ ಕಾಲಘಟ್ಟ, ಅಂದು ಶರಣರು ತಾವು ಬರೆದಿದ್ದೆಲ್ಲಾ ಬರೆಹಗಳನ್ನು 'ವಚನ' ಎಂಬ ಹೆಸರಿನ ಪರಿಭಾವಿಸಿ ತಮ್ಮ ತಮ್ಮೊಳಗೆ ಜಾಗೃತರಾಗುತ್ತಾ ಇತರರನ್ನು ಎಚ್ಚರಿಸಿದರು. ಅಂದು ಅನುಭವ ಮಂಟಪದಲ್ಲಿ ಶೂನ್ಯ ಪೀಠದ ಅಧ್ಯಕ್ಷ ಪದವಿಯಲ್ಲಿದ್ದ ಅಲ್ಲಮ ಪ್ರಭುಗಳ ಸ್ನೇಹ, ಪ್ರೀತಿ, ವಿಶ್ವಾಸಗಳನ್ನು ಬಯಸಿ ಬಂದ ಎಲ್ಲಾ ಶರಣರು ಆತನ ಸಂಗದಿಂದ ಗಂಧದೊಳಗಿನ ಪರಿಮಳದಂತೆ ತಮ್ಮ ದಿವ್ಯ ಜೀವನವನ್ನು ಸಾರ್ಥಕ ಪಡಿಸಿಕೊಂಡರು. ಅಲ್ಲಮ ಅನುಭವ ಮಂಟಪದ ಶೂನ್ಯ ಸಿಂಹಾಸನದ ಅಧ್ಯಕ್ಷರಾದ ಅಲ್ಲಮ ಪ್ರಭು ಆತ್ಮ ಜ್ಞಾನ ಮೇರುಗಿರಿ. ಆತನ ಅಧ್ಯಾತ್ಮಿಕತೆಗೆ, ಅಭಿವ್ಯಕ್ತಿಗೆ ಶಬ್ದ ಪ್ರಯೋಗಕ್ಕೆ ಹಾಗೂ ಚಿಂತನಶೀಲ, ಕ್ರಿಯಾಶೀಲ ವ್ಯಕ್ತಿತ್ವಕ್ಕೆ ತಲೆದೂಗದವರೇ ಇಲ್ಲ.

ದೇಶ ದೇಶಾಂತರ ಸುತ್ತಿದ; ಜನಮನದ ಕಾಳಿಕೆ ಕಳೆದ; ಸಾಧಕರಿಗೆ ಸತ್ಯದ ಸುಮಾರ್ಗ ತೋರಿದ ತಪಸ್ಸಿಗಳ ಮದ ಮಂಜನ್ನು ಚದುರಿಸಿದ; ಜ್ಞಾನದ ಮಹಿಮೆಯ ಎಲ್ಲೆಲ್ಲೂ ಮರೆದ; ಅವನ ಹಿರಿಮೆಯನ್ನು ಶರಣರ ಮಾತುಗಳಲ್ಲಿಯೇ ಕಾಣಬೇಕು. ಅವನು ಘನಕ್ಕೆ ಮಾಹಾಮಹಿಮ. ಭುವನ ಹದಿನಾಲ್ಕರೊಳಗೆ ಪರಿಪೂರ್ಣ ನಿರಂಜನ

ಜ್ಯೋತಿ ಅನುಪಮ ಚರಿತ ವ್ಯಕ್ತಿತ್ವ; ಬಟ್ಟಬಯಲು ಗಟ್ಟಿಗೊಂಡ ನಿಲವು ಮಾತಿಂಗೆ ಅಳವಡದ ಮಹಾಮಹಿಮ. ಸ್ಥೂಲ ಕಥೆ. ಸೂಕ್ಷ್ಮ ಟೊಪ್ಪರ, ಸತ್ಯವೇದಂಡ, ಶಾಂತಿ ಭಸಿತ, ಸುಚಿತ್ತ ಮಣಿ, ತತ್ತ್ವವೇ ಕರ್ಪೂರ. ವೈರಾಗ್ಯ ಆವುಗೆ. ದೃಢವಾದ ಮನವು ಕೌಪೀನ. ಆಚಾರವೇ ಕಂಕಣ. ಕ್ಷಮೆ–ದಯವೇ ಕರ್ಣಕುಂಡಲ. ಜಗತ್ಪಾವನ ಮೂರ್ತಿ; ನಿಜ ಸುಖದ ಇರವು! ಅವರು ವ್ಯೋಮಕಾಯದ ಸಿದ್ಧ ಶಿವಯೋಗಿ!

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಶಿವಶರಣರ ಬಹುಮುಖ ಕ್ರಾಂತಿಯು ಜಾಗತಿಕ ಇತಿಹಾಸದಲ್ಲಿಯೇ ಒಂದು ಅಪೂರ್ವ ಘಟನೆ. ಅಂದಿನ ಕಲುಷಿತ ಧಾರ್ಮಿಕ ಮತ್ತು ಸಾಮಾಜಿಕ ಪರಿಸರ ಈ ಕ್ರಾಂತಿಗೆ ಮೂಲವಾಗಿತ್ತು. ಸಕಲ ಜೀವಾತ್ಮಗೆ ಲೇಸನೆ ಬಯಸುವ ಮಹಾಕ್ರಾಂತಿಯೊಂದು ಕರ್ನಾಟಕದ ಕಲ್ಯಾಣದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದು ಹೋಯಿತು. ಈ ಕ್ರಾಂತಿಯ ಗುರಿ ಇಡೀ ಮಾನವ ಜನಾಂಗದ ಸಮುದ್ಧರಣ. ಹೀಗಾಗಿ ಅದು ಸಮಾಜದ ವಿವಿಧ ಸ್ತರಗಳನ್ನು ತಲುಪುವಂತಾಯಿತು. ವಿವಿಧ ವರ್ಣ–ವರ್ಗಗಳನ್ನು ತನ್ನ ತೋಳ ತೆಕ್ಕೆಯಲ್ಲಿ ಅಪ್ಪಿಕೊಂಡಿತು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಒಂದು ಅದ್ಭುತ ಪರಿವರ್ತನೆ ತರುವುದನ್ನೇ ತನ್ನ ಉದ್ದೇಶವಾಗಿರಿಸಿಕೊಂಡಿದ್ದ ಈ ಅಭೂತಪೂರ್ವ ಕ್ರಾಂತಿಯ ನೇತಾರರಾದ ಬಸವಣ್ಣನವರ ಹೆಗಲಿಗೆ ಹೆಗಲು ಕೊಟ್ಟು ದುಡಿದು ಶರಣರಲ್ಲಿ ಅಲ್ಲಮಪ್ರಭುವಿನದು ಬಹುದೊಡ್ಡ ಹೆಸರು. ಆ ಕ್ರಾಂತಿಗೆ ಒಂದು ನಿರ್ಣಾಯಕ ಸ್ವರೂಪ ಕೊಡುವಲ್ಲಿ ಪ್ರಭುದೇವರು ವಹಿಸಿದ ಪಾತ್ರ ತುಂಬಾ ಮಹತ್ವದ್ದು. ಯೋಗ್ಯತೆಯ ದೃಷ್ಟಿಯಿಂದ ವಿಶ್ವ ಮಹತಿ ಪಡೆಯಬಲ್ಲ ಒಬ್ಬ ಮಹಾವ್ಯಕ್ತಿಯಾದ ಪ್ರಭುದೇವ ಜೀವನ ಚರಿತ್ರೆಯ ಬಗೆಗೆ ಬಹಳ ಕಡಿಮೆ ಅಂದರೆ ಅಲ್ಪ ಪ್ರಮಾಣದಲ್ಲಿ ತಿಳಿದಿರುವುದು ಚೋದ್ಯದ ವಿಷಯವೇ ಸರಿ! ಅವರದು ಮೇರು ಸದೃಶ ವ್ಯಕ್ತಿತ್ವ ಎಂಬುದಕ್ಕೆ ಎರಡು ಮಾತಿಲ್ಲ. ಅವರಿಗೆ ಅವರೇ ಸರಿ ಸಮಾನರು! **'ಬಸವಣ್ಣನಂತಹ ಭಕ್ತನಿಲ್ಲೋ ಅಲ್ಲಮಪ್ರಭುದೇವರದಂಥ ಪರಮಾತ್ಮ ನಿಲ್ಲೋ'** ಎಂದು ಗುಣಗಾನ ಮಾಡಿದ ಶಿಶುನಾಳದ ಶರೀಫ ಶಿವಯೋಗಿಯ ಮಾತನ್ನು ನೆನಪಿಸಿಕೊಳ್ಳಬಹುದಾಗಿದೆ. ಅಲ್ಲಮಪ್ರಭುವನ್ನು ಅನುಭಾವದ ಮೇರು ಗಿರಿಯನ್ನು ಮೊಟ್ಟ ಮೊದಲು ಗುರುತಿಸಿ ಅನುಭಾವ ಮಂಟಪದಲ್ಲಿ ಅಧಿಪತಿಯನ್ನಾಗಿ ಮಾಡಿ, ಆ ಮೂಲಕ ಜಗತ್ತಿಗೆ ಪರಿಚಯಿಸಿದ ಕೀರ್ತಿ ಬಸವಣ್ಣನವರಿಗೇ ಸಲ್ಲುತ್ತದೆ. ಅನುಭವ ಮಂಟಪವೆಂದರೆ ಕಲ್ಲು, ಮಣ್ಣು, ಇಟ್ಟಿಗೆ ಮುಂತಾದವುಗಳಿಂದ ಕಟ್ಟಿದ ಬಂಧನದ ಗೋಡೆಗಳಲ್ಲ, ಬಯಲು ಆಲಯದೊಳಗೆ ಒಂದೆಡೆ ಶರಣರು ಸೇರಿ ತಮ್ಮ ಅನುಭವವನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರಷ್ಟೇ. ಅಲ್ಲಮಪ್ರಭುಗಳು ಎಲ್ಲಿರುತ್ತಿದ್ದರೋ ಅಲ್ಲಿಯೇ ಅನುಭವ ಮಂಟಪವಾಗುತ್ತಿತ್ತು. ಅವರೊಬ್ಬ ಜ್ಞಾನದ ನಿಧಿ–ವೈರಾಗ್ಯದ ಚಕ್ರವರ್ತಿ!

ಅಲ್ಲಮ ಪ್ರಭುವಿನ ಮೇರು ಸದೃಶ ವ್ಯಕ್ತಿತ್ವಕ್ಕೆ ಮಾರು ಹೋದ ಕನ್ನಡ ಕವಿಗಳು ಅವನ ಚರಿತ್ರೆಯನ್ನು ತಮ್ಮ ದೃಷ್ಟಿ ಧ್ಯೇಯಗಳಿಗನುಸಾರವಾಗಿ ಬೇರೆ ಬೇರೆಯಾಗಿ ನಿರೂಪಿಸಿದ್ದುದು ಕಂಡುಬರುತ್ತದೆ. ಅದರಲ್ಲಿ ನಾವು ಮುಖ್ಯವಾಗಿ ಎರಡು ಸಂಪ್ರದಾಯಗಳನ್ನು ಗುರುತಿಸಬಹುದಾಗಿದೆ. ಒಂದು ಹರಿಹರನ ಸಂಪ್ರದಾಯ ಇನ್ನೊಂದು, ಚಾಮರಸನ ಸಂಪ್ರದಾಯ. ಈ ಸಂಪ್ರದಾಯಗಳಲ್ಲಿ ಯಾವುದೊಂದನ್ನು ಸಂಪೂರ್ಣವಾಗಿ ಚಾರಿತ್ರಿಕ ಪ್ರಮಾಣವೆಂದು ತಿಳಿಯುವಂತಿಲ್ಲ. ಆದರೂ ಕೆಲಮಟ್ಟಿಗೆ ಇವು ಚಾರಿತ್ರಿಕ ಅಂಶಗಳನ್ನು ಒಳಗೊಂಡಿವೆ. ಸ್ವತಃ ಪ್ರಭುದೇವರ ವಚನಗಳು ಕೊಡುವ ಅವರ ವ್ಯಕ್ತಿತ್ವದ ವಿವರಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಅವರ ಜೀವನ ಚರಿತ್ರೆಯ ಕೆಲವು ಮುಖ್ಯಾಂಶಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಯಾವುದೇ ಇಂತಹ ಮಹಾಪುರುಷನ ವ್ಯಕ್ತಿಯ ಚರಿತ್ರೆಗಿಂತಲೂ ಚಾರಿತ್ರ್ಯ ಮುಖ್ಯವಾಗುತ್ತದೆ ಎಂಬ ಭಾವನೆಯಿಂದ ಅವರ ಜೀವನದ ಅಲ್ಪಸ್ವಲ್ಪ ಮಾಹಿತಿಯನ್ನೊದಗಿಸುತ್ತಾ ಅವರ ಮೇರು ಸದೃಶದ ಸಾಧನೆ–ಸಿದ್ಧಿಯ ಕುರಿತು ಅವರು ರಚಿಸಿದ ವಚನಗಳೊಂದಿಗೆ ತಿಳಿಸಲೂ ಪ್ರಯತ್ನಿಸಲಾಗಿದೆ.

ಹನ್ನೆರಡನೆಯ ಶತಮಾನ ಬಸವ ಕ್ರಾಂತಿಯ ಯುಗ. ಹಾಗೆಯೇ ಈ ಕಾಲ ವಚನ ಸಾಹಿತ್ಯದ ಸುವರ್ಣ ಯುಗ. ಅಸಂಖ್ಯಾತ ಶಿವಶರಣರು ನಾಡು–ಹೊರನಾಡು, ದೇಶ–ವಿದೇಶಗಳಿಂದ ಬಂದು ಕಲ್ಯಾಣ ನಾಡಿನಲ್ಲಿ ಏಕಕಾಲದಲ್ಲಿ ಕಾಣಿಸಿಕೊಂಡು ಅಪಾರವಾದ ವಚನ ಸಾಹಿತ್ಯವನ್ನು ರಚಿಸಿರುವುದು ಜಗತ್ತಿನ ಇತಿಹಾಸದಲ್ಲಿಯೇ ವಿಶಿಷ್ಟವಾದುದು. ವಚನ ಸಾಹಿತ್ಯ ಹುಲುಸಾಗಿ ಹಾಗೂ ಸತ್ವಯುತವಾಗಿ ಬೆಳೆಯಿತು. ವಚನ ಗದ್ಯ–ಪದ್ಯಗಳೆರಡರ ಹೃದ್ಗುಣಗಳನ್ನು ಮೇಳೈಸಿಕೊಂಡಿರುವ ಒಂದು ವಿಶಿಷ್ಟ ಬಗೆಯ ಸಾಹಿತ್ಯ ಪ್ರಕಾರ ಇದು ಪ್ರಧಾನವಾಗಿ ಅನುಭವ ಸಾಹಿತ್ಯ, ಜನತೆಯ ಸಾಹಿತ್ಯ, ಪ್ರಜಾ ಸಾಜಿತ್ಯ. ಆತ್ಮ–ಪರಮಾತ್ಮರ ಐಕ್ಯಾನುಭವವೇ ಅನುಭಾವ, ಅದನ್ನು ಭಾಷೆಯಲ್ಲಿ ಮೂರ್ತೀಕರಿಸಿದ ಫಲವೇ ಅನುಭಾವ ಸಾಹಿತ್ಯ. ವಚನಕಾರರು ತಮ್ಮ ವಚನಗಳಲ್ಲಿ ಅಂಕಿತಗಳನ್ನಿಟ್ಟುಕೊಂಡು ರಚಿಸಿರುವುದೊಂದು ವಿಶೇಷ. ವಚನಗಳಲ್ಲಿ ಬರುವ ಅಂಕಿತಗಳಿಂದ ವಚನಗಳ ಕರ್ತೃವನ್ನು ಗುರುತಿಸಬಹುದು.

ಅಲ್ಲಮಪ್ರಭುವಿನ ವಚನಗಳೆಂದರೆ ರಹಸ್ಯ ಗರ್ಭೀಕರಿಸಿಕೊಂಡ ಮುತ್ತಿನ ಚಿಪ್ಪುಗಳು. ಅವುಗಳನ್ನು ಭೇದಿಸಿದಾಗ ಅಥವಾ ಚಿಂತನೆಗೊಳಪಡಿಸಿದಾಗ ಅವುಗಳ ಆಂತರ್ಯದಲ್ಲಿ ರಹಸ್ಯ, ಹೊಳಪು, ಸ್ವಾರಸ್ಯ, ಪ್ರಕಾಶವೆಲ್ಲಾ ಅರಿತುಕೊಳ್ಳುವ ಮನೆಗಳಿಗೆ ದಾರಿದೀಪವೇ ಸರಿ. ಬೆಡಗಿನ ವಚನಗಳನ್ನು ಸೃಷ್ಟಿಸಿದವರಲ್ಲಿ ಅಲ್ಲಮಪ್ರಭುವಿನದೇ ಸಿಂಹಪಾಲು, ಎರಡೆಂಭತ್ತು ಕೋಟಿ ವಚನಗಳ ರಚನೆಯಾಗಿರುವುದೆಂಬ ಉಲ್ಲೇಖವಿದ್ದರೂ ಸದ್ಯಕ್ಕೆ 1636 ವಚನಗಳು ಮಾತ್ರ ಸಮಗ್ರ ವಚನ ಸಂಪುಟ–

2 ರಲ್ಲಿ ಪ್ರಕಟಗೊಂಡಿವೆ. ಅಲ್ಲಮರ ದೊರೆತಷ್ಟು ವಚನಗಳು ಎಲ್ಲ ದೃಷ್ಟಿಯಿಂದಲೂ ವಿಚಾರದ ಕುಡಿಯಾಗಿ, ಪ್ರತಿಭೆಯ ಮಿಡಿಯಾಗಿ, ಜ್ಞಾನದ ಕಿಡಿಯಾಗಿ, ಅನುಭವದ ನುಡಿಯಾಗಿ ಓದುಗರನ್ನು ದಿವ್ಯ ಲೋಕಕ್ಕೆ ಕೊಂಡೊಯ್ಯುತ್ತವೆ. ವಚನಗಳ ಅಭಿವ್ಯಕ್ತಿಯ ವಿಷಯದಲ್ಲಿ ಅಲ್ಲಮಪ್ರಭು ಭಾವುಕರಲ್ಲ. ಅತ್ಯಂತ ಪ್ರಬುದ್ಧ ವೈಚಾರಿಕತೆಯ ಉತ್ತುಂಗದ ನೆಲೆಯಲ್ಲಿ ಇರುವಂಥವರು. ಅಲ್ಲಮರ ಮಾತುಗಳೆಲ್ಲಾ ಜ್ಯೋತಿರ್ಲಿಂಗ, ಸ್ವರಗಳೆಲ್ಲಾ ಪರತತ್ತ್ವಗಳಾಗಿರುತ್ತವೆ. ಆದ್ದರಿಂದ ಬೇಗ ಅರ್ಥವನ್ನು ಬಿಟ್ಟುಕೊಡುವುದಿಲ್ಲ. ಅಸಂಬದ್ಧ ಪ್ರತಿಮೆಗಳನ್ನು ಕೊಟ್ಟು ಸಂಬಂಧ, ಅರ್ಥ ಹೊರಡಿಸುವ ಅಲ್ಲಮರ ಅಗಾಧವಾದ ಪಾಂಡಿತ್ಯ ಅತ್ಯದ್ಭುತವಾದುದು.

ವಚನಗಳಲ್ಲಿ ಶರಣ ಸಿದ್ಧಾಂತಕ್ಕೆ ಸಂಬಂಧಿಸಿದ ಸ್ಥಲ, ಅಂಗ, ಲಿಂಗ, ಶೂನ್ಯ, ಲಿಂಗಾಂಗ ಸಾಮರಸ್ಯ, ಪಂಚಾಚಾರ, ಷಟ್‌ಸ್ಥಲ, ಅಷ್ಟಾವರಣ, ಕಾಯಕ, ದಾಸೋಹ, ಪ್ರಸಾದ, ಮುಂತಾದ ಪಾರಿಭಾಷಿಕ ಶಬ್ದಗಳನ್ನು ಬಳಸಿರುವುದಲ್ಲದೇ ಅವುಗಳನ್ನು ಅರ್ಥೈಸಿಕೊಳ್ಳುವುದು ಈ ಸಿದ್ಧಾಂತದ ಸ್ಪಷ್ಟತೆಗೆ ಶರಣರು ಕೊಟ್ಟ ಮಹತ್ವವನ್ನು ತೋರಿಸುತ್ತದೆ. ಅಲ್ಲದೇ ವಚನಗಳಲ್ಲಿ ಸಾಹಿತ್ಯ ಹಾಗೂ ಶಾಸ್ತ್ರಗಳ ಸುಮಧುರ ಸಂಗಮವನ್ನು ನೋಡಬಹುದು. ಧಾರ್ಮಿಕ, ಅಧ್ಯಾತ್ಮಿಕ, ಆರ್ಥಿಕ, ಸಾಂಸ್ಕೃತಿಕ ಜೀವನಕ್ಕೆ ಸಂಬಂಧಿಸಿದ ಹೊಸದೊಂದು ವೈಚಾರಿಕ ಕ್ರಾಂತಿಗೆ, ನೂತನ ಸಮಾಜ ನಿರ್ಮಾಣಕ್ಕೆ ಬಸವಾದಿ ಶರಣರ ಚಿಂತನೆ, ಮಾತು ಮತ್ತು ಆಚರಣೆ ಕಾರಣ. ಅಂದಿನ ಎಲ್ಲ ಶರಣರ ಮೇಲೆ ಮಹತ್ತರವಾದ ಮತ್ತು ಗಾಢವಾದ ಪ್ರಭಾವ ಬೀರಿದ ಧೀಮಂತ ವ್ಯಕ್ತಿ ಮತ್ತು ವ್ಯಕ್ತಿತ್ವವೆಂದರೆ ಅಲ್ಲಮಪ್ರಭುದದೇವ. ಜ್ಞಾನ ವೈರಾಗ್ಯಗಳ ಸಾಕಾರ ಮೂರ್ತಿಯಂತಿದ್ದ ಇವರನ್ನು ಭಕ್ತಿ ಭಂಡಾರಿ ಬಸವಣ್ಣನವರು ಅನುಭವ ಮಂಟಪದ ಅಧ್ಯಕ್ಷರನ್ನಾಗಿ ಆರಿಸಿದುದೇ ಅಲ್ಲಮರ ವ್ಯಕ್ತಿತ್ವದ ಮಹತಿಯನ್ನೆತ್ತಿ ತೋರಿಸುತ್ತದೆ. ಹಾಗೆಯೇ ಅನುಭವ ಮಂಟಪದಲ್ಲಿ ಅಲ್ಲಮರು ಎಲ್ಲ ಶರಣರ ಚಿಂತನೆ, ಸಾಧನೆ ಅನುಭಾವಗಳಿಗೆ ಮತ್ತು ಸ್ಪಷ್ಟವಾದ, ನಿರ್ದಿಷ್ಟವಾದ ಅಭಿವ್ಯಕ್ತಿಗೆ ನಿರ್ದರ್ಶನ ನೀಡಿದರು. ಮಹಾನುಭಾವರಾದ ಶರಣರೆಲ್ಲರ, ಅದರಲ್ಲೂ ಶರಣರ ನಾಯಕಮಣಿಯೆನಿಸಿದ ಬಸವಣ್ಣನವರ ಗೌರವಾದರಗಳಿಗೆ ಪಾತ್ರರಾಗಿದ್ದ ಅಲ್ಲಮಪ್ರಭುದೇವರ ಜೀವನವೇ ಒಂದು ರೋಮಾಂಚನಕಾರಿ ವೃತ್ತಾಂತವಾಗಿದೆ.

**ಅಲ್ಲಮನ ಜೀವನ–ಸಾಧನೆ:**

ದೊರೆತಿರುವ ಮಾಹಿತಿಗಳಿಂದ ಅಲ್ಲಮರ ಜೀವನ ಚರಿತಾಮೃತವನ್ನು ಹೀಗೆ ತಿಳಿಯಬಹುದಾಗಿದೆ. ಈಗಾಗಲೇ ಹೇಳಿರುವಂತೆ ಬಸವಣ್ಣನವರ ನೇತೃತ್ವದಲ್ಲಿ ನಡೆದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಕ್ರಾಂತಿಯು ಮಹತ್ವಪೂರ್ಣವಿದ್ದು, ಅದರಲ್ಲಿ ಅನೇಕ ಶಿವಶರಣರು ಸಮರ್ಪಣ ಭಾವದಿಂದ ಸೇರಿದ್ದಾರೆ. ಆ ಶಿವಶರಣರಲ್ಲಿ

ಅಲ್ಲಮಪ್ರಭು ದೇವರು ಅಗ್ರಮಾನ್ಯರಾಗಿದ್ದಾರೆ. ಆದರೂ ಅವರ ಜೀವನದ ಬಗ್ಗೆ ಐತಿಹಾಸಿಕ ಮಾಹಿತಿಗಳು ಅಷ್ಟು ಲಭ್ಯವಾಗಿಲ್ಲ. ಕೆಲವು ಕಾವ್ಯಗಳಲ್ಲಿ ಪ್ರಭುವಿನ ಕುರಿತಾಗಿ ಉಲ್ಲೇಖವಾಗಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ಪ್ರಮುಖವಾಗಿ ಹರಿಹರನ ಪ್ರಭುದೇವರ ರಗಳೆ, ಚಾಮರಸನ ಪ್ರಭುಲಿಂಗ ಲೀಲೆ, ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ಪರ್ವತೇಶನ ಪ್ರಭುದೇವರ ಸಾಂಗತ್ಯ ಈ ಮುಂತಾದ ಕೃತಿಗಳಲ್ಲಿ ಅಲ್ಲಮನ ಜೀವನ ವೃತ್ತಾಂತ ನಿರೂಪಿತವಾಗಿದೆ. ಇವಲ್ಲದೆ ಶೂನ್ಯ ಸಂಪಾದನೆಗಳು ಕೂಡ ಅವರ ವ್ಯಕ್ತಿತ್ವವನ್ನು ತಿಳಿದುಕೊಳ್ಳಲು ಬಹಳಷ್ಟು ನೆರವು ಒದಗಿಸುತ್ತವೆ. ಇವರೆಲ್ಲರ ಕಾವ್ಯ ಕೃತಿಗಳ ಆಧಾರದಿಂದ ಅಲ್ಲಮರ ಸಂಕ್ಷಿಪ್ತ ಚರಿತಾಮೃತ ಹೀಗಿದೆ.

ಕರ್ನಾಟಕದ ಶಿವಮೊಗ್ಗೆ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಒಂದು ಚಿಕ್ಕ ಹಳ್ಳಿಯಾಗಿ ಈಗ ಉಳಿದುಕೊಂಡಿರುವ ಬಳ್ಳಿಗಾವಿಯು ಅಲ್ಲಮಪ್ರಭುಗಳು ಹುಟ್ಟಿದ ಊರು. ರಮ್ಯವಾದ ಪ್ರಕೃತಿಯ ಸೊಬಗನ್ನು ಹೊಂದಿದ ಈ ಬಳ್ಳಿಗಾವಿಯು ಅಂದು 'ಬನವಸೆ ಹನ್ನೆರಡು ಸಾಸಿರ'ದ ಒಂದು ದೊಡ್ಡ ಪಟ್ಟಣವಾಗಿತ್ತು. ಹಾಗೂ ಒಂದು ದೊಡ್ಡ ಆಡಳಿತ ವಿಭಾಗದ ಮುಖ್ಯ ಸ್ಥಳವಾಗಿತ್ತು. ಕಾಳಾಮುಖ ಶೈವರ ಕೇಂದ್ರವೂ ಆಗಿತ್ತು. ಅದು ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರವೆಂದು ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದಿತ್ತು. "ಅಲ್ಲಿರ್ಪ ನಾಗವಾಸಾಧಿಪತಿಯಪ್ಪ ಸಲ್ಲಲಿತ ನಾಯಕನ ಸತಿಯ ಬಸುರೊಳ್" ಎಂದು ಹರಿಹರಕವಿಯು ಅಲ್ಲಮಪ್ರಭುದೇವರ ತಂದೆ–ತಾಯಿಗಳ ಹೆಸರು ಹೇಳದೇ ಜನದ ಬಗೆಗೆ ಹೇಳಿರುವನು. ಆದರೆ ಚಾಮರಸನು ತನ್ನ ಪ್ರಭುಲಿಂಗ ಲೀಲೆ ಚರಿತ್ರೆಯ ಭಾಮಿನೀ ಷಟ್ಪದಿ ಕಾವ್ಯದಲ್ಲಿ ಮಾತ್ರ ಅಲ್ಲಮನ ತಂದೆ–ತಾಯಿಂದಿರರು **'ನಿರಹಂಕಾರ–ಸುಜ್ಞಾನಿ'**ಯೆಂದು ಹೇಳಿದ್ದಾನೆ. ಈ ಹೆಸರುಗಳಾದರೂ ನಿಜ ನಾಮಗಳಂತಿರದೆ ಸಾಂಕೇತಿಕ ಎನ್ನುವಂತೆ ತೋರುತ್ತದೆ. 'ಅಲ್ಲಮ' ಈ ಹೆಸರಿನ ಬಗ್ಗೆಯೂ ವಿಪುಲವಾದ ಚರ್ಚೆಗಳು ನಡೆದಿವೆ.

ಹರಿಹರನ ಹೇಳಿಕೆಯಂತೆ ಅಲ್ಲಮನ ತಂದೆ–ತಾಯಿಗಳು–ನಾಗವಾಸ ದಂಪತಿಗಳು ಎಂದಿರುವುದನ್ನು ಗಮನಿಸಿದರೆ ಬನವಾಸಿಯ ಮಧುಕೇಶ್ವರ ಮತ್ತು ದೇವಾಲಯದ ಗೊಗ್ಗೇಶ್ವರ ಪೂಜೆ ನಡೆದಾಗ ಮೃದಂಗದ ಮಿಡಿತವನ್ನು ಮಾಡುತ್ತಿದ್ದರೆಂದುದಾಗಿ ತಿಳಿದುಬರುತ್ತದೆ. ಅಂದರೆ ಈ ದೇವಸ್ಥಾನದ ಸೇವಾನುರಾಗಿಗಳಾಗಿದ್ದರು. ಅಲ್ಲಮರ ತಂದೆ 'ನಾಗವಾಸಾಧಿಪತಿ' ಎಂದಿರುವುದರಿಂದ ಅಲ್ಲಮರು ತಮ್ಮ ತಂದೆಯಿಂದ ಮದ್ದಳೆ ಬಾರಿಸುವುದನ್ನು ಕಲಿತಿರಬಹುದು. ಗೊಗ್ಗೇಶ್ವರ ದೇವಾಲಯದಲ್ಲಿ ಅವರು ಬಾಲಕರಿದ್ದಾಗಿನಿಂದಲೇ ಮೃದಂಗ ಸೇವೆ ಸಲ್ಲಿಸುತ್ತಿದ್ದರಂತೆ. ಇವರ ಮೃದಂಗ ವಾದನಕ್ಕೆ ಶಿವನು ತಲೆದೂಗಿದನೆಂದು ಹರಿಹರ ಬಣ್ಣಿಸಿದ್ದಾನೆ.

ಅಲ್ಲಮರು ಯೌವ್ವನಕ್ಕೆ ಕಾಲಿಟ್ಟಾಗ ಕಾಮಲತೆಯನ್ನು ಪ್ರೀತಿಸಿ ಅವಳನ್ನು ಮದುವೆಯಾಗಿ ಸಂಸಾರ ಸುಖವನ್ನು ಕೆಲವು ಕಾಲ ಅನುಭವಿಸಿದರು, ಕಾಮಲತೆಯ ಆಕಸ್ಮಿಕ ಮರಣದಿಂದ ನಿರಾಶರಾಗಿ ಜೀವನದಲ್ಲಿ ವೈರಾಗ್ಯ ತಾಳಿದರು ಎಂಬುದನ್ನು ಹರಿಹರನು ಬಿಂಬಿಸಿದ್ದಾನೆ. ಆದರೆ, ಚಾಮರಸ ಕವಿಯು ಹೇಳಿದುದು ಹೀಗೆ– "ಅಲ್ಲಮರ ರೂಪು, ಯೌವ್ವನ, ಮೃದಂಗವಾದನ ಚಾತುರ್ಯ– ಇವುಗಳಿಗೆ ಮಾರು ಹೋದ ಮಾಯಾದೇವಿ, ಅವರನ್ನು ಮೋಹಿನಿ ಒಲಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ, ಆಕೆಯ ಅಪೂರ್ವ ಸೌಂದರ್ಯರಾಶಿ ಅಲ್ಲಮರ ದೃಢ ಮನಸ್ಸನ್ನು ವಿಚಲಿತಗೊಳಿಸುವುದಿಲ್ಲ. ಅವರು ಮಾಯೆಯನ್ನು ಚಾಮರಸ ಕವಿಯ ಪ್ರಭುಲಿಂಗ ಲೀಲೆಯಲ್ಲಿ ತಾವಿದನ್ನು ಕಾಣಬಹುದು. ಈ ಘಟನೆಯಿಂದ ಅಲ್ಲಮನ ಜೀವನ ಹೊಸ ದಿಕ್ಕನ್ನೇ ಹಿಡಿಯಿತೆಂದು ಚಾಮರಸ ಕವಿಯು ಪ್ರತಿಪಾದಿಸಿದ್ದಾನೆ.

ಅಲ್ಲಮನ ಗುರು **'ಅನಿಮಿಷದೇವ'** ಆತ ಮಹಾತಪಸ್ವಿ. ಇಷ್ಟಲಿಂಗದಲ್ಲಿಯೇ ಮನ ಮಗ್ನವಾಗಿದ್ದ ಈ ಗುರು ಅಲ್ಲಮನು ತಕ್ಕ ಶಿಷ್ಯ ಬರುತ್ತಿದ್ದಂತೆಯೇ ಆತನ ಕೈಗಿತ್ತು ಶಿವನಲ್ಲಿ ಒಂದಾದನೆಂದೂ ಕಾವ್ಯಗಳು ತಿಳಿಸುತ್ತವೆ. ಅಲ್ಲಮನ ಜೀವನದಲ್ಲಿ ಅನಿಮಿಷ ಗುರುವಿನ ಸಂದರ್ಶನ ಒಂದು ತುಂಬಾ ಪ್ರಮುಖವಾದ ಘಟ್ಟವೆಂದು ಹೇಳಬಹುದು. ಮಾಯಾದೇವಿಯ ಮರಣ, ವೈರಾಗ್ಯ ತಾಳಿದ ಅಲ್ಲಮನಿಗೆ ಸದ್ಗುಣಶಾಲಿ ಅನುಭಾವಿ ಗುರು ದೊರೆತಾಗ, ಆತನಿಂದ ದೀಕ್ಷಿತನಾದಾಗ ಆದ ಆನಂದ ಅವಿಸ್ಮರಣೀಯ ಕ್ಷಣ! ಇಲ್ಲಿಂದ ಅವನು ಮುಂದೆ ಸಾಧಿಸಿದ, ನಡೆಸಿದ ಸಾಧನೆ ಸಿದ್ಧಿ ಅವನನ್ನು ಬಹುದೊಡ್ಡ ಅನುಭಾವಿಯನ್ನಾಗಿ ಮಾಡುವುದರ ಜೊತೆಗೆ, ಬಸವಣ್ಣನವರು ಕೈಗೆತ್ತಿಕೊಂಡ ಸರ್ವವ್ಯಾಪಿ ಕ್ರಾಂತಿಯ ವಿವಿಧ ಹಂತಗಳಲ್ಲಿ ಮುಖ್ಯವಾಗಿ ಅಧ್ಯಾತ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಿದ ಕ್ಷಮತೆಯುಳ್ಳದ್ದಾಗಿದೆ.

ಅನಿಮಿಷ ಯೋಗಿಯಿಂದ ಲಿಂಗವನ್ನು ಪಡೆದುಕೊಂಡು ಆ ಲಿಂಗದ ಅನುಸಂಧಾನದ ಮೂಲಕ ತಮ್ಮ ನಿಜ ಸ್ವರೂಪವನ್ನು ಅರಿತು ಅಲ್ಲಮಪ್ರಭುದೇವರು ಮಹಾನುಭಾವಿಯಾಗಿ, ಶಿವಯೋಗಿಯಾಗಿ ರೂಪುಗೊಳ್ಳುತ್ತಾರೆ. ದೀನ ದುರ್ಬಲರನ್ನು ಸಂತೈಸುವ ಅಜ್ಞಾನಿಗಳನ್ನು ಎಚ್ಚರಿಸುವ, ಸಾಧಕರಿಗೆ ಮಾರ್ಗದರ್ಶನ ನೀಡುವ ಸಲುವಾಗಿ ಚರಲಿಂಗವಾಗಿ ಸಂಚರಿಸುತ್ತಾರೆ. ಗುರು ಸ್ಥಾನದಲ್ಲಿದ್ದ ಅಲ್ಲಮರು ತಮ್ಮ ಕಾಲದಲ್ಲಿದ್ದ ಸೊನ್ನಲಿಗೆ ಸಿದ್ಧರಾಮ, ಮುಕ್ತಾಯಕ್ಕ, ಗೋರಕ್ಷ, ಗೊಗ್ಗಯ್ಯ, ಚೆನ್ನಬಸವಣ್ಣ, ನುಲಿಯ ಚಂದಯ್ಯ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ, ಮರುಳ ಶಂಕರದೇವ, ಬಸವಣ್ಣ ಮುಂತಾದ ಎಲ್ಲ ಶರಣ–ಶರಣೆಯರಿಗೆ ಆತ್ಮ ಭಾವದ ರೀತಿ–ನೀತಿ–ನಿಯಮಗಳನ್ನು ವಚನಗಳ ಮೂಲಕ

ಪರಿಣಾಮಕಾರಿಯಾಗಿ ಹೇಳಿದ್ದಾರೆ. ಅದರಲ್ಲೂ ಗೊಗ್ಗಯ್ಯ–ಗೋರಕ್ಷಕ–ಮುಕ್ತಾಯಕ್ಕ–ಸಿದ್ಧರಾಮರು–ಅಲ್ಲಮ ಪ್ರಭುದೇವರಿಂದ ತಮ್ಮ ಗುರಿಯನ್ನು ಕಂಡುಕೊಂಡ ಬಗೆಗೆ ಪ್ರಸ್ತಾಪವಿದೆ. ಇವರಲ್ಲದೇ ಇನ್ನೂ ನೂರಾರು ಜನ ಶರಣರು ಅವರಿಂದ ಉದ್ಧಾರವಾದರು.

ದೀನ–ದಲಿತರನ್ನು ಸಂತೈಸುವ, ಅಜ್ಞಾನಿಗಳನ್ನು ಎಚ್ಚರಿಸುವ, ಅಧ್ಯಾತ್ಮ ಸಾಧನೆಯಲ್ಲಿ ತೊಡಗಿರುವ ಸಾಧಕರಿಗೆ ಸರಿಯಾದ ಮಾರ್ಗ ತೋರಿಸುವ ಲೋಕೋಪಕಾರದ ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಲೋಕ ಸಂಚಾರಿಯಾದ ಪ್ರಭುದೇವನಿಂದ ಉಪಕೃತರಾದವರು ಹಲವಾರು ಜನ. ಉದಾಹರಣೆಗಾಗಿ ಒಬ್ಬರದು ಬಣ್ಣಿಸಲಾಗಿದೆ. ಆತನೇ ಗೊಗ್ಗಯ್ಯ!

ಗೊಗ್ಗಯ್ಯ ವ್ಯವಸಾಯದ ಕೆಲಸವನ್ನು ನಿಷ್ಠೆಯಿಂದ ಮಾಡುವ ಒಬ್ಬ ಸಾಮಾನ್ಯ ಸಾಧಕ. ಅಲ್ಲಮಪ್ರಭುದೇವರು ಅವನಿಗೆ ದೇಹವೆಂಬ ತೋಟದಲ್ಲಿ ಅಧ್ಯಾತ್ಮ ಸಸಿಯನ್ನು ನೆಟ್ಟು ಬೆಳೆಸುವ ಪರಿಯನ್ನು ಹೇಳಿಕೊಡುತ್ತಾರೆ.

**ತನುವ ತೋಂಟದ ಮಾಡಿ, ಮನವ ಗುದ್ದಲಿ ಮಾಡಿ**
**ಅಗೆದು ಕಳೆದನಯ್ಯಾ ಭ್ರಾಂತಿನ ಬೇರ**
**ಒಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯಾ ಬ್ರಹ್ಮ ಬೀಜವ**
**ಅಖಂಡ ಮಂಡಲವೆಂಬ ಬಾವಿ, ಪವನವೇ ರಾಟಾಳ**
**ಸುಷುಮ್ನನಾಳದಿಂದ ಉದಕವ ತಿದ್ದಿ**
**ಬಸವಗಳೈವರು ಹಸಗೆಡಿಸಿಹರೆಂದು**
**ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ**
**ಆವಾಗಳೂ ಈ ತೋಂಟದಲ್ಲಿ ಜಾಗರವಿದ್ದು**
**ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ!**

ಹೀಗೆ ಸಾಧಕ ವ್ಯಕ್ತಿಗಳನ್ನು ಅಂತರಂಗದ ಸಾಧನೆಗೆ ತೀವ್ರವಾಗಿ ತೊಡಗಿಸುವ ಅಲ್ಲಮನ ರೀತಿ ಬಹು ಮನೋಜ್ಞ ಹಾಗೂ ಮಾರ್ಮಿಕವಾಗಿದೆ. ಸಾಧಕರಿಗಿದು ಮಾರ್ಗದರ್ಶಿಕೆಯಿದ್ದಂತಿದೆ.

ಇದೇ ರೀತಿಯಾಗಿ ಅಣ್ಣನೂ, ಗುರುವೂ ಆಗಿದ್ದ ಅಜಗಣ್ಣನ ವಿಯೋಗದಿಂದ ಪ್ರಲಾಪಿಸುತ್ತಿದ್ದ ಮುಕ್ತಾಯಕ್ಕನನ್ನು ಅಲ್ಲಮಪ್ರಭುಗಳು ಸಂತೈಸುತ್ತಾ ಅವಳನ್ನು ಅಧ್ಯಾತ್ಮದ ಅನುಭಾವದ ನಿಲುವಿನಲ್ಲಿ ನಿಲ್ಲಿಸುತ್ತಾರೆ. ಅಲ್ಲಿಂದ ಸಿದ್ಧರಾಮನಿರುವ ಸೊಲ್ಲಾಪುರಕ್ಕೆ ಬರುತ್ತಾರೆ. ಸಿದ್ಧರಾಮೇಶ್ವರರು ಸೊನ್ನಲಿಗೆಯಲ್ಲಿ ಕೆರೆ, ಕಟ್ಟೆ, ಬಾವಿ, ಗುಡಿ–ಗೋಪುರಗಳನ್ನು ತಮ್ಮ ಗುಡ್ಡದಿಂದ ಕಟ್ಟಿಸುತ್ತ ಲೋಕ ಸಂಗ್ರಹದ ಕಾರ್ಯದಲ್ಲಿ

ತೊಡಗಿರುವುದನ್ನು ಕಾಣುತ್ತಾರೆ. ಇದು ಪರೋಪಕಾರದ ಹಾಗೂ ಸಮಾಜದ ಹಿತ ಕಾಪಾಡುವ ಕಾರ್ಯವೇನೋ ನಿಜ. ಆದರೆ ಇದರಿಂದ ಮೋಕ್ಷ ಸಿಗುವುದು ವಿರಳವೆಂದು ಬೋಧಿಸುತ್ತ ಅಲ್ಲಮರು ಅವರಿಗೆ ಹೀಗೆ ಹೇಳುತ್ತಾರೆ.

**ದೇಹದೊಳಗೆ ದೇವಾಲಯವಿದ್ದು**
**ಮತ್ತೆ ಬೇರೆ ದೇವಾಲಯವೇಕೆ?**
**ಎರಡಕ್ಕೆ ಹೇಳಲಿಲ್ಲವಯ್ಯಾ**
**ಗುಹೇಶ್ವರಾ ನೀನು ಕಲ್ಲಾದಡೆ ನಾನೇನಪ್ಪೆನು!**

ಎಂದು ವಿಡಂಬಿಸಿ ಮಾತನಾಡಿ ಎಚ್ಚರಗೊಳಿಸುತ್ತಾರೆ. ಈ ದೇಹವೇ ದೇವಾಲಯವಾಗಿರುವಾಗ ಮತ್ತೊಂದು ಬಹಿರಂಗವಾಗಿ ದೇವಾಲಯ ಕಟ್ಟಿಸಿ ಏಕೆ ದಣಿಯುವಿರಿ? ಎಂದುದಾಗಿ ವಿಡಂಬಿಸಿದ್ದಾರೆ. ನೀವು ಕಟ್ಟಲೇಬೇಕಾದ ಕೆರೆ ಎಂತಹದ್ದೆಂದರೆ ವಚನದ ಮೂಲಕವಾಗಿ ಹೀಗೆ ತಿಳಿಯಪಡಿಸಿದ್ದಾರೆ.

**ತನುವೆಂಬ ಏರಿಗೆ ಮನವೆಂಬ ಕಟ್ಟೆಯ ಮಾಡಿ**
**ಬಲಿದು ಷಡ್ವಿಧ ಭಕ್ತಿಯೆಂಬ ಸೋಪಾನದಿಂದ**
**ಪರಮಾನಂದ ಜಲವ ತುಂಬಿ**
**ಕೆರೆಯ ಕಟ್ಟಬಲ್ಲವರಾರನೂ ಕಾಣೆ**
**ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು**
**ಗುಹೇಶ್ವರಾ, ನಿಮ್ಮಾಣೆ!**

ಶಿವಯೋಗಿ ಕಟ್ಟಬೇಕಾದ ಕೆರೆ ಎಂಥದೆಂಬುದನ್ನು ಅಲ್ಲಮ ಪ್ರಭುಗಳು ಇಲ್ಲಿ ಮಾರ್ಮಿಕವಾಗಿ ಹೇಳಿರುವರು. ಕರ್ಮ ಯೋಗಿಯಾದ ಸಿದ್ಧರಾಮರಿಗೆ ಅಲ್ಲಮರು ಶಿವಯೋಗದ ಹಿರಿಮೆಯನ್ನು ತಿಳಿಸಿಕೊಡುತ್ತಾರೆ. ಹಾಗೆ ನೋಡಿದರೆ ಸ್ವತಃ ಸಿದ್ಧರಾಮರು ಕೂಡ ಸಾಧನೆಯಲ್ಲಿ ಕಡಿಮೆಯೇನಲ್ಲ. ಜನ ಕಲ್ಯಾಣದಲ್ಲಿ ಅವರದು ಅದ್ಭುತ ಸಾಧನೆ ಎಂದು ಹೇಳಬಹುದು.

ಬಸವಣ್ಣನವರು ಕೈಗೆತ್ತಿಕೊಂಡ ಮಹಾ ಆಂದೋಲನದ ಬಗ್ಗೆ ಪ್ರಭುದೇವನಿಗೆ ತುಂಬಾ ಕುತೂಹಲ. ಮನಸ್ಸು ತಡೆಯದೇ ಸಿದ್ಧರಾಮನೊಡಗೂಡಿ ಕಲ್ಯಾಣಕ್ಕೆ ಬಂದು ಅಲ್ಲಿ ಕೆಲಕಾಲವಿದ್ದು, ವೀರಶೈವ ತತ್ತ್ವದ ಬಗೆಗೆ ತತ್ತ್ವ ತತ್ತ್ವಗಳಲ್ಲಿ ಸಮನ್ವಯ ಸಾಧಿಸುವ ಬಗೆಗೆ ಹಾಗೂ ಆದರ್ಶ ಸಮಾಜ ರಚನೆಯ ಬಗೆಗೆ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಗೋಷ್ಠಿಗಳಲ್ಲಿ ಕೇಂದ್ರ ವ್ಯಕ್ತಿಯಾಗಿದ್ದುಕೊಂಡು ಮಾರ್ಗದರ್ಶನ ನೀಡಿದ ಮಹಾನುಭಾವ.

ಅಲ್ಲಮರು ಗೊಗ್ಗಯ್ಯ, ಗೋರಕ್ಷಕ, ಮುಕ್ತಾಯಕ್ಕ, ಸಿದ್ಧರಾಮರನ್ನು ಅನೇಕ ಪ್ರಶ್ನೆಗಳ ಮೂಲಕ ಪರೀಕ್ಷಿಸಿದ್ದುದು ಗಮನಾರ್ಹ. ಸಿದ್ಧರಾಮರ ನೇರ ನುಡಿಗಳಿಗೆ ಅಲ್ಲಮರು ಬೆರಗಾಗುತ್ತಾರೆ. ಕೆಲವೊಮ್ಮೆ ತಲೆದೂಗುತ್ತಾರೆ. ಈ ಇಬ್ಬರೂ ದಿಗ್ಗಜರೂ ಕೂಡಿಕೊಂಡು ಕಲ್ಯಾಣದಲ್ಲಿರುವ ಬಸವಣ್ಣನವರಲ್ಲಿಗೆ ಬರುತ್ತಾರೆ. ಯುಗದ ಮಹಾಪ್ರಭೆಯಾದ ಅಲ್ಲಮರ ಪ್ರವೇಶದಿಂದ ಕಲ್ಯಾಣದಲ್ಲಿ ಬಸವಣ್ಣನವರ ಧಾರ್ಮಿಕ, ಮತ್ತು ಸಾಮಾಜಿಕ ಕ್ರಾಂತಿಗೆ ಹೊಸ ಕಳೆ ಪ್ರಾಪ್ತವಾಗುತ್ತದೆಯಷ್ಟೇ ಅಲ್ಲ ಬಲ ಬಂದಂತಾಗುತ್ತದೆ. ಸಿದ್ಧರಾಮರಂತಹ ಸಿದ್ಧಯೋಗಿ ಕರ್ಮಯೋಗಿಯನ್ನು ಕಲ್ಯಾಣಕ್ಕೆ ಕರೆ ತಂದುದು. ಬಸವಣ್ಣನವರ ಕಾರ್ಯ ಕ್ಷೇತ್ರ ವ್ಯಾಪಕಗೊಳ್ಳಲು ಕಾರಣವಾಗುತ್ತದೆ. ಬಸವಣ್ಣನವರು ಯೋಜಿಸಿದ ಆಂದೋಲನಕ್ಕೆ ತನ್ನ ಪೂರ್ಣ ಪ್ರಮಾಣದ ಬೆಂಬಲವಿತ್ತು ಅಲ್ಲಿ ವಿಧಾಯಕ ಕಾರ್ಯಗಳಲ್ಲಿ ಭಾಗಿಯಾದರು. ಕಲ್ಯಾಣಕ್ಕೆ ಉಡುತಡಿಯಿಂದ ಬಂದಂತಹ ಅಕ್ಕಮಹಾದೇವಿಯನ್ನು ವಿವಿಧ ಬಗೆಯ ಪ್ರಶ್ನೆಗಳನ್ನು ಹಾಕುವುದರ ಮೂಲಕ ಪರೀಕ್ಷಿಸಿ, ಅವಳ ವ್ಯಕ್ತಿತ್ವದ ಹಿರಿಮೆ–ಗರಿಮೆಗಳನ್ನು ಪರಿಚಯಿಸಿದರು.

ಪ್ರಭು ದೇವನಿಂದಾಗಿ ಅಕ್ಕಮಹಾದೇವಿ, ಸಿದ್ಧರಾಮರಂತಹ ಅತ್ಯಂತ ಪ್ರಭಾವಶಾಲಿ ವ್ಯಕ್ತಿ ಬಸವಣ್ಣನವರ ಕಾರ್ಯಕ್ಷೇತ್ರವನ್ನು ಪ್ರವೇಶಿಸುವಂತಾಗಿ, ಅವರ ಆಂದೋಲನಕ್ಕೆ ಒಂದು ಬಗೆಯ ಹೊಸ ಶಕ್ತಿ, ಹೊಸ ಚೇತನ ಬಂದಿತೆಂದು ಹೇಳಬಯಸುತ್ತೇನೆ. ಕಲ್ಯಾಣವೆಂಬ ನಾಡು ಇವರ ಆಗಮನದಿಂದಾಗಿ ಕಲ್ಯಾಣವಾಗುವಂತಾಯಿತು. ಕಾರಣ ಅಲ್ಲಮರು ಶೂನ್ಯ ಸಿಂಹಾಸನದ ಅಧ್ಯಕ್ಷರಾಗಿ ಎಲ್ಲ ಸಾಧಕರ ಮನೋಗತವನ್ನರಿತುಕೊಂಡು ಅವರಿಗೆ ತಕ್ಕುದಾದ ಮಾರ್ಗದರ್ಶನ ನೀಡಿದರು. ಬಸವಾದಿ ಶಿವಶರಣರ ಧಾರ್ಮಿಕ ಆಂದೋಲನ ಅನುಭಾವದ ನೆಲೆಗಟ್ಟಿನ ಮೇಲೆ ಮುನ್ನಡೆಯಲು ಅಲ್ಲಮರು ಬಹುಮಟ್ಟಿಗೆ ಕಾರಣಕರ್ತರೂ ಆಗಿದ್ದಾರೆ. ಸಿದ್ಧ ಪುರುಷನಾದ ಗೋರಕ್ಷನಿಗೂ ಅಲ್ಲಮರು ಮಾರ್ಗದರ್ಶನ ನೀಡುತ್ತಾರೆ. ಹಠಯೋಗ ಸಾಧನೆಯಿಂದ ವಜ್ರದೇಹಿಯಾಗಿ ಅಹಂಭಾವದಿಂದ ಮೆರೆಯುತ್ತಿದ್ದ ಗೋರಕ್ಷನಿಗೆ ದೇಹವನ್ನು ವಜ್ರ ಕಾಯವನ್ನಾಗಿಸಿಕೊಳ್ಳುವುದೇ ಯೋಗದ ಗುರಿಯಲ್ಲವೆಂದು ತಿಳಿಸಿ ಶಿವಯೋಗ ಸಾಧನೆಯ ಪರಿಯನ್ನು ಬೋಧಿಸುತ್ತಾರೆ.

ಬಸವಣ್ಣನವರ ಕ್ರಾಂತಿಕಾರಕ ವಿಚಾರಗಳನ್ನು ಸಂಪ್ರದಾಯ ಬದ್ಧ ಸಮಾಜ ಹಾಗೂ ರಾಜಸತ್ತೆ ಅರಗಿಸಿಕೊಳ್ಳಲಾರದೆ ಹೋಯಿತು. ನಡೆಯಬಾರದುದು ನಡೆದು ಹೋಯಿತು. ಶರಣರೆಲ್ಲರೂ ಕಲ್ಯಾಣವನ್ನು ಬಿಟ್ಟು ಚದುರಬೇಕಾಯಿತು. ಆ ಸಂದರ್ಭದಲ್ಲಿ ಪ್ರಭುದೇವರು ಕಲ್ಯಾಣದಲ್ಲಿದ್ದರೋ ಇಲ್ಲವೋ ಎಂಬುದು

ತಿಳಿಯಲಾರದು. ಬಹುತೇಕ ಎಚ್ಚರಿಕೆಯನ್ನಿತ್ತು, ತಾವೂ ಕಲ್ಯಾಣವನ್ನು ಬಿಟ್ಟಂತೆ ತೋರುತ್ತದೆ. ಪ್ರಭುದೇವರು ಕಲ್ಯಾಣವನ್ನು ತೊರೆದು ತಮ್ಮ ಕೊನೆಯ ದಿನಗಳನ್ನು ಶ್ರೀಶೈಲಗಿರಿಗೆ ಹೋಗಿ, ಅಲ್ಲಿ ನಿರ್ಜನವಾದ ಮತ್ತು ಪ್ರಶಾಂತವಾದ ಕದಳಿವನದಲ್ಲಿ ಐಕ್ಯರಾಗಿರಬಹುದು ಎಂದುದಾಗಿ ಎಲ್ಲ ಕಾವ್ಯ–ಪುರಾಣಗಳು ಹೇಳುತ್ತ ಬಂದಿವೆ. ಇದು ಅಲ್ಲಮನು ಅಲ್ಲಮಪ್ರಭುವಾದ, ಪ್ರಭುಲಿಂಗವಾದ ಸ್ಥೂಲ ಕಥೆ.

❖❖❖

# ಅಧ್ಯಾಯ – ಐದು

# ಅಲ್ಲಮಪ್ರಭುದೇವರ ವಚನಗಳ ವೈಶಿಷ್ಟ್ಯ

ಆದ್ಯ ವಚನಕಾರ ಜೇಡರ ದಾಸಿಮಯ್ಯನಲ್ಲಿ ಬೆಡಗಿನ ವಚನಗಳ ಮೂಲ ಬೇರುಗಳಿವೆ. ಆತ ಮೊದಲ ಮತ್ತು ಹಿರಿಯ ವಚನಕಾರನೂ ನೇಕಾರ ಕಾಯಕದ ಯೋಗಿಯೂ ಹೌದು. ಅವನನ್ನು ಅನುಸರಿಸಿಯೇ ವಚನ ಸಾಹಿತ್ಯ ಬೆಳಕಿಗೆ ಬಂದುದು ಸತ್ಯ! ಸ್ವತಃ ಬಸವಣ್ಣನವರೇ ಇಂಥವರನ್ನು ಸ್ಮರಿಸುತ್ತಾ **'ಆದ್ಯರ ವಚನಂಗಳು ಪರುಷ ಕಂಡಯ್ಯಾ'** ಎಂದು ಪ್ರತಿಪಾದಿಸಿದ್ದಾರೆ. ಅನಂತರದಲ್ಲಿ ಬಂದ ವಚನಕಾರರಲ್ಲಿ ಅಕ್ಕಮಹಾದೇವಿ, ಚೆನ್ನಬಸವಣ್ಣ, ಅಲ್ಲಮಪ್ರಭು ದೇವರು ಈ ಮುಂತಾದವರು ಬೆಡಗಿನ ವಚನಕಾರರ ಪಟ್ಟಿಯಲ್ಲಿ ಅಗ್ರಗಣ್ಯರೆನಿಸಿಕೊಳ್ಳುತ್ತಾರೆ. ಅಲ್ಲಮರು ಬೆಡಗಿನ ವಚನಕಾರರಲ್ಲಿ ಸೀಮಾ ಪುರುಷರೆನಿಸಿಕೊಂಡಿದ್ದಾರೆ. ಬೆಡಗು ಎಂದರೆ ಬೆರಗು, ಅಚ್ಚರಿ, ಆಶ್ಚರ್ಯ, ಗೂಡಾರ್ಥ, ಒಗಟಿನಲ್ಲಿರುವಂತಹ ವಚನಗಳೆಂದರ್ಥ. ಬಸವಣ್ಣನವರ ಪ್ರತಿಯೊಂದು ವಚನವೂ ಶ್ರೀ ಸಾಮಾನ್ಯನಿಗೂ ಅರ್ಥವಾಗಿರವಂತಿವೆ. ಇವರ ಸ್ವರವಚನಗಳೂ ಸರಳ–ಸುಲಭವಾಗಿ ಅರ್ಥವಾಗುವಂತಿವೆ. ಆದರೆ ಅಲ್ಲಮರ ವಚನಗಳು ಹಾಗಲ್ಲ. ಟೆಂಗಿನ ಕಾಯಿಯಲ್ಲಿರುವ ಖೊಬ್ಬರಿಯನ್ನು ತೆಗೆಯುವಷ್ಟು ಕಠಿಣವೆನ್ನುವಂತಿವೆ. ಆದರೆ, ಪ್ರಭುದೇವರ ವಚನಗಳಲ್ಲಿ ಕಂಡು ಬರುವ ಪ್ರಖರವಾಗಿರುವ ವೈಚಾರಿಕತೆ, ಯೌಗಿಕ ನಿಲುವು ಮತ್ತು ಅಧ್ಯಾತ್ಮಿಕ ಔನ್ನತ್ಯಗಳು ಅಚ್ಚರಿಯನ್ನುಂಟು ಮಾಡುವಂಥವು. ಆದರೆ ಮಾನಸಿಕ ತುಮುಲವನ್ನು ಪ್ರತಿಮಿಸುವ ವಚನಗಳು ಇವರಲ್ಲಿ ಬಹಳ ಕಡಿಮೆಯೆಂದೇ ಹೇಳಬೇಕು. ಅದಕ್ಕೆ ಕಾರಣ ಮಾನಸಿಕ ಅಸ್ವಾಸ್ಥ್ಯವನ್ನು ಇಲ್ಲವಾಗಿಸಿಕೊಂಡ ಮೇಲೆಯೇ ಅವರು ಹೆಚ್ಚು ವಚನಗಳನ್ನು ಬರೆದಿರಬೇಕೆಂದು ಎನಿಸುತ್ತದೆ.

**ಎನ್ನ ಮನದ ಕೊನೆಯ ಮೊನೆಯ ಮೇಲೆ**
**ಅಂಗವಿಲ್ಲದ ರೂಪನ ಕಂಡು ಮರುಳಾದೆನವ್ವಾ**
**ಆತನ ಕಂಡು ಬೆರಗಾದೆನವ್ವಾ**

ಇಂತಹ ಸತಿ–ಪತಿ ಭಾವದ ವಚನಗಳೂ ಅಲ್ಲಮಪ್ರಭುದೇವರಲ್ಲಿ ವಿರಳವೆನ್ನಿ! ಸಾಮಾಜಿಕ ವಿಡಂಬನೆಯನ್ನೊಳಗೊಂಡ 'ಕಲ್ಲ ಮನೆಯ ಮಾಡಿ, ಕಲ್ಲದೇವರ

ಮಾಡಿ, ಕೈಯಲ್ಲಿ ಕರಸ್ಥಲ, ಮನದಲ್ಲಿ ಪರಸ್ಥಲ, ತನುವೆಲ್ಲ ಹುಸಿಸ್ಥಲ' ಇಂತಹ ವಚನಗಳು ಅವರಲ್ಲಿ ಸಾಕಷ್ಟು ಬಂದಿವೆ. "ಕೊಟ್ಟ ಕುದುರೆಯಿನೇರಲರಿಯದೆ", ಎತ್ತಣ ಕೋಗಿಲೆ'. 'ಕಾಯದ ಮೊದಲಿಗೆ ಬೀಜವಾವುದೆಂಬುದನರಿಯದೀಲೋಕ'– ಇಂತಹ ಸರಳ–ಸುಲಭ ವಚನಗಳಲ್ಲಿ ಕೂಡ ಪ್ರಭುದೇವರ ವೈಚಾರಿಕತೆ ಎದ್ದು ಕಾಣುತ್ತದೆ.

ಹೀಗೆ ಅಧ್ಯಾತ್ಮಿಕ ಅನುಭವ ಮತ್ತು ಯೌಗಿಕ ನಿಲುವನ್ನು ಅಲ್ಲಮ ಪ್ರಭುದೇವರ ಬೆಡಗಿನ ಮೂಲಕವೇ ಅಭಿವ್ಯಕ್ತಪಡಿಸುವುದು ಹೆಚ್ಚು! ಸಾಮಾನ್ಯವಾಗಿ ಎಲ್ಲ ವಚನಕಾರರೂ ಬೆಡಗಿನ ವಚನಗಳನ್ನು ರಚಿಸಿದ್ದಾರೆ. ಆದರೆ ಅಲ್ಲಮಪ್ರಭುವಿನಷ್ಟು ಬೆಡಗಿನ ವಚನಗಳನ್ನು ಬರೆದಿಲ್ಲವೆಂದೇ ಹೇಳಬೇಕು. ಕೇವಲ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ, ಗುಣದ ದೃಟಿಯಿಂದಲೂ ಪ್ರಭುದೇವರ ಬೆಡಗಿನ ವಚನಗಳಿಗೆ ಅದ್ವಿತೀಯ ಸ್ಥಾನಮಾನವಿದೆ. ಇಂತಿವರ ಬೆಡಗಿನ ವಚನಗಳ ರಚನೆಯಿಂದಾಗಿ, 'ಬೆಡಗಿನ ವಚನ' ಪದ್ಧತಿಗೆ ಒಂದು ಹೊಸ ತೇಜಸ್ಸು, ಹೊಸ ಕಾಂತಿ ಬಂದಿದೆ. ಪ್ರಭುದೇವರ ಬೆಡಗಿನ ವಚನಗಳು ಕೇವಲ ಬುದ್ಧಿಯ ಚಮತ್ಕಾರಗಳಾಗಿರದೇ, ಆಂತರಿಕ ಅನುಭವವನ್ನು ಗರ್ಭೀಕರಿಸಿಕೊಂಡು ಮೂಡಿ ಬಂದಿರುವ ಕಲಾತ್ಮಕ ಸೃಷ್ಟಿಯ ಕಾವ್ಯ ಪ್ರತಿಮೆಗಳಾಗಿವೆ. ಇಂತಹ ಪ್ರತಿಮೆಗಳ ರಚನೆಯಲ್ಲಿ ಪ್ರಭುದೇವರು ತಂದಿರುವ ವೈವಿಧ್ಯ, ವೈಶಿಷ್ಟ್ಯ ಮತ್ತು ಪ್ರಯೋಗ ಶೀಲತೆಗಳು ಆಧುನಿಕರ ಮೆಚ್ಚುಗೆಗೂ ಪಾತ್ರವಾಗಬಲ್ಲವು. ಆದರೆ, ಅವರ ವಚನಗಳಲ್ಲಿರುವ ಬೆಡಗನ್ನು ಒಡೆದು ಅರ್ಥೈಸಿಕೊಂಡು ಅವರ ವಚನಗಳಿಗೆ ಮಹಾಲಿಂಗದೇವನಂತವರು ಟೀಕೆ ಮತ್ತು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಪ್ರಭುದೇವರ ವಚನಗಳಿಗೆ ಟೀಕೆ (ವಿಮರ್ಶೆ, ವ್ಯಾಖ್ಯಾನ) ಬರೆಯುವ ಮೂಲಕವೇ ವೀರಶೈವ ಟೀಕಾ ಸಾಹಿತ್ಯಕ್ಕೆ ಶ್ರೀಕಾರ ಹಾಕಿದಂತೆ ತೋರುತ್ತದೆ. ಇದು ಪ್ರಭುವಿನ ವಚನಗಳಿಗೆ ಅಂದಿನವರು ಕೊಟ್ಟಿದ್ದ ಮಹತ್ವ ಮತ್ತು ಅವು ಎಲ್ಲರಿಗೂ ತಿಳಿಯುವಂತಾಗಬೇಕೆಂಬ ಅವರ ಬಯಕೆಯನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ಬೆಡಗಿನ ವಚನಗಳಿಗೆ ಪ್ರಭುದೇವರ ಕಾಣಿಕೆ ತುಂಬಾ ಮೌಲಿಕ ಮತ್ತು ಅದ್ವಿತೀಯ ಸಾಧನೆಯಾಗಿದೆ. ಇವರ ಈ ವಚನ ರಚನಾ ಪದ್ಧತಿಯಿಂದಾಗಿ ಶಕ್ತಿ ಬಂದಿತು. ಒಂದು ದಿಕ್ಕು ದೆಸೆ ದೊರೆಯಿತು. ವಿಶ್ವ ವ್ಯಾಪಿಯಾಗಿ ಹಬ್ಬುಂತಾಯಿತು. ವಿಶ್ವ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಎಂಬುದಕ್ಕೆ ಹೆಸರು ಮೂಡಿತು.

ಪ್ರಭುದೇವರ ಬೆಡಗನ ವಚನಗಳು ಶ್ರೀ ಸಾಮಾನ್ಯನಿಗಂತೂ ಒಡೆಯಲಾರದ ಒಗಟು, ನಾನು ಓದಬಲ್ಲೆ, ಬಿಡಿಸಿ ಹೇಳಬಲ್ಲೆ ಎಂಬುವವರನ್ನು ತಲೆ ಕೆಳಗಾಗಿಸಿವೆ. ಇಂಥ ದಂದುಗ–ಗೊಂದಲದಲ್ಲಿ ಸಿಲುಕಿಕೊಂಡ ನಮ್ಮಂಥವರ ಮನೋಸ್ಥಿತಿ–

ಯನ್ನರಿತುಕೊಂಡು ವಿಜಯಪುರದ ಜ್ಞಾನಯೋಗಾಶ್ರಮದ ಅಧಿಪತಿಗಳಾಗಿರುವ ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು "ಅಲ್ಲಮ ಪ್ರಭುದೇವರ ವಚನ–ನಿರ್ವಚನ" ಮಾಡಿದ (1998–2017) ಗ್ರಂಥವನ್ನು ಮೂರು ಮುದ್ರಣಗಳನ್ನು ಕಂಡಿದೆ. ಇದನ್ನು ಮೈಸೂರಿನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥ ಮಾಲೆಯ ವತಿಯಿಂದ ಪ್ರಕಾಶನದ ಬೆಳಕು ಕಂಡಿದೆ. ಈಗಾಗಲೇ ಸುಮಾರು ಹದಿನೈದು ಸಾವಿರ ಪ್ರತಿಗಳು ಜನರಿಗೆ ತಲುಪಿವೆ. ಇದು 21ನೆಯಶತಮಾನದ ಅಪರೂಪದ ಕೊಡುಗೆಯಾಗಿದೆ. ಅಲ್ಲಮಪ್ರಭುದೇವರ ವಚನಗಳಿಗೆ ಭಾವ–ಭಾಷ್ಯ (ಟೀಕೆ) ಬರೆದಿದ್ದುದಲ್ಲದೇ ಕಠಿಣ ಪದ ಕೋಶ, ಪಾರಿಭಾಷಿಕ ಪದಕೋಶ, ವಚನಗಳ ವರ್ಣಾನುಕ್ರಮಗಳೊಂದಿಗೆ ಕ್ರಮಬದ್ಧವಾಗಿ ಜೋಡಿಸಿದ್ದಾರೆ. ಇವರ ಪರಿಶ್ರಮದ ವಿದ್ವತ್ತಿನಿಂದಾಗಿ ಓದುಗರಿಗೆ, ಸಹೃದಯ ಲೋಕಕ್ಕೆ ತುಂಬಾ ಅನುಕೂಲವಾಗಿದೆ. ಆದುದರಿಂದ ಪೂಜ್ಯ ಶ್ರೀಗಳವರಿಗೆ ಸಹೃದಯರ ಪರವಾಗಿ ನಾನು ಶಿರ ಸಾಷ್ಠಾಂಗ ನಮಸ್ಕಾರಗಳನ್ನು ಅವರ ಪದತಲಗಳಿಗೆ ಅರ್ಪಿಸುವೆನು.

ಅಲ್ಲಮನದು ಭಾವುಕವಲ್ಲದ ವೈಚಾರಿಕ ದೃಷ್ಟಿ ! ಧಾರ್ಮಿಕ ಆಚರಣೆಗಳು ವಿಚಾರಶೀಲತೆಯನ್ನು ಕಳೆದುಕೊಂಡು ಯಾಂತ್ರಿಕವಾದಾಗ ಅವುಸಂಪೂರ್ಣ ಅನುಪಯುಕ್ತವಾಗುತ್ತವೆಯೆಂಬುದು ಅಲ್ಲಮನ ಅಭಿಪ್ರಾಯ. ಆಚಾರ–ವಿಚಾರಗಳ ಸಮನ್ವಯವೇ ಶರಣ ಧರ್ಮದ ತಳಪಾಯ. ನಡೆ–ನುಡಿ ಒಂದಾಗಿರುವುದೇ ಮಾನವ ಧರ್ಮವೆಂದವರು ಶರಣರು. ಅದರಂತೆ ಆಚರಿಸಿ ತೋರಿದವರು. ಅಲ್ಲಮಪ್ರಭುದೇವರು ಅದನ್ನು ಗಟ್ಟಿಗೊಳಿಸಿ, ಅದರ ಮೇಲೆಯೂ ವಿಚಾರದ ಸೌಧವನ್ನು ನಿರ್ಮಿಸಿದರು. ಇದರಿಂದ ವೀರಶೈವ ಧರ್ಮವು ಹೊಸ ಆಯಾಮವನ್ನೇ ಪಡೆಯಿತು. ಇಷ್ಟೆಲ್ಲವಿದ್ದರೂ ಪ್ರಭುದೇವರು ಯಾವೊಂದೂ ಸೀಮಿತ ಧರ್ಮದ ಒಲಯಕ್ಕೆ ಸಿಲುಕಲಿಲ್ಲವೆಂಬುದು ಗಮನಿಸಲೇಬೇಕಾದ ಅಂಶ. ಸೂಕ್ಷ್ಮವಾಗಿ ಗಮನಿಸಿದಾಗ ಅವರ ವಚನಗಳಲ್ಲಿ ಯಾವುದೇ ಸಂಪ್ರದಾಯದ ಪ್ರತಿಪಾದನೆಯಿಲ್ಲದಿರುವುದು ಅರಿವಿಗೆ ಬರುತ್ತದೆ. 'ಆತನಲ್ಲಮ ಸಕಲ ಸಮಯ ಪ್ರೀತ' ಎಂದು ಚಾಮರಸ ಕವಿಯು ಕರೆದುದು ಸೂಕ್ತ ಮತ್ತು ಗೌರವ ಸಲ್ಲಿಸಿದಂತಾಗಿದೆ. ಆದುದರಿಂದಲೇ ಇಂದಿನ ವಿಚಾರವಂತರಿಗೆ ಪ್ರಭುದೇವರು ಹೆಚ್ಚು ಪ್ರಿಯರಾಗುತ್ತಾರೆ ಹಾಗೂ ಅವರ ವಿಚಾರಗಳು ಇಂದಿಗೂ ಪ್ರಸ್ತುತವಾಗುತ್ತವೆಯೆಂಬುದು ತತ್ತ್ವವೇತ್ತರ ಅಭಿಪ್ರಾಯ.

ಅಲ್ಲಮಪ್ರಭುಗಳ ವಚನಗಳು ಅನುಭಾವಿಕ ಪ್ರಪಂಚಕ್ಕೆ ದೊರೆತ ಅನರ್ಘ್ಯ ರತ್ನಗಳಾಗಿವೆ. 'ಗುಹೇಶ್ವರ' ಎಂಬುದು ಅವರ ವಚನಾಂಕಿತವಾಗಿದ್ದು ಯಾವ ಸ್ಥಾವರ ಲಿಂಗವನ್ನು ಅದು ನಿರ್ದೇಶಿಸುವಂತೆ ಕಾಣುವುದಿಲ್ಲ ; ಬದಲಾಗಿ ಅದು

ಮಾನವನ ಹೃದಯದಲ್ಲಿ ಅಂತರ್ಯಾಮಿಯಾಗಿರುವ ಪರತತ್ವವನ್ನು ನಿರ್ದೇಶಿಸುವಂತಿದೆ. ಅಲ್ಲಮ ಪ್ರಭು ಅವರೊಬ್ಬ ನಿಜವಾದ ಅನುಭಾವಿಗಳು. ಅವರ ವಚನಗಳು ಅನುಬಾವ ಗಟ್ಟಿಗಳು. ಅವು ಸತ್ಯದರ್ಶನ ಮಾಡಿಸುವ ರತ್ನದ ಹರಳುಗಳು. ವಚನಗಳೆಂದರೆ ಮಂತ್ರಗಳು,ಅಣಿಮುತ್ತುಗಳು. ಅವು ಬದುಕಿದವರ ಅಭಿವ್ಯಕ್ತಿಗಳಾಗಿರುವುದರಿಂದ ವಿಶಿಷ್ಟವಾಗಿ ತೋರುತ್ತವೆ. ಅವು ಸತ್ಯದ ಬಿತ್ತುಗಳು ಪರ ತತ್ತ್ವವನ್ನು ಅಭಿವ್ಯಂಜಿಸುವ 'ಶೂನ್ಯ'ದ ಪರಿಭಾವನೆಗೆ ಸಂಬಂಧಿಸಿದ ವಚನಗಳು. ಇವರಲ್ಲಿರುವಷ್ಟು ಬೇರೆ ಯಾರಲ್ಲಿಯೂ ಇಲ್ಲ. ಅವರವರ ವೃತ್ತಿ ಅಥವಾ ಕಾಯಕಗಳ ಪರಿಭಾಷೆಯ ಮೂಲಕ ಅಲ್ಲಮಪ್ರಭುಗಳು ಜನರಿಗೆ ಬೋಧನೆ ಮಾಡುತ್ತಿದ್ದರೆಂಬುದು ಅವರ ವಚನಗಳಿಂದ ತಿಳಿದು ಬರುತ್ತದೆ ಮತ್ತು ಇತರ ವಚನಕಾರರಲ್ಲಿ ಕಾಣುವ ಭಕ್ತಿಯ ನಿರ್ಭರತೆ ಅಲ್ಲಮರ ವಚನಗಳಲ್ಲಿ ಕಾಣುವುದಿಲ್ಲ. ಆತ್ಮವಿಮರ್ಶೆ ಮಾನಸಿಕ ತುಮುಲ, ದೈವಕ್ಕೆ ಮೊರೆಯಿಡುವುದು ಮುಂತಾದ ಸನ್ನಿವೇಶಗಳನ್ನು ಪ್ರತಿಬಿಂಬಿಸುವ ವಚನಗಳ ಸಂಖ್ಯೆ ಅತ್ಯಲ್ಪ ಸಾಮಾಜಿಕ ವಿಡಂಬನೆಯುಳ್ಳ ವಚನಗಳು ಅಲ್ಲಲ್ಲಿ ಕಂಡುಬರುತ್ತವೆ. ಇವರದು ಇತರ ಶರಣರಿಗಿಂತ ವಿಭಿನ್ನ ಮತ್ತು ವಿನೂತನ ಶೈಲಿ ಇವರ ವಚನಗಳಲ್ಲಿದೆ. ಅವು ಬೆಡಗಿನ ವಚನಗಳೆಂದೇ ಪ್ರಸಿದ್ಧಿಯಾಗಿವೆ. ಇವರಷ್ಟು ಬೆಡಗಿನ ವಚನಗಳನ್ನು ಯರೂ ರಚಿಸಿದಂತಿಲ್ಲ. ಸಂಖ್ಯೆ ಮತ್ತು ಗುಣಗಳ ದೃಷ್ಟಿಯಿಂದಲೂ ಪ್ರಭುದೇವರ ವಚನಗಳಿಗೆ ವಿಶಿಷ್ಟ ಸ್ಥಾನವಿದೆ. ಜಿಜ್ಞಾಸುಗಳನ್ನು ಆಕರ್ಷಿಸಿವೆ.

ದೇಹ, ಇಂದ್ರಿಯ, ಮನಸ್ಸು, ಆತ್ಮ, ಪರಮಾತ್ಮ ಮುಂತಾದ ತತ್ತ್ವಗಳಿಗೆ ಸಾಂಕೇತಿಕ ಪದಗಳನ್ನು ಬಳಸಿ ಅಸಂಗತತೆ ಮತ್ತು ವಿರೋಧೋಕ್ತಿಗಳ ಮೂಲಕ ರಚಿಸಿದ ವಚನಗಳು ಒಗಟಿನಂತೆ ಅಂದರೆ ಬೆಡಗನ್ನುಂಟು ಮಾಡುವಂತಿವೆ. ಪ್ರತೀಕವು ಬೆಡಗಿನ ಒಡಲು, ವಿರೋಧವು ಅದರ ಉಸಿರು, ಅನುಭವವು ಅದರ ಆತ್ಮ ಎಂದುದಾಗಿ ಅವರ ವಚನಗಳ ಸ್ವರೂಪವನ್ನು ವರ್ಣಿಸಲಾಗಿದೆ. ಇವರ ಬೆಡಗಿನ ವಚನಗಳು ಕೇವಲ ಬೌದ್ಧಿಕ ಚಮತ್ಕಾರಗಳಾಗಿರದೆ ಅಧ್ಯಾತ್ಮಿಕ ಅನುಭಾವವನ್ನು ಗರ್ಭೀಕರಿಸಿಕೊಂಡಿರುವ ಕಲಾತ್ಮಕ ಕಾವ್ಯ ಸೃಷ್ಟಿಗಳು. ಅವರ ಬೆಡಗಿನ ವಚನಗಳು ಅಧ್ಯಾತ್ಮದ ಒಲವು ನಿಲುವುಗಳನ್ನಲ್ಲದೆ ಅಭಿವ್ಯಕ್ತಿಯ ಅದ್ವಿತೀಯ ಸಾಮರ್ಥ್ಯವನ್ನು ವ್ಯಕ್ತಿಪಡಿಸುತ್ತವೆ. ಅವರ ವಚನಗಳಲ್ಲಿ ಅಲ್ಲಲ್ಲಿ ಕಾವ್ಯಾಂಶವೂ ಮಿಂಚಿದೆ. ಶರಣರು ತಮ್ಮ ಸ್ವತಂತ್ರವೂ, ವಿನೂತನವೂ ಆದ ಚಿಂತನೆ, ಅನುಭಾವಗಳನ್ನು ಅಧ್ಯಾತ್ಮ ಮನೋಧರ್ಮದ ಜನಸಾಮಾನ್ಯರೊಂದಿಗೆ ಹಂಚಿಕೊಳ್ಳಲು ಈ ಮಾಧ್ಯಮ ಸಮರ್ಥವಾದುದು, ಉಪಯುಕ್ತವಾದುದು. ಚೆನ್ನಾಗಿ ಹೊಂದಿಕೊಳ್ಳುವುದು ಎಂದು ಭಾವಿಸಿ ವಚನರೂಪದ ಅಭಿವ್ಯಕ್ತಿಯನ್ನು ಆರಿಸಿಕೊಂಡರು.

**ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು**
**ಕಂಗಳ ಮುತ್ತು ಪವಣಿಸುವಾಕೆ ನೀನಾರು ಹೇಳಾ?**
**ಸಂದ ಸಂಪಿಗೆಯರಳ ತುಂಬಿ ಬಂಡುಂಬ ಭೇದವನರಿಯದೆ**
**ಹಂಬಲಿಸುವ ಪರಿತಾಪವೇನು ಹೇಳಾ?**

ಈ ವಚನವು ಅಲ್ಲಮರ ಕಾವ್ಯ ಗುಣಕ್ಕೆ ಹಿಡಿದ ಕನ್ನಡಿಯಾಗಿದೆ. ಮೊದಲಿನವೆರಡು ಸಾಲುಗಳಲ್ಲಿ ಕಾವ್ಯ ಧ್ವನಿಯಿದ್ದರೆ, ನಂತರದ ಎರಡು ಸಾಲುಗಳಲ್ಲಿ ದರ್ಶನದ ಧ್ವನಿಯಿದೆ. ಮುಕ್ತಾಯಕ್ಕನ ಅಣ್ಣನ ಅಗಲುವಿಕೆಯಿಂದಾದ ಪರಿಣಾಮವನ್ನು ಈ ವಚನದಲ್ಲಿ ಹೇಳಲಾಗಿದ್ದು; ಅಲ್ಲಮರಲ್ಲಿ ಕಾವ್ಯಾಭಿವ್ಯಕ್ತಿಯ ಗುಣ ಸಹಜವಾಗಿ ಅರಳಿದೆ.

1. **ಮಾತೆಂಬುದು ಜ್ಯೋತಿರ್ಲಿಂಗ –ಸ್ವರವೆಂಬುದು ಪರತತ್ತ್ವ**
2. **ಬೆಟ್ಟಕ್ಕೆ ಚಳಿಯಾದಡೆ ಏನು ಹೊದಿಸುವಿರಯ್ಯಾ?**
3. **ಪ್ರಾಣಲಿಂಗಕ್ಕೆ ಕಾಯವೆ ಸೆಜ್ಜೆ ಆಕಾಶ ಗಂಗೆಯಲ್ಲಿ ಮಜ್ಜನ**
4. **ಘನತರ ಚಿತ್ರದ ರೂಹ ಬರೆಯಬಹುದಲ್ಲದೆ ಪ್ರಾಣವ ಬರೆಯಬಹುದೇ?**

ಈ ಮುಂತಾದ ಸಾಲುಗಳಲ್ಲಿ ರೂಪಕಗಳು ಬಳಕೆಯಾಗಿ ವಚನಗಳಿಗೆ ಮೆರುಗು ತಂದಿವೆ. ಪ್ರತಿಮೆ ಮತ್ತು ರೂಪಕಗಳ ಬಳಕೆ ಅಲ್ಲಮನ ವಚನಗಳಲ್ಲಿ ಹೇರಳವಾಗಿವೆ.

ಒಟ್ಟಿನಲ್ಲಿ ಅಲ್ಲಮ ಪ್ರಭುವಿನ ವಚನಗಳು ಕೇವಲ ಬುದ್ಧಿಯಿಂದ, ಭಾವಾವೇಶದಿಂದ ರಚನೆಗೊಂಡವುಗಳಲ್ಲ. ಆ ಎರಡೂ ವೈಶಿಷ್ಟ್ಯಗಳೂ ಸೇರಿ ಅಂತರಂಗದ ಕುಲುಮೆಯಲ್ಲಿ ಪಾಕಗೊಂಡು ಅನುಭಾವದಿಂದ ಹೊರ ಹೊಮ್ಮಿದವುಗಳು. ಆದ್ದರಿಂದ ಅವರ ವಚನಗಳು ಕೇವಲ ಶುಷ್ಕ ಮಾತುಗಳಾಗಿ ಉಳಿಯದೆ ಆತ್ಮಲಿಂಗದ ಜ್ಯೋತಿಗಳಾಗಿವೆ. ಅವರೇ ಎಂದಂತೆ ಮಾತೆಂಬುದು ಜ್ಯೋತಿರ್ಲಿಂಗವಾಗಿದೆ. ವಿಚಾರ ಪರತೆ, ಸತ್ಯ ನಿಷ್ಠುರತೆ, ಅನುಭವಗಳಗಮ್ಯತೆ, ಅರಿವಿನ ಅನಂತತೆ, ಕಾವ್ಯದ ಕಮನೀಯತೆ – ಇವು ಅಲ್ಲಮಪ್ರಭುಗಳ ವಚನಗಳ ವೈವಿಧ್ಯ ಮತ್ತು ವೈಶಿಷ್ಟ್ಯವೆಂದು ಹೇಳಬಹುದು.

❖❖❖

# ಅಧ್ಯಾಯ – ಆರು

# ವೇಮನ ಅಲ್ಲಮರ ಪದ–ವಚನಗಳಲ್ಲಿ ಭಕ್ತ–ಭಕ್ತಿ

ಭಕ್ತಿಯೆಂಬುದುಯುಕ್ತಿಯೊಳಗು
ಪೂಜೆಯೆಂಬುದುನಿರ್ಮಾಲ್ಯದೊಳಗು
ಪ್ರಸಾದವೆಂಬುದು ಓಗರದೊಳಗು
ಆಚಾರವೆಂಬುದು ಅನಾಚಾರದೊಳಗು
ಧರ್ಮವೆಂಬುದು ಅಧರ್ಮದೊಳಗು
ಸುಖವೆಂಬುದು ದುಃಖದೊಳಗು
ವ್ರತವೆಂಬುದು ವೈರಾಗ್ಯದೊಳಗು
ನೇಮವೆಂಬುದು ಉದ್ದೇಶದೊಳಗು
ಅಹಿಂಸೆಯೆಂಬುದು ಹಿಂಸೆಯೊಳಗು
ಇವಾವಂಗವೂ ಇಲ್ಲದೇ
ಗುಹೇಶ್ವರಾ ನಿಮ್ಮಶರಣ ಸುಖಿಯಾಗಿರ್ದನು

– ಅಲ್ಲಮಪ್ರಭುದೇವ

ಆತ್ಮಶುದ್ಧಿಯಿರದ ಆಚಾರವದೇಕೆ?
ಮಡಿಕೆ ಶುದ್ಧಿಯಿರದ ಅಡುಗೆಯೇಕೆ?
ಭಾವ ಶುದ್ಧಿಯಿರದ ದೇವ ಪೂಜೆಯೇಕೆ?

ವಿಶ್ವದಾಭಿರಾಮ ಕೇಳು ವೇಮ
ಚಿತ್ತ ಶುದ್ಧಿ ಹೊಂದಿ ಗೈದ ಪುಣ್ಯಕಾರ್ಯ
ಕೊಂಚವಾದರೇನು ಕ್ಷುಲ್ಲಕವಲ್ಲ
ಆಲದ ಮರವೆಷ್ಟು? ಅದರ ಬೀಜವೆಷ್ಟು?
ವಿಶ್ವದಾಭಿರಾಮ ಕೇಳು ವೇಮ

– ವೇಮನ

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮವೇ ಮೊದಲನೆಯ ಮೆಟ್ಟಿಲು. ಧರ್ಮ ಮಾರ್ಗವಿಡಿದು ನಡೆದಾಗ ಮುಂದಿನ ಮೂರು ಮಾರ್ಗಗಳು ಸುಗಮವಾಗಿ ಸಾಗಿ ಮೋಕ್ಷ ಪ್ರಾಪ್ತಿ ಮಾಡಿಕೊಳ್ಳಲು

ಸಾಧ್ಯವಾಗುವುದು. ಧರ್ಮದಿಂದ ನಡೆ–ನುಡಿ–ಧರ್ಮದಿಂದ ಬಾಳುವುದೇ ನಿಜ ಜೀವನದ ಸಿದ್ಧಾಂತ ಪ್ರತಿಯೊಬ್ಬರ ಬದುಕಿಗೆ ಧರ್ಮವೇ ಪ್ರಮುಖ ಭಾಗ ಮತ್ತು ಅದುವೇ ತಳಪಾಯ. ಮೋಕ್ಷ ಪ್ರಾಪ್ತಿಗೆ ಧರ್ಮ (ಭಕ್ತಿ)ವೇ ಮುಕ್ತಿಗೆ ಸೋಪಾನ, ಚತುರ್ವಿಧ ಪುರುಷಾರ್ಥಗಳಲ್ಲಿದುವೇ ಪ್ರಥಮ ಸೋಪಾನ (ವೀರಶೈವ) ಲಿಂಗಾಯತ ಧರ್ಮದಲ್ಲಿ ಷಟ್‌ಸ್ಥಲಗಳಲ್ಲಿ ಭಕ್ತ ಸ್ಥಲವೇ ಮೊದಲನೆಯ ಸೋಪಾನ. ಅವರಲ್ಲಿ ಭಕ್ತ ಮಹೇಶ, ಪ್ರಾಣಲಿಂಗಿ, ಶರಣ, ಐಕ್ಯವೆಂದುದಾಗಿ ಆರು ಷಷ್ಟಸ್ಥಲಗಳುಂಟು. ಅವುಗಳಿಗೆ ಮೂಲವಾದುದೇ ಭಕ್ತಸ್ಥಲ. ಈ ಸ್ಥಲವೇ ಧರ್ಮದ ತಳಪಾಯ ಮತ್ತು ಪ್ರಮುಖ ಸಾಧನ. ದಯವೇ ವಿನಯವೇ ಧರ್ಮದ ಮೂಲವಯ್ಯಾ ಎಂದ ಬಸವಣ್ಣನವರ ಮಾತು ಇದಕ್ಕೆ ಪೂರಕವಾಗುತ್ತದೆ. ಧರ್ಮದಿಂದ ನಡೆ–ಧರ್ಮವನ್ನೇ ಪಡೆ ಅದೇ ಜನ್ಮ ಕಡೆ ಎಂಬ ಗಾದೆಯಿದೆ. ಮಾನವನ ಸಮಷ್ಟಿ ಜೀವನದ ಲಿಂಗತ್ರಯಗಳಿಗೆ ಧರ್ಮವೇ ಮೂಲಾಧಾರ.

ವಿಶ್ವಸ್ಥ ವಿಕಾಸ ತತ್ತ್ವದ ಪ್ರಕ್ರಿಯೆಗೆ ಅನುಗುಣವಾಗಿ ಮೃಗತ್ವದಿಂದ ಬಿಡುಗಡೆ ಹೊಂದಿ ಪಡೆದುಕೊಂಡು ವಿಶ್ವ ಮಾನವ ಕುಲದ ಪ್ರತಿಯೊಬ್ಬ ಮನುಷ್ಯನ ಈ ಪ್ರಪಂಚದಲ್ಲಿಯೇ ಸಾಧಿಸಬೇಕಾದ ಪರಮಾರ್ಥಗಳಿವು ಎಂದುದಾಗಿ ವೈಚಾರಿಕ ದೃಷ್ಟಿಯ ಸತ್ವವುಳ್ಳ ತಜ್ಞರ ಸ್ಪಷ್ಟವಾದ ಅಭಿಪ್ರಾಯ. ಮಾನವನ ಜೀವನಾನುಭವದಲ್ಲಿ ಮೊದಲನೆಯ ಪರಮ ಪುರುಷಾರ್ಥವೇ ಧರ್ಮ ಭಾಗವಾಗಿದೆ. ಧರ್ಮವೆಂಬ ದಿವ್ಯಮಂತ್ರದಿಂದ ಬದುಕನ್ನು ಗೆಲ್ಲಬಹುದು. ಆದುದರಿಂದ ಧರ್ಮ ಎಂಬ ಪದದ ಪ್ರತಿಮೆ ಪ್ರಕೃತಿ ನಿಯಮ. ಇದು ವಿಶ್ವ ವಿಶಾಲವಾದುದು. ಸಾಮಾಜಿಕ ವ್ಯವಸ್ಥೆ ಮತ್ತು ರಾಜ್ಯ ವ್ಯವಸ್ಥೆ ಮೊದಲಾದ ಅರ್ಥಗಳನ್ನು ಈ ಶಬ್ದ ಕುರಿತದ್ದಾಗಿದೆ. ಸ್ವಾರ್ಥಪರ ಬದುಕಿಗೆ ವಿದಾಯ ಹೇಳುವುದು. ಮಾನವ ತನ್ನ ಮೃಗೀಯ ಗುಣಗಳಿಂದ ಬಿಡುಗಡೆ ಹೊಂದಿ ತಾನು ಬೇರೆಯಲ್ಲ, ಸಮಾಜ ಬೇರೆಯಲ್ಲ ಎಂಬ ಸತ್ಯವನ್ನರಿತುಕೊಂಡು ಮನುಕುಲದ ಕಲ್ಯಾಣಕ್ಕಾಗಿ ತನ್ನ ಜೀವನವನ್ನೇ ಸಮರ್ಥಿಸಿಕೊಂಡು ಕರ್ತವ್ಯ ಬದ್ಧನಾಗುವುದೇ ನಿಜವಾದ ಸುಖ, ಪರಮ ಸುಖ ಅಥವಾ ಅಂತಿಮ ಸುಖ. ಧರ್ಮದ ಹಾದಿಯಲ್ಲಿ ನಡೆಯುವವನಿಗೆ ಯಾವುದರ, ಯಾರ ಭಯವೇ ಇರಲಾರದು. ತ್ರಿಕರಣ ಪೂರ್ವಕವಾಗಿ ಅಂದರೆ ಕಾಯಾ, ವಾಚಾ, ಮನಸಾ ಇವುಗಳ ಮೂಲಕವಾಗಿ ಒಂದು ಕೆಲಸವನ್ನು ಶ್ರದ್ಧೆ, ಭಕ್ತಿ, ನಿಷ್ಠೆ, ಪ್ರೇಮ ವಿಶ್ವಾಸಗಳಿಂದ ಮಾಡುವುದೇ ಧರ್ಮ ಎನ್ನಲಾಗಿದೆ. ತಿರುವಳ್ಳುವರ್ ಕವಿಯು ಹೇಳಿದಂತೆ –

**'ಧರ್ಮಕ್ಕಿಂತ ಮಿಗಿಲಾದ ಭಾಗ್ಯವಿಲ್ಲ; ಅದನು**
**ಮರೆವುದಕ್ಕಿಂತ ಮಿಗಿಲಾದ ಕೇಡಿಲ್ಲ**
**ಧರ್ಮದಿಂದ ಬರುವುದೇ ಸುಖ; ಬೇರೆಲ್ಲವೂ**
**ದುಃಖದಿಂದ ತರುವವು; ಕೀರ್ತಿಯನು ತೊಲಗಿಸುವವು**

ಸಮಾಜದಲ್ಲಿರುವ ಪ್ರತಿಯೊಬ್ಬರೂ ಧರ್ಮದಿಂದ ನಡೆಯುವ ಸೂಚನೆಯನ್ನು ಈ ಮೇಲಿನ ಸಾಲುಗಳು ತಿಳಿಸುತ್ತವೆ. ಆದುದರಿಮದ ಧರ್ಮದ ನಡೆಯು ಅತ್ಯಗತ್ಯ! ಧರ್ಮ ಮತ್ತು ಗೃಹಸ್ಥ ಧರ್ಮಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಗೃಹಸ್ಥ ಧರ್ಮವೂ 1 ಋಷಿ ಧರ್ಮವಿದ್ದಂತೆ. ಋಷಿ ಎಂದರೆ ತ್ಯಾಗ ಎಂದರ್ಥ. ಒಬ್ಬ ವ್ಯಕ್ತಿಯು ತನ್ನ ಪ್ರೀತಿಯನ್ನು ಮಡದಿ–ಮಕ್ಕಳು, ಅಣ್ಣ–ತಮ್ಮ–ತಂದೆ–ತಾಯಿ, ಬಂಧು–ಬಳಗದಿಂದ ತೊಡಗಿ ಸಮಾಜದ ಮೂಲಕ ಇಡೀ ಮಾನವ ಸಮಷ್ಟಿಯೆಡೆಗೆ ಹರಿಸುತ್ತಾನೆ. ಆದರೆ ಋಷಿ ಧರ್ಮದ ಮುಖ್ಯ ಗುರಿ ಸಮಾಜ ಕ್ಷೇಮ; ವಿಶ್ವ ಪ್ರೇಮವಾಗಿರುತ್ತದೆ. ಅಂದರೆ ಸಮಸ್ತ ಮಾನವ ಕುಲದ ಕಲ್ಯಾಣವಾಗಿದೆ. **"ಮಾನವ ಕುಲಂವೊಂದೇ ವಲಂ"** ಎಂದ ಮಹಾಕವಿ ಪಂಪನ ಉಕ್ತಿಯಂತಾಗಿರುತ್ತದೆ. ಲೋಕವೇ ನನ್ನ ಮನೆ ಈ ಲೋಕದೊಳಿರುವ ಮನುಜರೆಲ್ಲರೂ ನನ್ನವರು ಎಂಬ ಭಾವನೆ ಬರುವುದು. ಆ ಬಳಿಕವೇ ಸಮಾಜದ ಮೂಲಕ ಕುಟುಂಬದೆಡೆಗೆ ಅಂತರ್ಮುಖಿಯಾಗಿ ಋಷಿಯು ತನ್ನ ಪ್ರೀತಿ–ಕರುಣೆಯನ್ನು ಹಂಚುತ್ತಾನೆ ಪ್ರಕಟಪಡಿಸುತ್ತಾನೆ. ಋಷಿ ಜೀವನವೆಂದರೇನೇ ಧರ್ಮದಿಂದ ಭಕ್ತಿಯಿಂದ, ಶ್ರದ್ಧೆಯಿಂದ ನಡೆಯುವುದು ಎಂದರ್ಥ. ಅವರು ಎರಡನ್ನೂ ಸಮರಸ ಭಾವದಿಂದಲೇ ಕಾಣುವರು. ಅವರಲ್ಲಿ ತರತಮ, ಭೇದಭಾವವೆಂಬುದು ಅವರ ಸುತ್ತಲೂ ಸುಳಿಯದು. ಸಂಸಾರ ಬೇರೆಯಲ್ಲ– ಲೋಕ ಕಲ್ಯಾಣ ಬೇರೆಯಲ್ಲವೆಂದು ಏಕೋಭಾವದಿಂದ ನಡೆಯುವರು. ಸುಖವೇ ಬರಲಿ, ದುಃಖವೇ ಬರಲಿ ಎರಡನ್ನೂ ಸಮರಸವೆಂದೇ ಭಾವಿಸಿ ನಡೆಯುವವರು ತಿರುವಳ್ಳುವರರು – ಉತ್ತಮ ಮಾರ್ಗದಲ್ಲಿ ನಡೆಯುವನಿಗೆ ಗೃಹಸ್ಥನಾದರೇನು? ಋಷಿಯಾದರೇನು? ಎನ್ನುತ್ತಾರೆ. ನೋಡಿ ಅವರ ದ್ವಿಪಾದಗಳಲ್ಲಿಂತಿವೆ.

**ಧರ್ಮ ಮಾರ್ಗದಿ ಗೃಹ ಜೀವನವ ನಡೆಸಿದರೆ,**
**ವಿರಕ್ತ ಮಾರ್ಗದಲಿ ಹೋಗಿ ಪಡೆಯುವುದೇನು?**
**ಧರ್ಮ ಗುಣದಿಂದ ಗೃಹಸ್ಥ ಜೀವನವ ನಡೆಸುವವನು**
**ಶ್ರೇಯಸ್ಸಿಗಾಗಿ ಯತ್ನಿಸುವ ಮುನಿಗಳಿಗಿಂತ ಶ್ರೇಷ್ಠರು.**

ಈ ದ್ವಿಪಾದಗಳನ್ನು ಗಮನಿಸಿದರೆ ಸಂಸಾರದಲ್ಲಿದ್ದುಕೊಂಡು ಸದ್ಗತಿಯನ್ನು ಕಾಣಬಹುದು ಎನ್ನಲಾಗಿದೆ. ಸದ್ಗತಿಯೆಂದರೆ ಸ್ವರ್ಗ ಸುಖ, ಮೋಕ್ಷ, ಅಥವಾ ಸಾಫಲ್ಯದ ಬದುಕು ಎಂದೆನ್ನಬಹುದು. ಇದುವೇ ಆದರ್ಶ ಧರ್ಮ ಜೀವನದ ಹೆಬ್ಬಾಗಿಲು! ಇವುಗಳಿಗೆ ಒಲವು, ಪ್ರೀತಿ, ಪ್ರೇಮ, ಜೀವನದ ಸಂಗಾತಿಗಳಾಗಿ ಕೆಲಸ ಮಾಡುತ್ತವೆ. ಒಲವಿನಿಂದ ಬಾಳುವವರೇ ಸ್ನೇಹ ಜೀವಿಗಳು. ಅಂದರೆ ಧರ್ಮಕ್ಕೆ, ಭಕ್ತಿ–ಭಕ್ತಿಗೆ ಶ್ರದ್ಧೆ–ಒಲವು–ಪ್ರೀತಿ–ಸ್ನೇಹ–ಮಧುರ ಭಾವಗುಣಗಳೇ ಮಿಗಿಲು ಎಂದು ಹೇಳಲಾಗಿದೆ.

ಧರ್ಮವೆಂದರೆ ಭಕ್ತಿ, ನವವಿಧ ಭಕ್ತಿಗಳಿವೆಂದೆಂದು ನಾರದರ ಸೂತ್ರದಲ್ಲಿ ಹೇಳಲ್ಪಟ್ಟಿದೆ. ಭಕ್ತಿಯು ಜ್ಞಾನದ ಹೆಬ್ಬಾಗಿಲು. ಈ ಬಾಗಿಲನ್ನು ದಾಟಿಕೊಂಡು ಹೋದ ಮೇಲೆ ಚಿತ್ ಪ್ರಕಾಶ ದರ್ಶನ. ಸದಾ, ಸರ್ವದಾ ಭಗವಂತನ ಧ್ಯಾನ, ಮನನ, ಚಿಂತನೆಗಳಲ್ಲಿ ಲೀನವಾಗುವವನು ಭಗವಂತನ ವಿರಾಟ್ ಶಕ್ತಿಯಲ್ಲಿ ಆವಿಷ್ಟನಾಗುತ್ತಾನೆ. ದೇವರು ಸಾಕ್ಷಾತ್ಕಾರಗೊಳ್ಳುವುದು; ಕಣ್ಣಿಗೆ ಅನುಪಮವಾಗಿ, ಸೌಂದರ್ಯವಾಗಿ, ಕಿವಿಗೆ ಮಧುರ ಶಬ್ದಗಳಾಗಿ, ಹೂವಿನಲ್ಲಿ ಪರಿಮಳ ಸೂಸುವವಾಗಿ ಜುಳುಜುಳು ಹರಿಯುವ ನದಿಯ ನೀರಾಗಿ, ಜಗತ್ತಿನೊಳಗೆ ಇಂಥವುಗಳನ್ನು ಪ್ರೀತಿ-ಪೂರ್ವಕವಾಗಿ ಒಳಗಣ್ಣಿನಿಂದ ಆಹ್ವಾನಿಸಿಕೊಂಡರೆ ಸಾಕೇ ಸಾಕು ಇದನ್ನೇ ಭಕ್ತಿ ಎಂದು ಕರೆಯುತ್ತಾರೆ. ದ್ವೇಷವನ್ನು ಮನದಿಂದ ತೆಗೆದು ಹಾಕಿ, ಅಲ್ಲಿ ಪವಿತ್ರ ಪ್ರೇಮ ಅರಳಿದರೆ ಅದನ್ನೇ ಶುದ್ಧವಾದ ಭಕ್ತಿ ಎನ್ನುವುದು. ಎಲ್ಲಿ ಭಕ್ತಿ ಇರುತ್ತದೆಯೋ ಅಲ್ಲಿ ಭಗವಂತನ ಕೃಪಾಶೀರ್ವಾದವೂ ನೆಲೆಗೊಂಡಿರುತ್ತದೆ.

ಭಕ್ತನ ಸ್ವರೂಪವನ್ನು ಕುರಿತು ಪೂರ್ವ ಕಾಲದಿಂದಲೂ ಜಿಜ್ಞಾಸೆಯು ನಡೆಯುತ್ತಾ ಬಂದಿದೆ. ಭಕ್ತನಿಗಿರುವ ಮಾನದಂಡಗಳೇನು? ಎಂಬುದರ ಕುರಿತು ಅನೇಕರು ತಮ್ಮ ತಮ್ಮ ವಿಚಾರಧಾರೆಗಳನ್ನು ವ್ಯಕ್ತಪಡಿಸಿರುವರು. ಧಗಧಗ ಉರಿಯುವ ಬೆಂಕಿ ಹೇಗೆ ಒಣಗಿದ ಕಟ್ಟಿಗೆಗಳನ್ನು ಸುಟ್ಟು ಬೂದಿ ಮಾಡುತ್ತದೆಯೋ, ಪವಿತ್ರ ಗಂಗೆಯ ಕೊಳೆ ಮತ್ತು ಪಾಪವನ್ನು ಹೇಗೆ ನಾಶಪಡಿಸುತ್ತದೆಯೋ ಹಾಗೆಯೇ ಭಕ್ತಿಯೆಂಬುದು ಸಮಸ್ತ ಪಾಪಾದಿಗಳನ್ನು ನಾಶ ಮಾಡುವ ಶಕ್ತಿ ಅದಕ್ಕಿದೆ. ನಿಜವಾದ ಭಕ್ತನ ಭಕ್ತಿಯು, ಯೋಗ, ಯಾಗ, ತ್ಯಾಗ, ದಾನ-ಧರ್ಮಗಳಿಗೂ ಸಮವಾಗಿರಲಾರದು. ಅಲ್ಲದೆ ಕರ್ಮಯೋಗ, ಜ್ಞಾನಯೋಗಗಳಿಗಿಂತಲೂ ಅಧಿಕವಾಗಿರುತ್ತದೆಯೆಂದು ಶರಣರು ಹೇಳಿರುವರು. ಬಸವಣ್ಣನವರು ಭಕ್ತಿಯ ಭಂಡಾರಿಯಾದರೂ ಭಕ್ತಿಯಿಲ್ಲದ ಬಡವ ನಾನಯ್ಯ? ಎಂದು ತಮ್ಮದೊಂದು ವಚನದಲ್ಲಿ ಹೇಳಿಕೊಂಡಿದ್ದಾರೆ. "ಭಕ್ತಿ ಶಿವನ ನಡುಗಿಸಿತ್ತು, ಭಕ್ತಿ ಶಿವನನುಣಿಸಿ, ಬಡಿಸಿ ತೊಡಗಿತ್ತು, ಭಕ್ತ ಶಿವನ ಹಾಡಿಸಿ ಕುಣಿದಾಡಿಸಿತ್ತು; ಭಕ್ತಿಯಿಲ್ಲದೇ ವಿರಕ್ತಿಯಿಲ್ಲ, ಜ್ಞಾನವಿಲ್ಲ, ಇದು ಕಾರಣ ಭಕ್ತಿಯೇ ಮುಕ್ತಿಗೆ ಜನನಿ" ಎಂಬುದು ಶರಣರ ಮಾತು. "ಭಕ್ತಿಯೆಂಬುದ ಮಾಡಬಾರದು ಅದು ಕರಗಸದಂತೆ ಹೋಗುತ್ತಲೂ ಕೊಯ್ಯುದು-ಬರುತ್ತಲೂ ಕೊಯ್ವುದು! ಘಟ ಸರ್ಪದಲ್ಲಿ ಕೈ ದುಡುಕಿದಡೆ ಹಿಡಿವುದು ಮಾಣ್ಬುದೆ?" ಎಂದು ಬಸವಣ್ಣನವರು ಹೇಳಿದಂತೆ, ಭಕ್ತಿ ಮಾಡುವುದು, ಅದರಂತೆ ನಡೆಯುವುದು ಸುಲಭದ ಮಾತೂ ಅಲ್ಲ. ಅಂದರೆ ಭಕ್ತಿಯ ಸಾಧನೆಯಲ್ಲಿ ಭಾವನೆಯ ಉದ್ವೇಗವಿದೆ; ತತ್ತ್ವ ಚಿಂತನೆಯ ದರ್ಶನವಿದೆ; ಲೋಕ ಹಿತಕ್ಕಾಗಿ ಕರಗಬಲ್ಲ ಅನುಕಂಪದ ಮಿಡಿತ-ತುಡಿತವಿದೆ. ಭಕ್ತಿಯೆಂಬುದು ಕೇವಲ ಭಾವಾವೇಶದ ಹುಚ್ಚು ಹೊಳೆಯಲ್ಲ,

ಅಂತೆಯೇ ನೀರಸ ತತ್ತ್ವ ಜಿಜ್ಞಾಸೆಯ ಚರ್ವಿತ ಚರ್ವಣಗಳ ಅಂತೆ–ಕಂತೆಯೂ ಅಲ್ಲ. ಅಪಾರ ತತ್ತ್ವಾನುಭವದ ದರ್ಶನದಿಂದ ದೀಪ್ತವಾಗಿದೆ. ಬುದ್ಧಿಯ ಬೆಳಕಿನಿಂದ ಭಾವನೆಗಳನ್ನು ಬೆಳಗಿಸಿ, ಪಳಗಿಸಿ ಪರಿಶುದ್ಧಗೊಳಿಸಿ, ನಿಶ್ಚಿತ ಗುರಿಯ ಕಡೆಗೆ ಹರಿಯ ಬಿಟ್ಟಿರುವ ಸಂಯಮದ ಗಂಭೀರ ವಾಹಿನಿಯಾಗಿದೆ ಅವರ ಭಕ್ತಿಯ ಮಾರ್ಗ. ಅದು ಕಿಚ್ಚಿನಲ್ಲಿ ಕೋಲ ಬಯ್ಚಿಟ್ಟಂತೆ ಎಂದು ಹೇಳಬಹುದು. ನಿಜ ಗುಣದ ಕುರುಹು ಭಕ್ತಿ! ಭಕ್ತಿಯೆಂಬ ನಿಧಾನವ ಸಾಧಿಸಿದೊಡೆ–ಶಿವಪ್ರೇಮವೆಂಬ ಅಂಜನವ ನೆಚ್ಚಿಕೊಂಬುದು ಇದುವೇ ಭಕ್ತನ ಪಥವಾಗಬೇಕೆಂದಿದ್ದಾರೆ ಬಸವಣ್ಣನವರು. 'ದಯವಿಲ್ಲದ ಧರ್ಮವದಾವುದಯ್ಯಾ, ಎಂದ ಬಸವ ವಾಣಿಯಂತೆ 'ಭಕ್ತಿಯಿಲ್ಲದ ಧರ್ಮವದಾವುದಯ್ಯಾ? ಎಂದು ಪ್ರಶ್ನಿಸಬೇಕಾಗುತ್ತದೆ. ಆದುದರಿಂದ ಭಕ್ತ ಭಕ್ತನ ಮನೆಗೆ ಬಂದಡೆ–ಭೃತ್ಯಾಚಾರವ ಮಾಡಬೇಕು. ಕರ್ತನಾಗಿ ಆತನ ಕಾಲ ತೊಳೆಯಿಸಿಕೊಂಡಡೆ ಹಿಂದೆ ಮಾಡಿದ ಭಕ್ತಿ ಹಾನಿ. ಲಕ್ಷ ಗಾಮದ ದಾರಿ ಹೋಗಿ ಭಕ್ತನು ಭಕ್ತನ ಕಾಂಬುದು ಸದಾಚಾರವೆನ್ನಲಾಗಿದೆ. ಇರಿಸಿಕೊಂಡು ಭಕ್ತರಾದವರೆಮ್ಮವರು, ತರಿಸಿಕೊಂಡು, ಕೊರೆಸಿಕೊಂಡು ಭಕ್ತರಾದರೆಮ್ಮವರು, ಜರಿಸಿಕೊಂಡು ಭಕ್ತರಾದವರೆಮ್ಮವರು. ಕೂಡಲಸಂಗನ ಶರಣರಿಗೆ ಮುಳಿಸ ತಾಳಿ ಎನ್ನ ಭಕ್ತಿ ಅರೆಯಾಯಿತ್ತು ಎಂದಿರುವ ಬಸವ ನುಡಿಯನ್ನು ಕೇಳಿದಡೆ ನಾವು ಯಾವ ಗಿಡದ ತಪ್ಪಲು? ಇಷ್ಟೆಲ್ಲ ಭಕ್ತಿಯಿದ್ದರೂ ಸಾಸಿವೆಯ ಷಡ್ ಭಾಗದಿನಿತಿಲ್ಲವೆನ್ನ ಭಕ್ತಿ ಎಂದಿದ್ದಾರೆ ಬಸವಣ್ಣ!! ಹನ್ನೆರಡನೆಯ ಶತಮಾನದ ಬಸವಾದಿ ಶರಣರು ಅಂದು ಭಕ್ತಿಯ ಚಳುವಳಿಯನ್ನು ಶುದ್ಧ ಮನದಿಂದ ಮಾಡಿ ಉತ್ತಿ–ಬಿತ್ತಿದವರು. ಅವರು ಅಂದು "ಭಕ್ತಿ ಪಕ್ಷ" ವೆಂಬ ವಿಶ್ವವಿನೂತನ ಪಕ್ಷವನ್ನು ಬಸವಣ್ಣನವರು ಹುಟ್ಟು ಹಾಕಿದ್ದರು. ಅದುವೇ ಎಂದೆಂದಿಗೂ ಮುಂಬರುವ ಪೀಳಿಗೆಗೆ ಮಾರ್ಗದರ್ಶಿಕೆಯಾಗಿದೆ. ಈ ಭಕ್ತಿ ಪಕ್ಷದ ಮುಖ್ಯ ಧ್ಯೇಯ, ಗುರಿ ಎಂದರೆ ಭೂಮಿಯನ್ನು ಸ್ವರ್ಗವನ್ನಾಗಿಸುವುದು, ಮರ್ತ್ಯವನ್ನೇ ಕೈಲಾಸವನ್ನಾಗಿಸುವುದು. ಅಂತರಂಗದ ಅರಿವಿನ ಗುರು ಮತ್ತು ಬೆಳಕಿನಲ್ಲಿ ತನ್ನತಾನರಿತು, ತಾನೇ ದೇವರೆಂದು ನಿರ್ಧರಿಸಿ, ಒಬ್ಬರನ್ನೊಬ್ಬರು ದೇವರಾಗಿ ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸಿ ಪ್ರೇಮಮಯ ಜೀವನ ಸಾಗಿಸುತ್ತ ಭಕ್ತಿ ಪ್ರಕಾಶದಲ್ಲಿ ಬೆಳಗುವುದು. ಇಂಥ ಭಕ್ತಿ ಪಕ್ಷದಲ್ಲಿ ಜಾತಿ, ಮತ, ಪಂಥ, ಪಂಗಡ, ಬಡವ, ಬಲ್ಲಿದ, ಹೆಣ್ಣು, ಗಂಡು, ಆ ಕುಲ, ಈ ಕುಲ, ವರ್ಗ–ವರ್ಣಮಯವಾದ ಯಾವ ಭೇದವೇ ಇರಲಾರದು. ಅಲ್ಲದೇ ಆ ದೇವರು, ಈ ದೇವರು, ಸ್ವರ್ಗ–ನರಕಗಳು ಎಂಬ ಹುಚ್ಚು ಇಲ್ಲ. ಜ್ಯೋತಿಷ್ಯ, ಪಂಚಾಂಗ, ಜಾತಕ, ಸೂತಕ, ಶಕುನ, ಅಪಶಕುನ, ಆ ದಿಕ್ಕು, ಈ ದಿಕ್ಕು ಎಂಬ ಮೂಢ ನಂಬಿಕೆ ಕಂದಾಚಾರಗಳಿಗೂ ಇಂಬಿಲ್ಲ. ಶೋಷಣೆಯ ಪೂಜಾರಿ–

ಪುರೋಹಿತ ಶಾಹಿಗಳ ಖೊಟ್ಟಿತನದ ಅಟ್ಟಹಾಸಕ್ಕೆ ಅವಕಾಶವಿಲ್ಲ. ಭಕ್ತಿ ಪಕ್ಷದವರೆಲ್ಲರೂ ಶ್ರಮ ಜೀವಿಗಳು, ಕಾಯಕದಿಂದಲೇ ಕೈಲಾಸ ಕಂಡವರು. ಈ ಭಕ್ತಿ ಪಕ್ಷದಲ್ಲಿ ಸೇರ ಬಯಸುವುದೆಂದರೆ ಮಾನವ ಜನ್ಮದ ಸಾರ್ಥಕತೆಯನ್ನು ಕಂಡುಕೊಳ್ಳಲಿಕ್ಕೆಂಬುದನ್ನು ಯಾರೂ ಮರೆಯಬಾರದು. ಅಂತೆಯೇ ಅವರಿವರೆನ್ನದೇ ರಾಜ ಮಹಾರಾಜರಿಂದ ಹಿಡಿದು ಸೇವಕನವರೆಗೂ ಭಕ್ತಿಯ ಪಕ್ಷವನ್ನು ಹಿಡಿದು ನಡೆದವರು ಸಾಕಷ್ಟುಂಟು! ಭಕ್ತಿ ಎಂಬ ವಸ್ತು ತನ್ನಲ್ಲಿಯೇ ಇರುತ್ತದೆ ಎಂಬುದನ್ನು ಅರಿತು ಆಚರಿಸಬೇಕು. ಭಕ್ತಿಯೆಂಬುದು ಮಂತ್ರವಲ್ಲ, ಮಾಟದಲ್ಲ, ಪ್ರದರ್ಶನದ ವಸ್ತುವದಲ್ಲ, ಅಂಗಡಿಯಲ್ಲಿ ಸಿಗುವುದಲ್ಲ, ಅದು ಡಂಭಾಚಾರದ ಕ್ರಿಯೆಯಲ್ಲ. ನಿಜವಾದ ಭಕ್ತರು ತಮ್ಮ ಸಾಧನೆಯಲ್ಲಿ ಮೈ ಮರೆತಿರುತ್ತಾರೆ. ಅದು ಹೃದಯಾಂತರಾಳದಿಂದ ಹೊರಹೊಮ್ಮಿದ ದೇವರ ಕುರಿತಾಗಿ ಮಾಡುವ ಶ್ರದ್ಧೆಯಾಗಿದೆ. ಭಕ್ತಿಯ ಆಳವನ್ನರಿತವರು ವಿನೀತ ಭಾವದಿಂದಿರುತ್ತಾರೆ. ಲೌಕಿಕ ಪ್ರಪಂಚದಲ್ಲಿ ಎಂತಹ ಉನ್ನತ ಅಧಿಕಾರದಲ್ಲಿದಾಗ್ಯೂ ಭಕ್ತಿಯ ಅರಿವಿನಿಂದ ಮತ್ತು ನಮ್ರತೆಯಿಂದ ವ್ಯವಹರಿಸುತ್ತಾರೆ. ಭಕ್ತಿಯ ಆಚರಣೆ ಬಹು ಸುಲಭವೆಂದರೂ ಅದು ಕಠಿಣ ಸಾಧ್ಯವಾಗುತ್ತದೆ.

ಶ್ರದ್ಧೆ, ಶಾಂತಿ, ಸಮಾಧಾನವನ್ನು ಯಾರು ಹೊಂದಿರುತ್ತಾರೆಯೋ ಅವರು ಭಕ್ತಿಯ ಸಂಪತ್ತನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಭಕ್ತಿಯ ಸಾಧನೆಗೆಂದು ನಾಡಿನಿಂದ ಕಾಡಿಗೆ ಹೋಗಬೇಕಾಗಿಲ್ಲ. ನಾವಿದ್ದಲ್ಲಿಯೇ ಸಾಧಿಸುವಂತಹದು. ಸಂಸಾರ-ದಲ್ಲಿದ್ದುಕೊಂಡೇ ಪಾರಮಾರ್ಥವನ್ನು ಪಡೆಯಬೇಕಲ್ಲದೆ ಗೃಹಸ್ಥ-ಸುಖವನ್ನು ಶಿವ ನೆನಹಿನಲ್ಲಿ ಅನುಭವಿಸಬೇಕು. ಜೇಡರ ದಾಸಿಮಯ್ಯ ಹೇಳಿರುವಂತೆ "ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವನಿಗೆ" ಎಂಬಂತೆ "ಶರಣ ಸತಿ-ಲಿಂಗಪತಿ" ಭಾವವರಾಗಿ ದಾಂಪತ್ಯ ಜೀವನವನ್ನು ನಡೆಸಬೇಕೆಂಬುದು ಶರಣರ ಸಿದ್ಧಾಂತ. ಅಂದರೆ ಸತಿ-ಪತಿಯರಲ್ಲಿ ಸಮನ್ವಯತೆಯ ಭಾವವಿರಬೇಕು. ಒಳ್ಳೆಯ ಗುಣಗಳನ್ನು ಅಳವಡಿಸಿಕೊಂಡು ಕಂಡ ಭಕ್ತರಿಗೆ, ಗುರು ಹಿರಿಯರಿಗೆ ವಂದಿಸುತ್ತ, ಕೈಮುಗಿಯುವಾತನೇ ಪರಮ ಭಕ್ತ! ಮೃದುವಾದ ಮಾತು ಸದುವಿನಯ ಗುಣ ಸಂಪನ್ನತೆಯೇ ಸದಾಶಿವನೊಲುಮೆ ಸಾಧ್ಯವೆನ್ನಲಾಗಿದೆ.

**ಎನಗಿಂತ ಕಿರಿಯರಿಲ್ಲ ಭಕ್ತರಿಗಿಂತ ಹಿರಿಯರಿಲ್ಲ**
**ಬಾಗಿದ ತಲೆ ಮುಗಿದ ಕೈಯಾಗಿರುವುದು**

ಎಂದ ಬಸವ ವಾಕ್ಯದಂತೆ ಭಕ್ತನು ಇನ್ನೊಬ್ಬ ಭಕ್ತನನ್ನು ಕಂಡಾಗ ದೇವರ ದರ್ಶನವಾದಂತೆಯೇ ಎನ್ನಬಹುದು. ಮನುಷ್ಯ ಮನುಷ್ಯನಿಗೆ ಬೆಲೆ ಕೊಡುವ, ಸಹಕರಿಸುವ, ಹೊಂದಿಕೊಳ್ಳುವ ರೀತಿ-ನೀತಿಗಳಲ್ಲಿ ಕೂಡ ಭಕ್ತಿಯ ದ್ಯೋತಕವಾಗಿವೆ. ಜೀವನದಲ್ಲಿ ಅಧ್ಯಾತ್ಮದ ಅರಿವಿನಿಂದ ಪಡೆದುಕೊಳ್ಳುವ ಭಕ್ತಿಯ ಮಾರ್ಗವು ಎಂಥವರನ್ನು ಸರಿದಾರಿಗೆ ತರುತ್ತದೆ. ಯಾವುದೇ ಕಲ್ಮಷ ಗುಣಗಳನ್ನು ಭಕ್ತಿಯ ಮೂಲಕ ಕರಗಿಸಿಕೊಂಡು ಉತ್ತಮ ಮಾನವನಾಗಿ ಬಾಳುವುದರಿಂದ ದೊರಕುವ

ಲಾಭವು ಸಕಲರೂ ನಮ್ಮವರೆಂಬ ಉನ್ನತವಾದ ಭಾವನೆ ಬರುವ ಸಾಧ್ಯವಿದೆ. ಭಕ್ತಿಯ ಮೂಲಕ ಜನರನ್ನು ವಿನಯದಿಂದ ಒಲಿಸಿಕೊಳ್ಳುವ ರೀತಿ ಹನ್ನೆರಡನೆಯ ಶತಮಾನದ ಬಸವಣ್ಣನವರು ಮತ್ತು ಅವರ ಅನುಯಾಯಿಗಳಾದ ಶರಣರಂತೆ ಬಾಳಿದವರು. ಅನೇಕರಲ್ಲಿ ಮಹಾ ವಿರಾಗಿ, ಅಲ್ಲಮ ಪ್ರಭುದೇವರಲ್ಲಿ ಹಾಗೂ ಮಹಾಯೋಗಿ ವೇಮನರ ಪದ ಹಾಗೂ ವಚನಗಳಲ್ಲಿ ಈ ಕೆಳಗಿನಂತೆ ನಿರೂಪಿಸಲಾಗಿದೆ.

**ವೇಮನರ ಪದ್ಯಗಳಲ್ಲಿ ಧರ್ಮ–ಭಕ್ತಿಯ ನುಡಿಮುತ್ತುಗಳು :**

**ಧರ್ಮೋರಕ್ಷತಿ ರಕ್ಷಕ** ಎಂಬೋಕ್ತಿಯಂತೆ ಧರ್ಮವನ್ನು ಯಾರು ಎತ್ತಿ ಹಿಡಿಯುತ್ತಾರೋ ಅಥವಾ ರಕ್ಷಿಸುತ್ತಾರೋ ಅವರನ್ನು ಧರ್ಮವು ರಕ್ಷಿಸುತ್ತದೆ ಎಂದರ್ಥ. ವಿಚಾರವು ಆಚಾರಕ್ಕೆ ಮೂಲವಾಗಿರುವಂತೆ ಇದರ ಕಾರ್ಯ. ಆಡುವುದೊಂದು ಮಾಡುವುದಿನ್ನೊಂದು ಕ್ರಿಯೆ ಆಗಬಾರದು. ವೇಮನರು ಹೇಳಿರುವ ಕೆಲವು ಪದ್ಯಗಳನ್ನಿಲ್ಲಿ ಕೊಡಲಾಗಿದೆ.

**ಸಾರಿ ರಾಮ ಭಕ್ತ, ಶಿಲೆ ಬೊಂಬೆಗೆ ಮಣಿದು**
**ಭಜನೆ ಗೆಯ್ದುದೇಕೆ ಭಕ್ತಿಯಿರದೆ?**
**ಭಕ್ತಿ ನಿಲಿಸಿದವನು ಭಜನೆಯ ಗೆಯ್ಯುವನೆ**
**ವಿಶ್ವಧಾಭಿರಾಮ ಕೇಳು ವೇಮ.**

**ವಿಷ್ಣು ಭಕ್ತರೆಲ್ಲ ಕೊನೆಗೆ ಬೂದಿ ಪಾಲು**
**ವಾದುವೇಕೆ ಮತ ವಿಭೇದವೇಕೆ?**
**ಲಿಂಗಧಾರಿ ಮರಳಿ ಆದ ಮಣ್ಣು ಪಾಲು**
**ವಿಶ್ವದಾಭಿರಾಮ ಕೇಳುವೇಮ.**

**ಶಿವನ ಮಂತ್ರವದು ಶ್ರೀ ಹರಿಯ ಮಂತ್ರವು**
**ತಿಳಿದು ತಿಳಿಯದಿಹರು ತುಚ್ಛ ಜನರು**
**ದೇವರನೇ ಮರೆತರು ತಮ್ಮ ದೇಹ ನಂಬಿ**
**ವಿಶ್ವದಾಭಿರಾಮ ಕೇಳು ವೇಮ.**

**ನೀರು ಮುಳುಗುವವನು ನಿರ್ಮಲಾತ್ಮನಲ್ಲ**
**ಪೂರ್ಣವಾದ ಮುಕ್ತಿ ಪೊಂದಲಾರ**
**ನೀರುಗೋಳಿ ನಿರುತ ನೀರೊಳು ಮುಳುಗದೇ?**
**ವಿಶ್ವದಾಭಿರಾಮ ಕೇಳು ವೇಮ.**

ನೀರು ಮುಳುಗಿದರೇನು? ನಿಧಿಯ ಹೂಳಲೇನು?
ಮನದಿಗುಡಿಯೆಡೆ ಕರ ಮುಗಿದರೇನು?
ಕಪಟ ಕಲ್ಮಷಗಳು ಒಡಲು ತುಂಬಿರಲು
ವಿಶ್ವದಾಭಿರಾಮ ಕೇಳು ವೇಮ.

ನೀರು ಅನ್ನಗಳನು, ನಿದ್ರೆಯ ತಾ ಬಿಟ್ಟು
ಮುಕ್ತಿಗಾಗಿ ಅಲೆವ, ಮೂಢ ಮನುಜ~
ಹುಚ್ಚು ನಾಯಿಯಂತೆ ವ್ಯಥೆಯ ಅಲೆತವಷ್ಟೇ
ವಿಶ್ವದಾಭಿರಾಮ ಕೇಳು ವೇಮ.

ದಶಮಿ ಏಕಾದಶಿ ಎಂಬ ವ್ರತ ಮಾಡಿ
ತಿನ್ನದಿರಲು ದುರ್ಗುಣವಡಗುವುದೆ?
ಹುತ್ತ ಮೇಲೆ ಹೊಡೆಯೆ ಹಾವು ಸಾಯದಲ್ಲ
ಈ ರೀತಿಯು ಮೌಢ್ಯ; ಈ ರೀತಿಯೇ ವೇಮ

ಉಪವಾಸವಿರುವವ ಊರ ಹಂದಿಯ ಮಗ
ತಪಸಿಯಾಗೆ ಬಡತನವನನುಭವಿಸು
ಶಿಲೆಗೆ ಮಣಿಯಲೇಕೆ ಜೀವಿಯೊಳಿಹ ಬೊಮ್ಮ
ವಿಶ್ವದಾಭಿರಾಮ ಕೇಳು ವೇಮ

ಎಣಿಸಿ ಎಣಿಸಿ ಪೂಜೆ ಎಷ್ಟು ಮಾಡಲೇನು?
ಭಕ್ತಿಯಿರದ ಪೂಜೆ ಫಲವು ಇಲ್ಲ
ಇಂತು ಪೂಜೆ ಗೆಯ್ಯೆ ಏನು ಕಾರಣವೋ
ವಿಶ್ವದಾಭಿರಾಮ ಕೇಳು ವೇಮ

ಷೋಡಶೋಪಚಾರ, ಶೂನ್ಯ ಪ್ರಚಾರಗಳು
ಭಕ್ತಿಯಿರದ ಹಾಡು ಫಲವುವುಂಟೆ?
ನಿಕ್ಕಿಯಾದ ಭಕ್ತಿ ಚೊಕ್ಕ ಮಣಿಯೆ ಸಾಕು
ವಿಶ್ವದಾಭಿರಾಮ ಕೇಳು ವೇಮ.

**ಕಲಿಯುಗದಲಿ ಧರ್ಮ ಕೋಟಿಗೊಬ್ಬಗುಂಟು**
**ಇಲ್ಲ ಇಲ್ಲವೆನುತ ಇಹನು ಲೋಭಿ**
**ಅಷ್ಟು ಧರ್ಮಿಷ್ಟತನ ಆಚೆಗೇನಿರುವುದು?**
**ವಿಶ್ವದಾಭಿರಾಮ ಕೇಳು ವೇಮ.**

**ದೇವ ಪೂಜೆ ಗೈಯ್ಯೆ ದಿವ್ಯ ಭೋಗವುಂಟು**
**ತತ್ತ್ವವರಿಯುವವನು ದೈವ ಸಮನು**
**ಏನೂ ಇರದ ನರಗೆ ಯಾವ ಗತಿಯೂ ಇಲ್ಲ**
**ವಿಶ್ವದಾಭಿರಾಮ ಕೇಳು ವೇಮ.**

**ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ**
**ಪೂಜ್ಯ ವಸ್ತುವೆನಲು ಭುವಿಯಲಿ**
**ಎಲ್ಲಿ ಪೂಜೆಗೆಯ್ಯೆ? ಎಲ್ಲ ದಿಶೆಯಲಿ ತಾನೆ?**
**ತಾನು ತಾನು; ನಾನೇ ತಾನು ವೇಮ.**

ವೇಮನರ ಈ ಪದ-ಪದ್ಯಗಳನ್ನು ಗಮನಿಸುವುದಾದರೆ ಭಕ್ತನಾದವನು ಧರ್ಮ ಮಾರ್ಗದಿಂದ ನಡೆಯುವುದು ಕಲ್ಪನೆಯೆಂಬ ಕುದುರೆಯ ಬೆಂಬತ್ತಿ ಸವಾರಿಯನ್ನು ಸ್ವತಃ ತಾನೇ ಮಾಡುವುದು, ಮುಖ್ಯವಾಗುತ್ತದೆ. ಅದರ ಲಾಭ ಅಥವಾ ಫಲ ಪಡೆಯಬೇಕಾದರೆ ತಾನೇ ಭಕ್ತಿಯಿಂದ ಸೇವೆ ಮಾಡಬೇಕಲ್ಲವೇ? ಅದಕ್ಕಾಗಿ ವೇಮನರು ದೃಷ್ಟಾಂತವಾಗಿ ನಾನು ರಾಮನ ಭಕ್ತನೆಂದು ಸಾರಿ ಸಾರಿ ಹೇಳಿ ಶಿಲಾಮೂರ್ತಿ ರಾಮನಿಗೆ ಕೈ ಮುಗಿದರೆ, ಭಜನೆ ಮಾಡಿದರೇನು ಫಲ ಭಕ್ತಿಯಿಲ್ಲದಿದ್ದರೆ? ಭಕ್ತಿ-ಶ್ರದ್ಧೆಯಿಲ್ಲದೇ ಪ್ರಾರ್ಥಿಸಿದರೆ, ಭಜಿಸಿದರೆ ಆತ ಒಲಿಯುವನೇನು? ಎಂದು ಪ್ರಶ್ನಿಸಿದ್ದಾರೆ. ಮುಂದಿನ ಪದದಲ್ಲಿ ವಿಷ್ಣು ಭಕ್ತರು, ಹರನ-ಭಕ್ತರು, ತಿಮ್ಮಪ್ಪನ ಭಕ್ತರು, ಶಿವನ ಭಕ್ತರುಗಳು ಎಂದುದಾಗಿ ಬೇರೆ ಬೇರೆ ಎಂದು ಏಕೆ ವಾದ ಮಾಡತ್ತೀರಿ? ನಾವು ಲಿಂಗಧಾರಿಗಳು ಎಂದ ಮೇಲೆ ವಿಭೇದವೇಕೆ ಮಾಡುತ್ತೀರಿ? ಮಣ್ಣಿನಿಂದ ಅಥವಾ ಶಿಲೆಯಿಂದಾದ ಲಿಂಗ ಮರಳಿ ಅದು ಮಣ್ಣು ಪಾಲಾಗುವುದಿಲ್ಲವೆ? ಎಂದು ವೇಮನರ ಪ್ರಶ್ನೆ !

ತಮ್ಮ ತಮ್ಮ ದೇಹದ ಬೆನ್ನು ಹತ್ತಿ ಅಥವಾ ಅದುವೇ ಶಾಶ್ವತವೆಂದು ನಂಬಿ ಶ್ರೀಹರಿಯ ಅಥವಾ ಹರನ ನಾಮಸ್ಮರಣೆಯನ್ನೇ ಮರೆತಿರುವರು. ಇವರಿಗೆ ಎಂಥ ಭಕ್ತರೆನ್ನಬೇಕೆಂದು ಪ್ರಶ್ನಿಸಿದ್ದಾರೆ. ಶಿವಮಂತ್ರವು ಪರಮ ಶ್ರೇಷ್ಠ ಮತ್ತು ಪವಿತ್ರವಾದುದು ಅದನ್ನೇ ಮರೆತು ಚಿತ್ರಗೀತೆಗಳನ್ನು ಪಠಿಸುವರು ಎಂದಂತಾಗಿದೆ ಎಂದು ವ್ಯಂಗ್ಯ ನುಡಿದಿದ್ದಾರೆ.

ಮಡಿಯಾದುವೆಂದು ನದಿಯ ನೀರು, ಅಥವಾ ಸರೋವರದಲ್ಲಿ ಮುಳುಗಿ ಬಂದೆವೆಂದು ಹೇಳುವ ಬಂಡ ಭಕ್ತರನ್ನು, ಅಧರ್ಮಿಗಳನ್ನು ಕಪ್ಪೆ, ಮೀನು, ಕಿರುಮೀನು, ನೀರುಕೋಳಿ, ಆಮೆಗಳು ನೀರೊಳಗಿರುವುದಿಲ್ಲವೆ? ಅವುಗಳಿಗೂ ನಿನಗೂ ಏನು ವ್ಯತ್ಯಾಸ? ಆದುದರಿಂದ ನೀರಲ್ಲಿ ಮುಳುಗಿದರೇನು? ನಿಧಿಯ ಸಂಗ್ರಹಿಸಿದರೇನು? ಮನವೆಂಬ ಗುಡಿಯ ಕದವನ್ನು ತೆಗೆದರೇನು? ಕಪಟ-ಮೋಸ-ವಂಚನೆಗಳೆಂಬ ಅರಿಷಡ್ವರ್ಗದಂತಹ ಭಯಂಕರ ದುರ್ಗುಣಗಳನ್ನು ಅಂದರೆ ಮನದಲ್ಲಿರುವ ಕ್ಲೇಶ-ಕಲ್ಮಷಗಳನ್ನು ತೆಗೆದು ಹಾಕಿ, ತ್ಯಜಿಸಿ, ವಿಶ್ವದಾಭಿರಾಮನಾಗಿರುವ ಆ ಪರಮಾತ್ಮನನ್ನು ಭಕ್ತಿಯಿಂದ ಧ್ಯಾನಿಸಿ, ಪೂಜಿಸಿ, ಕೃತಾರ್ಥನಾಗೆಂದು ಹಿತೋಕ್ತಿಯಿದೆ. ಇಂಥ ಭಕ್ತಿಯನ್ನೇ ಮಾಡದೆಯೇ ಅನ್ನ, ನೀರು, ಆಹಾರ, ನಿದ್ರೆ, ಏಕಾದಶ, ದ್ವಾದಶ ವ್ರತಾಚರಣೆ, ಭಜನೆ, ಪ್ರಾರ್ಥನೆ, ಮಾಡುವುದು ಶಿಲಾಮೂರ್ತಿಯ ಮುಂದೆ ಅದು ಉಚಿತವೆ? ದುರ್ಗುಣ ತುಂಬಿದ ಈ ದೇಹವನ್ನು ಮೊದಲು ಶುಚಿಗೊಳಿಸಿಕೋ, ಎಣಿಸಿ ಎಣಿಸಿ, ಪೂಜೆ, ಜಪ, ತಪ, ಧ್ಯಾನಂಗಳನು ಭಕ್ತಿಯಿರದೇ ಮಾಡಿದಡೇನೇನೂ ಪ್ರಯೋಜನವಿಲ್ಲವೆಂದಿರುವರು. ಹೀಗೆ ಮಾಡುವುದು ಹೇಡಿಯ ಲಕ್ಷಣವೆಂದು ಹೇಳಿರುವುರಲ್ಲದೇ ಹಂದಿಯ ಮಕ್ಕಳು ನೀವೆಂದು ಕಟಕಿಯಾಡಿದ್ದಾರೆ. ಚಿತ್ತವಿಲ್ಲದ ಗುಡಿಯ ತಾ ಸುತ್ತಿ ಫಲವೇನು? ಎಂಬಂತೆ ಭಕ್ತಿಯಿಲ್ಲದವನ ಭಕ್ತಿಯಾಯಿತ್ತು ನೋಡಾ! ಎಂದಿದ್ದಾರೆ.

ಷೋಡಶ ಉಪಚಾರ, ಉಪವಾಸ ವ್ರತಗಳು ತೋರಿಕೆಗೆ ಬಹಿರಂಗವಾಗಿ ಮಾಡುವಂತಹವು, ಭಕ್ತಿಯಿರದ ಪ್ರಾರ್ಥನೆ, ಹಾಡುಗಳಾಗಲಿ ವ್ಯರ್ಥವೇ-ನಿಷ್ಕ್ರಿಯಾಗಿ, ನಿರ್ಮಲ ಮನದಿಂದ ಪರಮಾತ್ಮನನ್ನು ಧ್ಯಾನಿಸುವುದೇ ಪರಮ ಭಕ್ತನ ಕ್ರಿಯೆಯಾಗಬೇಕು. ಚೊಕ್ಕ ಚಿನ್ನದಂತೆ ನಿರ್ಮಲವಾದ ಮನಸ್ಸೆ ಮಡಿ ಆ ದೇವನಿಗೆ ಸಲ್ಲುತ್ತದೆಯೆಂಬ ಭಾವ ಇವರ ಪದ ಪದ್ಯಗಳಲ್ಲಿ ಹರಳುಗಟ್ಟಿದೆ. ಇಂಥ ಪವಿತ್ರಾತ್ಮರು, ಸದ್ಭಕ್ತರು ಈ "ಕಲಿಯುಗದಲ್ಲಿ ಧರ್ಮದ ನಡೆ ಕೋಟಿಗೊಬ್ಬಗುಂಟು" ಎಂದು ಹೇಳಿದ್ದಾರೆ. ದೇವ ಪೂಜೆಯೆಂದರೇನೆಂಬುದನರಿತು ಪೂಜಿಸಬೇಕು. ಇಲ್ಲದಿರೆ ಇದೊಂದು ನನ್ನ ಕರ್ಮ-ಕೆಲಸವೆಂದು ಬಗೆದು ಮಾಡಿದರೆ ನಿತ್ಯವೂ ಪೂಜೆ ಮಾಡುವ ಪೂಜಾರಿ, ಅರ್ಚಕನ ತರಹವಾಗುತ್ತದೆಯೆಂದು ಕೊನೆಯ ಪದದಲ್ಲಿ ತಿಳಿಯಪಡಿಸಿದ್ದಾರೆ.

ವೇಮನರಿಗಿಂತಲೂ ಪೂರ್ವದಲ್ಲಿದ್ದ ಅಲ್ಲಮರು ಪ್ರಖರ ವಿಚಾರವಾದಿಗಳು, ಅವರೊಬ್ಬ ವೈರಾಗ್ಯದ ನಿಧಿ, ಚಕ್ರವರ್ತಿ, ಸರ್ವಸಂಗ-ಪರಿತ್ಯಾಗಿಯಾಗಿ ಲೋಕ ಸಂಚಾರಗೈಯ್ಯುತ್ತ ಕಲ್ಯಾಣದತ್ತ ಬಂದು ಅನುಭವ ಮಂಟಪದ ಪೀಠಾಧಿಪತಿ-ಯಾದ್ದುದು ಇತಿಹಾಸ. ಅವರು ಯೋಗ ಸಿದ್ಧಿಯಿಂದ ವಿಶಿಷ್ಟನಾಗಿ ಕಾಣುತ್ತಾರೆ. ವೀರಶೈವ ನಿರಂಜನ ಜಂಗಮ ತತ್ತ್ವಕ್ಕೆ ಪ್ರಭುವಿನ ಜೀವನವೇ ಆದರ್ಶ. ಆಗಲೂ

ಅವರಲ್ಲಿದ್ದ ಮುಖ್ಯ ಉದ್ದೇಶ ದೀನ ಸಾಧನೆಯಲ್ಲಿ ತೊಡಗಿಸುವ ಕಾರ್ಯವನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಬೋಧಿಸಿದ ಯೋಗ ಗುರುವಾಗಿ ಅವತರಿಸಿದವರು. ಅವರು ಸಾಧಕ ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಲೋಕ ಸಂಚಾರಿಯಾದ ಅಲ್ಲಮಪ್ರಭುದೇವರಿಂದ ಉಪಕೃತರಾದವರು ಹಲವಾರು ಜನ. ಅವರ ಚರಿತಾಮೃತದಲ್ಲಿ ಹೇಳಿರುವಂತೆ – ಗೋರಕ್ಷ, ಗೊಗ್ಗಯ್ಯ, ಸಿದ್ಧರಾಮ, ಮುಕ್ತಾಯಕ್ಕ, ಮುಂತಾದವರನ್ನು ಪ್ರಮುಖವಾಗಿ ಗಮನಿಸಲಾಗಿದೆ. ಅವರು ಎರಡು ಎಂಭತ್ತು ಕೋಟಿ ವಚನಗಳನ್ನು ರಚಿಸಿದ್ದುದನ್ನು ತಮ್ಮದೊಂದು ವಚನದಲ್ಲಿಯೇ ಹೇಳಿದ್ದಾರೆ. ಆದರೆ ನಮಗೆ ದೊರೆತು ಪ್ರಕಟವಾದವುಗಳು ಕೇವಲ ಸಾವಿರಾರು ವಚನಗಳು ಮಾತ್ರ. ಅವು ಕಳೆದು ಹೋದ ಕಥೆ ರೋಮಾಂಚನವನ್ನುಂಟು ಮಾಡುವಂಥದ್ದು! ಅದೇನೇ ಇರಲಿ ಅಲ್ಲಮರು ಬೆಡಗಿನ ವಚನಕಾರರು. ಗೂಢಾರ್ಥ–ದಿಂದೊಡಗೂಡಿದವುಗಳಾದುದರಿಂದ ಶ್ರೀಸಾಮಾನ್ಯನಿಗೆ ಅರ್ಥವಾಗುವುದು ಸುಲಭ ಸಾಧ್ಯವಿಲ್ಲ. ಆದರೆ ಅವರ ಕೆಲವು ವಚನಗಳನ್ನಾಯ್ದು–ಕೊಂಡು ಭಕ್ತಿಯಿಲ್ಲದೆಯೇ ಮೋಕ್ಷ ದೊರಕುವುದೇ ಆತ್ಮ ಎಂಬೋಕ್ತಿಯಂತೆ, ಭಕ್ತಿಯ ಆಯಾಮಗಳನ್ನು ಅಲ್ಲಮರು ಕೊಟ್ಟ ಬಗೆಯನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ. ಅಲ್ಲಮರದು ಭಾವುಕವಲ್ಲದ ವೈಚಾರಿಕ ದೃಷ್ಟಿ, ಧಾರ್ಮಿಕಾಚರಣೆಗಳು ವಿಚಾರ ಶೀಲತೆಯಿಂದ ಕೂಡಿರಬೇಕೆಂಬುದು ಆಗಿದೆ. ಆಚಾರ–ವಿಚಾರಗಳೇ ಶರಣ ಧರ್ಮದ ಜೀವ–ಜೀವಾಳ ಮತ್ತು ತಳಪಾಯ. ಭಕ್ತಿಯಿದ್ದರೇನೇ ಧರ್ಮದ ಪಾಲನೆ ಮಾಡಲು ಸಾಧ್ಯ. ಭಕ್ತಿ ಬೆರೆತ ಧರ್ಮವೇ ಮಾನವ ಧರ್ಮ!

ಅಲ್ಲಮರು ಅದನ್ನು ಇನ್ನೂ ಗಟ್ಟಿಗೊಳಿಸಿ, ಅದರ ಮೇಲೂ ವಿಚಾರದ ಸೌಧವನ್ನು ನಿರ್ಮಿಸಿದವನು. ಇದರಿಂದ ವೀರಶೈವ ಧರ್ಮವು ಹೊಸ ಆಯಾಮವನ್ನು ಪಡೆಯಿತೆಂದು ಹೇಳಿದ ಡಾ. ಎಂ.ಎಂ.ಕಲಬುರ್ಗಿ ಅವರ ಮಾತು ಸಮಯೋಚಿತವಾದುದು. ಷಟ್‌ಸ್ಥಲಗಳನ್ನಾಗಿ ಮಾಡಿ ವಚನಗಳನ್ನು ವಿಂಗಡಿಸಿದ ಕ್ರಮ ಡಾ. ಬಿ.ವ್ಹಿ.ಮಲ್ಲಾಪುರ ಅವರ ಸಂಪಾದನೆ ಅಚ್ಚುಕಟ್ಟಾಗಿದೆ. (ಸ.ವ.ಸಂ.–2 ರಲ್ಲಿ ನೋಡಬಹುದು). ಇದರಲ್ಲಿ 1939 ವಚನಗಳಿವೆ. ಈ ಸಂಪುಟವು ನಮಗೆಲ್ಲ ಅಲ್ಲಮರ ಚರಿತ್ರೆ, ಸಾಧನೆ–ಸಿದ್ಧಿಗಳ ಕೈಗನ್ನಡಿಯಾಗಿದೆಯೆಂದೇ ಹೇಳಬೇಕಾಗುತ್ತದೆ. ಅವರಾದರೂ ವಚನಗಳ ಭಾವಾರ್ಥ ಅಥವಾ ಮಾಡಿಲ್ಲವಾದರೂ ಭಕ್ತ ಸ್ಥಲ, ಮಾಹೇಶ್ವರ ಸ್ಥಲ, ಪ್ರಸಾದಿ ಸ್ಥಲ, ಪ್ರಾಣಲಿಂಗಿ ಸ್ಥಲ, ಶರಣ ಸ್ಥಲ, ಐಕ್ಯ ಸ್ಥಲ ಎಂಬುದಾಗಿ ಈ ಆರು ಸ್ಥಲಗಳಲ್ಲಿ ಅವರ ವಚನಗಳನ್ನು ವಿಂಗಡಿಸಿ ಪ್ರಕಟಿಸಿದ ಬಗೆ ಓದುಗ ಪ್ರಿಯರಿಗೆ ಸುಲಭವಾಗಿದೆ.

ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್‌ಸ್ಥಲವೇ ಆತ್ಮ ಎಂಬ ತ್ರಿಕೋನ ಬುನಾದಿಯ ಮೇಲೆ ವೀರಶೈವ ಧರ್ಮ ಸೌಧ ನಿಂತಿರುವುದು. ಅಂಗ

ಗುಣಗಳನ್ನೆಲ್ಲಾ ಕಳೆದುಕೊಂಡು ತಾನೇ ಶಿವನಾಗುವ ತತ್ತ್ವ ಲಿಂಗಾಯತ ಧರ್ಮದಲ್ಲಿದೆ. ಶರಣರದು ಭಕ್ತಿ ಮಾರ್ಗ. ಇಂತಹ ಭಕ್ತಿ ಮಾರ್ಗದಲ್ಲಿ ನಡೆಯುವ ಶರಣರು ಮೊದಲಿಗೆ ತನ್ನನ್ನು ತಾನು ಚೈತನ್ಯವನ್ನು ಹುಡುಕುತ್ತಾ, ತನ್ನಲ್ಲಿ ಆ ಚೈತನ್ಯದ ಸೆಲೆಯ ಸ್ಥಿತಿ. ಅಥವಾ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಅದುವೇ ಪಿಂಡಜ್ಞಾನ ಸ್ಥಲವಾಗಿದೆ. ಅಲ್ಲಮರು ಕೊಟ್ಟಿರುವ ಪ್ರಾರಂಭಿಕ ವಚನಗಳೇ ಸುಮಾರು ನೂರರ ಮೇಲ್ಪಟ್ಟಿದ್ದು ಮಾನವ–ಶರಣನಾಗುವ ಬಗೆಯನ್ನು ತಿಳಿಸುವಲ್ಲಿ ಯಶಸ್ವಿಯಾಗಿವೆ. ಅವು ಮಾನವನಿಗೆ ಜಾಗೃತಗೊಳಿಸುವ ನುಡಿ ತೋರಣವಾಗಿವೆ. ಶರಣನು ಜೀವದೇಹಿಯಾದುದು ಶಿವನ ಕೃಪೆಯಿಂದ ಜೀವನೇ ಪರಮಾತ್ಮನಾಗುವ ಶಕ್ತಿ–ಸಾಮರ್ಥ್ಯವಿದೆಯೆಂದು ಬೋಧಿಸಿದ ನುಡಿ ಕಿಡಿಗಳಿವೆ.

**ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ**
**ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಚ ನಿಶ್ಶಬ್ದದಂತೆ**
**ಗುಹೇಶ್ವರಾ ನಿಮ್ಮ ಶರಣ ಸಂಬಂಧ**

ಎಂಬ ಮೊದಲ ವಚನವೇ ಮಾನವನಿಗೆ ಎಚ್ಚರಿಕೆಯ ಗಂಟೆಯಾಗಿದೆ. ತಾತ್ಪರ್ಯ: ಶಿಲೆಯೊಳಗೆ ಅಗ್ನಿಯದೆ. ಜಲದೊಳಗೆ ಪ್ರತಿಬಿಂಬ, ಬೀಜದೊಳಗೆ ವೃಕ್ಷವಿದೆ. ಆದರಿವು ಅದೃಶ್ಯ, ಅಲಿಪ್ತ, ಅವ್ಯಕ್ತ, ಅಭೇದ್ಯವಾದುದಾಗಿವೆ. ಹಾಗೆಯೇ ಶರಣನಲ್ಲಿ ಸಕಲ ಜೀವ ಜಂತುಗಳಲ್ಲಿ ಪರಶಿವನು ನೆಲೆಸಿದ್ದಾನೆ. ಅವನು ಎಲ್ಲದರ ಆತ್ಮ. ಅವನು ಕಾಣಲಾರನು. ದೇಹದೊಳಗಿರುವನು. ಚೇತನಾ ಶಕ್ತಿ ನೀಡುವ ಪರಮ ಪವಿತ್ರಾತ್ಮನವನು. ಅವನನ್ನು ಹುಡುಕಲು ಹೋದರೆ ಸಿಗಲಾರನು. ಅವ್ಯಕ್ತನು, ಅಭೇದ್ಯನು, ಅಷ್ಟೇ ಏಕೆ; ಅವನನ್ನು–ಅವನ ನಿಲುವನ್ನು ಭೇದಿಸುವ ಶಕ್ತಿ ಯಾವ ಶಸ್ತ್ರಗಳಿಗೂ, ಯಾವ ಶಬ್ದಗಳಿಗೂ ಇಲ್ಲ. ಅವನು ಮನ, ಬುದ್ಧಿಗಳನ್ನು ಮೀರಿದ ಪ್ರಶಾಂತ ತತ್ತ್ವ! ಅಂದರೆ ಶಿಲೆಯಲ್ಲಿ ಅಡಗಿದ ಅಗ್ನಿಯಂತೆ, ಹಾಗೆಯೇ ಮಹತ್ ಪಿಂಡನಾದ ಪರಮಾತ್ಮನು ಜಡ ಜಗತ್ತಿನಲ್ಲಿ ಗೂಢವಾಗಿ ನೆಲೆಸಿದ್ದಾನೆ. ಅಂತಹ ಆತ್ಮ ಪರಮಾತ್ಮನನ್ನು ಕಾಣುವುದು ಶರಣನಾದವನ ಕರ್ತವ್ಯವೆಂದೂ ಭಕ್ತಿ–ಧರ್ಮ–ನೀತಿ ಕ್ರಿಯಾಚರತೆಯನ್ನು ಪರಿಶುದ್ಧ ಮನದಿಂದ ಮಾಡಿದಾಗ ಸಿಗುವ ಅನುಪಮ ವಸ್ತು ಎಂದಿದ್ದಾರೆ. ಅದು ಹೇಗೆಂದರೆ –

**ಕಲ್ಲೊಳಗಣ ಕಿಚ್ಚು ಉರಿಯದಂತೆ**
**ಬೀಜದೊಳಗಣ ವೃಕ್ಷ ಉಲಿಯದಂತೆ**
**ತೋರಲಿಲ್ಲಾರಿಗೆಯು, ಬೀರಲಿಲ್ಲಾರಿಗೆಯು**
**ಗುಹೇಶ್ವರ ನಿಂದ ನಿಲವ ಅನುಬಾವಿಸುಖಿ ಬಲ್ಲ**
**ಜಲದೊಳಗಿರ್ದ ಕಿಚ್ಚು ಜಲವ ಸುಡದೆ**
**ಜಲವು ತಾನಾಗಿಯೇ ಇದ್ದಿತ್ತು ನೋಡಾ!**

**ನೆಲದ ಮರೆಯ ನಿಧಾನದಂತೆ**
**ಮುಗಿಲ ಮರೆಯಲಡಗಿದ ಮಿಂಚಿನಂತೆ,**
**ಬಯಲ ಮರೆಯಲಡಗಿದ ಮರೀಚಿಕೆಯಂತೆ**
**ಕಂಗಳ ಮರೆಯಲಡಗಿದ ಬೆಳಗಿನಂತೆ**
**ಗುಹೇಶ್ವರಾ ನಿಮ್ಮ ನಿಲುವು**

**ತಾತ್ಪರ್ಯ:** ಕಲ್ಲೊಳಗೆ ಕಿಚ್ಚಿದೆ ಆದರೆ ಅದು ಉರಿಯಲಾರದು. ಬೀಜದೊಳಗೆ ವೃಕ್ಷವಿದೆ ಆದರೆ ಅದು ಸಪ್ಪಳ ಮಾಡಲಾರದು. ಹಾಗೆಯೇ ಜಡವಾದ ವಿಶ್ವದಲ್ಲಿ, ದೇಹದಲ್ಲಿ ಚಿದ್ರೂಪ ದೇವರಿದ್ದಾನೆ, ವ್ಯಷ್ಟಿ ಜೀವನಲ್ಲಿ ಮಹದ್ರೂಪ ಬ್ರಹ್ಮನಿದ್ದಾನೆ. ಆದರೆ, ಅವನು ಯಾರಿಗೂ ತೋರಲಾರನು. ಅಷ್ಟು ಸೂಕ್ಷ್ಮ ಇರವು ಅವನದು. ಅವನ ನಿಲುವು. ಅವನನ್ನು ಅರಿತವನು ಒಬ್ಬನೇ ಒಬ್ಬನೆಂದರೆ ಆತ ತನ್ನ ತಾನರಿತ ವಿಮಲ ಜ್ಞಾನಿ, ಆತ್ಮರಾಮನಾದ ಅನುಭಾವ ಸುಖಿ, ಆತನು ಭಕ್ತಿ–ಜ್ಞಾನ–ಶ್ರದ್ಧೆಯಿಂದ ನಡೆದುಕೊಂಡು ದರ್ಶನಿಸಿಕೊಂಡಿದಾನೆ. ಧರ್ಮ–ಭಕ್ತಿ–ಶ್ರದ್ಧೆ–ನಿಷ್ಠೆಗಳೇ ಪರಮಾತ್ಮನ ದಿವ್ಯ ದರ್ಶನಕ್ಕೆ ಬೇಕಾಗಿರುವ ಪರಮ ಪವಿತ್ರ ಸೂತ್ರಗಳು ಎಂಬುದರ ಅರಿವು ಶರಣಜೀವಿಯಲ್ಲಿರಬೇಕು.

ಜಲದೊಳಗೆ ಕಿಚ್ಚಿದೆಯೆಂದರೂ ಅದು ಜಲವನ್ನು ಸುಡುವುದಿಲ್ಲ. ನಮ್ಮ ದೇಹದಲ್ಲಿ ಅಗ್ನಿಯಿದೆಯೆಂದರೂ ದೇಹವನ್ನು ಸುಡಲಾರದು. ಆದರೂ ಅದರ ಅಗತ್ಯವಿದೆ. ಜಲದ ತದ್ರೂಪವಾಗಿ ನೆಲೆಸಿದೆ. ದೇಹದ ತದ್ರೂಪವಾಗಿ ಅಡಗಿದೆ ಎಂದರ್ಥ. ಅದು ನೆಲದ ಮರೆಯಲ್ಲಿ ಅಡಗಿದ ಸಂಪತ್ತಿನಂತೆ ಮೋಡದ ಮರೆಯಲ್ಲಡಗಿದ ಮಿಂಚಿನಂತೆ, ಬಯಲಿನ ಮರೆಯಲ್ಲಿ ಅಡಗಿದ ಬಿಸಿಲ್ಗುದುರೆಯಂತೆ ಕಣ್ಣಿನ ಮರೆಯಲ್ಲಿ ಅಡಗಿದ ರೂಪವು ಪ್ರಕಾಶ (ಬೆಳಕು) ಅಡಗಿದಂತೆಯೇ ಪರಮಾತ್ಮನು ಬಾಹ್ಯ ಆಂತರಿಕ ಯಾವ ಇಂದ್ರಿಯಗಳಿಗೂ ಕಾಣದಂತೆ ಎಲ್ಲಿಲ್ಲಿಯೂ ಅಡಗಿದ್ದಾನೆ. ಅಂತಹ ಪರಮಾತ್ಮನ ದಿವ್ಯ ದರ್ಶನಕ್ಕಾಗಿ ಬೆಂಬಲಿಸುವುದಾದರೆ ಮೊದಲು ಧರ್ಮ ಮಾರ್ಗ ಅನುಸರಿಸಬೇಕು, ಭಕ್ತಿ–ಶ್ರದ್ಧೆಯ ಮಾರ್ಗದೊಳಿರಿಸಬೇಕು. ಆಚರಣೆ ನಿಷ್ಠೆಯಿಂದ ಗಟ್ಟಿಗೊಂಡಿರಬೇಕು. ಅಂತಹವರಿಗೆ ಆತನ ದಿವ್ಯ ದರ್ಶನವಾಗಲು ಸಾಧ್ಯವಾದೀತು ಎಂಬ ಬೋಧನೆ ಅಲ್ಲಮರ ನಿಲುಮೆಯಾಗಿತ್ತು ಎಂದು ತಿಳಿಯಬಹುದಾಗಿದೆ.

**ಪೃಥ್ವಿಗೆ ಹುಟ್ಟಿದ ಶಿಲೆ, ಕಲುಕುಟಿಕಂಗೆ ಹುಟ್ಟಿದ ಮೂರುತಿ**
**ಮಂತ್ರಕ್ಕೆ ಲಿಂಗವಾಯಿತ್ತಲ್ಲಾ!**
**ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು ಕೈವಿಡಿವ**
**ಅಚ್ಚ ವ್ರತಗೇಡಿಗಳನೇನೆಂಬೆ ಗುಹೇಶ್ವರಾ!**

**ಕಲ್ಲ ದೇವರೆಂದು ಪೂಜಿಸುವರು–ಆಗದು ಕಾಣಿರೋ**
**ಅಗಡಿಗರಾದಿರಲ್ಲಾ!**
**ಮುಂದೆ ಹುಟ್ಟುವ ಕೂಸಿಂಗೆ**
**ಇದು ಮೊಲೆಯ ಕೊಡುವಂತೆ ಗುಹೇಶ್ವರಾ**
**ದೇಹದೊಳಗೆ ದೇವಾಲಯವಿದ್ದು ಮತ್ತೆ ದೇಗುಲವೇಕಯ್ಯಾ?**

**ಒಡಲುವಿಡಿದು ಪಾಷಾಣಕ್ಕೆ ಹಂಗಿಗರಾದಿರಲ್ಲಾ**
**ಅಂಗಸಂಗಿಗಳೆಲ್ಲ ಮಹಾ ಘನವನರಿಯದೆ ನಿಂದಿರೊ**
**ಹುಸಿಯನೆ ಕೊಯ್ದು ಹುಸಿಯನೇ ಪೂಜಿಸಿ**
**ಗಸಣಿಗೊಳಗಾದರು ಗುಹೇಶ್ವರಾ।**

**ತಾತ್ಪರ್ಯ:** ಶಿಲೆಯಾಗುವುದು ಪೃಥ್ವಿಯಿಂದ, ಆ ಶಿಲೆಯು (ಲಿಂಗ) ಮೂರ್ತಿಯಾಗುವುದು ಕಲ್ಲುಕುಟಿಕನೆಂಬ ಶಿಲ್ಪಿಯಿಂದ ಆ ಶಿಲಾಮೂರುತಿಯು ಲಿಂಗವಾಗುವುದು ಗುರುವಿನ ಮಂತ್ರ ಸಂಸ್ಕಾರದ ಬಲದಿಂದ. ಹೀಗೆ ಈ ಮೂವರಿಂದ ರೂಪುಗೊಂಡ ಲಿಂಗವನ್ನು ಸ್ವೀಕರಿಸಿ ಬರಿ ಯಾಂತ್ರಿಕವಾಗಿ ಅರ್ಚಿಸುವವನು ನಿಜವಾದ ಲಿಂಗ ವ್ರತಿಯಲ್ಲ. ಲಿಂಗ ಧರಿಸುವುದು ಬರಿಯ ತೋರಿಕೆಗಲ್ಲ! ಸಾಧನೆಗಾಗಿ ಎಂಬುದನ್ನು ಮೊದಲು ಅರಿತುಕೊಂಡು ಭಕ್ತಿ–ಶ್ರದ್ಧೆಯಿಂದ ಆಚರಿಸುವಂತಾಗ ಬೇಕೆಂದಿದ್ದಾರೆ.

ಕಲ್ಲನ್ನೇ ದೇವರೆಂದು ಅಷ್ಟೋಪಚಾರಗಳಿಂದ ಪೂಜಿಸುತ್ತಾರೆ. ಇದರಿಂದ ಲಿಂಗಾಂಗ ಸಾಮರಸ್ಯ ಸಾಧ್ಯವಾಗದು. ಅಂಥವರು ಸಾಧನೆಯ ಸೋಪಾನಗಳನ್ನೆಂದೂ ಅರಿಯಲಾರರು, ಏರಲಾರರು. ಅದನ್ನರಿಯದೇ ಹಾಳಾಗುತ್ತಾರೆ. ಮುಂದೆ ಹುಟ್ಟುವ ಕೂಸಿಗೆ ಇಂದು ಹಾಲು ಕುಡಿಸುವ ಪ್ರಯತ್ನವು ಎಷ್ಟು ಅರ್ಥಹೀನವೋ ಅಷ್ಟು ಅರ್ಥಹೀನ ಅವರ ಪ್ರಯತ್ನ ಎಂದಿದ್ದಾರೆ. ಅಂಥವರ ಪೂಜಾಫಲವೆಲ್ಲವೂ ವ್ಯರ್ಥವೆಂದಿದ್ದಾರೆ ಅಲ್ಲಮರು, ಆದುದರಿಂದ ದೇಹದೊಳಗಿರುವ ಪ್ರಾಣವೇ, ಪ್ರಾಣಲಿಂಗವೇ ದೇವರು ಆಗಿರುವಾಗ ಬೇರೆ ದೇವಾಲಯದ ಹುಡುಕಾಟವೇಕೆ? ಎಂದಿದ್ದಾರೆ.

ಒಡಲುವಿಡಿದು ಅಂದರೆ ದೇಹದಲ್ಲಿ ಆಸಕ್ತರಾದ ಜನ ದೇಹ ಸುಖಕ್ಕಾಗಿ ಜಡವಾದ ಶಿಲಾಲಿಂಗವನ್ನು ಪೂಜಿಸುತ್ತಾರೆ. ಪದಾರ್ಥಗಳನ್ನು ಅರ್ಪಿಸಿ ಪ್ರಸಾದವೆಂದು ತಮ್ಮ ಒಡಲಿಗಾಗಿ ಭಂಜಿಸುತ್ತಾರೆ. ಇದರ ಅರ್ಥ ಅಂಗದ ಮೇಲೆ ಲಿಂಗವಿರುವುದು ಅಂಗ ಭೋಗಕ್ಕಾಗಿಯೇ ಎಂದು ಭಾವಿಸಬಹುದು. ಅಂಗ ಸಂಗಿ–ಭೋಗ

ಸಂಗಿಗಳಾಗಿರುವ ಇಂಥವರಿಗೆ ಲಿಂಗಾಂಗ ಸಾಮರಸ್ಯದ ಅರಿವು ಅದ್ಹೇಗಾದೀತು? ಹುಸಿ ಭಕ್ತಿಯಿಂದ ಪೂಜಿಸುತ್ತ ಬಂದು ಸಂಸಾರದ ಜಂಜಾಟದೊಳಗೆ ಮುಳುಗಿರುವರು ಎಂದು ಟೀಕು ನುಡಿದಿದ್ದಾರೆ. ಜೀವವನ್ನು ಬಂಧನಕ್ಕೆ ಒಳಪಡಿಸುವ ವಿಶೇಷ ಶಕ್ತಿಯೇ ಮಾಯೆ. ಮಾಯಿಕ ದೇಹದೊಳಗಿದ್ದು ಭೌತಿಕ ಪ್ರಪಂಚದಲ್ಲೆಲ್ಲ ವ್ಯವಹರಿಸುವ ಜನ ಅಸಂಖ್ಯ ಅವರೆಲ್ಲ ಮಾಯೆಗೊಳಗಾದವರು. ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ! ಎಂದಂತೆ ಬಾಳುತ್ತಲಿರುವರು. ತಮ್ಮ ಮೂಲ ಸ್ವರೂಪವನ್ನೇ ಮರೆತಿರುವ ಗುರು, ಲಿಂಗ ಹಾಗೂ ಭಕ್ತಿಗಳನ್ನು ಕುರಿತು ಮನಬಂದಂತೆ ಜರಿದು ಮಾತನಾಡುತ್ತಾರೆ. ಭಕ್ತ ಪಥಗಾಮಿಯಾದ ಸಾಧಕ ಅವರ ಮಾತುಗಳಿಗೆ ಬೆಲೆಯಿತ್ತು ವಿಚಲಿತನಾಗಬಾರದು. ಏಕೆಂದರೆ ಅವರು ಅರಿತು ನುಡಿದವರಲ್ಲ, ಸತ್ಯವನ್ನು ಅರಿಯದ ಜಡಭಾವಿ ಜೀವಗಳು ಎನ್ನುತ್ತಾರೆ. ಅಲ್ಲಮರು.

ಆ ಮಾಯೆಗೆ ಪರಮ ಆಧಾರವಾಗಿರುವವನೇ ಪರಮಾತ್ಮನವನು ಚಿರಂತನ ಸತ್ಯ. ಆತ ಬರಿಯ ಬೆಳಕಿನ ಬಯಲು, ಆತನನ್ನು ಅರಿಯಲು ಭಕ್ತನಾದವನು ಜಾಗರೂಕನಾಗಿರಬೇಕು. ಅದ ಕಾಣಬೇಕಾದರೆ ಭಕ್ತಿ ಪಥವೇ ಮುಖ್ಯ ಮಾರ್ಗವೆಂದಿದ್ದಾರೆ. ಅದಕ್ಕೊಂದು ದೃಷ್ಟಾಂತ ಕೊಟ್ಟು ಹೇಳಿದ ಅಲ್ಲಮರ ವಚನವಿಂತಿದೆ–

**ಎಣ್ಣೆ ಬೇರೆ ಬತ್ತಿ ಬೇರೆ; ಎರಡೂಕೂಡಿ ಸೊಡರಾಯಿತ್ತು**
**ಪುಣ್ಯ ಬೇರೆ, ಪಾಪ ಬೇರೆ; ಎರಡೂ ಕೂಡಿ ಒಡಲಾಯಿತ್ತು**
**ಮಿಗಬಾರದು, ಮಿಗಬಾರದು;**
**ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು;**
**ಕಾಯ ಗುಣವಳಿದು ಮಾಯಾ ಜ್ಯೋತಿ ವಾಯುವ ಕೂಡದಮುನ್ನ–**
**ಭಕ್ತಿಯ ಮಾಡಬಲ್ಲಡಾತನೆ ದೇವ, ಗುಹೇಶ್ವರಾ**

ಬೇರೆ ಬೇರೆ ಎಣ್ಣೆ ಬತ್ತಿಗಳು ಕೂಡಿದಾಗಲೇ ಮಾತ್ರ ಜ್ಯೋತಿ ಸೊಡರು ಕಾಣಬರುತ್ತದೆ. ಹಾಗೆಯೇ ಸುಕೃತ–ದುಷ್ಕೃತಗಳ ಸಂಯೋಜನೆಯಿಂದ ಒಡಲು ರೂಪುಗೊಳ್ಳುತ್ತದೆ. ಈ ಒಡಲುವಿಡಿದ ಜೀವಾತ್ಮ ತನ್ನ ಭೌತ ಜೀವನವನ್ನು ಪ್ರಾರಂಭಿಸುತ್ತಾನೆ. ಸುಖ–ದುಃಖಗಳನ್ನು ಅನುಭವಿಸುತ್ತಾನೆ. ಬದುಕಿನ ಆಸೆ–ಆಮಿಷಗಳನ್ನು ಆತ ಅಷ್ಟು ಸುಲಭವಾಗಿ ಮೀರಲಾರ. ಬದುಕಿನ ಕ್ಷಣ–ಕ್ಷಣವೂ ಒಡಲಿನ ಹಸಿವು, ತೃಷೆ ಮುಂತಾದ ಬೇಕು–ಬೇಡಿಕೆ–ಇಚ್ಛೆಗಳನ್ನು ಪೂರೈಸಿಕೊಳ್ಳುವಲ್ಲಿ ವ್ಯಕ್ತವಾಗುತ್ತಾನೆ. ವಯಸ್ಸು ಸರಿದುದೇ ಅವನಿಗೆ ತಿಳಿಯದು. ಒಡಲಿನ ಶಕ್ತಿ–ಸಾಮರ್ಥ್ಯಗಳು ಕುಗ್ಗಿ ಅದು ಪಂಚಭೂತಗಳಲ್ಲಿ ಬೆರೆತು ಹೋಗುವ ಮುಂಚೆ

ಮಾಯಾಧೀನವಾದ ಜ್ಯೋತಿಯಂತಿರುವ ಜೀವನು ಎಚ್ಚರಾಗಬೇಕು. ಭಕ್ತಿಯ ಪಥವನ್ನು ತುಳಿಯಬೇಕು. ದೈಹಿಕ ಆಕರ್ಷಣೆಗಳನ್ನು ಮೀರಿ ಶಿವನತ್ತ ಪ್ರೀತಿಯ ಪ್ರವಾಹ ಹರಿಸಬೇಕು. ಅಂಥ ಸಾಧಕಜೀವಿ ಮಾತ್ರ ದೇವನಾಗುವ ಸಾಧ್ಯತೆಯಿದೆ ಎಂದು ಅರುಹಿದ್ದಾರೆ.

**'ವೇಮನರು ಹೇಳುತ್ತಾರೆ'** ಸಾಧನೆಯೆಂದರೆ ದೇಹವನ್ನು ಸಾಧುಗೊಳಿಸುವುದು. ಅವರ ಪದಗಳಲ್ಲಿಂತಿದೆ–

**ಪ್ರಣವನರಿಯದನಕ ಭಕ್ತನಾಗಲಾರ**
**ಜ್ಯೋತಿ ಕಾಣದನಕ ಜೋಗಿಯಲ್ಲ**
**ನಿತ್ಯವನರಿಯದನಕ ನಿರ್ವಾಣಿಯಲ್ಲ**
**ವಿಶ್ವದಾಭಿರಾಮ ಕೇಳು ವೇಮ.**

**ಕಾಯ ಪಣತೆ ಮಾಡಿ, ಗುಣವ ಬತ್ತಿ ಮಾಡಿ**
**ತಮ್ಮ ಕುಲವ ತೈಲ ಮಾಡಿ,**
**ಮೂಲವೊಂದೇ ಜ್ಯೋತಿ ಮುಟ್ಟಿ ನೋಡಿದಾಗ**
**ವಿಶ್ವದಾಭಿರಾಮ ಕೇಳು ವೇಮ.**

**ಮಣ್ಣ ನಡಿಗೆ ಮಾಡಿ ಮಹಿಯ ಮೇಲೆ ಬಾಳ್ವ**
**ಭ್ರಷ್ಟ ಕುಂಬಾರನ ಬ್ರಹ್ಮನೆನಲು**
**ನೂಕಲು ನಿಲುವುದೇ? ನೀತಿಯ ಧರೆಯಲಿ**
**ವಿಶ್ವದಾಭಿರಾಮ ಕೇಳು ವೇಮ.**

**ಕಾಗೆ ಇರುವ ಗೂಡು ಕೋಗಿಲೆಗಾದಂತೆ;**
**ಭ್ರಮರದಿಂದ ಕೀಟಕವಹ ರೀತಿ,**
**ಕೇಳಿ ಸತ್ಯ ಮುಕ್ತಿ ಕೆಡುತಿಹ ನರನಲಾ!**
**ವಿಶ್ವದಾಭಿರಾಮ ಕೇಳು ವೇಮ.**

**ವಿಶ್ವ ತತ್ತ್ವವೆಲ್ಲಾ ವಿಶದವಾಗಿ ತಿಳಿದು**
**ಭಕ್ತಿ ಮೂಲವೆಲ್ಲ ಭದ್ರಪಡಿಸಿ**
**ರಕ್ಷಕತ್ತ್ವಾಂತು ರಾಜಯೋಗಿಯಾದ**
**ವಿಶ್ವದಾಭಿರಾಮ ಕೇಳು ವೇಮ.**

ಸಾಧಕನಾದವನು ಓಂಕಾರ ಮಂತ್ರದ ಮಹಿಮೆಯನ್ನರಿತಿರಬೇಕಲ್ಲದೇ ಓಂಕಾರನಾದವನ್ನು ಅನಾಹತದಲ್ಲಿ ಕೇಳತೊಡಗಿದಾಗ ಅವನನ್ನು ಭಕ್ತನೆನ್ನಬಹುದು. ಸಾಧನೆಯಿಂದ ಆಂತರ್ಯದಲ್ಲಿ ಜ್ಯೋತಿ ದರ್ಶನವಾದಾಗ ಯೋಗಿ ಎನ್ನಬಹುದು. ನಿತ್ಯವನ್ನರಿತಾಗ ನಿರ್ವಾಣ ಪದವಿ ಪಡೆಯಲು ಸಾಧ್ಯವೆಂದು ವೇಮನರ ಬೋಧನೆಯಾಗಿದೆ.

ದೇಹವನ್ನೇ ಒಂದು ಪ್ರಣತೆಯೆಂದು ಭಾವಿಸಿದರೆ, ತ್ರಿಗುಣಗಳನ್ನು ಬತ್ತಿಯನ್ನಾಗಿ ಮಾಡಿಕೊಂಡು ತಮ್ಮ ಕುಲದ ಕೆಲಸವೆಂದರೆ ಕರ್ಮ ಸಂಚಯವನ್ನು ಎಣ್ಣೆಯನ್ನಾಗಿಸಿಕೊಂಡು, ಈ ಭಕ್ತಿ ಜ್ಯೋತಿಯನ್ನು ಹೊತ್ತಿಸಿದರೆ, ಕರ್ಮದ ತೈಲವೂ ತೀರುತ್ತದೆ. ತ್ರಿಗುಣದ ಬತ್ತಿಯೂ ಉರಿದು ಹೋಗುತ್ತದೆ. ಕರ್ಮದೂರನಾಗಿ, ತ್ರಿಗುಣಾತೀತನಾಗಿ ಉಳಿಯುವುದೇ ಭಕ್ತಿ ಫಲವಾದ ಮುಕ್ತಿಯಾಗಿದೆ. ಭಕ್ತಿಯ ಸಾಧನೆಗೆ ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮ ಚರ್ಯೆಗಳೆಂಬ ಯಮ ನಿಯಮ ಸಾಧನೆಗಳೂ ಬೇಕು. ಅಂದಾಗ ಪರಿಪೂರ್ಣತೆಯನ್ನು ಹೊಂದಲು ಸಾಧ್ಯ.

ವೇಮನರು ಕೊಡುವ ದೃಷ್ಟಾಂತವೆಂದರೆ – ಈ ಪೃಥ್ವಿಯ ಮೇಲೆ ಮಣ್ಣ ಗಡಿಗೆಯ ಮಾಡಿ ಬಾಳುವ ಭ್ರಷ್ಟ ಕುಂಬಾರನನ್ನು ಬ್ರಹ್ಮನೆನಲು ಸಾಧ್ಯವೇ? ಅಂತಹ ಭ್ರಷ್ಟರನು ನೀತಿ ಬಾಹಿರರೆನಬಹುದು ಎಂದಿದ್ದಾರೆ. ಹಾಗೆಯೇ ಕಾಗೆಯೊಂದು ಕಷ್ಟಪಟ್ಟು ಗೂಡು ಕಟ್ಟುತ್ತದೆ. ಆದರೆ ಕಷ್ಟಪಡಲಾರದೆ ಕೋಗಿಲೆಯು ತನ್ನ ತತ್ತಿಗಳನ್ನಿಟ್ಟು ಹೋಗುತ್ತದೆ. ಕಾಗೆಯೇ ಅದರ ಪಾಲನೆ–ಪೋಷಣೆಯ ಭಾರ ಹೊರುತ್ತದೆ, ಅದೇ ರೀತಿ ಕೀಟವೂ ಏನೂ ಮಾಡದೇ ಬೆದರಿಕೊಂಡು ಇರುತ್ತದೆ. ಭ್ರಮರವೇ ಅದನ್ನು ದಿಟ್ಟಿಸಿ ನೋಡುತ್ತ ಅದನ್ನು ತನ್ನ ಹಾಗೆಯೇ ಮಾಡುತ್ತದೆ. ಇಂಥ ಮುಕ್ತಿಯ ದೃಷ್ಟಾಂತ ಕೇಳಿ ಮನುಷ್ಯನು, ತಾನೇನೂ ಮಾಡಬೇಕಿಲ್ಲವೆಂದು ತೆಪ್ಪಗಿದ್ದು, ಭಕ್ತಿಯ ಮಾರ್ಗದತ್ತ ಸಾಗಲಾರದೇ ಕೆಡುತ್ತಾನೆಂದು ವೇಮನ ಹೇಳಿದ್ದಾನೆ. ಭಕ್ತಿ ಮಾಡುವುದೆಂದರೆ ನಮ್ಮ ಹಿತಕ್ಕಲ್ಲವೇ?

ಆದುದರಿಂದ ಕೊನೆಯ ಪದದಲ್ಲಿ ವೇಮನರು ಹೇಳಿರುವುದೇನೆಂದರೆ ವಿಶ್ವ ತತ್ತ್ವವನ್ನು ವಿವರವಾಗಿ ತಿಳಿದು, ಭಕ್ತಿಯ ಮೂಲವಾದ ವಿನಮ್ರತೆ ಮತ್ತು ಸಮರ್ಪಿತ ಭಾವವನ್ನು ಹೊಂದಿ ವಿಧಿ ವಿಧಾನಗಳೆಲ್ಲವೂ ಈ ಜಗನ್ನಿಯಾಮಕನ ವಿದ್ಯೆಗಳೇ ಆಗಿವೆ. ಆದರೆ, ಅವನು ವಿಶ್ವದ ಕಣ್ಣಿಗೆ ಕಾಣಲಾರನು. ಅವನು ಅದ್ವಿತೀಯನು, ಅಪ್ರತಿಮನು, ಇಂದ್ರಿಯ ಗೋಚರನಲ್ಲ, ಮರೆಯಲ್ಲಿದ್ದು ಎಲ್ಲರನ್ನು ಎಲ್ಲವನ್ನು ಗೊಂಬೆಗಳಂತೆ ಆಡಿಸುವ ಸೂತ್ರಧಾರಿ ಅವನೇ ವಿಧಾತ ಎಂಬುದನ್ನು ಮರೆಯದಿಂತಿರಿರೆಂದು ಜಾಗೃತಗೊಳಿಸಿದ್ದಾನೆ. ಪರಮಾತ್ಮನು –

**ಬೊಂಬೆಯಾಟದವನು, ಬೊಂಬೆಯಾಡಿಸುವವನು**
**ಧರಣಿ ಜನರ ನೋಟದೆಲ್ಲೆ ಮೀರಿ,**
**ತಾನು ಮರೆಯೊಳಗಿದ್ದು ದೈವವಾಡಿಸುವನು.**

ಎಂದುದಾಗಿ ಪರಮಾತ್ಮನ ಇರವನ್ನು ಈ ಪದದ ಮೂಲಕ ಚಿತ್ರಿಸಿದ್ದಾರೆ. ಆದರೆ, ಆತ ತಿಳಿದವರಿಗೆ ಸಿಗುತ್ತಾನೆ. ತಿಳಿಯದವರಿಗೆ ಸಿಗಲಾರನಷ್ಟೇ!

ಅಲ್ಲಮರು ಹೇಳಿದ್ದುದು ಇದೇ ಅರ್ಥದಲ್ಲಿದ್ದರೂ ವಿಭಿನ್ನತೆಯಿಂ–ದೊಡಗೂಡಿದೆ. ಅವರದೊಂದು ವಚನದಲ್ಲಿ ಇಂತಿದೆ–

**ಪ್ರಣತೆ ಇದೆ, ಬತ್ತಿಯೂ ಇದೆ**
**ಜ್ಯೋತಿಯ ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೊ?**
**ಗುರುವಿದೆ, ಲಿಂಗವಿದೆ**
**ಶಿಷ್ಯನ ಸುಜ್ಞಾನವಾಗದನ್ನಕ್ಕರ ಭಕ್ತಿಯೆಲ್ಲಿಯದೊ?**
**'ಸೋಹಂ' ಎಂಬುದ ಕೇಳಿ, ದಾಸೋಹವ ಮಾಡದಿದ್ದಡೆ**
**ಅಲೆಗಳೆವೆ ಗುಹೇಶ್ವರಾ**

**ಅರುಣೋರಣಿಯಾನ್ ಮಹತೋಮಹೀಯಾನ್ ಎಂಬ ಶ್ರುತಿ ಹುಸಿ!**
**ಲಿಂಗವಿದ್ದ ಠಾವಿನಲ್ಲಿ ಪ್ರಳಯವುಂಟೆ?**
**ಭಕ್ತರ ಭಾವದಲ್ಲಿಪ್ಪನಲ್ಲದೆ**
**ಮತ್ತೆಲ್ಲಿಯೂ ಇಲ್ಲ ಗುಹೇಶ್ವರಾ**

**ತಾತ್ಪರ್ಯ:** ಪ್ರಣತೆ ಮತ್ತು ಬತ್ತಿ ಇದ್ದರಷ್ಟೇ ಸಾಲದು, ಜ್ಯೋತಿ ಹೊತ್ತಿಕೊಂಡು ಪ್ರಭೆ ಬೀರಬೇಕಾದರೆ ತೈಲ ಬೇಕು. ಹಾಗೆಯೇ ಗುರು ಲಿಂಗ ಇಷ್ಟೇ ಇದ್ದರೆ ಸಾಲದು, ಭಕ್ತಿಯೆಂಬ ಜ್ಯೋತಿಯಾಗಿ ಪ್ರಜ್ವಲಿಸಬೇಕಾದರೆ ಶಿಷ್ಯನಲ್ಲಿ ಸುಜ್ಞಾನೋದಯವಾಗಬೇಕು. ಗುರು ಮತ್ತು ಲಿಂಗಗಳು ಪರಶಿವನ ಸಾಕ್ಷಾತ್ ಅಭಿವ್ಯಕ್ತ ರೂಪಗಳು ಎಂಬ ಶ್ರದ್ಧಾನ್ವಿತವಾದ ಜ್ಞಾನವುಂಟಾಗಬೇಕು. ತಾನೇ ದೇವ ಎಂಬ **'ಸೋಹಂ'** ಪ್ರಜ್ಞೆ ಪಡೆದ ಅನುಭಾವಿಯ ಬಾಗಿಲ ಎದುರು ಬಂದುದ ಕೇಳಿ ಭಾವ ಉಕ್ಕಿ ಪಡೆದ ಅನುಭಾವಿಯ ಬಾಗಿಲ ಎದುರು ಬಂದುದ ಕೇಳಿ ಭಾವ ಉಕ್ಕಿ ಬರಮಾಡಿಕೊಂಡು ಶಿಷ್ಯನು ತನ್ನ ತನು–ಮನ–ಧನಗಳನ್ನಿತ್ತು ಸೇವೆ ಮಾಡಬೇಕು. ದಾಸೋಹವನ್ನು ಗೈಯಬೇಕು. ಅದುವೇ ಭಕ್ತಿಯೆಂಬ ಜ್ಯೋತಿ ಹೊತ್ತುಕೊಂಡುದುದರ – ಕುರುಹು, ಗುರುವಿನಿಂದ ಅನುಗ್ರಹೀತನಾಗಿ ಲಿಂಗವನ್ನು ಸ್ವೀಕರಿಸಿಯೂ ಭಕ್ತಿ–ದಾಸೋಹವ ಗೈಯದಿದ್ದರೆ ಭಕ್ತನಲ್ಲವೆಂದು ಅಲ್ಲಗಳೆದಿದ್ದಾರೆ ಅಲ್ಲಮರು.

ಪರಮಾತ್ಮನು ಅಣುವಿಗೆ ಅಣು, ಮಹತ್ತಿಗೆ ಮಹತ್ತು. ಅವನು ಅತ್ಯಂತ ಸೂಕ್ಷ್ಮ ಮತ್ತು ಅತ್ಯಂತ ಮಹಾನ್ ಎಂದಂತೆ. ಅಣುಗಳ ಮಧ್ಯದಲ್ಲಿಯೂ ಅವನ ವಾಸ. ಅನಂತವಾಗಿ ಹರಡಿದೆ. ವಿಶ್ವದಲ್ಲೆಲ್ಲ ಆತನ ನಡೆಯಿದೆ. ಭಕ್ತನ ದೃಷ್ಟಿಯಲ್ಲಿ ಎಲ್ಲಿ ಲಿಂಗವಿದೆ. ಅಲ್ಲಿ ಪ್ರಳಯವಿರದು, ಇರಬಾರದು ಕೂಡ. ಜಗತ್ತಿನಲ್ಲೆಲ್ಲಾ ಪ್ರಳಯವಿದೆ ಅಂದರೆ ನಾಶವಿದೆ. ಆದ್ದರಿಂದ ವಿಶ್ವದಲ್ಲಿ ಇರುವುದೆಲ್ಲವೂ ಲಿಂಗದ ನಿವಾಸವಲ್ಲ. ಪರಮಾತ್ಮ ಲಿಂಗವು ಭಕ್ತರ ಪವಿತ್ರ ಭಾವದಲ್ಲಿ ನಿತ್ಯ ನೆಲೆಸಿದೆ. ಬೇರೆಡೆಗೆಲ್ಲಿಯೂ ಅದರ ಅಭಿವ್ಯಕ್ತಿಯಿಲ್ಲ. ಅಂದರೆ ಭಕ್ತನಾದವನು ಒಳ್ಳೆಯದು ಕೆಟ್ಟದ್ದು ಯಾವುದು ಎಂಬುದನ್ನು ಬೇರ್ಪಡಿಸಿ ನೋಡಿ ಪರಿಗ್ರಹಿಸಬೇಕು. ಅದು ಸದಾಚಾರಕ್ಕೆ ಯೋಗ್ಯವೋ ಅಯೋಗ್ಯವೇ ಎಂಬುದನ್ನರಿತು ಆಶ್ರಯಿಸಿ ಭಕ್ತ ಅರ್ಚನಾ ಅರ್ಪಣಾ ಕ್ರಿಯೆಗಳಲ್ಲಿ ತೊಡಗಬೇಕು. ಗುರು–ಲಿಂಗ–ಜಂಗಮವನ್ನು ಆರಾಧಿಸುತ್ತಾನೆ. ಧರ್ಮ ಪಥವನ್ನು ಸ್ವೀಕರಿಸುತ್ತಾನೆ. ಹೀಗೆ ಭಕ್ತನ ಆಚರಣೆ ಭಕ್ತನ ಧರ್ಮ ಭಾವನೆಗಳಿಗೆ ಶಿವ ಸರ್ವಗತತ್ತ್ವ ನಿರಸನವು ಪೋಷಕವಾದುದು. ಅದೂ ಅಲ್ಲದೆ ಪರಮಾತ್ಮನು ಎಲ್ಲೆಡೆ ಇದ್ದರೂ ಅವನ ಅಭಿವ್ಯಕ್ತಿ ಹಾಗಲ್ಲ. ಗುರು–ಲಿಂಗ–ಭಕ್ತಿ ಭಾವವಿದರಲ್ಲಿ ಕೆನೆಗಟ್ಟಿದೆ.

ಮಾಯೆ–ಮೋಹದ ಬೆನ್ನುಹತ್ತಿ ಜೀವನ ಹಾಳು ಮಾಡಿಕೊಂಡಂತಹ ಜನರೇ ತುಂಬಿರುವವರು ಈ ಪ್ರಪಂಚದಲ್ಲಿ! ಅಂಥವರಿಗೆ ಭಕ್ತಿಪಥ ಪ್ರೀತಿಯಾದೀತೆ ಅದಿಲ್ಲದಿರೆ ಪರಮಾತ್ಮನ ದಿವ್ಯ ದರ್ಶನವಾದೀತೆ ಎಂದು ಅಲ್ಲಮರು ಹೇಳಿರುವ ವಚನಗಳಿಂತಿವೆ

**ಕಾಳರಕ್ಕಸಿಗೊಬ್ಬ ಮಗ ಹುಟ್ಟಿ**
**ಕಾಯದ ರಾಶಿಯ ಮೊಗೆವುತ್ತ ಸುರಿಯುತ್ತಲಿದ್ದನಯ್ಯಾ**
**ಕಾಳರಕ್ಕಸಿಯ ಮೂಗು ಮೊಲೆಯ ಕೊಯ್ದು**
**ದೇವಕನ್ನಿಕೆಯ ಮೊರೆಹೊಕ್ಕು**
**ಬಾಯ ತುತ್ತೆಲ್ಲವನುಣಲೊಲ್ಲದೆ ಕಾರಿದಡೆ**
**ಆತನೇ ಭಕ್ತನೆಂಬೆ ಗುಹೇಶ್ವರಾ!**

ಕಾಳರಕ್ಕಸಿ ಎಂದರೆ ಅಜ್ಞಾನದ ಸಂಕೇತಗಳಾದ ಎರಡು ಅಂಗಗಳು ಮುಖ್ಯ! ಒಂದು ಅಹಂಕಾರ (ಮೂಗು) ಇನ್ನೊಂದು ವಿಷಯಾಸಕ್ತಿಯೆಂಬ ಮೋಹ (ಮೊಲೆ). ಇವುಗಳನ್ನು ಗುರೂಪದೇಶದಿಂದ ತ್ಯಜಿಸಬೇಕಾದುದು ಶಿಷ್ಯನ ಧರ್ಮ ಅಹಂಕಾರ–ಮೋಹಗಳನ್ನು ತ್ಯಜಿಸಿದಾತನೇ ಮತ್ತು ಗುರು–ಕರುಣೆಯನ್ನು ಪಡೆದಾತನೇ ಈ ಭವ ಬಂಧನದಿಂದ ಕಳಚಿಕೊಳ್ಳಲು ಸಾಧ್ಯವಾಗಿ ದೇವ ದರ್ಶನಕ್ಕೆ ಹಂಬಲಿಸುತ್ತಾನೆಯೆಂಬ ಭಾವವಿದರಲ್ಲಿದೆ. ಮತ್ತೊಂದು ವಚನದಲ್ಲಿ ಅಲ್ಲಮರು–

**ಅಕ್ಷರವ ಬಲ್ಲೆವೆಂದುಅಹಂಕಾರವೆಡೆಗೊಂಡು ಲೆಕ್ಕಗೊಳ್ಳರಯ್ಯ**
**ಗುರುಹಿರಿಯರು ತೋರಿದ ಉಪದೇಶದಿಂದ**
**ವಾಗದ್ವೈತವ ಕಲಿತು ವಾದಿಪರಲ್ಲದೆ**
**ಆಗು–ಹೋಗು ಎಂಬುದನರಿಯರು**
**ಭಕ್ತಿ–ಯುಕ್ತಿ–ಮುಕ್ತಿಯನರಿಯರು**
**ಮತ್ತೂ ವಾದಕೆಳಸುವವರು, ಅದು ಕಾರಣ**
**ಗುಹೇಶ್ವರಾ, ಸಲೆ ಕೊಂಡ ಮಾರಿಂಗೆ**

ನಿಜಜ್ಞಾನಿಯಾದವನು ವಾದ–ವಿವಾದ ಮಾಡಲಾರ. ಸಾವಧಾನ ಚಿತ್ತದಿಂದ ಪರಮಾತ್ಮನನ್ನೇ ಸ್ಮರಿಸುತ್ತಿರುತ್ತಾನೆ. ಹೊರತು ಅನ್ಯ ವಿಷಯಾಸಕ್ತಿ ತಳೆಯಲಾರ, ಶಿವ–ಜೀವ–ಅದ್ವೈತ ತತ್ತ್ವವನ್ನು ಶಬ್ದ ಮಾತ್ರದಲ್ಲಿ ಗ್ರಹಿಸಿ ವಾದಿಸುತ್ತಾರೆ. ಆದರೆ, ಜೀವಾತ್ಮನ ಸ್ವರೂಪವನ್ನಾಗಲಿ, ಶಿವ–ಜೀವರ ಸಾಮರಸ್ಯದ ಸ್ಥಿತಿಯನ್ನಾಗಲಿ ಅವರು ಅರಿಯಲಾರರು. ಇಂಥವರಲ್ಲಿ ಸಂಸಾರ ಹೇಯಗೊಳಿಸುವ ಶಕ್ತಿ–ಯುಕ್ತಿಯಿಲ್ಲ; ಶಿವನೆಡೆಗೆ ಕೊಂಡೊಯ್ಯುವ ಭಕ್ತಿಯೂ ಲೇಶವೂ ಇಲ್ಲ. ಹಾಗೆಯೇ ಜೀವ ಭಾವ ಅಡಗಿದ ಮುಕ್ತಿ ಸ್ಥಿತಿಯ ಹೊಳಹಿಲ್ಲ ಇಂಥವರು ವಾದ ಮಾಡಿದರೂ ನಿರರ್ಥಕ. ಇವರು ಬದುಕಿನಲ್ಲಿ ಏನನ್ನೂ ಸಾಧಿಸದೇ ಹೋಗುತ್ತಾರೆಂದಿದ್ದಾರೆ.

ಮೋಹ–ವ್ಯಾಮೋಹವಿರುವವರಿಗೆ ಭಕ್ತರೆನಬಹುದೇ ಅವರ ಮನ–ಮನದ ಮುಂದಣ ಆಸೆಗಾಗಿಯೇ ಹೋರುವುದನು ಕಂಡೆ ಎನ್ನುತ್ತಾರೆ. ಬಹು ಸಂಖ್ಯಾತರು ಹೊನ್ನು, ಹೆಣ್ಣು, ಮಣ್ಣು ಮಾಯೆ ಎಂದು ತಿಳಿದಿರುವರು, ಇವಾವವೂ ಮಾಯೆಯಲ್ಲ– ಮನದ ಮುಂದಣ ಆಸೆಯೇ ಮಾಯೆ ಎಂದು ಅಲ್ಲಮರು ಹೇಳಿದ್ದಾರೆ. (ವಚನ–72, ಪುಟ–25)

**ಕಳ್ಳಗಂಜಿ ಕಾಡ ಹೊಕ್ಕಡೆ ಹುಲಿ ತಿಂಬುದ ಮಾಬುದೆ?**
**ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿಂಬುದ ಮಾಬುದೆ?**
**ಕಾಲಗಂಜಿ ಭಕ್ತನಾದರೆ ಕರ್ಮ ತಿಂಬುದ ಮಾಬುದೆ?**
**ಇಂತೀಮೃತ್ಯುವಿನ ಬಾಯ ತುತ್ತಾದ**
**ವೇಷಡಂಭಕರ ನಾನೇನೆಂಬೆ ಗುಹೇಶ್ವರಾ**

ಕಳ್ಳನಿಗೆ–ಸುಳ್ಳನಿಗೆ ಹೆದರಿ ಕಾಡು ಹೊಕ್ಕರೆ ಹುಲಿ ತಿನ್ನುವುದು ಬಿಟ್ಟೀತೆ? ಹುಲಿಗೆ ಹೆದರಿ ಹುತ್ತವ ಹೊಕ್ಕಡೆ ಹಾವು ಕಚ್ಚುವುದನ್ನು ಬಿಟ್ಟೀತೆ? ಅದೇ ರೀತಿ ಮುಪ್ಪು–ಮರಣಗಳಿಗೆ ಹೆದರಿ ತೋರಿಕೆಗಾಗಿ ಭಕ್ತಿಯನ್ನು ಮಾಡಿದರೆ ಕರ್ಮದ ಕಾಟ ತಪ್ಪದು, ಭವದುಃಖ ನೀಗಲಾರದು. ಇಂಥ ಹುಸಿ ಭಕ್ತ ವೇಷಡಂಭಕರು.

ಭಕ್ತಿಯನ್ನು ಮಾಡಿಯೂ ಮಾಯಾರೂಪ ಮೃತ್ಯುವಿನ ಹಿಡಿತದಿಂದ ಪಾರಾಗಲಾರರು. ನಿಜವಾದ ಭಕ್ತ ಹಾಗಲ್ಲ. ಅವನಲ್ಲಿ ಸಹಜ ಶಿವನೊಲವು ಕಾಲ, ಕರ್ಮ, ಮಾಯೆಯನ್ನು ಮೀರುವ ಶಕ್ತಿ ಆತನ ಭಕ್ತಿಯಲ್ಲಿರುತ್ತದೆ ಎಂದು ಉಪದೇಶಿಸಿದ್ದಾರೆ ಅಲ್ಲಮರು.

**ಐದು ಸರ್ಪಂಗಳಿಗೆ ತನು ಒಂದು ದಂತವೆರಡು**
**ಸರ್ಪ ಕಡಿದು ಸತ್ತ ಹೆಣನು ಸುಳಿದಾಡುವುದ ಕಂಡೆ!**
**ಈ ನಿತ್ಯವನರಿಯದ ಠಾವಿನಲ್ಲಿ**
**ಭಕ್ತಿಯೆಲ್ಲಿಯದು ಗುಹೇಶ್ವರಾ!**

ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳನ್ನು ಗ್ರಹಿಸುವ ಐದು ಮನೋವೃತ್ತಿಗಳೇ ಇಂದ್ರಿಯಗಳು, ಪಂಚೇಂದ್ರಿಯಗಳು, ಅವು ಹೇಳಿದಂತೆ ಕೇಳಿ ನಡೆಯಕೂಡದು, ಈ ದೇಹ ಮನಸ್ಸಿನಿಂದೊಡಗೂಡಿದೆ. ಅವು ಎರಡು ಇವೆ ನಾನು ಮತ್ತು ನನ್ನದು. ಮನಸ್ಸು ಇಂದ್ರಿಯವೃತ್ತಿಗಳ ಮೂಲಕ ಬಾಹ್ಯ ಜಗತ್ತನ್ನು ಸ್ಪರ್ಶಿಸುತ್ತದೆ. ಅರಿತುಕೊಳ್ಳುತ್ತದೆ. ಅವುಗಳಲ್ಲಿ ಮಮಕಾರ ತಾಳುತ್ತದೆ. ಹಿತವಾವುದು, ಅಹಿತವಾವುದು ಎಂಬುದರ ಅರಿವು ಲೋಪವಾಗುವದು. ವಿಷಯಾಸಕ್ತಿ ಹೆಚ್ಚಿದಷ್ಟು ಮಮಕಾರ, ಅಹಂಕಾರ ವರ್ಧಿಸುತ್ತದೆ. ಇವೇ ಭವ ಬಂಧನದ ಬೀಜಗಳು, ಇವುಗಳ ದಾಸನಾದವನಲ್ಲಿ ಶ್ರದ್ಧೆ-ಭಕ್ತಿಗಳು ಫಲಿಸಲಾರವು. ಇವುಗಳ ದಾಸನಾದವನಿಗೆ ಈಶನ ದರ್ಶನವದೆಂತಾದೀತು ಎನ್ನುತ್ತಾರೆ ಅಲ್ಲಮರು. ಇಂಥ ಡಾಂಭಿಕ ಭಕ್ತನನ್ನು ಕಂಡೇ ಅವರು 'ಆಸೆಗೆ ಸತ್ತುದು ಕೋಟಿ, ಹೊನ್ನು, ಹೆಣ್ಣು, ಮಣ್ಣಿಂಗೆ ಸತ್ತುದು ಕೋಟಿ, ಗುಹೇಶ್ವರಾ ನಿನಗಾಗಿ ಸತ್ತವರಾರನೂ ಕಾಣೆ' ಎಂದೂ ಹೇಳಿರುವುದು ಭವಭಾಗಿಗಳನು ಕಂಡು ಹೇಳಿದ್ದು!

ಮಹಾಯೋಗಿ ವೇಮನರು ಹೇಳುವ ಮಾತುಗಳು ಭಕ್ತಿಯ ಕುರಿತ ಇಂತಿವೆ

**ಭಕ್ತಿಯುಳ್ಳ ಎಡೆಗೆ ಪರಮೇಶ್ವರನಿಹನು;**
**ಭಕ್ತಿಯಿಲ್ಲದೆಡೆಗೆ ಪಾಪವುಂಟು**
**ಭಕ್ತಿಹೊಂದಿದವನು ಪರಮಾತ್ಮನಾಗುವನು**
**ವಿಶ್ವದಾಭಿರಾಮ ಕೇಳು ವೇಮ.**

**ಭಕ್ತಿಗಂಟೆ ಮುಕ್ತಿ ಪಡೆಯುವುದು ಸುಲಭವು**
**ಯುಕ್ತಿ ಚದುರಿದೊಡನೆ ಊಹೆ ಕೆಡುಕ**
**ಶಕ್ತಿಯುಕ್ತ ಭಕ್ತಿ ಸಾಧನೆ ಪರಮವದು**
**ವಿಶ್ವದಾಭಿರಾಮ ಕೇಳು ವೇಮ**

**ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ,**
**ನಿಶ್ಚಲವಾಗಿ ಭಕ್ತಿ ನಿಲಿಸಿದವನು,**
**ಸರ್ವ ಮುಕ್ತನಹನು, ಸರ್ವ ತಾನಾಗುವ**
**ವಿಶ್ವದಾಭಿರಾಮ ಕೇಳು ವೇಮ.**

**ಮತ್ತ ಚಿತ್ತರದವನು ಮರ್ಮವನು ತಿಳಿಯದೆ**
**ಚಿತ್ತ ಚಲನ ಹೊಂದಿ ಜಗದಿ ಕೆಡುವ**
**ಭಕ್ತಿಯಿಲ್ಲದವನು ಪರಮಾತ್ಮನನರಿವನೆ?**
**ವಿಶ್ವದಾಭಿರಾಮ ಕೇಳು ವೇಮ.**

ಭಕ್ತಿಯಿರುವುದು ಭಗವಂತನ ಸೇವೆಗಾಗಿ ಆತನಿಂದಲೇ ಇಹವು–ಪರವು ಆತನಿಂದಲೇ ಸೃಷ್ಟಿ ಸೌಂದರ್ಯ ಸುಖವು ದೊರಕೊಳ್ಳುವುದು. ಭಕ್ತಿಯೆಂದರೆ ಪ್ರೇಮ ಸ್ವರೂಪ. ಭಕ್ತಿಯು ಆನಂದದ ರೂಪ, ಅಷ್ಟೇ ಏಕೆ ಭಕ್ತನ ಜೀವನವೇ ಭಕ್ತಿಯ ನಿದರ್ಶನವಾಗಿದೆ. ಪ್ರಣವ ನಾದವು ಅನಾಹತದಲ್ಲಿ ಜನಿಸುತ್ತದೆ. ಇದನ್ನು ಪಡೆದವನೇ ಅಂದರೆ ಜನ್ಮಧಾರಣಾತ್ ನಿಜವಾದ ಭಕ್ತನೆನಿಸುವನು. ಭಕ್ತಿ ಇರುವಲ್ಲಿ ಪರಮೇಶ್ವರನಿರುವನು, ಭಕ್ತಿಯಿಲ್ಲದೆಡೆಗೆ ಪಾಪವುಂಟು, ದೋಷಂಗಳು ಬಂದು ಅಪ್ಪಳಿಸುವವು. ಭಕ್ತಿ ಹೊಂದಿದವನೇ ಪರಮಾತ್ಮನಾಗುವನು. ಭಕ್ತಿಗೆ ಅಂಟಿಕೊಂಡಿದ್ದವನೇ ಮುಕ್ತಿ ಹೊಂದಲು ಅಹನಹನು, ಅಂಥವರಿಗೆ ಮುಕ್ತಿಯು ದೊರೆಯಲು ಸುಲಭ ಸಾಧ್ಯ! ಅದರ ಜೊತೆಗೆ ಯುಕ್ತಿ, ತರ್ಕಬುದ್ಧಿ ಕುದುರಿದರೆ ಊಹೆಗಳೇ ಹೆಚ್ಚು ಪ್ರಬಲವಾದ ಭಕ್ತಿ–ಧ್ಯಾನಗಳೆಂಬ ಅಸ್ತ್ರಗಳಿಂದ ಪರಮಾತ್ಮನನ್ನು ಹೊಂದಬಹುದೆಂದು ಸುಲಭವ ರೀತಿಯಲ್ಲಿ ವೇಮನರು ತಿಳಿಯಪಡಿಸಿರುವರು.

ಪ್ರತಿಯೊಬ್ಬರ ಹೃದಯದಲ್ಲಿ ಆತ್ಮನಿರುವನು. ಆತ್ಮನೇ ಪರಮಾತ್ಮ ಎಂಬುದನರಿತುಕೋ ಮನುಜ! ಆದುದರಿಂದ ತನ್ನೊಳಗೇ ಶಿವನನ್ನು ಶೋಧಿಸಬೇಕು. ಶಿವನಲ್ಲಿ ಭಕ್ತಿ ನಿಲಿಸಬೇಕು. ಅವನು ಸರ್ವಮುಕ್ತನಾಗುತ್ತಾನೆ. ಸರ್ವದಲ್ಲಿ, ಸರ್ವರಲ್ಲಿ ತನ್ನನ್ನೇ ಕಾಣುತ್ತಾನೆ. ಆದರೆ ತನ್ನನ್ನೇ ದೊಡ್ಡವನೆಂದು ಮತ್ತ ಚಿತ್ತ (ಅಹಂಮಿಕೆ) ಹೊಂದಿದವನು ಚಂಚಲ ಚಿತ್ತನಾಗಿ ಜಗತ್ತಿನಲ್ಲಿ ಸಿಲುಕಿ ಕೆಟ್ಟುಹೋಗುತ್ತಾನೆ. ಭಕ್ತಿಯೇ ಇಲ್ಲದಿದ್ದರೆ ಪರಮಾತ್ಮನನ್ನು ಹೊಂದಲು ಅದ್ಹೇಗೆ ಸಾಧ್ಯವೆಂದು ಪ್ರಶ್ನಿಸಿದ್ದಾರೆ. ಇವರ ಹೇಳಿಕೆಯಲ್ಲಿ ಭಕ್ತಿಯೇ ಪ್ರಧಾನ ಪಾತ್ರ ವಹಿಸುತ್ತದೆ.
ಭಕ್ತಿಯ ಪಾರಮ್ಯವನ್ನು ಅಭಿವರ್ಣಿಸಿದ್ದುದು ಹೀಗೆ–

**ಜಲವಿಲ್ಲದ ಕೆರೆ, ಫಲವಿಲ್ಲದ ಬನ**
**ಭಕ್ತನಿಲ್ಲದ ಗ್ರಾಮ ಸುಡುಗಾಡಯ್ಯ**
**ಅಲ್ಲಿ ಶಿವನಿಲ್ಲ**
**ಪ್ರೇತ ಜಡಾರಣ್ಯದಲ್ಲಿ ಹೋಗಬಹುದೇ ಗುಹೇಶ್ವರಾ?**

**ಜ್ಞಾನದುದಯವೇ ಭಕ್ತ**
**ಜ್ಞಾನದ ಶೂನ್ಯವೇ ಐಕ್ಯ**
**ಇಂತೀ ಜ್ಞಾನದಾದ್ಯಂತವನರಿವರಿಯೆ ಸರ್ವಜ್ಞನಾದ**
**ಈಶ್ವರ ನೋಡಾ!**
**ಇಂತೀ ಷಟ್‌ಸ್ಥಲದೊಳಗಾದ್ಯಂತವಡಗಿಹ ಭೇದವ**
**ನೀನಲ್ಲದನ್ಯರೆತ್ತ ಬಲ್ಲರು ಗುಹೇಶ್ವರಾ!**

ಮೇಲೆ ಹೇಳಿದ ವಚನಗಳನ್ನು ಗಮನಿಸಿದರೆ ಭಕ್ತಗಿಲ್ಲದ ಊರು ಕುಗ್ರಾಮ, ಹಾಳೂರು, ಸುಡುವ ಕಾಡು ಎಂದಿತ್ಯಾದಿಯಾಗಿ ಹೇಳಿದ್ದಾರೆ. ಅಲ್ಲಿ ಶಿವನಿಲ್ಲವೆಂದ ಮೇಲೆ ಪ್ರೇತ ತುಂಬಿದ ಅರಣ್ಯ ಪ್ರವೇಶಿಸಿದಂತೆಯೇ ಅಲ್ಲವೆ? ಜ್ಞಾನದ ಉದಯವೇ ಭಕ್ತ ಹಾಗೆಯೇ ಜ್ಞಾನದ ಶೂನ್ಯವೇ ಐಕ್ಯ ನೋಡಾ! ಎಂದಿರುವ ಮಾತನ್ನು ಅರಿತುಕೊಂಡು ಆಚರಣೆಗೆ ತರುವುದು ಸುಯೋಗ್ಯವೆಂದಿರುವರು. ಅಂದರೆ ಜ್ಞಾನೋದಯವಾಗಿ ಷಟ್‌ಸ್ಥಲದ ನಿರ್ಣಯವನೆಂತುಂಟೆಂದು ವಿಚಾರಿಸೆ; ಮೊದಲಲ್ಲಿ ಭಕ್ತ ಸ್ಥಲವೆಂತು ಹೇಳಿತ್ತು. ಅಂತೆ ಪೂರೈಸಿ ಮಾಹೇಶ್ವರ ಸ್ಥಲಕ್ಕೆ, ಅಲ್ಲಿಂದ ಪ್ರಾಣಲಿಂಗಿ ಸ್ಥಲಕ್ಕೆ, ಅಲ್ಲಿಂದ ಶರಣ ಸ್ಥಲಕ್ಕೆ, ಅಲ್ಲಿಂದ ಐಕ್ಯ ಸ್ಥಲಕ್ಕೆ ಬಂದು ಅದೇನು ಹೇಳಿತ್ತೆಂದಡೆ ಅಂತೆ–ನಡೆದು ಭಕ್ತನಾದವನು ಪೂರೈಸಿಕೊಂಡು ನಿರವಯ ಸ್ಥಲಕ್ಕೆ ಬಂದು ನಿರಾಳಕ್ಕೆ ನಿರಾಳನಾದೆನಯ್ಯಾ ಎಂದುದಾಗಿ ಸದ್ಭಕ್ತನ ಆಚರಣೆ ಮತ್ತು ಮಹಿಮೆಯನ್ನು ಅಲ್ಲಮರು ಮನುಕುಲಕ್ಕೆ, ಶರಣರಿಗೆ ಅರುಹಿದ್ದಾರೆ. ಮೋಕ್ಷ ಹೊಂದುವಲ್ಲಿ ಭಕ್ತಿಯ ಪಾತ್ರವೇ ಪ್ರಮುಖವೆಂದರ್ಥ!

ವೇಮನರು ಭಕ್ತಿಯ ಪದ್ಯಗಳು ಇಂತು ಬೋಧಿಸಲ್ಪಟ್ಟಿವೆ–

**ಸೌಖ್ಯ ವಿರಲಿ ಇಳೆಯಲಿ ಸದ್ಭಕ್ತಿಯೇ ಬೇಕು**
**ಸೌಖ್ಯ ಉದಯಿಸುತಿಹುದು ಸನ್ಮತವದು**
**ಸೌಖ್ಯ ಹೊಂದಿದವನು ಸಂತೋಷಿಸಬಹುದು**
**ವಿಶ್ವದಾಭಿರಾಮ ಕೇಳು ವೇಮ.**

**ಬೂದಿ ಮುಚ್ಚಿದಂತೆ ಭಕ್ತಿ ನಿಶ್ಚಲವಿರೆ**
**ತಗಲಿಕೊಂಡು ಮುಕ್ತಿ ತಾನೆ ಬಹುದು,**
**ಜಗದಿ ಒಪ್ಪ ನುಡಿಯೆ ಜಾಣವಿಲ್ಲವಲ್ಲ**
**ವಿಶ್ವದಾಭಿರಾಮ ಕೇಳು ವೇಮ.**

**ಮೂರು ವೇಳೆಯಲ್ಲಿ ಮುದದಿ ಶಿವನ ಆತ್ಮ**
**ಪೂಜೆ ಮಾಡುವವನು ಪುಣ್ಯ ಮೂರ್ತಿ!**
**ಪೂಜೆಯಿರದೆ ಮೋಕ್ಷ ಭೋಗವು ದೊರೆಯುವುದೆ?**
**ವಿಶ್ವದಾಭಿರಾಮ ಕೇಳು ವೇಮ.**

**ಜಪವ, ಬಾಹ್ಯ ಪೂಜೆ ಸಾಕೆನಿಸುವರೆ ಮಾಡಿ,**
**ಕಪಟ ಬಿಡದೆ ಇರಲು ಕಷ್ಟ ಜನಕೆ,**
**ಮುಕ್ತಿ ಹೊಂದದಿದ್ದು ಮುಳುಗಿದರು ತಮದೊಳಗೆ**
**ವಿಶ್ವದಾಭಿರಾಮ ಕೇಳು ವೇಮ.**

**ಭಕ್ತಿ ನಾಮ ಬೇರೆ–ಭಕ್ತಿ ಎಲ್ಲ ಒಂದೇ**
**ಶೈವ ನಾಮ ಬೇರೆ, ಶೈವ ಒಂದೇ**
**ವೇದ, ಶಾಸ್ತ್ರ ಬೇರೆ, ವೇದವಿಹುದು ಒಂದೇ**
**ವಿಶ್ವದಾಭಿರಾಮ ಕೇಳು ವೇಮ.**

**ಜಂಗಮಾಖ್ಯ ಭಕ್ತಿ ಸಂಧಿ ಬೇರೇನಿಲ್ಲ**
**ಸಗುಣ ಭಾವವದುವೆ ಶಾಸ್ತ್ರ ವಿಧಿಯು**
**ನಿರ್ಗುಣವ ಬಿಡಲು ನೆರವೇರುವದು ಯಾಗ**
**ವಿಸ್ವದಾಭಿರಾಮ ಕೇಳು ವೇಮ.**

**ಶಿವನ ಮೇಲೆ ಮನಸು ಸ್ಥಿರವಾಗಿದ್ದರೆ,**
**ಹೌದು ಮೋಕ್ಷ ಪಡದವ, ಹೌದು ಅವನೆ,**
**ಶಿವನ ಮೇಲೆ ಮನಸು ಸರಿಯೆ ಇರುವೆಯಷ್ಟು**
**ಇರದೆ ಇರಲು ಮುಕ್ತಿ ಇರದು ಕೇಳುವ ವೇಮ.**

**ತಾತ್ಪರ್ಯ:** ಈ ಭೂಮಿಯಲ್ಲಿ ಬಾಳಬೇಕಾದರೆ, ಚಿಂತೆಯನ್ನು ಮೊದಲು ತ್ಯಜಿಸಬೇಕು ಅಂದಾಗ ಸೌಖ್ಯ ನೆಲೆಸಲು ಸಾಧ್ಯ! ಸರ್ವ ಭಾರವನ್ನು ಆ ಪರಮಾತ್ಮನ ಮೇಲೆಯೇ ಭಾರ ಹಾಕಿ ಬಾಳು ಸಾಗಿಸಬೇಕು; ಅದಕ್ಕೆ ದೃಢತೆ ಭಕ್ತಿ, ಶ್ರದ್ಧೆ, ಧೈರ್ಯ ಬೇಕಾಗುತ್ತದೆ. ಸೌಖ್ಯವು ತನ್ನಿಂದ ತಾನೇ ದೊರಕುವುದೆಂದ ವೇಮನ ಯೋಗಿ! ಭಕ್ತಿಯೆಂಬುದು ಮಾನವನ ಅಂತರಂಗದ ನಿಕ್ಷೇಮ. ಭಯದಿಂದ ಭಕ್ತಿ ಹುಟ್ಟುತ್ತದೆ ಎಂಬುದು ಕೆಲವರು. ಅದು ಶುದ್ಧ ಸುಳ್ಳು, ಭಕ್ತಿಯು ಡಂಭಾಚಾರದಲ್ಲಿಲ್ಲ. ತೋರಿಕೆಯ ವಸ್ತುವದಲ್ಲ.

ಅದು ಬೂದಿ ಮುಚ್ಚಿದ ಕೆಂಡದಂತೆ ಇದೆ ಎಂದಿದ್ದಾರೆ. ನಿಶ್ಚಿತವಾಗಿಯೂ ನಿಶ್ಚಲವಾದ ಭಕ್ತಿಗೆ ಅಂಟಿಕೊಂಡರೆ ಮುಕ್ತಿ ಪಡೆಯಲು ಸಾಧ್ಯ. ಆದರೆ ಈ ಜಗತ್ತಿನಲ್ಲಿ ಸರಿಯಾದುದನ್ನು ಹೇಳುವ ಜಾಣರು ವಿರಳ.

ತ್ರಿಕಾಲ ಪೂಜೆ ಅತ್ಯಗತ್ಯ. ಜಪ–ತಪ–ಧ್ಯಾನ–ಪೂಜೆ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ ಪ್ರಾಪ್ತವಾಗುವುದು. ತ್ರಿಕಾಲದಲ್ಲಿಯೂ ಭಕ್ತನಾದವನು. ಶಿವನನ್ನು ತನ್ನ ಆತ್ಮವೇ ಎಂದು ಪೂಜಿಸುವವನು ಪುಣ್ಯ ಮೂರ್ತಿಯೇ ಸರಿ! ಪೂಜೆಯ ಅನುಷ್ಠಾನ ಮಾಡದೇ,ಮನವು ನಿಶ್ಚಲವಾಗಿ ನಿಲ್ಲದೆ ಮೋಕ್ಷ ಲಭಿಸದು ಎಂದು ಹೇಳಿದ್ದಾರೆ. ಸದಾಕಾಲವೂ ಕಾಯಕದಲ್ಲಿ ನಿರತನಾದಾಗಲೂ ಶಿವನ ನಾಮಸ್ಮರಣೆ ಮಾಡುವುದೊಳಿತು. ಬರೀ ಬಾಹ್ಯ ಜಪಮಣಿ ಎಣಿಸುತ್ತಾ, ಕಪಟ–ಮೋಸ–ವಂಚನೆಯ ಕಪಟಾಚಾರವನ್ನು ತೊರೆಯದವರು ತಮಸ್ಸಿನಲ್ಲಿ ಮುಳುಗುತ್ತಾರೆ. ಅಂದರೆ ಅವರು ನರಕ ಯಾತನೆ ಅನುಭವಿಸುವರು ಎನ್ನಲಾಗಿದೆ. ಭಕ್ತಿ ಎಂಬೆರಡಕ್ಷರಗಳಲ್ಲಿ ದಿವ್ಯ ಶಕ್ತಿಯಡಗಿದೆ. ಭಕ್ತಿಯಿಂದ ನಡೆದುಕೊಳ್ಳುವವರನ್ನು ಪರಮಾತ್ಮ ಯಾವತ್ತು ರಕ್ಷಿಸುತ್ತಾನೆ. ಭಕ್ತಿಯ ನಾಮವು ಬೇರೆ ಬೇರೆಯಲ್ಲ! ಅದನ್ನು ಶೈವರು, ವೇದ–ಶಾಸ್ತ್ರ ಬಲ್ಲಿದರು, ಸಿಖ್‌ರು ಇಸ್ಲಾಮಿಗಳು, ಕ್ರೈಸ್ತರು ಯಾರು ಮಾಡಿದರೂ ಅದು ಭಕ್ತಿ ಒಂದೇ ಎನ್ನಲಾಗಿದೆ.

ಭಾವ–ಅಭಾವಗಳು ಸಹಜ ಸ್ಥಿತಿಗಳು, ಅವುಗಳಿಗೆ ಸಿಲುಕದೇ ತನ್ನ ಬುದ್ಧಿಯನ್ನು ಸ್ಥಿರಗೊಳಿಸಿ, ಬಟ್ಟ ಬಯಲನ್ನೇ ಧ್ಯಾನಿಸುವವನೇ ಸ್ಥಿರವನ್ನು ಕಂಡ ಕಾಣುವ ಧನಾತ್ಮನು ಎಂದುದಾಗಿ ತಾನು ಪಡೆದಂಥ ದಿವ್ಯ ವಿದ್ಯೆಯನ್ನು ವೇಮನರು ನಮಗೆ ತಿಳಿಯಪಡಿಸಿದ್ದಾರೆ. ಸಗುಣ ಭಾವವದುವೇ ಶಾಸ್ತ್ರ ವಿಧಿಯು! ಶಿವನ ಮೇಲೆ ಮನಸ್ಸು ಸ್ಥಿರವಾಗಿ ನೆಲೆಸಿದ್ದೇಯಾದರೆ ಮೋಕ್ಷ ಹೊಂದುವನು. ಆದರೆ ಶಿವನ ಮೇಲೆ ಪ್ರೀತಿ–ಭಕ್ತಿ–ಶ್ರದ್ಧೆಯಿರದಿದ್ದರೆ ಮುಕ್ತಿ ಫಲಿಸಲಾರದು ಎಂದು ಭಕ್ತಿಯ ನಡೆಯನ್ನು ಆಚರಿಸುವುದು ಪುಮುಖ ಸಾಧನವೆಂದು ಈ ಮೇಲಿನ ಪದ–ಪದ್ಯಗಳ ಮೂಲಕ ನಮಗೆಲ್ಲ ಅರುಹಿದ್ದಾರೆ ವೇಮನ. ಅಲ್ಲಮರು ಮಾನವ ಜನ್ಮ ಧರಿಸಿದ ಮೇಲೆ ಶರಣನಾಗಲೇಬೇಕು. ಭಕ್ತಿಯಿಂದಲೇ ಸಂಪಾದಿಸಿಕೊಳ್ಳಬೇಕೆಂಬುದಕ್ಕೆ ಹೇಳಿದ ವಚನಗಳಲ್ಲಿ ಇಂತಿವೆ–

**ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಓಗರ ಇದ ಮಾಡಲೇಬೇಕು**
**ಸುಳಿವ ಸುಳ್ಳನನ್ನಕ್ಕ ಇದ ಮಾಡಲೇಬೇಕು**
**ಗುಹೇಶ್ವರನೆಂಬ ಲಿಂಗಕ್ಕೆ**
**ಆತ್ಮನ್ನುಳ್ಳನ್ನಕ ಭಕ್ತಿಯ ಮಾಡಲೇಬೇಕು.**

ದೇಹಕ್ಕೆ ಸ್ನಾನ, ಪ್ರಾಣಕ್ಕೆ ಆಹಾರ (ಅನ್ನ) ಅತ್ಯಗತ್ಯವು ಹೇಗೋ ಹಾಗೆಯೇ ದೇಹದಲ್ಲಿ ಪ್ರಾಣ ಇರುವವರೆಗೆ ಭಕ್ತಿಯನ್ನು ಮಾಡಲೇಬೇಕೆಂದು ಪ್ರತಿಪಾದಿತವಾಗಿದೆ. ಭಕ್ತಿಯಿಂದ ಕಾಯಕ ಮಾಡಿ ಬಂದ ಫಲದಿಂದ ಓಗರವ ಮಾಡಿ ಗುರು-ಲಿಂಗ-ಜಂಗಮಕ್ಕೆ ಅರ್ಪಿಸಿಯೇ ತಾನುಣ್ಣಬೇಕೆಂಬ ತಾತ್ಪರ್ಯ ಈ ವಚನದಲ್ಲಿದೆ.

ವೀರ ವಿರಾಗಿಯಾದರೂ ತಾನು ಬಸವಣ್ಣನವರ ಸಂಪರ್ಕ ಮತ್ತು ಸಾನಿಧ್ಯದಿಂದಲೇ ನಾನು ಸದ್ಭಕ್ತನಾದೆನೆಂದು ತಮ್ಮದೊಂದು ವಚನದಲ್ಲಿ ಹೇಳಿಕೊಂಡಿರುವುದು ಇವರ ವಚನದ ರಾಶಿಯಲ್ಲಿ ಕಂಡು ಬಂದಿದೆ.

**ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ**
**ಬ್ರಹ್ಮವ ನುಡಿದು ಭ್ರಮಿತನಾದೆನೆಯ್ಯಾ**
**ಶೂನ್ಯವ ನುಡಿದುಸುಖ ದುಃಖಕ್ಕೆ ಗುರಿಯಾದೆನಯ್ಯಾ**
**ಗುಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣನ**
**ಸಾನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ!**

ಅಹಂಕಾರಕ್ಕೆ ತಿಲಮಾತ್ರವೂ ಅವಕಾಶವಿಲ್ಲ, ಲೌಕಿಕ ವಸ್ತುಗಳ ಮೋಹ ಭ್ರಮೆಗಳಿರದ ಮಹಾನುಭಾವನೆಂದರೆ ಬಸವಣ್ಣ! ಆತ ಭಕ್ತಿಯ ಭಂಡಾರಿ! ಆ ಮಹಾನುಭಾವನ ಸಾನಿಧ್ಯದಿಂದಲೇ ಆನು ಸದ್ಭಕ್ತನಾಗಿ ಸುಖಿಯಾದೆನೆಂದು ಹೇಳಿದ ಅಲ್ಲಮರ ಈ ಮಾತು ನಮಗೆಲ್ಲ ದಾರಿದೀಪ.

**ದೇವ ಕಂಡ, ಭಕ್ತ ಕಂಡ, ಮರಳಿ ಮರಳಿ ಶರಣೆಂಬ ಕಂಡ**
**ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ!**
**ಸಾವನ್ನಕ್ಕರ ಸರಸ ಉಂಟೇ ಗುಹೇಶ್ವರಾ?**

ಭಕ್ತ ಬೇರೆ, ದೇವ ಬೇರೆಯಲ್ಲ; ಏಕೆಂದರೆ ಭಕ್ತಿಯ ಉದ್ದೇಶ ಭಕ್ತ ದೇವರ ಮಧ್ಯೆ ಸಹಜ ಸಾಮರಸ್ಯವಿರುತ್ತದೆ. ಪ್ರತ್ಯೇಕತೆಯನ್ನು ಭಕ್ತನಾದವನು ಮರೆತು ನಾವಿಬ್ಬರೂ ಒಂದೇ ಎಂಬ ಭಾವವಿರಬೇಕೆಂದು ಕಿವಿ ಮಾತು ಹೇಳಿದ್ದಾನೆ. ಜನನ-ಮರಣಗಳ ಭಾವ ಮರೆಯಾಗಬೇಕೆಂದೂ ಹೇಳಿದ್ದಾನೆ. ಭಕ್ತ ತಾನು ಪೂಜಕ-ಪೂಜಿಸಿಕೊಳ್ಳುವಾತ ದೇವನು ಎಂಬ ಭಾವವಿರಬೇಕು. ಇದುವೇ ಭಕ್ತನ ಒಳಗುಟ್ಟು ಎನ್ನಬಹುದು.

ಪ್ರತಿದಿನ ಮುಂಜಾನೆಯ ಜಾವದಲ್ಲೆದ್ದು ಲಿಂಗದೇವನನ್ನು ನೆನೆಯುತ್ತ ಭಕ್ತಿಯ ಸಾಮ್ರಾಜ್ಯವನು ಮನದಲ್ಲಿ ಸ್ಥಾಪಿಸಿಕೊಳ್ಳಬೇಕೆಂಬುದಕ್ಕೆ ಅಲ್ಲಮರ ವಚನ-ವೊಂದರಲ್ಲಿಂತಿದೆ –

**ಮುಂದು ಜಾವದಲೆದ್ದು ಲಿಂಗದಂಘ್ರಿಯ ಮುಟ್ಟಿ**
**ಸುಪ್ರಭಾತ ಸಮಯದಲ್ಲಿ ಸದ್ಭಕ್ತರ ಮುಖವ ನೋಡುವುದು**
**ಹುಟ್ಟಿದುದಕ್ಕಿದೆ ಸಫಲ ನೋಡಾ; ಸತ್ಯವಚನವಿಂತೆಂದುದು!**
**ಇದಿಲ್ಲದವರ ನಾನೊಲ್ಲೆ ಗುಹೇಶ್ವರಾ!**

ಮುಂಜಾವದಲ್ಲಿ ಏಳುವುದು, ಲಿಂಗವನ್ನು ಸ್ಪರ್ಶಿಸಿ ಅರ್ಚಿಸುವುದು ಸೂರ್ಯೋದಯದೊಂದಿಗೆಯೇ ಭಕ್ತಿ ಸಂಪನ್ನರಿಗೆ ವಂದಿಸುವುದು. ಮನುಷ್ಯನಾಗಿ ಹುಟ್ಟಿ ಬಂದುದಕ್ಕಿದ್ದು ಸಾರ್ಥಕ. ಇದು ಅನುಭವಿಗಳ ಮಾತು, ಸತ್ಯ ವಚನ- ಯಾರಲ್ಲಿ ಈ ಭಕ್ತಿ ಆಚರಣೆಯಿಲ್ಲವೋ ಅವರು ಶರಣರಾಗಲು ಅನರ್ಹರು ಎನ್ನುತ್ತಾರೆ ಅಲ್ಲಮಪ್ರಭು.

ನಿಜವಾದ ಭಕ್ತನು ಅರಿವು-ಆಚಾರಗಳನು ಹೊಂದಿರಬೇಕು. ಅಂಥವನಲ್ಲಿ ಸಿರಿ-ಸಂಪತ್ತುಗಳ ಅಹಂಕಾರ, ಕೋಪ-ತಾಪಗಳಿರಲಾರವು ಎಂದು ಮತ್ತೊಂದು ವಚನದಲ್ಲಿ ಪ್ರತಿಪಾದಿಸಿದ್ದಾನೆ. ಅದು ಇಂತಿದೆ-

**ಆಚಾರವನರಿಯದೆ ವಿಭವವಳಿಯದೆ**
**ಕೋಪವಡಗದೆ ತಾಪ ಮರೆಯದೆ**
**ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ ಕೇಡಿಂಗೆ**
**ನಾನು ಮರುಗುವೆನು ಕಾಣಾ ಗುಹೇಶ್ವರಾ!**

ನಿಜವಾದ ಭಕ್ತನು ಸದಾಚಾರವನ್ನು ಅರಿತು ಆಚರಿಸುತ್ತಾನೆ. ಸಿರಿ-ಸಂಪತ್ತುಗಳ ವಿಷಯದಲ್ಲಿ ಆತ ಅಹಂಕಾರಪಡುವುದಿಲ್ಲ. ಕೋಪ-ಆಸೆಗಳಿಗೆ ಆತ ಒಳಗಾಗಲಾರ. ಅವನು ಶಾಂತ, ನಿರಭಿಮಾನಿ, ಕ್ಷಮಾಶೀಲ ಗುಣಸಂಪನ್ನನು. ಅವನ ಆ ನಡೆ-ನುಡಿ-ಭಾವಗಳು ಭಕ್ತಿಗೆ ಭೂಷಣ ಎಂದುದಾಗಿ ಅಂಥ ಸದ್ಭಕ್ತನನ್ನು ತೋರಾ ಗುಹೇಶ್ವರಾ ಎಂದು ಪ್ರಾರ್ಥಿಸಿಕೊಂಡು ಅಂಥ ಸದ್ಗುಣಗಳ ಸಂಪನ್ನತೆಯನ್ನು ಬಸವಣ್ಣನವರ ಸಾನಿಧ್ಯದಲ್ಲಿದ್ದುಕೊಂಡು ಪಡೆದೆನೆಂದು ತುಂಬಾ ಅಭಿಮಾನದಿಂದ ಹೇಳಿದ್ದಾರೆ.

**ಭಕ್ತಿ ಭವದ ಭಜನೆ ಎಂತಿದ್ದುದಂತೆ ಅಂತರಂಗದಲ್ಲಿ ಅರಿವು**
**ಆ ಅಂತರಂಗದಲ್ಲಿ ಅರಿವಿಂಗೆ ಆಚಾರವೇ ಕಾಯ**
**ಆ ಆಚಾರಕಾಯವಿಲ್ಲದೆ ಅರಿವಿಂಗಾಶ್ರಯವಿಲ್ಲ**
**ಅರಿವು-ಆಚಾರದಲ್ಲಿ ಸಮವೇಧಿಸಿದ ಲಿಂಗೈಕ್ಯ**
**ಕ್ರಿಯಾ ಬದ್ಧನೆಂದು ನುಡಿದಡೆ ಪಂಚಮಹಾಪಾತಕ**
**ನಿನ್ನ ಅರಿವಿಂಗಚ್ಚಾಗಿ ಆಚಾರಕ್ಕೆ ಆಳಾಗಿ**

**ನಮ್ಮ ಗುಹೇಶ್ವರಲಿಂಗ ನಿನ್ನ ಕೈವಶಕ್ಕೊಳಗಾದನು**
**ನಿನ್ನಸುಖ ಸಮಾಧಿಯ ತೋರು ಬಾರಾ ಸಿದ್ಧರಾಮಯ್ಯ!**

ಅರಿವು–ಆಚಾರಗಳೇ ಭಕ್ತಿಯ ನೆನೆಗಟ್ಟು! ಅವು ದೇಹದೊಳಗಿರುವ ಅಮೂಲ್ಯ ವಸ್ತುಗಳು, ಸಮತೆಯಿಂದ ಅನುಭವಿಸಿ ಲಿಂಗೈಕ್ಯನಾಗುವುದು. ಇದುವೇ ಸುಖ ಸಮಾಧಿಯು ಎಂದ ಅಲ್ಲಮರು ಇಂಥ ಸದ್ಭಕ್ತ ಬಸವಣ್ಣನವರು ಇದ್ದರೆಂದೂ ಅಭಿಮಾನ ತುಂಬಿದ ಮಾತುಗಳಿಂದ ಹೇಳಿದ್ದು ಹೀಗಿದೆ–

**ಭಕ್ತಿಯೆ ಓಗರವಾಗಿ, ಸತ್ಯವೇ ಮೇಲೋಗರವಾಗಿ**
**ನಿಜ ತತ್ತ್ವವೇ ಸವಿಯಾಗಿ–**
**ಗುಹೇಶ್ವರ ಲಿಂಗಕ್ಕೆ ಇಕ್ಕ ಬಲ್ಲವ**
**ಸಂಗನ ಬಸವಣ್ಣನಲ್ಲದಿಲ್ಲ**

ಎಂದುದಾಗಿ ಭಕ್ತನ ಮನದ ಇಂಗಿತವನ್ನು ಹೇಳಿದ ಕೊನೆಯ ವಚನ.

ಹೀಗೆ ವೇಮನ–ಅಲ್ಲಮರು ಭಕ್ತ ಭಕ್ತಿಯ ಸೊಬಗನ್ನು ಕಂಡ ಸತ್ಯಗಳನ್ನು ದೃಷ್ಟಾಂತ, ಉಪಮೆ, ಪ್ರತಿಮೆಗಳೊಂದಿಗೆ ಸಕಲರಿಗೂ ಲೆಸನೆಸಗುವ ರೀತಿಯಲ್ಲಿ, ಸಕಲರಿಗೂ ಅರ್ಥವಾಗುವ ರೀತಿಯಲ್ಲಿ ತಿಳಿಯಪಡಿಸಿದ್ದಾರೆ. ಅಧ್ಯಾತ್ಮ ಕ್ಷೇತ್ರಕ್ಕೆ ಪ್ರವೇಶಿಸುವವರಿಗೆ ಭಕ್ತಿಯೇ ಮುಖ್ಯ ಮೆಟ್ಟಿಲು ಅಥವಾ ಸೋಪಾನವೆಂದು ನಾವೂ ಅರಿತು ಆಚರಿಸಬೇಕು! ಭಕ್ತಿ–ಶ್ರದ್ಧೆಗಳೇ ಬದುಕಿಗೆ ಆಧಾರ! ಇವಿಲ್ಲದಿರೆ ನಿರಾಧಾರ, ಇವರಿಬ್ಬರೂ ಅಸಾಮಾನ್ಯ ಮಹಾಯೋಗಿಗಳು ತಮ್ಮನುಭವ ಜನ್ಯವಾದ ಮಾತುಗಳ ಮೂಲಕ ಜಗತ್ತು ಹೊರಗಿಲ್ಲ ಒಳಗಿದೆ ಎಂಬ ಮಹತ್ವವನ್ನು ಅತ್ಯಂತ ತರ್ಕಬದ್ಧ ಮತ್ತು ವಸ್ತುನಿಷ್ಠ ಉದಾಹರಣೆಗಳ ಮುಖಾಂತರ ತಮ್ಮ ತಮ್ಮ ಪದ–ವಚನಗಳಲ್ಲಿ ಹಿಡಿದಿಟ್ಟ ಬಗೆಯನ್ನು ನೋಡಿದೆವು. ಆದುದರಿಂದ ಇವರು ಸಾಮಾನ್ಯರಲ್ಲಿ ಅಸಾಮಾನ್ಯರಾಗಿದ್ದವರು ಎಂದು ಕರೆಯಲಾಗಿದೆ. ಇಹದ ಜಗದೊಳಗೆ ಮತ್ತು ಜೀವನದೊಳಗೆ ಸತ್ಯ ಸುಂದರ ಶಿವನನ್ನು ಭಕ್ತಿಯಿಂದ ಕಂಡ ಇವರು ಎಲ್ಲರನ್ನೂ ಪ್ರೀತಿಯಿಂದ ಸಮಾನತೆಯ ಭಾವದಿಂದ ಕಂಡು ಸಂತಸಪಟ್ಟವರು. ಅಂತರಂಗ–ಬಹಿರಂಗದಲ್ಲಿ ಶುದ್ಧವಾದ ಭಕ್ತಿ ಹೊರಹೊಮ್ಮಿದಾಗ ಮಾತ್ರ ಆತ ನಿಜವಾದ ಭಕ್ತ ಎಂದೆನಿಸಿಕೊಳ್ಳುತ್ತಾನೆ ಎಂದು ಪ್ರತಿಪಾದಿಸಿದವರು. ಅಂತಹ ಸದ್ಭಾವ ಮಹಾಶಿವಯೋಗಿಗಳು ಅವರು. ಮನುಷ್ಯ–ಮನುಷ್ಯನಿಗೆ ಬೆಲೆ ಕೊಡುವ, ಸಹಕರಿಸುವ ಮತ್ತು ಹೊಂದಿಕೊಳ್ಳುವ ಗುಣ, ರೀತಿ–ನೀತಿಗಳಲ್ಲಿ ಸಹ ಭಕ್ತಿಯು ಬೆರೆತಿದೆ. ಅದುಕಾರಣ ಜೀವನದಲ್ಲಿ ಅಧ್ಯಾತ್ಮದ ಅರಿವಿನಿಂದ ಪಡೆದುಕೊಳ್ಳುವ ಭಕ್ತಿಯ ಮಾರ್ಗವು ಎಂಥವರನ್ನು ಸರಿದಾರಿಗೆ ತರುತ್ತದೆ. ಅದು ಮೋಕ್ಷಕ್ಕೆ ಕರೆದೊಯ್ಯುತ್ತದೆ.

ಆದುದರಿಂದ ಭಕ್ತಿಯೇ ಮೋಕ್ಷಕ್ಕೆ ಜನನಿ ಅಥವಾ ದಾರಿ ಎನ್ನಲಾಗಿದೆ. ಯಾವುದೇ ಸಾಮಾನ್ಯ ವ್ಯಕ್ತಿ ಅಸಾಮಾನ್ಯ ವ್ಯಕ್ತಿಯಾಗಬೇಕಿದ್ದರೆ ವೇಮನಾಲ್ಲಮರ ಈ ಪದ ಪದ್ಯ ವಚನಗಳನ್ನೋದಿ ಆಚರಿಸುತ್ತಲಿದ್ದರೆ ಮೋಕ್ಷ ಕಟ್ಟಿಟ್ಟ ಬುತ್ತಿ!
ಭಕ್ತನ ನಿಜವಾದ ಫಲಪ್ರಾಪ್ತಿ ಏನೆಂದರೆ – ಅಲ್ಲಮರು ಹೇಳುವಂತೆ–

**ಭಕ್ತಂಗೆ ಉತ್ಪತ್ತಿವಿಲ್ಲಾಗಿ, ಸ್ಥಿತಿಯಿಲ್ಲ**
**ಸ್ಥಿತಿಯಿಲ್ಲಾಗಿ ಲಯವಿಲ್ಲ – ಮುನ್ನ ಆತ**
**ಎಲ್ಲಿಂದ ಬಂದನಲ್ಲಿಗೆ ಹೋಗಿ,**
**ನಿತ್ಯನಾಗಿರ್ಪ ಗುಹೇಶ್ವರಾ ನಿಮ್ಮ ಶರಣ**

ಭಕ್ತನು ದೇಹ– ಆತ್ಮ ಭಾವ ತ್ಯಜಿಸಿ ಪರಮಾತ್ಮನೇ ತಾನೆಂದು ಅಪರೋಕ್ಷವಾಗಿ ಅರಿತವನಾದುದರಿಂದ ಆತನಿಗೆ ಉತ್ಪತ್ತಿ ಲಯ ಸ್ಥಿತಿಯಿಲ್ಲ. ಜನನ–ಮರಣಗಳೆಂಬುದಿಲ್ಲ. ಆತ ಎಲ್ಲಿಂದ ಬಂದಿದ್ದನೋ ಅಲ್ಲಿಗೆ ಹೋದನು ಎಂದರೆ ಪರಮಾತ್ಮನೇ ತಾನಾದ ಎಂದರ್ಥ. ಆದುದರಿಂದ ಅಲ್ಲಮರು ಹೇಳುತ್ತಾರೆ. ಇದರರ್ಥವನು ತಿಳಿಯದವರು ಲಯವಾಗಿ ಹೋಗುತ್ತಾರೆಂದದ್ದು–

**ದೇಶ ಗುರಿಯಾಗಿಲಯವಾಗಿಹೋದವರ ಕಂಡೆ**
**ತಮಂಧ ಗುರಿಯಾಗಿಲಯವಾಗಿಹೋದವರ ಕಂಡೆ**
**ಕಾಮ ಗುರಿಯಾಗಿಬೆಂದುಹೋದವರ ಕಂಡೆ**
**ನಿನಗೆ (ನೀ) ಗುರಿಯಾಗಿಹೋದವರಾರನೂ ಕಾಣೆ ಗುಹೇಶ್ವರಾ!**

ಇದು ಪರಮೋಚ್ಚ ಉಪದೇಶ ಭಕ್ತಿಯೆಂದರೆ ಉಪದೇಶ!

❖❖❖

## ಅಧ್ಯಾಯ–ಏಳು

# ವೇಮನ–ಅಲ್ಲಮರ ಸಾಹಿತ್ಯದಲ್ಲಿ ಗುರು ಕಾರುಣ್ಯ ಸ್ಥಲ

ಗುರುವು ಶಿಷ್ಯರೆನಲು, ಕೊನೆಯು ಮೊದಲು ಎಂತು?
ಗುರುವು ಶಿಷ್ಯರೆಂಬು ಗುರುತು ಎಂತು?
ಗುರುವಿಗಿಪ್ಪ ತಕ್ಕ ಗೌರವವರದಿರಲು
ವಿಶ್ವದಾಭಿರಾಮ ಕೇಳು ವೇಮ.

ಗುರುವಿನ ಶಿಕ್ಷೆಯಿರದೆ ಗುರುತು ದೊರೆವುದೆಂತು?
ಅಜನೇ ಇರಲಿ, ಅವನಪ್ಪನೇ ಇರಲಿ
ಬೀಗದ ಕೈ ಇರದೆ ಬೀಗ ತೆರೆವುದೆಂತು?
ವಿಶ್ವದಾಭಿರಾಮ ಕೇಳು ವೇಮ

ಗುರುವಿಲ್ಲದ ವಿದ್ಯೆ ಗುರುತಾಗಿ ಸಿಗದು
ದೊರೆಯಿಲ್ಲದೆ ಧರೆಯು ತೃಪ್ತಿ ಪಡದು
ಗುರುತರ ದ್ವಿಜನೆಂತು ಗುರು ವಿದ್ಯೆ ಹೊರತು?

– ವೇಮನ

ಕೃತಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ!
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ!
ದ್ವಾಪರಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ!
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ!
ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ನಾನು ಬೆರಗಾದೆನು,

**ಜ್ಯೋತಿಯೊಳಗಣ ಕರ್ಪುರಕ್ಕೆ**
**ಅಪ್ಪುವಿನ ಕೈಯ್ಯಲ್ಲಿಪ್ಪ ಉಪ್ಪಿಂಗೆ**
**ಶ್ರೀಗುರುವಿನ ಹಸ್ತದೊಳಗಿಪ್ಪ ಶಿಷ್ಯಂಗೆ**
**ಈ ಮೂರಕ್ಕೆಯೂ ಬೇರೆ ಕ್ರಿಯಾ ವರ್ತನೆಯುಂಟೆ ಗುಹೇಶ್ವರಾ!**
**– ಅಲ್ಲಮಪ್ರಭು**

* * *

# ಗುರು ಮಹಿಮೆ

**ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರಃ**
**ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ**

ಗುರು ಎಂಬ ಶಬ್ದವೇ ಅತ್ಯುದ್ಭುತ! ಗುರು ತನ್ನಜ್ಞಾನವೆಂಬ ಪ್ರಕಾಶದಿಂದ ಶಿಷ್ಯನ ಉದ್ಧಾರ ಮಾಡಬಲ್ಲ ಶಕ್ತಿ ಪುರುಷ. ಆತ ಬ್ರಹ್ಮನೂ, ವಿಷ್ಣುವೂ, ಮಹೇಶ್ವರನೂ, ಸಾಕ್ಷಾತ್ ಪರಬ್ರಹ್ಮ ಸ್ವರೂಪನು. **'ಮಾತೃದೇವೋ ಭವಃ ಪಿತೃ ದೇವೋ ಭವಃ, ಗುರು ದೇವೋ ಭವಃ ಅಥವಾ ಆಚಾರ್ಯ ದೇವೋ ಭವಃ'** ಎನ್ನಲಾಗಿದೆ. ಹೆತ್ತ ತಾಯಿ ಮೊದಲ ಗುರುವಾದರೆ; ಅಕ್ಷರ ವಿದ್ಯೆ ಕಲಿಸುವವನು ಎರಡನೆಯವನೇ ಗುರು. ಮಗುವಿನ, ದೇಶದ ಸರ್ವಾಂಗೀಣ ಪ್ರಗತಿಗೆ ಗುರುವಿನ ಕೊಡುಗೆ ಅಪಾರ ಮತ್ತು ಮಹತ್ವದ್ದು! ಗುರುವಿನ ಬಗೆಗೆ ಎಲ್ಲ ಧರ್ಮದವರೂ ಮೆಚ್ಚುತ್ತಾರೆ. ಗುರುವಿಲ್ಲದೇ ವಿದ್ಯೆ ದೊರಕಲಾರದು. ಗುರುವಿನ ಗುಲಾಮನಾಗದತನಕ ದೊರೆಯದಣ್ಣ ಮುಕುತಿ ಎನ್ನಲಾಗಿದೆ. ಅದುಕಾರಣ ಗುರುವೇ ಹರಿ ಸರ್ವೋತ್ತಮನು. ಹರಿಹರ ಕವಿಯು ಹೇಳಿದಂತೆ **'ಹರ ಮುನಿದರೂ ಗುರು ಕಾಯುವನು'** ಎಂಬ ವಾಕ್ಯೋಕ್ತಿ ಲೋಕ ಪ್ರಸಿದ್ಧವಾಗಿದೆ. ಅನಂತವಾದ ಅಧ್ಯಾತ್ಮಿಕ ಅನುಭವದತ್ತ ಕರೆದೊಯ್ಯಲು ಮಾರ್ಗದರ್ಶಕನಾದ ಆತನನ್ನು ಸಾಕ್ಷಾತ್ ನಿರಂಜನ ತತ್ತ್ವದ ಸಾಕಾರ ರೂಪ ಎಂದೂ ವರ್ಣಿಸಿರುವರು.

"ಗುರು" ಎಂಬ ಎರಡಕ್ಷರದಲ್ಲಿ ಅದೆಂಥ ಅಗಾಧ ಶಕ್ತಿಯಿದೆ, ಕಾಂತಿಯಿದೆ, ಜ್ಞಾನದ ಬೆಳಕಿದೆ. ಪೂರ್ವ ದಿಕ್ಕಿನಲ್ಲಿ ಜನಿಸುವ ಸೂರ್ಯನಂತೆ ಪ್ರಕಾಶಮಾನನಾದವನು. ಅಂತೆಯೇ ಅಜ್ಞಾನವೆಂಬ ಕತ್ತಲೆ ಹೊಡೆದೋಡಿಸಿ ಜ್ಞಾನವೆಂಬ ಪ್ರಕಾಶವನ್ನು ಬೀರುವವನೇ ಶ್ರೀ ಗುರು, ಸದ್ಗುರು, ಅದು ಕಾರಣ 'ನ ಗುರೋರಧಿಕಂ ನ ಗುರೋರಧಿಕಂ' ಎಂದಿದೆ ವೇದ. ಅಂತಹ ಗುರು ಕಾರುಣ್ಯ ಮೂರುತಿಗೆ ಅನನ್ಯ ಭಕ್ತಿಯಿಂದ ನಮಿಸುತ್ತ ಗೌರವ ಸಲ್ಲಿಸುವುದು ಶಿಷ್ಯನಾದವನ ಆದ್ಯ ಕರ್ತವ್ಯ! ಆದುದರಿಂದ ನಾವೀಗಲೂ "ಗುರುವೇನು ಮಹಾ" ಎಂದು ಅನ್ನದೇ ಗುರು ಕರುಣವೆಂಬ ಕಿರಣದಲ್ಲಿ ಬಾಳುವುದೇ ಸೂಕ್ತವಲ್ಲವೇ? ಹಿಂದಣ ಕಾಲದಲ್ಲಿ ಗುರು–

ಶಿಷ್ಯರ ಸಂಬಂಧ ಬಹು ಗಾಢವಾಗಿತ್ತು. ತಂದೆ-ಮಕ್ಕಳ ಸಲುಗೆಯಿತ್ತು. ಆಶ್ರಮ ಇಲ್ಲವೆ ಕುಟೀರಗಳಲ್ಲಿಯೇ ವಾಸವಾಗಿದ್ದುಕೊಂಡು ಗುರು-ಶಿಷ್ಯರಿಗೆ ಯೋಗ ವಿದ್ಯೆ, ಬಿಲ್ಲು ವಿದ್ಯೆ, ಅಕ್ಷರ ವಿದ್ಯೆ, ಸಂಗೀತ ವಿದ್ಯೆ ಮುಂತಾಗಿ ಅರವತ್ನಾಲ್ಕು ವಿದ್ಯೆಗಳನ್ನು ಬೋಧಿಸುತ್ತಿದ್ದರು. ಭಕ್ತಿ-ಶ್ರದ್ಧೆ-ಆದರತೆ-ಪ್ರೀತಿ-ಮಮತೆ,-ವಾತ್ಸಲ್ಯ-ಶುದ್ಧ ಭಾವಗಳು ಗುರುವಿನಲ್ಲಿರಬೇಕಾದ ಸದ್ಗುಣಗಳು ಶಿಷ್ಯನಲ್ಲಿ ಒಡಮೂಡುತ್ತಿದ್ದವು, ಗುರುವಿಗಿರುವಷ್ಟು ಮಹತ್ವ ಮತ್ತು ಹೊಣೆಗಾರಿಕೆ ಮತ್ತಾರಿಗೂ ಇರಲಾರದು. ಆದುದರಿಂದ ಅವರನ್ನು ಈ ದೇಶದ ಮಹಾಶಿಲ್ಪಿ ಎಂದು ಕರೆದು ಗೌರವಿಸಲಾಗಿದೆ. ವೇದೋಪನಿಷತ್ತುಗಳಲ್ಲಿ ಗುರುವಿನ ಗುಣಗಾನ ಅಥವಾ ಸ್ತುತಿ ಮಾಡಿದ್ದು ಹೀಗಿದೆ-

**ಓಂ ಬ್ರಹ್ಮಾನಂದಂ ಪರಮ ಸುಖದಂ ಕೇವಲಂ ಜ್ಞಾನಮೂರ್ತಿಂ**
**ದ್ವಂದ್ವಾತೀತಂ ಗಗನ ಸದೃಶಂ ತತ್ತ್ವ ಮಸ್ಯಾದಿ ಲಕ್ಷಣಂ**
**ಏಕಂ ನಿತ್ಯಂ ವಿಮಲಮಚಲಂ ಸರ್ವಧೀ ಸಾಕ್ಷಿಭೂತಂ**
**ಭಾವಾತೀತಂ ತ್ರಿಗುಣರಹಿತಂ ಸದ್ಗುರುಂ ತ್ವಂ ನಮಾಮಿ,**

ಇಂಥ ಗುರುವಿನ ಗುಣಗಾನವನ್ನು ಸಪ್ತ ಸಮುದ್ರದ ನೀರನ್ನು ಮಸಿಯನ್ನಾಗಿ ಮಾಡಿಕೊಂಡು ಆಕಾಶವನ್ನೇ ಕಾಗದವನ್ನಾಗಿಸಿಕೊಂಡು ಪ್ರಕೃತಿಯಲ್ಲಿರುವ ಗಿಡ-ಮರಗಳನ್ನೇ ಲೇಖನಿಯನ್ನಾಗಿ ಮಾಡಿಕೊಂಡು ಬರೆದರೂ, ವರ್ಣಿಸಿದರೂ ತೀರಲಾರದು ಎಂದು ಭಕ್ತ ಕಬೀರದಾಸರು ತಮ್ಮ ದೋಹೆಯೊಂದರಲ್ಲಿ ಹೇಳಿದ್ದು ಸತ್ಯದ ಬಿತ್ತಾಗಿದೆ.

**ಭವ ತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು**
**ಕಾಣಬಾರದೆ ಇದ್ದಾಗ, ಕಣ್ಣಿಂಗೆ ಜ್ಞಾನವೆಂಬ ಅಂಜನವೆಚ್ಚು**
**ಶಿವಪಥವಿದೆಂದು ತೋರಿದ ಸದ್ಗುರು ದೇವರಿಗೆ ನಮೋ ನಮೋ**
**ಎಂಬೆನಯ್ಯಾ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭು.**

ಎಂದ ತೋಂಟದ ಸಿದ್ಧಲಿಂಗ ಯತಿವರರ ವಚನವೂ ಕಣ್ಣಿಗೆ ಬೆಳಕನ್ನು ಕೊಡುವ ಗುರುವಿನ ಸ್ವರೂಪವನ್ನು ತಿಳಿಸುತ್ತದೆ. ಅಧ್ಯಾತ್ಮದ ಸಾಧನೆಗೆ ಗುರುವೇ ಮೂಲ ಕಾರಣ ಪುರುಷ. 'ಶಿವ ಪಥವನರಿವೊಡೆ ಗುರು ಪಥವೇ ಮೊದಲು' ಎಂದ ಬಸವ ವಾಕ್ಯ ಗುರುವಿನ ಮಹತ್ವವನ್ನೇ ಸೂಚಿಸುತ್ತದೆ. ಏಕೆಂದರೆ ಲಿಂಗ ದೀಕ್ಷೆಯನಿತ್ತು ಸಾಧನೆಯಲ್ಲಿ ತೊಡಗಿಸುವವನೇ ಗುರು. ಲಿಂಗವಂತ ಧರ್ಮದಲ್ಲಿ ಗುರುವಿಲ್ಲದೆ ಲಿಂಗವಿಲ್ಲ. ಗುರುವಿಡಿದು ಕುರುಹ ಕಾಣಬೇಕು, ಗುರುವಿಡಿದು ಅರುಹ ಕಾಣಬೇಕು, ಗುರುವಿಡಿದು ಆಚಾರವ ಕಾಣಬೇಕು. ಗುರು ಕರುಣೆಯೇ ಸದಾಚಾರ, ಶಿವಾಚಾರ, ಪಂಚಾಚಾರಗಳು, ಮುಂದೆ ಗುರು ಹಿಂದೆ ಲಿಂಗ, ಲಿಂಗದಲ್ಲಿ ಆಚಾರವನ್ನು ತೋರುವವನೇ ಗುರು, ಆಚಾರವೇ ಲಿಂಗವೆಂದು ಅರುಹುವವನು ಗುರು. ಪ್ರಾಣದಲ್ಲಿ ಆ ಅರಿವನ್ನು ನೆಲೆಗೊಳಿಸುವವನು ಗುರು, ಮಾಂಸ ಪಿಂಡವನ್ನು ಮಂತ್ರ

ಪಿಂಡವನ್ನಾಗಿಸುವವನು ಗುರು. ಶಿಕ್ಷಾ ಗುರು, ದೀಕ್ಷಾ ಗುರು, ಮೋಕ್ಷಾ ಗುರುಗಳೆಂದು ಮೂರು ತೆರನಾಗಿರುವವರು ಗುರು, ಆದರೆ, "ಅರಿವೇ ಗುರು" ಎಂಬುದು ಶರಣರ ಸಂದೇಶವಿದ್ದರೂ ಸದ್ಗುರುವಿನ ಮಾರ್ಗದರ್ಶನ ಅತ್ಯವಶ್ಯವಾಗಿ ಬೇಕೇ ಬೇಕು. "ಮೋಕ್ಷವೋಲೋ ಗುರು ಕೃಪೆ" ಎಂದು ವೇದೋಕ್ತಿಯಿದೆ. ಗುರುವಿನ ಕೃಪೆಯಿರಲಾರದೇ ಯಾವುದರ ಸಾಧನೆಯೂ ಶಿಷ್ಯನಿಂದಾಗಲಾರದು. ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ ಎಂದಂತೆ ಗುರುವಿನ ಮುಖದಿಂದಲೇ ಅದು ಬಂದಾಗ ಪರಿಹಾರವಾಗುತ್ತದೆ. ಶಿಷ್ಯನು ಜ್ಞಾನಿಯಾಗಿ ತನ್ನ ಬದುಕನ್ನು ರೂಪಿಸಿಕೊಳ್ಳಲು ಶಕ್ತನಾಗುತ್ತಾನೆ.

**ಹಲವು ಮಾತೇನು ನೀನೊಲಿದು ಪಾದವನಿಟ್ಟ**
**ನೆಲವೇ ಸುಕ್ಷೇತ್ರ ಜಲವೇ ಪಾವನ ತೀರ್ಥ**
**ಸುಲಭ ಶ್ರೀ ಗುರುವೇ ಕೃಪೆಯಾಗು.**

ಎಂದ ಮೈಲಾರ ಬಸವಲಿಂಗ ಶರಣರ ಮಾತು ಯಥೋಚಿತವಾದುದು. ಹಾಗೆಯೇ ಸರ್ವಜ್ಞ ಕವಿಯೂ ತನ್ನ ವಚನಗಳಲ್ಲಿ ಗುರುವಿನ ಅಗ್ಗಳಿಕೆಯನ್ನು ಹೇಳಿದ್ದು ಹೀಗೆ–

**ಬಳ್ಳಿ ಗುರುಡರು ಕೂಡಿ ಹಳ್ಳದಲಿ ಬಿದ್ದಂತೆ**
**ಒಳ್ಳೆಯ ಗುರುವಿನ ಉಪದೇಶ ಇಲ್ಲದಿರೆ**
**ಎಲ್ಲಿಯದು ಮುಕ್ತಿ ಸರ್ವಜ್ಞ!**

ಮಾನವನ ಇಹದ ಬದುಕಿಗೆ ಗುರುವಿನ ಮಾರ್ಗದರ್ಶನ, ಉಪದೇಶ ಅತ್ಯಗತ್ಯ! ಗುರು ಕೃಪೆಯಿಲ್ಲದೇ ಯಾರೊಬ್ಬರೂ ವಿದ್ಯೆ, ಮೋಕ್ಷ ಮಾರ್ಗವನ್ನು ಕಾಣಲಾರದು, ಅಂತಹ ಉಪದೇಶವಿಲ್ಲದೆಯೇ ಸಾಗುವವರು ಕುರುಡರು ಗುಂಪು ಗುಂಪಾಗಿ ಸೇರಿ, ಬಳ್ಳಿ ಹಿಡಿದು ಮುಂದೆ ಸಾಗುತ್ತಾ ಸಾಗುತ್ತಾ ಹಳ್ಳದಲ್ಲಿಯೇ ಬಿದ್ದಂತಾಗುತ್ತದೆ ಎಂದಿದ್ದಾರೆ. ಮುಂದಿನ ವಚನದಲ್ಲಿ–

**ವಿದ್ಯೆ ಕಲಿಸದ ತಂದೆ, ಬುದ್ಧಿ ಹೇಳದ ಗುರುವು**
**ಬಿದ್ದಿರಲು ಬಂದು ನೋಡದ ತಾಯಿ–ಇವರುಗಳು**
**ಶುದ್ಧ ವೈರಿಗಳು ಸರ್ವಜ್ಞ!**

ಮಕ್ಕಳಿಗೆ ಬಾಲ್ಯದಲ್ಲಿ ವಿದ್ಯೆ ಕೊಡಿಸುವುದು ತಂದೆ–ತಾಯಿಗಳ ಆದ್ಯ ಕರ್ತವ್ಯ. ಅವರಿಗೆ ಬಾಲ್ಯದಲ್ಲಿರುವಾಗಲೇ ತಂದೆ ಅಕ್ಷರ ವಿದ್ಯೆಯನ್ನು ಕೊಡಿಸದಿದ್ದರೆ ಮುಗ್ಧ ಮಗುವಿಗೆ ಬುದ್ಧಿಯ ಮಾತನ್ನು ಕಲಿಸಲಾರದ ಗುರು, ಮತ್ತು ಕಾಯಿಲೆಯಿಂದ ಬಳಲುವಾಗ ಔಷದೋಪಚಾರ ಮಾಡಲಾರದ ತಾಯಿ– ಇವರೆಲ್ಲ ಶುದ್ಧ ವೈರಿಗಳೆಂದು ದೂರಿದ್ದಾನೆ ಕವಿ. ಆದುದರಿಂದ ಮಕ್ಕಳಿಗೆ ವಿದ್ಯೆ ಕೊಡಬೇಕಲ್ಲವೇ?

**ಗುರು ವಚನ ಉಪದೇಶ ಗುರು ವಚನ ಪರಭಕ್ತಿ**
**ಗುರು ವಚನ ಮೋಕ್ಷ ಪದವದುವೇ ಗುರು ವಚನ**
**ಪರಮಾರ್ಥವಯ್ಯಾ ಸರ್ವಜ್ಞ!**

ವಿದ್ಯೆ ಮತ್ತು ಮೋಕ್ಷ ಸಂಪಾದನೆಗೆ ಗುರು, ಗುರೂಪದೇಶ ಬೇಕೇ ಬೇಕು, ಎಂದುದಾಗಿ ಹೇಳಿದ್ದು ಆಗಿದೆ. ಪಾರಮಾರ್ಥಿಕಕ್ಕೂ ಅರ್ಥ ಬರಬೇಕಾದರೂ ಗುರು ಬೇಕು. ಮೋಕ್ಷದ ದಾರಿ ತೋರಿಸಲು ಗುರು ಬೇಕು. ಸಾಧಕ ಶಿಷ್ಯನ ಹೃದಯಕಮಲ ಅರಳಲು ಗುರು ಕಾರುಣ್ಯದ ಕಿರಣ ಅವಶ್ಯವಾಗಿ ಬೇಕು, ಗುರುವಿನ ಪವಿತ್ರ ಪಾದಗಳಲ್ಲಿ ಮನ ಹೊರಳಾಡಬೇಕು, ಅಂದಾಗ ಮಾತ್ರ ಭವ ಬಂಧನದಿಂದ ಬಿಡುಗಡೆಯಾಗುತ್ತದೆ.  ಬಂಧುಗಳಾದವರು ಬಂದುಂಡು ಹೋದರೆ ಭವದ ಬಂಧನವನ್ನು ಕಳಚುವಾತನೇ ಗುರು ಎಂದು ಕಬೀರರ ಹೇಳಿಕೆ ಸಮಂಜಸವಾಗಿದೆ.

ಶಿವ ಕಾರುಣ್ಯದ ಹಂಬಲವನ್ನು ಶಿಷ್ಯನಲ್ಲಿ ಒಡಮೂಡಿಸುವವನೇ ಸದ್ಗುರು– ಮುಪ್ಪಿನ ಷಡಕ್ಷರಿಯವರು–

**ಅವರವರ ದರುಶನಕೆ ಅವರವರ ವೇಷದಲಿ**
**ಅವರವರಿಗೆಲ್ಲ ಗುರು ನೀನೊಬ್ಬನೇ**
**ಅವರವರ ಭಾವಕ್ಕೆ ಅವರವರ ಪೂಜೆಗಂ**
**ಅವರವರಿಗೆಲ್ಲ ಶಿವ ನೀನೊಬ್ಬನೆ**

ಎಂದು ಗುರುವಿನ ಮಹಿಮೆಯನ್ನು ಗುರುತಿಸಿ ಹೇಳಿದ್ದಾರೆ. ಗುರುವಿನ ನಾಮಸ್ಮರಣೆಯೇ ಜೀವಿಯ ಪರಮ ತಪಸ್ಸಾಗಬೇಕೆಂದಿದ್ದಾರೆ.  ಒಂದರ್ಥದಲ್ಲಿ ಗುರು ಬೇರೆಯಲ್ಲ ಪರಮಾತ್ಮ ಬೇರೆಯಲ್ಲವೆಂದಂತೆ, ಅಲ್ಲಮಪ್ರಭುದೇವರು ತಮ್ಮದೊಂದು ಸ್ವರ ವಚನದಲ್ಲಿ 'ಸಾರೇ ಚೆಲ್ಲೇದ ಮುಕುತಿ–ಗುರುತೋರಿದಲ್ಲದೆಯೇ ಕಾಣಿಸದಣ್ಣಾ' ಎಂದಿರುವುದನ್ನು ಗಮನಿಸಿದರೆ ಗುರುವಿನ ಅಗತ್ಯತೆಯನ್ನು ಒತ್ತಿ ಹೇಳಿದಂತಿದೆ.

**ತಂದೆಯನ್ನಾದರೂ ತೊರೆ, ತಾಯಿಯನ್ನಾದರೂ ತೊರೆ**
**ಬಂಧುವನ್ನಾದರೂ ತೊರೆ, ಬಳಗವನ್ನಾದರೂ ತೊರೆ**
**ಮನೆ ಮಾರು ಸಿರಿ ಹೊತ್ತು ಏನೆಲ್ಲವನ್ನೂ ತೊರೆ**
**ಆದರೆ ಸ್ವತಂತ್ರ ಧೀರ ಸಿದ್ಧೇಶ್ವರನಾಣೆ ನೀನು**
**ತೊರೆಯದಿರು ಗುರುವ, ತೊರೆಯದಿರು ಗುರಿಯ**
**ತೊರೆಯದಿರು ದಿಟವ, ತೊರೆಯದಿರು ಗೆಲುವೆಂಬ ಹಟವ**

ಎಂದು ಹೇಳಿದ ಆಧುನಿಕ ವಚನಕಾರ ಡಾ. ಸಿದ್ಧಯ್ಯ ಪುರಾಣಿಕರ ಮಾತು ಗಮನಾರ್ಹವಾದುದು. ಸಕಲರಲ್ಲಿ ಗುರುವೇ ಸರ್ವಶ್ರೇಷ್ಠನು, ಆತನಿಂದಲೇ ಸರ್ವ

ಸಂಪದವು, ಆತನಿಂದಲೇ ಶಿಷ್ಯನ ಬದುಕು ಹಸನಾಗುತ್ತದೆ. ಮೋಕ್ಷ ಪಥದತ್ತ ಸಾಗುತ್ತದೆ.

ಲೋಕದಲ್ಲಿಯ ನೂರಾರು ಗುರುಗಳ ನೋಡಿ ನಾನು ಬೆಸಗೊಂಡನಯ್ಯಾ, ವಿತ್ತಾಪಹಾರಿ ಗುರುಗಳು ನೂರಾರು, ಮಂತ್ರ–ತಂತ್ರದಿಂದ ಭಯ–ಲೋಕದಲ್ಲಿ ಸುಖ–ದುಃಖನೀವ ಗುರುಗಳು ನೂರಾರು ಎಂದು ಮುಂತಾಗಿ ಸಿದ್ಧರಾಮೇಶ್ವರರು ಹೇಳುತ್ತಾ 'ಸಂಶಯಾದಿಗಳನ್ನೆಲ್ಲಾ ಜ್ಞಾನಾಗ್ನಿಯಿಂದ ದಹಿಸಿ ಅರುಹಿನ ಬಂಧನದಲ್ಲಿರಿಸಿದ ಗುರು' ಮಾತ್ರ ನಿಜವಾದ ಗುರುವೆಂದು ಪುರಸ್ಕರಿಸಿದ್ದಾರೆ. ಇಂತಹ ಗುರು ಯೋಗ್ಯ ಶಿಷ್ಯನಿಗೆ ಮಾತ್ರ ದೀಕ್ಷೆಯನ್ನೀಯುತ್ತಾನೆ ಎಂದಿದ್ದಾರೆ. ಸಿದ್ಧರಾಮ, ನಿಜವಾದ ಗುರು ನಡೆ–ನುಡಿ, ಶುದ್ಧವಾದವರಿಗಲ್ಲದೆ ಅನುಗ್ರಹಿಸಲಾರ ನೋಡಾ! ಪರಮಾರ್ಥಕ್ಕಲ್ಲದ ಜಡ ನರರನೊಲ್ಲ, ದೀಕ್ಷೆಯ ಕೊಡನು ಎಂದಿದ್ದಾರೆ ಚೆನ್ನಬಸವಣ್ಣನವರು. ಹೀಗೆ ದೀಕ್ಷೆಗೆ ಯೋಗ್ಯತೆ ಬಹಳ ಮುಖ್ಯ ಎಂಬುದನ್ನು ಶರಣರು ಒತ್ತಿ ಒತ್ತಿ ಹೇಳಿದ್ದಾರೆ.

ಸದ್ಗುರುವಿನ ಕಾರುಣ್ಯವಾದರೂ ಅದನ್ನು ಸಾಧಿಸುವ ನಿಷ್ಠೆ ಭಕ್ತನಲ್ಲಿಯೂ ಹುಟ್ಟಬೇಕು, ಭಗವದ್ಗೀತೆಯಲ್ಲಿ ಹೇಳುವಂತೆ ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕೆಂಬ ಸ್ವಪ್ರಯತ್ನಕ್ಕೆ ಹೆಚ್ಚು ಮಹತ್ವ ಶರಣ ಮಾರ್ಗದಲ್ಲಿ ಲಭ್ಯವಾಗಿದೆ ಎಂದು ಹೇಳಬಹುದು. ಹೀಗೆ ಗುರು ಕಾರುಣ್ಯ–ಶಿಷ್ಯರ ಪ್ರಯತ್ನ ಎರಡೂ ಸೇರಿದಾಗ ಅದು ಕೊನೆಯಲ್ಲಿ ಗುರು–ಶಿಷ್ಯ ಎಂಬ ಭೇದ ಭಾವವನ್ನು ಅಳಿಸಿ ಹಾಕುವ ಸಾಮರಸ್ಯದ ನಿಲುವಿಗೇರುತ್ತದೆ. 'ಜ್ಯೋತಿಯ ಸಂಗದಿಂದ ಕರ್ಪುರ ಜ್ಯೋತಿಯಪ್ಪಂತೆ, ಅಪ್ಪುವಿನ ಸಂಗದಿಂದ ಉಪ್ಪು ಅಪ್ಪುವಪ್ಪಂತೆ, – ಶ್ರೀ ಗುರುವಪ್ಪುದು ತಪ್ಪದು ನೋಡಾ' ಎನ್ನುತ್ತಾರೆ ಉರಿಲಿಂಗ ಪೆದ್ದಿ.

**ಗುರು ಶಿಷ್ಯ ಸಂಬಂಧವನರಿಯಲೆಂದು ಹೋದರೆ**
**ತಾನೇ ಗುರುವಾದ, ತಾನೇ ಶಿಷ್ಯನಾದ, ತಾನೇ ಲಿಂಗವಾದ**
**ಗುಹೇಶ್ವರಾ, ನಿಮ್ಮ ಶರಣನ ಕಾಯದ ಕೈಯಲ್ಲಿ**
**ಲಿಂಗವ ಕೊಟ್ಟರೆ ಭಾವ ಬತ್ತಲೆಯಾಯಿತ್ತು**

ಎಂಬ ಅಲ್ಲಮರ ಮಾತು ಗುರು–ಶಿಷ್ಯರ ಸಂಬಂಧದ ಕೊನೆಯ ಹಂತವನ್ನು ಸೂಚಿಸುತ್ತದೆ. ಗುರು–ಶಿಷ್ಯರ ಐಕ್ಯವನ್ನು ಹೇಳುವ ಇಂತಹ ಅನೇಕ ಮಾತುಗಳನ್ನು ಅಲ್ಲಮರ ವಚನಗಳಿಂದ, ವೇಮನರ ಪದ–ಪದ್ಯಗಳಿಂದ ಉದಾಹರಿಸಲು ಪ್ರಯತ್ನಿಸಲಾಗಿದೆ. ಒಟ್ಟಿನಲ್ಲಿ 'ತನ್ನಂತೆ ಎನ್ನನ್ನು' ಮಾಡಿಕೊಳ್ಳುವ ಮಾಂತ್ರಿಕನಾಗಿ, ಭವರೋಗ ವೈದ್ಯನಾಗಿ ಗುರು ಇಲ್ಲಿ ಕಾಣಿಸಿಕೊಂಡಿದ್ದಾನೆ. ಮೈಲಾರ ಬಸವಲಿಂಗ ಶರಣರ ಹೇಳಿರುವಂತೆ.

**ಗುರುವೇ ಭಕ್ತರ ಕಲ್ಪತರುವೆ ಸಜ್ಜನ ಮನೋಹರವೇ**
**ನಿಜ ಜ್ಞಾನ ಭಕ್ತಿ ವೈರಾಗ್ಯ ಮಂದಿರವೇ**
**ಮದ್ಗುರುವೆ ಕೃಪೆಯಾಗು**

ಎಂದುದಾಗಿ ಹೇಳಿರುವ ವಚನೋಕ್ತಿಯಂತೆ ಗುರುಕೃಪೆಯನ್ನು ವೇಮನ-ಅಲ್ಲಮರ ಪದ-ಪದ್ಯ-ವಚನಗಳ ಮೂಲಕ ಅರಿಯಲು ಮತ್ತು ಬರೆಯಲು ಮಾಡಿದ ಒಂದು ಸಣ್ಣ ಪ್ರಯತ್ನವಿದಾಗಿದೆ.

**'ಅಲ್ಲಮರ' ವಚನಗಳಲ್ಲಿ ಗುರುಕರುಣಸ್ಥಲದ ಬೋಧೆ:**

ಎಲ್ಲ ಕಷ್ಟಗಳಿಗೆ ಕಾರಣವಾದುದು ಭ್ರಮಾ, ಮಾಯೆ, ಅದು ಹೇಯ. ಅದನ್ನು ನಿವಾರಿಸಿ ತನ್ನ ನಿಜದ ಅರಿವಿನಲ್ಲಿ ನಿಲ್ಲಬೇಕೆಂಬ ಜೀವಾತ್ಮನು ಗುರುವನ್ನು ಸಾರಿ, ಅತನ ಕರುಣೆಯನ್ನು ಬಯಸುತ್ತಾನೆ. ಆ ಗುರುವಿನ ಕರುಣೆ ಎರಡು ರೀತಿಯಲ್ಲಿ, ರೂಪದಲ್ಲಿದೆ. ಒಂದು ಆತ್ಮ ಬೋಧ, ಇನ್ನೊಂದು ಶಿವಯೋಗ ಸಾಧನೆಗಾಗಿ ಇಷ್ಟಲಿಂಗದ ದೀಕ್ಷೆ, ಗುರುಗಳು ಮೂರು ಹಂತದ ದೀಕ್ಷೆಗಳನ್ನು ನೀಡುತ್ತಾರೆ. ಮೊದಲನೆಯದಾದ ಶಿಕ್ಷಣವಿಲ್ಲದೆಯೇ ಮಾನವನ ಉದ್ಧಾರವಾಗದು. ಆದ ಕಾರಣ, ಶಿಕ್ಷಣವಿತ್ತು ಕೈಹಿಡಿದು ನಡೆಸುವಾತನೇ ಶ್ರೀ ಗುರು, ಅನಂತರದಲ್ಲಿ ಶಿಷ್ಯೋತ್ತಮನು ಶಿಕ್ಷಣದ ವಿಕಾಸದಿಂದ ಸದ್ಗುರುವಿನಿಂದ ದೀಕ್ಷೆ ಸಂಪಾದಿಸಿಕೊಂಡು ಮೋಕ್ಷ ಹೊಂದಲು ಸಾಧ್ಯ ಸಾಧ್ಯವಾಗುತ್ತದೆ. ಹೀಗೆ ಶಿಕ್ಷಾ ಗುರು, ದೀಕ್ಷಾ ಗುರು, ಮೋಕ್ಷಾ ಗುರು ಎಂದು ಮೂರು ವಿಧಗಳಲ್ಲಿ ಗುರುವಿನ ಕರುಣೆ ಬೇಕಾಗುತ್ತದೆ. ಹೀಗೆ ಗುರುವಿನ ಮಾರ್ಗದರ್ಶನವಿರಲಾರದೆ ಶಿಷ್ಯನ ಉದ್ಧಾರವಾಗಲಾರದು. ಹನ್ನೆರಡನೆಯ ಶತಮಾನದಲ್ಲಿಯೇ ಗುರು-ಶಿಷ್ಯರ ಸಂಬಂಧ ಕುರಿತು ಹೇಳಿದ ಅಲ್ಲಮರ ವಚನದಲ್ಲಿಂತಿದೆ.

**ಕೃತ ಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ**
**ಆಗಲಿ, ಮಹಾಪ್ರಸಾದವೆಂದೆನಯ್ಯಾ!**
**ತ್ರೇತ್ರಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ**
**ಆಗಲಿ, ಮಹಾಪ್ರಸಾದವೆಂದೆನಯ್ಯಾ!**
**ದ್ವಾಪರ ಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ, ಮಹಾಪ್ರಸಾದವೆಂದೆನಯ್ಯಾ!**
**ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ, ಮಹಾಪ್ರಸಾದವೆಂದೆನಯ್ಯಾ!**
**ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ**
**ನಾನು ಬೆರಗಾದೆನು?**

ಇಲ್ಲಿರುವ ಯುಗದರ್ಶಕ ಶಬ್ದಗಳು ಶಿಷ್ಯರ ಪ್ರಕಾರಗಳನ್ನು ನಿರ್ದೇಶಿಸುತ್ತವೆ. ಕೃಯುಗದ ಶಿಷ್ಯ ಭೋಗ-ಮೋಹಿತದಲ್ಲಿ ಆಸಕ್ತನಿರುವವನು. ಇದರಿಂದ ಬಿಡಿಸಿ ತರುವುದು ಸುಲಭವದ ಮಾತಲ್ಲ. ಆದುದರಿಂದ ಬಡಿದು ಬುದ್ಧಿಯ ಕಲಿಸಬೇಕಾಗುತ್ತದೆ. ತ್ರೇತ್ರಾಯುಗದ ಶಿಷ್ಯನಿಗೆ ಸಿದ್ಧಿ-ಸಾಧನೆಗಳ ಅನುರಕ್ತಿಯಿರುತ್ತದೆ, ಆದರೂ ಈತನಿಗೆ ಬೈದು ಶ್ರೀ ಗುರುವು ಬುದ್ಧಿಯ ಕಲಿಸಬೇಕಾಗುತ್ತದೆ. ಮೂರನೆಯ ಶಿಷ್ಯನಿಗೆ ಯಶಸ್ಸು ಮತ್ತು ಕೀರ್ತಿ ಎಂದರೆ ಪಂಚಪ್ರಾಣ, ಆದುದರಿಂದ ಶಿವಪಥದ ಮಾರ್ಗ ಹಿಡಿಸಲಾರದು. ಆದುದರಿಂದ ಶ್ರೀಗುರುವು ಗದರಿಸಿ ಬುದ್ಧಿಯ ಕಲಿಸಬೇಕಾಗುತ್ತದೆ. ಕಲಿಯುಗದ ನಾಲ್ಕನೆಯ ಶಿಷ್ಯನು ಅಧ್ಯಾತ್ಮದ ಗಂಧ ಗಾಳಿ ಇರದವನಾದರೂ, ಕೀರ್ತಿ-ಕಾಮನೆಗಳ ಬೆನ್ನು ಹತ್ತಿದವನಾಗಿರುತ್ತಾನೆ. ಆತನ ಮನಸ್ಸು ಶಿವನತ್ತ ಹೊರಳಿಸಲು ದೈನ್ಯ ಭಾವದಿಂದ ಶ್ರೀ ಗುರುವು ಕರುಣೆ ತೋರಿ ವಂದಿಸಿ ಶಿಕ್ಷಣ / ವಿದ್ಯೆ ಕಲಿಸಬೇಕಾಗುತ್ತದೆ. ಶಿಷ್ಯನು ಮಹಾಪ್ರಸಾದವೆಂದು ಸ್ವೀಕರಿಸುತ್ತಾನೆ ಎಂದ ಪದಪ್ರಯೋಗ ಅಲ್ಲಮರ ಸಾಹಿತ್ಯದ ವೈಶಿಷ್ಟ್ಯತೆಯಾಗಿದೆ. ಶ್ರೀ ಗುರು ರೂಪ ಗುಹೇಶ್ವರನ ಈ ಬಗೆಯ ಕಾಲದ ನಿಯತಿ ಮಹಿಮೆಯನ್ನು ಕಂಡು ಅಲ್ಲಮರೇ ಬೆರಗಾಗಿದ್ದಾರೆ.

ಅಲ್ಲಮರ ಗುರುಗಳು ಅನಿಮಿಷ ದೇವರು. ಅವರನ್ನು ಗುರುವನ್ನಾಗಿ ನಾನು ಪಡೆದು ಧನ್ಯನಾದೆನೆಂದು ಹೇಳಿದ ವಚನವಿಂತಿದೆ-

**ಅಯ್ಯಾ ನೀನೆನಗೆ ಗುರುವಪ್ಪಡೆ-ನಾ ನಿನಗೆ ಶಿಷ್ಯನಪ್ಪಡೆ**
**ಎನ್ನ ಕರಣಾದಿ ಗುಣಂಗಳ ಕಳೆದು**
**ಎನ್ನ ಕಾಯದ ಕರ್ಮವ ತೊಡೆದು**
**ಎನ್ನ ಪ್ರಾಣನ ಧರ್ಮವ ನಿಲಿಸಿ,**
**ನೀನೆನ್ನ ಕಾಯದಲಡಗಿ, ನೀನೆನ್ನ ಪ್ರಾಣದಲ್ಲಡಗಿ**
**ನೀನೆನ್ನ ಭಾವದಲ್ಲಡಗಿ, ನೀನೆನ್ನ ಕರಸ್ಥಲಕ್ಕೆ ಬಂದು.**
**ಕಾರುಣ್ಯವ ಮಾಡಾ ಗುಹೇಶ್ವರಾ!**

ನಾನು ನಿಮಗೆ ಶಿಷ್ಯನಾಗಬೇಕು. ನೀವು ಎನಗೆ ಗುರುವಾಗಿ ಕರುಣೆಯ ಕೃಪೆ ತೋರಬೇಕು ಎನ್ನ ಅಂತರಂಗದ ಅಭಿಲಾಷೆಯಿದು. ಆದುದರಿಂದ ನಿಮ್ಮ ಪ್ರಾಸಾದಿಕ ದೃಷ್ಟಿ ಬೀರಿಎನ್ನ ಬಾಹ್ಯ ಅಂತಃಕರಣಗಳ ಕಲ್ಮಷವನ್ನು ಕಳೆಯುವುದಾಗಲಿ, ಎನ್ನ ಕಾಯದ ಮಾಲಿನ್ಯವ ಕಳೆಯುವದಾಗಲಿ, ಎನ್ನ ಪ್ರಾಣದ ಅಧೋಮುಖ ಚಲನೆಯನ್ನು ನಿಲ್ಲಿಸುವುದಾಗಲಿ, ಆಗ ಎನ್ನ ಕರಣಂಗಳು ಶುದ್ಧ, ಎನ್ನ ಕಾಯವು ನಿರ್ಮಲ, ಎನ್ನ ಪ್ರಾಣವೂ ಪವಿತ್ರ ನೀವು ಆ ನಿರ್ಮಲ ಕಾಯದಲ್ಲಿ ನೆಲೆಸಬೇಕು. ಎನ್ನ ಕಾಯ ನಿಮ್ಮ ಪಾದ ಸೇವೆಗಾಗಿ ಶುದ್ಧ-ಪರಿಶುದ್ಧವಾಗುತ್ತದೆ. ಎನ್ನ ಬದುಕೆಲ್ಲವೂ ನಿಮಗೇ ಅರ್ಪಣ. ಎನ್ನ ಭಾವದಲ್ಲಿ, ಮನದಲ್ಲಿ ನಿಮ್ಮ ನೆನಹು ಚಿರಸ್ಥಾಯಿಯಾಗಲಿ,

ಗುರುದೇವನೇ, ಎನ್ನೊಳಗೆ ತುಂಬಿದ ಕುರುಹಾಗಿ ಎನ್ನ ಕರದ ಇಷ್ಟಲಿಂಗವಾಗಿ- ಮೂರ್ತಗೊಳ್ಳಬೇಕು. ಹಾಗೆ ತಮ್ಮ ಕರುಣೆ ಎನ್ನ ಮೇಲಿರಲಿ ನೀವೇ ಗುಹೇಶ್ವರನಾದ ಬಳಿಕ ನಿಮಗೆ ಅಸಾಧ್ಯವಾವುದು? ಕೃಪೆ ಮಾಡುವುದಾಗಲಿ ಎಂದು ಪ್ರಾರ್ಥಿಸಿಗೊಂಡ ಬಗೆ ಗುರು-ಶಿಷ್ಯರ ಸಂಬಂಧದ ಕುರುಹಾಗಿದೆಯೆಂದೇ ಹೇಳಬೇಕು.

**ಜ್ಯೋತಿಯೊಳಗಣ ಕರ್ಪುರಕ್ಕೆ,**
**ಅಪ್ಪುವಿನ ಕೈಯಲ್ಲಿಪ್ಪ ಉಪ್ಪಿಂಗೆ**
**ಶ್ರೀ ಗುರುವಿನ ಹಸ್ತದೊಳಗಿಪ್ಪ ಶಿಷ್ಯಂಗೆ**
**ಈ ಮೂರಕ್ಕೆಯೂ ಬೇರೆ ಕ್ರಿಯಾವರ್ತನೆಯುಂಟೆ ಗುಹೇಶ್ವರಾ?**

**ಗುರು ಶಿಷ್ಯ ಸಂಬಂಧವನರಸಲೆಂದು ಹೋದಡೆ**
**ತಾನೆ ಗುರುವಾದ; ತಾನೆ ಶಿಷ್ಯನಾದ, ತಾನೆ ಲಿಂಗವಾದ**
**ಗುಹೇಶ್ವರಾ ನಿಮ್ಮ ಶರಣನ ಕಾಯದ ಕೈಯಲ್ಲಿ**
**ಲಿಂಗವ ಕೊಟ್ಟೊಡೆ ಭಾವ ಬತ್ತಲೆಯಾಯಿತ್ತು**

**ತಾತ್ಪರ್ಯ:** ಜ್ಯೋತಿಗೆ ಒಳಗಾದ ಕರ್ಪುರ ಜ್ಯೋತಿಯೇ ಆಗುತ್ತದೆ. ಜಲವನ್ನು ಪ್ರವೇಶಿಸಿದ ಉಪ್ಪು ಜಲವೇ ತಾನಾಗುತ್ತದೆ. ಹಾಗೆಯೇ ಶ್ರೀಗುರುವಿಗೆ ತನ್ನನ್ನು ಸಮರ್ಪಿಸಿಕೊಂಡ ಶ್ರೀ ಗುರುವೇ ಆಗುತ್ತಾನೆ. ಶ್ರೀ ಗುರುವಿನ ಜ್ಞಾನನೇತ್ರ ಜ್ಯೋತಿಯಂತೆ, ಅವನ ಕಾರುಣ್ಯ ಅಪ್ಪುವಿನಂತೆ. ಶಿಷ್ಯನ ಪೂರ್ವಾಶ್ರಯವನ್ನೆಲ್ಲಾ ಕಳೆದು ಅಂಗ ಭಾವನೆಯು ತೊಡೆದು ಶ್ರೀ ಗುರುವು ಅವನನ್ನು ಜ್ಯೋತಿರ್ಮಯಗೊಳಿಸುತ್ತಾನೆ. ಅಂದರೆ ತನ್ನ ಮೂಲ ಸ್ವರೂಪವನ್ನು ಅರಿತ ಗುರು, ಅರಿಯಲೆಳಸುವ ಶಿಷ್ಯ ಹಾಗೂ ಅವರಿಬ್ಬರ ಸಂಬಂಧ ತನು ಸಂಕೇತಿಸುವ ಇಷ್ಟಲಿಂಗ- ಈ ಮೂರರ ಮೂಲವನ್ನು ಅರಸಿ ಕಾಣಲು ಹೊರಟರೆ, ಕೊನೆಗೆ ಕಾಣಬರುವುದು ಪರಶಿವತತ್ತ್ವ.

'ವೇಮನರ' ಪದಗಳಲ್ಲಿ ಶ್ರೀ ಗುರು-ಶಿಷ್ಯರ ಸಂಬಂಧವಿಂತಿದೆ:

**ದೇಹವಾತ್ಮ ರೂಪ ತಿಳಿಸಿ ಬಿಚ್ಚಿ ಹೇಳಿ**
**ಅವನಿ ನೋಟ ನೋಡಿಸುವವನೇ ಗುರು**
**ಭ್ರಮರ ತನ್ನ ರೂಪ ಕೀಟಕಿತ್ತ ರೀತಿ**
**ವಿಶ್ವದಾಭಿರಾಮ ಕೇಳು ವೇಮ.**

ದೇಹದೊಳಿರುವ ಆತ್ಮನೇ ಪರಮಾತ್ಮ ಎಂಬ ತತ್ತ್ವವನ್ನು ಬಿಚ್ಚಿ ತಿಳಿಸಿ ಹೇಳುವವನೇ ಸದ್ಗುರುವು! ಅದ್ಹೇಗೆಂದರೆ ಭ್ರಮರವು ತನ್ನ ರೂಪವನ್ನು ಕೀಟಕ್ಕೆ ಇತ್ತ ರೀತಿಯಂತೆ ಎಂದು ಹೇಳಿ ಅಂತಹ ಶ್ರೀ ಗುರುವಿಗೆ ವಂದಿಪೆನು ಎಂದು ನಮಿಸಿದ್ದಾರೆ. ವೇಮನರು ತಿಳಿಯದಿರುವವರಿಗೆ ತಿಳಿಸಿ ಹೇಳುವ ಶಕ್ತಿ-

ಸಾಮರ್ಥ್ಯವಿರುವುದು ಶ್ರೀ ಗುರುವಿಗೆ ಮಾತ್ರ. ಶ್ರೀ ಗುರುವು ಉದಾತ್ತ ನೀತಿಯುಳ್ಳವನಾಗಿರಬೇಕು. ತೆಲುಗಿನಲ್ಲಿರುವ ಪದ–

**ಕಲ್ಲ ಗುರುಡುಕಟ್ಟು–ನೆಲ್ಲಕರ್ಮಂಬುಲ**
**ಮಧ್ಯಗುರುಡು ಕಟ್ಟು ಮಂತ್ರಚಯಮು**
**ಉತ್ತಮುಂಡು ಕಟ್ಟು ಯೋಗ, ಸಾಮ್ರಾಜ್ಯಂಬು**
**ವಿಶ್ವದಾಭಿರಾಮ ವಿನುರ ವೇಮ**

**ಕನ್ನಡಕ್ಕೆ: ಕಳ್ಳ ಗುರು ಕಟ್ಟುವನೆಲ್ಲ ಕರ್ಮಗಳನ್ನು**
**ಮಧ್ಯ ಗುರು ಕಟ್ಟುವ ಮಂತ್ರ–ತಂತ್ರ**
**ಉತ್ತಮ ಕಟ್ಟುವನು ಯೋಗ ಸಾಮ್ರಾಜ್ಯವ**
**ವಿಶ್ವದಾಭಿರಾಮ ಕೇಳು ವೇಮ.**

ಗುರು ಎನ್ನುವವನು ಸನ್ಮಾರ್ಗವಿಡಿದು ಸನ್ಮಾರ್ಗದತ್ತ ಕರೆದೊಯ್ಯುವಲ್ಲಿ ಯೋಗ್ಯ ಮಾರ್ಗದರ್ಶನ ಮಾಡಿ ಭಕ್ತರನ್ನು, ಶಿಷ್ಯರನ್ನು ಉದ್ಧರಿಸುವುದು ಸದ್ಗುರುವಿನ ಕರ್ತವ್ಯ! ಆದರೆ ಕಳ್ಳ ದಾರಿ ಹಿಡಿಸುವವರನ್ನು ಗುರುವೆನ್ನಬೇಕೆ? ಅಸಾಧ್ಯ! ಈ ಪದದಲ್ಲಿ ಕಳ್ಳ ಗುರುವಿನ ಮೋಸ–ವಂಚನೆಯ ಕಾರ್ಯಾಚರಣೆಗಳನ್ನೇ ಬಯಲಿಗೆಳೆದಿದ್ದಾರೆ. ಇಂಥವರೇ ತುಂಬಿದ ಜಗತ್ತು ಇಂದಿನದಾಗಿದೆಯೆಂದು ಹೇಳಬಹುದು, ಆದುದರಿಂದ ಅವರು ಕೊಡುವ ದೃಷ್ಟಾಂತಗಳು ಸೂಕ್ತವಾಗಿವೆ.

ನಮಗೆ ಉಂಟಾಗುವ ಅನೇಕ ಆಕಸ್ಮಿಕ ತೊಡಕು–ತೊಂದರೆಗಳು ನಮ್ಮ ಪೂರ್ವ ಜನ್ಮದ ಕರ್ಮಫಲವೆಂದು ಹೇಳಿ ತಂದೆ ತೀರಿದರೆ ಪಿತೃ ಶಾಂತಿ, ಕಾಗೆ ಮನೆ ಹೊಕ್ಕರೆ ಗೃಹ ಶಾಂತಿ, ರೋಗ ಬಂದರೆ ಮಾರಿಯಮ್ಮನಿಗೆ ಕುರಿಯ ಬಲಿಯೇ ಶಾಂತಿ, ಮನಸ್ಸಿನ ಇಷ್ಟ ನೆರವೇರಬೇಕಾದರೆ ಸತ್ಯ ನಾರಾಯಣನ ಪೂಜಾ ವ್ರತ, ಷೋಡಶ ಸೋಮವಾರ, ಗೌರೀಪೂಜೆ, ಉಪವಾಸ ವ್ರತಾಚರಣೆ ಎಂಬಿತ್ಯಾದಿ ವ್ರತಕರ್ಮ ಮಾಡಬೇಕೆಂದು ಬೋಧಿಸುವ ಗುರು ಕಳ್ಳ ಗುರುವೇ ಸರಿ! ಇನ್ನು ನಮಗೆ ಬೇನೆ–ಬೇಸರಿಕೆ ಬಂದಾಗ, ಭೂತ–ಪಿಶಾಚಿ ಬಡಿದಾಗ, ಹಾವು ಕಚ್ಚಿದಾಗ–ಮಂತ್ರೋಪಚಾರ ಹೇಳಿ ಗುಣಪಡಿಸುವವನೂ ಮತ್ತು ದೇವತಾ ಸ್ತುತಿಯ ಗಾಯತ್ರಿ, ಪಂಚಾಕ್ಷರೀ, ಅಷ್ಟಾಕ್ಷರೀ ಮಂತ್ರ–ಜಪ–ತಪಾದಿಗಳನ್ನು ಬೋಧಿಸುವವನು ಕೇವಲ ಮಧ್ಯಮ ಗುರುವೆನಿಸಬಹುದು. ಆದರೆ, ನಿಜವಾದ ಆತ್ಮಜ್ಞಾನವಾಗಬೇಕಾದರೆ, ಭಗವಂತನ ಸಾಯುಜ್ಯ ಪಡೆಯಬೇಕಾದರೆ, ಭಕ್ತಿ–ಜ್ಞಾನ–ಕರ್ಮಾದಿ–ಯೋಗಗಳಿಂದ ಮಾತ್ರ ಸಾಧ್ಯ. ಅದು ಕಾರಣ ನಿಜವಾದ ಗುರುವು ಯೋಗ ಸಾಮ್ರಾಜ್ಯವನ್ನೇ ಸ್ಥಾಪಿಸಿ ಸಾಧಕ ಶಿಷ್ಯರಿಗೆ ಮಾರ್ಗದರ್ಶನ ಮಾಡುವನು. ಇವನೇ ನಿಜವಾದ ಸದ್ಗುರು ಸಮರ್ಥನು ಎಂದು ವೇಮನರ

ನುಡಿಯಾಗಿದೆ, ವಾಣಿಯಾಗಿದೆ. ಇನ್ನೊಂದು ಪದದಲ್ಲಿ ಗುರು ಮಹಿಮೆಯನ್ನು ಗುಣಗಾನ ಮಾಡಿದ್ದು ಹೀಗಿದೆ-

**ಗುರು ಬ್ರಹ್ಮಸ್ಪತಿಯು ಸಹಜ ಗುಣವ ಮೀರಿ**
**ಚಂದ ಮಾಮಗಿತ್ತ ಶಾಪ-ತಾಪ;**
**ಗುರುವು ಕೋಪ ತೋರಬಾರದಯ್ಯ ಎಂದು;**
**ವಿಶ್ವದಾಭಿರಾಮ ಕೇಳು ವೇಮ.**

ಬ್ರಹ್ಮಸ್ವತಿ ದೇವತೆಗಳ ಗುರು. ಗುರುವು ಶಾಂತ ಚಿತ್ತದವನಾಗಿರಬೇಕು, ಮನೋ ವಿಕಾರಗಳನ್ನು ಮೀರಿದನಾಗಿರಬೇಕು. ಸಂಸಾರ ಸಂಬಂಧದ ಮೇರೆ ಮೀರಿದ ವಿರಕ್ತನಾಗಿರಬೇಕು. ಚಂದಮಾಮ ದೇವತೆ ದೇವಗುರು ಬ್ರಹ್ಮಸ್ವತಿಯ ಶಿಷ್ಯ ತಾರೆ ಬ್ರಹ್ಮಸ್ವತಿಯ ಪತ್ನಿ, ಚಂದಮಾಮ ಗುರು ಪತ್ನಿಯಲ್ಲಿ ಮೋಹ ತಾಳಿದ. ಚಂದ್ರವಂಶ ಬೆಳೆಯಿತು. ಇದನ್ನು ತಿಳಿದ ಬ್ರಹ್ಮಸ್ವತಿ ಶಿಷ್ಯನ ಮೇಲೆ ಕೋಪ ತಾಳಿದ. ತತ್ ಕ್ಷಣವೇ ಚಂದಮಾಮನಿಗೆ ಶಾಪವಿತ್ತನಂತೆ ! ಶಾಪದ ಪರಿಣಾಮದಿಂದಾಗಿ ಚಂದ್ರನು ತಿಂಗಳದ ಹದಿನೈದುದಿನ ಕುಂದುತ್ತ ಹೋಗುತ್ತಾನೆ. ಕೊನೆಗೆ ಅಮವಾಸ್ಯೆಯ ದಿನ ಪೂರ್ಣ ಕಣ್ಮರೆಯಾಗುತ್ತಾನೆ. ಇದಕ್ಕೆ ಕೃಷ್ಣ ಪಕ್ಷವೆನ್ನುತ್ತಾರೆ. ಮುಂದೆ 15 ದಿನಗಳವರೆಗೆ ಬೆಳೆಯುತ್ತ ಹೋಗುತ್ತಾನೆ. ಕೊನೆಗೆ ಹುಣ್ಣಿಮೆಗೆ ಪೂರ್ಣಾಕಾರ-ದಲ್ಲಿರುತ್ತಾನೆ. ಈ 15 ದಿನದ ಅವಧಿಗೆ ಶುಕ್ಲಪಕ್ಷವೆನ್ನುತ್ತಾರೆ. ಶಾಪದ ಪರಿಹಾರಾರ್ಥವೆಂದು ಪೂಜಾದಿಗಳು ಜರುಗುತ್ತವೆ. ಇವೆಲ್ಲ ಕಟ್ಟುಕಥೆಗಳಾದರೂ ಗುರುವೆನಿಸಿದವನು ಎಂದೂ ಕೋಪ ತಾಳಕೂಡದು. ಅವನ್ನೆಲ್ಲ ತ್ಯಜಿಸಿ ಗುರುವಾದವನು ಎಂದ ಮೇಲೆ ಗುರುವಿನಿಂದಲೇ ಶಿಷ್ಯನ ಉದ್ಧಾರವಾಗಬೇಕು. ಗುರು ಇದನ್ನರಿತು ನಡೆದುಕೊಳ್ಳಬೇಕೆಂಬ ಹಿತೋಕ್ತಿ ಈ ಪದದಲ್ಲಿ ಅನಾವರಣಗೊಂಡಿದೆ. ಆದುದರಿಂದ ಗುರುವಿನ ಅಗತ್ಯತೆ ಮತ್ತು ಮಹತ್ವವಿದೆ.

**ಗುರುವಿಲ್ಲದ ವಿದ್ಯೆ ಗುರುತಾಗಿ ಸಿಗದು**
**ದೊರೆಯಿಲ್ಲದೆ ಧರೆಯು ತೃಪ್ತಿ ಪಡದು**
**ಗುರುತರ ದ್ವಿಜನೆಂತು ಗುರುವಿದ್ಯೆ ಹೊರತು**?
**ವಿಶ್ವದಾಭಿರಾಮ ಕೇಳು ವೇಮ.**

ಒಂದಕ್ಕರವ ಕಲಿಸಿದಾತನೇ ಗುರು ಎಂಬುದು ಲೌಕಿಕರ ಮಾತು, ಅಕ್ಷರಜ್ಞಾನ ಕೊಟ್ಟು ಸಂಸ್ಕಾರ ನೀಡುವ ಗುರು ಒಂದು ಬಗೆಯಾದರೆ, ಪಾರಮಾರ್ಥಿಕ ವಿದ್ಯೆ ಅಂದರೆ ಆತ್ಮ ವಿದ್ಯೆ ಕೊಡುವ ಗುರುಗಳು, ವೇಮನ, ಸರ್ವಜ್ಞ, ಅಲ್ಲಮ-ಬಸವಣ್ಣ ಮುಂತಾದವರಿದ್ದರು, ಅಂಥವರ ಪರಂಪರೆಯಿಂದು ಅಗತ್ಯವಿದೆ. ಆತ್ಮ ವಿದ್ಯೆಯಿಂದ ಶಿಷ್ಯ ಪರಿಪೂರ್ಣ ಮಾನವನಾಗುತ್ತಾನೆ. ಆತ್ಮ ವಿದ್ಯೆಯನ್ನರಿಯುವುದು ಗುರುವಿನ

ಮಾರ್ಗದರ್ಶನವಿಲ್ಲದೆ ಕಷ್ಟ ಸಾಧ್ಯ. ಅದೆಂತೆಂದರೆ ನಾಡಿನಲ್ಲಿ ಸುಖ-ಶಾಂತಿಗಳು ನೆಲೆಸಬೇಕಾದರೆ ಪ್ರಜೆಗಳನ್ನು ನಿಯಂತ್ರಿಸಿ ಮಾರ್ಗದರ್ಶನ ಮಾಡಬಲ್ಲ ಅರಸನು ಅವಶ್ಯವಲ್ಲವೆ? ಅಂದ ಮೇಲೆ ಅಂಥ ಗುರುವನ್ನೂ, ಅಂಥ ಆತ್ಮ ವಿದ್ಯೆಯನ್ನು ಪಡೆಯದೆ ಶ್ರೇಷ್ಠ ದ್ವಿಜನೆಂತಾಗಬಲ್ಲನು ಎಂದು ಪ್ರಶ್ನಿಸಿದ್ದಾರೆ. ಅಂದರೆ ಸಮರ್ಥ ಸದ್ಗುರು-ಸಮರ್ಥ ಶಿಷ್ಯರನ್ನು ತಯಾರಿಸಬಲ್ಲ ತನ್ನ ಉಪದೇಶವೆಂಬ ಬೋಧನೆಯಿಂದ ಅಲ್ಲವೇ?

ಗುರುವಿಗೆ ಮಹತ್ವ ಕೊಡಲಾರದವರೂ ಆಗ ಇದ್ದರೆಂಬುದನ್ನು ವೇಮನರ ಈ ಕೆಳಗಿನ ಪದದಿಂದ ತಿಳಿದು ಬರುತ್ತದೆ.

**ಗುರುವಿಗೆ ಹಿಡಿಸೊಪ್ಪ ನೀಡಲಾರರಯ್ಯ**
**ಅರಿಯೊ! ವೇಶ್ಯೆಗೀವರರ್ಥವೆಲ್ಲ!!**
**ಗುರುವು ವೇಶ್ಯಗಿಂತ ಗುಣಹೀನನಾದನೆ?**
**ವಿಶ್ವದಾಭಿರಾಮ ಕೇಳು ವೇಮ,**

ವೇಶ್ಯೆ ಇಂದ್ರಿಯ ಕಾಮ ತೃಪ್ತಿಪಡಿಸುತ್ತಾಳೆ, ಗುರು ಮೋಕ್ಷ ಕಾಮವನ್ನು ತೃಪ್ತಿಪಡಿಸುತ್ತಾನೆ. ಕಾಮದ ಸುಖ ಕ್ಷಣಿಕ; ಮೋಕ್ಷದ ಸುಖ ಶಾಶ್ವತ. ಆದರೆ, ಜನರು ಕ್ಷಣಿಕ ಸುಖವೀವ ವೇಶ್ಯೆಗೆ ತಮ್ಮ ಸಕಲ ಸಂಪದ ನೀಡುತ್ತಾರೆ. ಶಾಶ್ವತ ಮೋಕ್ಷ ಸುಖದ ಹಾದಿ ತೋರುವ ಗುರುವಿಗೇನನ್ನೂ ಕೊಡಲು ಮುಂದಾಗುವುದಿಲ್ಲ. ಗುರುವಿಗೆ ತಮ್ಮ ತೋಟ-ಗದ್ದೆಗಳಲ್ಲಿ ಬೆಳೆದ ಹಿಡಿಸೊಪ್ಪು, ಕಾಳುಕಡಿ ನೀಡಿ ಗುರುವಿನ ಹೊಟ್ಟೆಯ ಚಿಂತೆಯನ್ನು ಪರಿಹರಿಸಿದರೆ, ಅವನ ವಿದ್ಯೆ ಸರ್ವರಿಗೂ ಪ್ರಯೋಜನವಾಗುವುದು. ಆದರೆ, ಜನರು ನಡೆದುಕೊಳ್ಳುವ ಪರಿಯನ್ನು ಕಂಡು ವೇಮನರು ಗುರುವು ಅವರ ದೃಷ್ಟಿಯಲ್ಲಿ ವೇಶ್ಯೆಗಿಂತ ಗುಣಹೀನನಾದನೇನು ಎಂದಿದ್ದಾರೆ. ದಿನ ನಿತ್ಯದ ವ್ಯವಹಾರಗಳಲ್ಲಿ ಪಡೆಯುವ ಸಂತೋಷ, ಭಕ್ತಿ, ಸುಖ, ಮನೋಲೋಕದಲ್ಲಿ, ಆತ್ಮಿಕ-ಲೋಕದಲ್ಲಿ ಅನುಭವಿಸುವ ಸಂತೋಷವನ್ನು ನೀಡುವವನೇ ಸದ್ಗುರು ಎಂಬುದನ್ನು ಅರಿತುಕೊಂಡು ನಡೆಯಿರೆಂಬುದಾಗಿ ವೇಮನರ ಅಭಿಮತವಾಗಿದೆ. ಆವುದೇ ವಿದ್ಯೆಯು ಗುರುಗಿನಿಂದಲೇ ದೊರಕುವುದು. ಅದು ಕಾರಣ ಗರುವಿರದೇ ಗುರುವಿನ ಚರಣದಾಸನಾಗಿ ವಿದ್ಯೆ ಪಡೆಯಿರೆಂದು ವೇಮನರು ಹೇಳಿದ್ದು ಹೀಗೆ-

**ವಕ್ಷದೊಳಗೆ ಗುರುವ ವೀಕ್ಷಿಸು ಸರಿಯಾಗಿ,**
**ರಕ್ಷಕ-ವನೆನುವುದೆ-ರಾಜ ಮಾರ್ಗ**
**ಅಕ್ಷ-ಮೂಲ ಜಪವು ಅವನಿಗಳ್ಳರ ಪರಿ**
**ವಿಶ್ವಾಭಿರಾಮ ಕೇಳು ವೇಮ**

ಮುಕ್ತಿ ತೋರುವವನೇ ಗುರು. ಪ್ರಾರಂಭದಲ್ಲಿ ಹೇಳಿದಂತೆ "ಗುರು ವಿಷ್ಣು, ಗುರುದೇವೋ ಮಹೇಶ್ವರಾಃ" ಎಂದಂತೆ. ಪರಬ್ರಹ್ಮವನ್ನು ಹೃದಯದಲ್ಲಿ ನೋಡಬೇಕು. ಆ ಗುರುವೇ ರಕ್ಷಕನು. ಅಂತರ್ಯಾಮಿ ಗುರುವಿಲ್ಲದೆ ಇನ್ನಾರು ರಕ್ಷಿಸಬಲ್ಲರು? ಆಶ್ರಯ ನೀಡಬಲ್ಲರು? ಆದುದರಿಂದ ವಿದ್ಯಾಸಾಗರನಾದ ಗುರುವಿಗೆ ಶರಣು ಎನ್ನಬೇಕು. ಇದುವೇ ಭಕ್ತನ ಮಾರ್ಗ, ರಾಜಮಾರ್ಗಕ್ಕೆ ನಿಶ್ಚಿತವಾಗಿ ಕರೆದೊಯ್ಯುತ್ತಾನೆ. ಆದರೂ ಭಕ್ತನ ಅಕ್ಷ ಮೂಲ ಜಪದ ರೀತಿಯೂ ಉಂಟು. ಮಣಿಯೆಣಿಸಿ, ಮಂತ್ರ ಜಪಿಸುವ ಇವರೂ ಭಕ್ತರ ಸೋಗು ಹಾಕುತ್ತಾರೆ. ಸಾವಿರ, ಲಕ್ಷ, ಕೋಟಿ ಜಪವೆನ್ನುತ್ತಾರೆ. ಲೋಕದ ಜನರ ಕಣ್ಣು ತಪ್ಪಿಸಿ ಕಳ್ಳ ಕಳವು ಮಾಡಲು ಹಾತೊರೆಯುವಂತೆ ಈ ಜಪಮಣಿಯನೆಣಿಸುವವರಿವರು. ಲೋಕದ ಕಣ್ಣಲ್ಲಿ ಮಾತ್ರ ತಮ್ಮ ಮನದಲ್ಲಿರುವ ಕಲುಷಿತ ವಿಚಾರಗಳನ್ನು ಮುಚ್ಚುವರಷ್ಟೇ. ಈ ದೃಷ್ಟಿಯಲ್ಲಿ ಇವರದು ಅವನಿಗಳ್ಳರ ರೀತಿಯಾಗುವುದು. ದೈಹಿಕ ಜಪ-ತಪ ಬೇಡ, ವಾಚಿಕ ಜಪದ ಸ್ಥಿತಿಯನ್ನು ಬೇಗ ದಾಟಿ ಮಾನಸಿಕ ಜಪದ ಸ್ಥಿತಿಗೆ ಹೋಗಬೇಕು. ಆಗ ಮನದಲ್ಲಿ ಬೇರೆ ವಿಚಾರ ಬಾರದೆ ಶಾಂತಿ ಲಭಿಸುವುದು. ಪ್ರಾಥಮಿಕ ಹಂತಗಳನ್ನು ಕೀಳು ಎಂದು ತಿಳಿಯದಿದ್ದರೆ ಮೇಲಿನ ಹಂತವನ್ನು ಮುಟ್ಟಲು ಯಾರೂ ಪ್ರಯತ್ನಿಸಲಾರರು.

ಗುರು ಮಾರ್ಗದರ್ಶನ ತೋರದಲ್ಲದೆ ಭಕ್ತಿ-ಜ್ಞಾನ-ವೈರಾಗ್ಯ-ಮೋಕ್ಷ ಮಾರ್ಗ ಸಿಗಲಾರದು ಎಂದುದಾಗಿ ವೇಮನಾಲ್ಲಮರ ಸಿದ್ಧಾಂತ ಮತ್ತು ಬೋಧನೆಯಾಗಿದೆ. ಗುರು ಬಳಗವೆಂದರೆ ಅಮೃತ ಸಾಗರವಿದ್ದಂತೆಯೆಂದು ಹೇಳಿದ ಅಲ್ಲಮರ ವಚನವಿಂತಿದೆ-

**ಅಮೃತ ಸಾಗರದೊಳಗಿರ್ದು ಆಕಳ ಚಿಂತೆ ಏಕೆ?**
**ಮೇರು ಮಧ್ಯದೊಳಗಿರ್ದು ಜರಗ ತೊಳೆವ ಚಿಂತೆಯೇಕೆ?**
**ಗುರುವಿನೊಳಗಿರ್ದು ತತ್ತ್ವ ವಿದ್ಯೆಯ ಚಿಂತೆಯೇಕೆ?**
**ಪ್ರಸಾದದೊಳಗಿರ್ದು ಮುಕ್ತಿಯ ಚಿಂತೆಯೇಕೆ?**
**ಕರಸ್ಥಲದೊಳಗೆ ಲಿಂಗವಿರ್ದ ಬಳಿಕ**
**ಮತ್ತಾವ ಚಿಂತೆ ಹೇಳಾ ಗುಹೇಶ್ವರಾ?**

ಅಮೃತಸಾಗರದೊಳಿರುವ ಸುವಿದ್ಯೆಗೆ ಆಕಳ ಚಿಂತೆಯಿರಲಾರದು. ಮೇರು ಹೇಮಾದ್ರಿಯ ಬಂಗಾರದ ಮಂದಿರದಲ್ಲಿ ವಾಸ ಮಾಡುವ ಸಿರಿವಂತನಿಗೆ ಚಿನ್ನದ ಕಣಮಿಶ್ರಿತ ಮಣ್ಣನ್ನು ತೊಳೆಯುವ ಚಿಂತೆಯಿರಲಾರದು. ಶ್ರೀ ಗುರುವಿನ ಸಾನಿಧ್ಯದೊಳಗಿರುವ ಶಿಷ್ಯನಿಗೆ ಶಾಸ್ತ್ರಾಗಮಾರ್ಥಗಳ ಚಿಂತೆಯಿರಲಾರದು. ದಿನವೂ ಪ್ರಸಾದಾಚರಣೆಯಲ್ಲಿರುವ ಪ್ರಸಾದ ನಿಷ್ಠನಿಗೆ ಮುಕ್ತಿಯ ಚಿಂತೆಯಿರಲಾರದು. ಹಾಗೆಯೇ ಕರಸ್ಥಲದಲ್ಲಿ ಲಿಂಗವಿರಿಸಿ ನಿತ್ಯವೂ ಅನುಸಂಧಾನಿಸುತ್ತಿರುವ ಸಾಧಕ-ಭಕ್ತನಿಗೆ ಈ ಜಗತ್ತಿನಲ್ಲಿ ಯಾವ ಚಿಂತೆಗಳೂ ಇರಲಾರವು. ಈ ಕರಸ್ಥಲದ ಸಾಧನೆ

ಅಜ್ಞಾನವನ್ನು ನಷ್ಟಗೊಳಿಸುತ್ತದೆ. ಲೋಕದಲ್ಲಿರುವ ಮೋಹ ಜಾಲವನ್ನು ಕತ್ತರಿಸಿ ಹಾಕುತ್ತದೆ. ಜೀವನವನ್ನು ಪರವಸ್ತುವಿನಲ್ಲಿ ಸಮಾಲೀನಗೊಳಿಸುತ್ತದೆ. ಗುರುವಿನ ಸ್ಪರ್ಶ–ದರ್ಶನಗಳಿಂದ ಲಿಂಗಭಕ್ತನು ಇಹದಲ್ಲಿ ನಿಶ್ಚಿಂತ ಆಗಿರುತ್ತಾನಲ್ಲದೆ ಮುಂದೆ ಪರವಸ್ತುವಿನಲ್ಲಿ ಏಕೀಭೂತನಾಗಿರುತ್ತಾನೆ ಎಂದುದಾಗಿ ಗುರುವಿನ ಮಹಿಮೆಯನ್ನು ಈ ದೃಷ್ಟಾಂತದೊಂದಿಗೆ ಅಲ್ಲಮರು ಸ್ಪಷ್ಟಪಡಿಸಿದ್ದಾರೆ.

ಗುರುವಿನ ಮಾರ್ಗದರ್ಶನವಿಲ್ಲದೆ ಏನೂ ದೊರೆಯದು. ಕೇವಲ ಅರಿವೇ ಗುರು ಎಂದು ಕುಳಿತರೆ ಏನೂ ಆಗದು, ಫಲಿಸದು. ಅದಕ್ಕೆ ಸಾಧಕನ ಸಾಧನೆಯೇ ಮುಖ್ಯವಲ್ಲವೇ? ಉದಯವಾಯಿತ್ತೆಂದಡೆ ಗುರು–ಲಿಂಗ–ಜಂಗಮರ ಸ್ಮರಣೆ ಮಾಡಬೇಕು ನಿತ್ಯ! ಏಕೋಭಾವದಿಂದ ಒಡಗೂಡಿರಬೇಕು. ಆದರೆ ಏನೂ ಅರಿಯದ ಮೂಢರು ಅಲ್ಲಮರು ಹೇಳುವುದನ್ನು ಕೇಳಲಾರರು, ಆಚರಿಸಲಾರರು, ಅದು ಹೇಗೆಂದರೆ–

**ಅಗ್ಘವಣೆ ಪತ್ರೆ ಪುಷ್ಪ ಧೂಪ ದೀಪ ನಿವಾಳಿಯಲ್ಲಿ**
**ಪೂಜಿಸಿ ಪೂಜಿಸಿ ಬಳಲುತ್ತೈದಾರೆ**
**ಏನೆಂದರಿಯರು ಎಂತೆಂದರಿಯರು**
**ಜನ ಮರುಳೊ ಜಾತ್ರೆ ಮರುಳೋ ಎಂದಂತೆ**
**ಎಲ್ಲರೂ ಪೂಜಿಸಿ,ಏನನೂ ಕಾಣದೆ,**
**ಲಯವಾಗಿ ಹೋದರು ಗುಹೇಶ್ವರಾ!**

ಲೋಕದ ಬಹುಜನರು ಅಭಿಷೇಕ, ಪತ್ರೆ, ಪುಷ್ಪ, ಧೂಪ, ದೀಪ ಮುಂತಾದ ಉಪಚಾರಗಳಿಂದ ದೇವನನ್ನು ಪೂಜಿಸುತ್ತಾರೆ. ಆದರೆ, ಅದರಿಂದ ಭಾಗ್ಯವೇನು ಬರೀ ಬಳಲಿಕೆ ಮಾತ್ರ! ಅವರದು ರಸರಹಿತ ಪೂಜೆಯದು. ಪೂಜೆ ಮಾಡುವ ಪ್ರಕ್ರಿಯೆಯನ್ನು ಅರುಹುವವನು ಗುರು. ಆತನ ಮಾರ್ಗದರ್ಶನವಿಲ್ಲದೆ ಪೂಜೆಯ ಬಗೆಗೆ ಅರಿವಿರದೆ ಮಾಡುವುದು ಪೂಜೆಯಲ್ಲ, ಯೋಗವಲ್ಲ, ಜಪವಲ್ಲ, ತಪವಲ್ಲ, ಹಿಂದಿನ ಹಿರಿಯರು ಮಾಡುತ್ತ ಬಂದಿದ್ದಾರೆಂದು ಮಾಡುವುದು ಬರೀ ಅಂಧಾನುಕರಣೆಯಾಗಿದೆ. ಅಂಥವರು ಬಾಳಿನಲ್ಲಿ ಏನನ್ನೂ ಅಂದರೆ ಪರಮಾಥ್ಮನ ದರ್ಶನವನ್ನು ಕಾಣಲಾರರು. ಗುರು ಮಾರ್ಗದರ್ಶನವಿಲ್ಲದೆ ಮೋಕ್ಷ ಪ್ರಾಪ್ತವಾಗಲಾರದು ಎಂದು ಹೇಳಿದ ಪ್ರಸಂಗವಿದರಲ್ಲಿ ದಟ್ಟವಾಗಿದೆ. ಆದುದರಿಂದ ಅಲ್ಲಮರೇ ಮತ್ತೊಂದು ವಚನದಲ್ಲಿ ಹೇಳಿರುವುದನ್ನು ಗಮನಿಸುವಂತಿದೆ ನೋಡಿ!–

**ಕೊಟ್ಟ ಕುದುರೆಯನೇರಲರಿಯದೆ**
**ಮತ್ತೊಂದು ಕುದುರೆಯನೇರ ಬಯಸುವವರು**
**ವೀರರೂ ಅಲ್ಲ, ಧೀರರೂ ಅಲ್ಲ, ಇದು ಕಾರಣ**
**ನೆರೆ ಮೂರು ಲೋಕವೆಲ್ಲವೂ ಹಲ್ಲಣವ ಹೊತ್ತುಕೊಂಡು**

**ತೊಳಲುತ್ತಲಿದ್ದಾರೆ, ಇಂಥವರು**
**ಗುಹೇಶ್ವರಲಿಂಗವನವರೆತ್ತ ಬಲ್ಲರು?**

ಗುರುದೀಕ್ಷೆ ನೀಡಿದ, ಕರುಣಿಸಿದ ಇಷ್ಟಲಿಂಗವೆಂಬ ಕುದುರೆಯನು ಹತ್ತಿ ಪಳಗಿಸಬೇಕು ಎಂಬುದಕ್ಕೆ ಅಲ್ಲಮರು ಗುರು ಕೊಟ್ಟಂಥ ಕುದುರೆಯನೇರಬೇಕು, ನಿಯಂತ್ರಿಸಬೇಕು, ಅದನ್ನು ಜಾಣ್ಮೆಯಿಂದ ಬಳಸಿ ತನ್ನ ಗುರಿಯನ್ನು ಸಾಧಿಸಬೇಕು. ಅದುವೇ ಧೀರತನ, ವೀರತನದ ಲಕ್ಷಣ. ಅದನ್ನು ಬಿಟ್ಟು ಆ ಕುದುರೆಯ–ನೇರಲರಿಯದೇ ಬರೀ ದೋಷಗಳನೆಣಿಸಿ ಬೇರೆ ಕುದುರೆಗಳನ್ನು ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ. ಹಾಗೆಯೇ ನಮ್ಮ ಪಾಲಿಗೆ ಬಂದ ಬದುಕನ್ನು ಇಂಥ ಸದ್ಗುರುವಿನ ಮಾರ್ಗದರ್ಶನದಿಂದಲೇ ಆಚರಿಸಿ ಲಿಂಗಾನುಭೂತಿಯ ಪರಮ ಸಿದ್ಧಿಯನ್ನು ಹೊಂದಬೇಕು. ಅದುವೇ ಸಾಧನೆ, ಅದುವೇ ವೀರ ನಿಷ್ಠೆ! ಆದರೆ, ಬದುಕಿನಲ್ಲಿರುವ ಬಹುಜನರು ಅತೃಪ್ತರೇ, ಬರೀ ದೋಷಗಳನ್ನೇ ಎಣಿಸುತ್ತ ಸಾಧನೆಯಿಂದ ಹಿಮ್ಮುಖರಾಗುವವರಿದ್ದಾರೆ. ಬರೀ ಬಯಕೆಯ ಹಲ್ಲಣ (ಥಡಿ)ವ ಹೊತ್ತುಕೊಂಡು ಅಲೆದಾಡುತ್ತಿದ್ದಾರೆ. ಬಳಲಿ ಬೆಂಡಾಗುತ್ತಿದ್ದಾರೆ. ಅವರಿಗೆ ಲಿಂಗಾಂಗ ಸಾಮರಸ್ಯ ಹೇಗಾಗಲು ಸಾಧ್ಯ! ಅದು ಕಾರಣ, ಗುರುದರ್ಶನ ಭಾಗ್ಯ ಪಡೆದುಕೊಂಡು ಜೀವನವನ್ನು ಕೃತಾರ್ಥರಾಗಿಸಿಕೊಳ್ಳಿರೆಂದು ಅಲ್ಲಮರು ಹಿತ ನುಡಿದಿದ್ದಾರೆ. ಶರಣನಾಗಬೇಕೆಂದರೆ ಗುರುವಿನ ಮಾರ್ಗದರ್ಶನದ ಅಗತ್ಯವಿದೆ. ತಾನಿರ್ದು ತನ್ನನರಿಯದೆ ಇನ್ನೊಂದಿಗೆ ಶರಣನಪ್ಪನಯ್ಯಾ? ಎಂದಿದ್ದಾರೆ. 'ಪವನ ಸ್ಥಾನವನರಿದ ಬಳಿಕ, ಬಂದು ಬಂದು ಸುಳಿಯಲಿಲ್ಲ. ಇದರಂತುವನಾರು ಬಲ್ಲರು ಗುಹೇಶ್ವರಾ ನಿಮ್ಮ ಶರಣರಲ್ಲದೆ' ಎಂದೂ ಪ್ರಶ್ನಿಸಿದ್ದಾರೆ.

ಎಲ್ಲಾ ನಾನೇ ಅರಿತಿರುವೆನೆಂದು ಅಹಂಕಾರಪಡದಿರು ಮನುಜನೇ ಗುರುವಿನ ಕರುಣೆಯಿರಲಾರದೇನೂ ಲಭಿಸದು ಕೈವಲ್ಯ ಪ್ರಾಪ್ತಿ ಆಗಲಾರದು ಎಂದಿದ್ದಾರೆ ಅಲ್ಲಮರು ನೋಡಿ–

**ಅರಿವು ಅರಿವು ಎನ್ನುತಿಪ್ಪಿರಿ, ಅರಿವು ಸಾಮಾನ್ಯವೇ?**
**ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೇ**
**ನಿಂದ ಹೆಜ್ಜೆಯನರಿಯಬಾರದು.**
**ಮುಂದಣ ಹೆಜ್ಜೆಯಳಿದಲ್ಲದೆ, ಒಂದು ಪಾದ ನೆಲೆಗೊಳ್ಳದು**
**ನೆಲನ ಬಿಟ್ಟು ಆಕಾಶದಲ್ಲಿ ನಿಂದು ಮುಗಿಲೊಳಗೆ ಮಿಂಚಿದಲ್ಲದೆ**
**ತಾನಾಗಬಾರದು–ಗುಹೇಶ್ವರನೆಂಬುದು ಬರಿದೆ ಬಹುದೆ ಹೇಳಿರೆ?**

ಆತ್ಮದ ಅರಿವು, ಆತ್ಮಾನುಭೂತಿ ಸಹಜವಾಗಿಯೇ ಅದು ಸಿದ್ಧಿಸಲಾರದು. ಸಾಧನೆಯೇ ಮುಖ್ಯ ಸಾಧನೆಯಿಲ್ಲದೆ ಕೈಗೂಡದು. ಹಿಂದೆ ನಡೆದು ಬಂದುದು ಭಕ್ತಿಯ (ಬಸವ) ಪಥ. ಅಲ್ಲಿ ದುಃಖವಿದೆ, ಬಂಧನವಿದೆ. ಅದನ್ನು ವಿವೇಕ

ದೃಷ್ಟಿಯಿಂದ ನೋಡಿ ಅರಿಯಬೇಕು. ಶಿವಪಥದಲ್ಲಿ ಹೆಜ್ಜೆಯಿರಿಸಬೇಕು. ಈ ಪಥದಲ್ಲಿ ಶಾಂತಿಯಿದೆ, ಅರಿವಿನ ಬೆಳಗಿದೆ, ಇದರ ಅಂತಿಮ ಸ್ಥಿತಿಯೇ ಐಕ್ಯ. ಶಿವಪಥದ ಕೊನೆಯದು. ಅಲ್ಲಿ ಶಿವೋ–ಹಂಭಾವ. ಅದು ಕೂಡ ಅಡಗಿದರೆ ಲಿಂಗಪದ ಸಿದ್ಧಿ. ಆಗ ದೇಹದ ಅಭಿಮಾನವಿಲ್ಲ. ಆತ್ಮ ಭಾವ ಸ್ಥಿರಗೊಂಡಿದೆ ಅದು ಧರ್ಮ ಮೇಘವೆಂಬ ಅಮನಕ್ಕೆ ಅವಸ್ಥೆ; ಅಲ್ಲಿ ಮಿಂಚುವ ಏಕೈಕ ಭಾವವೆಂದರೆ ಬರೀ ಅರಿವು. ಕೇವಲ ಚಿದಾತ್ಮ ಭಾವ ಗುಹೇಶ್ವರನ ಪರಮ ನಿಲುವು.

ವೇಮನರು ಮತ್ತೊಂದೆರಡು ಪದ್ಯಗಳಲ್ಲಿ ಗುರುವಿನ ಮಹಿಮೆಯನ್ನು ಗುರುತಿಸಿ ಹೇಳಿದ್ದುದು ಹೀಗೆ–

**ಗುರುವಿನ ಶಿಕ್ಷೆಯಿರದೆ ಗುರುತು ದೊರೆವುದೆಂತು?**
**ಅಜನೆ ಇರಲಿ, ಅವನ ಅಪ್ಪನಿರಲಿ;**
**ಬೀಗದ ಕೈ ಇರದೆ ಬೀಗ ತೆರೆವುದೆಂತು?**
**ವಿಶ್ವದಾಭಿರಾಮ ಕೇಳು ವೇಮ.**

ಗುರುವಿನ ಉಪದೇಶವಿಲ್ಲದ ಮಂತ್ರ, ಗುರೂಪದೇಶವಿಲ್ಲದ ಕ್ರಿಯೆಗಳು – ಉರಗನ ಉಪವಾಸದಂತೆ ಕಾಣಿರೋ ಎಂದು ಹೇಳಿದ ಪುರಂದರದಾಸರ ವಾಣಿಯಂತೆ ಗುರುವಿನ ಗುಲಾಮನಾಗದತನಕ ದೊರೆಯದಣ್ಣ ಮುಕುತಿ ಎನ್ನಲಾಗಿದೆ. ಆದುದರಿಂದ ಆಧ್ಯಾತ್ಮದ ಸಾಧನೆಗೆ ಗುರುವಿನ ಮಾರ್ಗದರ್ಶನ ಅವಶ್ಯವಾಗಿ ಬೇಕೇಬೇಕು. ಅಧ್ಯಾತ್ಮಿಕ ಜ್ಞಾನ ದೊರಕಬೇಕಾದರೆ ಹೃದಯ ಗ್ರಂಥಿಯನ್ನು ಬಿಚ್ಚಬೇಕು. ಅಂದರೆ ಅಜ್ಞಾನದ ಮುಸುಕನ್ನು ಕಳೆದುಕೊಂಡು ಪ್ರಕಾಶಗೊಳಿಸಿಕೊಳ್ಳುವುದಾಗಿದೆ. ಇದಕ್ಕೆ ಸಾಧನೆ ಬೇಕು. ಆದರೆ, ಸಾಧನೆಯ ಕಾಲದಲ್ಲಿ ಶುದ್ಧ ಮನಸ್ಸು ಜ್ಞಾನಾಕಾಂಕ್ಷೆ ಮತ್ತು ಪ್ರಯತ್ನವು ಅನವರತವಿರಬೇಕು. ಇವೆಲ್ಲವು ಉಳಿಯುವಂತೆ ಸಾಧಕನಾದವನು ಗುರುವಿನಿಂದ ಅರಿತುಕೊಂಡು ಆಚರಿಸುವಂತಾಗಬೇಕು. ಅದರೊಂದಿಗೆ ಅಂತರಂಗದ ಪ್ರೇರಣೆಯೂ ಪ್ರಮುಖವಾಗಿರಬೇಕು. ಹೊರಗಿನ ಪ್ರೇರಣೆ ಬರುವುದು ಗ್ರಂಥಗಳಿಂದಲ್ಲ ಆತ್ಮದಿಂದ ಮಾತ್ರ. ಇಂತಹ ಪ್ರೇರಣೆಯನ್ನು ನೀಡುವವನೇ ಗುರುವು. ಗುರುವಿನ ಶಿಕ್ಷೆಯಿರದೇ ಜ್ಞಾನ ಲಭಿಸದು. 'ಛಡಿ ಛಮ್ ಛಮ್ ವಿದ್ಯಾ ಘಮ್ ಘಮ್' ಎಂಬಂತೆ. ಹೃದಯ ಗ್ರಂಥಿ ಬೀಗವೆಂದು ತಿಳಿಯಿರಿ. ಆಗ ಗುರುವಿನ ಮಾರ್ಗದರ್ಶನವು ಅದನ್ನು ತೆರೆಯುವ ಕೈ ಆಗುತ್ತದೆ. ಇದು ಸಕಲರ ವಿಷಯದಲ್ಲಿ ಸಮನಾಗಿ ಅನ್ವಯಿಸುತ್ತದೆ. ಸೃಷ್ಟಿಯ ಪಿತಾಮಹನಾದ ಅಜನಿಗೂ ಅಷ್ಟೇ. ಅವನ ಪಿತನಿಗೂ ಕೂಡ ಅಷ್ಟೇ! ಅಂದರೆ ಈ ನಿಯಮಕ್ಕೆ ಯಾರೂ ಅಪವಾದವಲ್ಲ.

ಮತ್ತೊಂದು ಪದ್ಯದಲ್ಲಿ ಪ್ರಣವನರಿಯದತನಕ ಭಕ್ತನಾಗಲಾರನೆಂಬಂತೆ ನಿತ್ಯವರಿಯದನಕ ನಿರ್ವಾಣಿಯು ಆಗಲಾರ. ಆದುದರಿಂದ ಗುರು ಮಾರ್ಗದರ್ಶನ ಪಡೆದು ಮುಕ್ತನಾಗು ಆತ್ಮ ಎಂಬಂತೆ ಹೇಳಿದ ಪದ್ಯವಿಂತಿದೆ–

**ಗುರುವು ಶಿಷ್ಯರೆನಲು, ಕೊನೆಯು, ಮೊದಲು ಎಂತು?**
**ಗುರುವು-ಶಿಷ್ಯರೆಂಬ ಗುರುತು ಎಂತು?**
**ಗುರುವಿಗಿಪ್ಪ ತಕ್ಕ ಗೌರವವಿರದಿರಲು**
**ವಿಶ್ವದಾಭಿರಾಮ ಕೇಳು ವೇಮ.**

ಬೀಜವು ಮೊದಲೋ? ವೃಕ್ಷವು ಮೊದಲೋ? ಎಂಬ ಪ್ರಶ್ನೆಯು ಒಡೆಯಲಾರದ ಒಗಟು. ಅದೇ ರೀತಿಯಾಗಿ ಮೊದಲು ಹುಟ್ಟಿದವರು ಗುರು ವರ್ಗವೋ? ಇಲ್ಲವೆ ಶಿಷ್ಯ ವರ್ಗದಿಂದ ಗುರುವರ್ಗ ನಿರ್ಮಾಣವಾಯಿತೋ? ಈ ಪ್ರಶ್ನೆ ಉದ್ಭವಿಸುವುದು ಗುರು ವರ್ಗದ ತಪ್ಪು ಕಲ್ಪನೆಯಿಂದ ಮಾತ್ರ. ಕೆಲವರು ಹೇಳುತ್ತಾರೆ. ನಮ್ಮ ಅಜ್ಜ ನಿಮ್ಮ ಅಜ್ಜನ ಗುರುವಾಗಿದ್ದ' ನನ್ನ ತಂದೆ ನಿನ್ನ ತಂದೆಯ ಗುರುವಾಗಿದ್ದ; ಆದುದರಿಂದ ನಾನು ನಿನಗೆ ಗುರುವಾಗಿದ್ದೇನೆ ಅಂದರೆ ಗುರುತ್ವವನ್ನು ತ್ರೈರಾಶಿಕದಿಂದ ಲೆಕ್ಕ ಹಾಕುವಂತಹ ವರ್ಗವಿದು.

ಆದರೆ ಗುರು-ಶಿಷ್ಯರು ಬೀಜ-ವೃಕ್ಷದಂತೆ, ಒಬ್ಬ ಗುರು ಮತ್ತೊಬ್ಬ ಶಿಷ್ಯನಿಗೆ ಮಾರ್ಗದರ್ಶನ ಮಾಡುತ್ತಾನೆ. ಭ್ರಮರ ಕೀಟಕ್ಕೆ ತನ್ನ ರೂಪು ಕೊಡುವಂತೆ ಗುರು ಶಿಷ್ಯನನ್ನು ಗುರುವಾಗಿ ಮಾರ್ಪಡಿಸುತ್ತಾನೆ. ಈ ಕ್ರಮ ಹಾಗೆಯೇ ಮುಂದುವರೆದುಕೊಂಡು ಬಂದಿದೆ. ಗುರುವಿಗೆ ಶಾಸ್ತ್ರ-ಆಗಮಗಳ ವಿದ್ಯೆ ಗೊತ್ತಿರಬೇಕು. ಅವುಗಳ ರಹಸ್ಯ ಅರಿತಿರಬೇಕು. ಅವನು ಪಾಪದೂರನಾಗಿರಬೇಕು. ಹೆಸರು-ಕೀರ್ತಿಗಳಿಗೆ ಕಟ್ಟು ಬೀಳಬಾರದು. ಮೋಹ-ವ್ಯಾಮೋಹಗಳಿಂದ ಮುಳುಗಿದವರನ್ನೇ ಸನ್ಮಾರ್ಗದತ್ತ ಕರೆದೊಯ್ದು ಧರ್ಮ ತತ್ತ್ವದ ದಿವ್ಯ ದರ್ಶನ ಮಾಡುವವನೇ ಗುರು. ಅಂಥ ಗುರುವಿಗೆ ನಾವು ಗೌರವ ಸಲ್ಲಿಸಲೇಬೇಕಲ್ಲವೇ? ಗುರುವೇ ಸರ್ವಶ್ರೇಷ್ಠನು ಎಂದು ಮತ್ತೊಂದು ಪದದಲ್ಲಿಂತಿದೆ.

**ಗುರು ದೊರೆಯಲಾತ ಗುರುತನರಿವೆನೆಂದು**
**ಕಾಲವೆಲ್ಲ ವ್ಯರ್ಥ ಕಳೆಯುತಿಹುದು**
**ಗುರುವು ದೊರೆವ ವೇಳೆ ಗತಿಸುತಿಹುದು ದೇಹ**
**ವಿಶ್ವದಾಭಿರಾಮ ಕೇಳು ವೇಮ.**

ಶಿಷ್ಯನ ಧಾರ್ಮಿಕ-ಅಧ್ಯಾತ್ಮಿಕ ಕಣ್ಣು ತೆರೆಯುವಂತೆ ಮಾಡುವವನೇ ಗುರು. ಹೊರಗಿನಿಂದ ಬಂದ ಸಹಾಯದಿಂದ ಆತ್ಮ ಶಕ್ತಿಯು ಬೇಗ ಜಾಗೃತವಾಗುವುದು. ಈ ಕೇವಲ ಪುಸ್ತಕಗಳ ಅಧ್ಯಯನದಿಂದ ದೊರಕಲಾರದು. ಅದು ಆತ್ಮಗತವಾದುದು. ಆತ್ಮಕ್ಕೆ ನಾಟುವಂತೆ ಉಪದೇಶಿಸುವವನು ಗುರು. ಈ ಪ್ರೇರೇಪಣೆ ನೀಡುವವನೇ ಸದ್ಗುರು! ಕ್ಷೇತ್ರ ಹದವಾಗಿದ್ದರೆ ಮಾತ್ರ ಬೀಜ ಊರಬಹುದು. ಶಿಷ್ಯನಾಗಬೇಕಾದವನು ತನ್ನ ಅಹಿಂಸೆ, ಆಸ್ತೇಯಾದಿಗಳನ್ನು, ಶೌಚ, ಸಂತೋಷ, ತಪಾದಿಗಳನ್ನು

ಆಚರಿಸುತ್ತಿರಬೇಕು. ಗುರು–ಶಿಷ್ಯ ಇಬ್ಬರಲ್ಲಿಯೂ ಕಲಿಸಬೇಕೆಂಬ ಕಲಿಯಬೇಕೆಂಬ ಆಕಾಂಕ್ಷೆಯುಳ್ಳವರಾಗಿರಬೇಕು. ಗುರು ದೊರೆಯಲೆಂದು ವ್ಯರ್ಥ ಕಾಲಹರಣ ಮಾಡಬಾರದು. ಯೋಗ್ಯ ಗುರುವಿನ ಹುಡುಕಾಟ ಅತ್ಯಗತ್ಯ! ಗುರುವು ಸಿಗಲಿಲ್ಲವೆಂದು ಸಾಧನೆ ಮಾಡುವುದನ್ನು ಬಿಡಬಾರದು ಗುರು ದೊರೆತಾಗ ತೀವ್ರ ಸಾಧನೆ ಮುಂದುವರಿಯಲಿ. ಇಬ್ಬರಲ್ಲಿಯೂ ಸಾಮರಸ್ಯದ ಸದ್ಗುಣಗಳಿದ್ದಾಗ ಮಾತ್ರ ಶ್ರೇಯಸ್ಸು ದೊರಕೊಳ್ಳುವುದು ಎಂದಿದ್ದಾರೆ ವೇಮನರು.

ಶಿಷ್ಯನು ಎಂತಿರಬೇಕೆಂಬುದಕ್ಕೆ ವೇಮನರು ಹೇಳಿದ್ದುದು ಹೀಗೆ–

**ಶಿಷ್ಯ ಧರ್ಮವರಿತು ಚೊಕ್ಕ ಭಕ್ತಿಯಿಂದ**
**ಗುರು ಸೇವೆಯ ಗೆಯ್ದು ಕುದುರಿದೊಡನೆ**
**ಸರ್ವಕಾರ್ಯಗಳಲಿ ಚಕ್ಕನೆ ಸರಿ ಹೋಯ್ತು**
**ವಿಶ್ವದಾಭಿರಾಮ ಕೇಳು ವೇಮ**

**ಶಿಷ್ಯನೆಣಿಸುವವನು ಶಿಷ್ಯನು ತಾನಹನೆ?**
**ತಪ್ಪು ಅರಿಯುವವನು ಶಿಷ್ಯನಹನು**
**ತಪ್ಪನೆಣಿಸುವವನು ತಾ ಶಿಷ್ಯನಹನೆ?**
**ವಿಶ್ವದಾಭಿರಾಮ ಕೇಳು ವೇಮ**

ಈ ಎರಡೂ ಪದ್ಯಗಳನ್ನು ಗಮನಿಸಿದರೆ ಶಿಷ್ಯನು ಪೂರ್ಣಭಕ್ತಿ–ಶ್ರದ್ಧೆಯುಳ್ಳವನಾಗಿರಬೇಕಲ್ಲದೇ ಗುರು ಬೋಧೆಯ ಕಡೆಗೆ ಏಕಾಗ್ರಚಿತ್ತತೆಯಿರಬೇಕು. ಗುರು ಸೇವೆಯನು ಮನಃಪೂರ್ವಕವಾಗಿ ಮಾಡಿ ಗುರೂಪದೇಶವನಾಲಿಸಿಕೊಂಡು ಮನವರಿಕೆ ಮಾಡಿಕೊಳ್ಳಬೇಕು. ಅವರು ಹೇಳುವ ಸರ್ವ ಕಾರ್ಯಗಳನ್ನು ಚಕಚಕನೇ ಅಂದರೆ ತ್ವರಿತಗತಿಯಿಂದ ಹಸನಾಗಿ ಮಾಡಬೇಕು. ಹೀಗಿರುವುದೇ ಶಿಷ್ಯನ ರೀತಿ ನೀತಿಧರ್ಮ. ಗುರುವಿನ ತಪ್ಪುಗಳನ್ನೇ ಲೆಕ್ಕಾಚಾರ ಹಾಕುವವನಾಗಬಾರದು. ಗುರುವಿನ ವಿದ್ಯೆ, ಒಳಿತುಗಳನ್ನು ಅರಿತುಕೊಳ್ಳುವ ಆತುರತೆಯಿರಬೇಕೆಂದು ಅರುಹಿದ್ದಾರೆ ವೇಮನರು.

ಗುರುವಿನಲ್ಲಿರಬೇಕಾದ ಗುಣಾವಗುಣಗಳ ಬಗೆಗೂ ವೇಮನರು ಹೀಗೆ ಹೇಳಿದ್ದಾರೆ.

**ರೂಢಿಯಿಂದ ಭಕ್ತಿ ರೂಪಿಸಿ ಹೇಳುವ**
**ಅವನೇ ಪರಮ ಗುರುವು ವಸುಧೆಯಲಿ**
**ಬೇಡಿ ಪರವ ಕಂಡವ ವೇದಾಂತವೇದ್ಯನು**
**ವಿಶ್ವದಾಭಿರಾಮ ಕೇಳು ವೇಮ.**

**ಜೊಳ್ಳು ಮಾತನಾಡಿ ಜಗದಿ ತಿರುಗುವಂಥ**
**ಕಳ್ಳಗುರು ಕಟ್ಟುವ ಕರ್ಮಗಳನು**
**ಹಲ್ಲೊಳು ಹುಳು ಸೇರಿ ನೋವುಂಟು ಮಾಡದೆ?**
**ವಿಶ್ವದಾಭಿರಾಮ ಕೇಳು ವೇಮ.**

ಪರಮ ಗುರುವು ತನ್ನ ಧರ್ಮಕ್ಕನುಸರಿಸಿ ಗುರು ಸೇವೆ ಮಾಡಬೇಕು. ಗುರುವಿನ ಉಪದೇಶ ಮತ್ತು ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಬೇಕು. ಆಗ ಆತ ಹರ್ಷಿತನಾಗುತ್ತಾನಲ್ಲದೆ ಹೊಸ ಹೊಸ ಆಚಾರ-ವಿಚಾರಗಳನ್ನು ಅಧ್ಯಯನ ಮಾಡಿ ಬೋಧಿಸುವವನಾಗುತ್ತಾನೆ. ಇದರಿಂದ ಇಬ್ಬರಿಗೂ ಪ್ರಯೋಜನವಾಗುತ್ತದೆ. ಶಾಂತ ಮನಸ್ಸಿನವನೂ ಶೀತದಂಶದ ಪ್ರಕೃತಿಯವನಾಗಿರಬೇಕು. ಹಾಗಿರುವವನೇ ಪರಮ ಗುರು. ಅಂಥವನಿಗೆ ಬೇಗ ಮುಕ್ತಿ ದೊರಕುವುದು.

ಪರಮ ಗುರುವು ಶಿಷ್ಯನಿಗೆ ಭಕ್ತಿ ಸಾಧನೆಗೆ ದೃಷ್ಟಾಂತಗಳ ಮುಖಾಂತರ ಹೇಳಿ ರೂಢಿಸುವವನಾಗಿರಬೇಕು. ಶಿಷ್ಯನಿಗೆ ತಿಳಿಯುವಂತೆ ಹೇಳುವ ಮಾರ್ಗದರ್ಶಿಯಾಗಿರಬೇಕು. ತನ್ನ ಪ್ರಾರ್ಥನೆಯ ಮೂಲಕ ವೇದಾಂತ ವೇದ್ಯನನ್ನು ಕಾಣುವ ಕುತೂಹಲಿಯಾಗಿರಬೇಕು. ಹಲವು ಗುರುಗಳು ಸುಳ್ಳು-ಗೊಳ್ಳು ಮಾತನಾಡುತ್ತ ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಹೇಳುತ್ತಾರೆ. ಅದು ಅವರ ನೀತಿಯಲ್ಲ. ಅದು ಅವರಿಗೆ ಮುಳುವಾಗುತ್ತದೆ. ತೊಂದರೆಯಾಗುತ್ತದೆ. ಅದ್ಹೇಗೆಂದರೆ ಹಲ್ಲಿನಲ್ಲಿ ಹುಳು ಸೇರಿ ನೋವನ್ನುಂಟು ಮಾಡುವಂತಿರುತ್ತದೆ ಎಂದು ಹೇಳಿದ್ದಾರೆ.

**ಶಿಷ್ಯ ವರ್ಗಕ್ಕೆಲ್ಲ ಶಿವರೂಪ ತಿಳಿಸದೆ**
**ಸಲ್ಲದ ಮತ ಕಟ್ಟಿ ನೂಕುವವರೇ**
**ಗುರುತರಿಯದೆ ನಿಲುವ ಹೊಕ್ಕ ಕುರುಡೆತ್ತಲು**
**ವಿಶ್ವದಾಭಿರಾಮ ಕೇಳು ವೇಮ**

**ಗುಹೆಯೊಳಗೆ ಸೇರಿ, ಗುರುವನರಸುವಾಗ**
**ಕ್ರೂರ ಮೃಗವದೊಂದು ಕೊಸರಿ ಬರಲು,**
**ಮುಕ್ತಿಯ ದಾರಿ ತಾನೆ ಮುಂದಾಗಿ ತೋರಿತು**
**ವಿಶ್ವದಾಭಿರಾಮ ಕೇಳು ವೇಮ.**

**ಮಾಯಾಮೂಲದ ಕೆಲವರು – ಇಹರು,**
**ಮಾಯೆಗಳ ತೋರಿಸಿ ಮನವ ಮರುಳುಗೊಳಿಸುವರ್**
**ಮಾಯೆಯ ಹೊರಗಿನ ಚಿತ್ತವ,**
**ಕೊಯ್ಯದೆ ಗುರು ನಿಷ್ಠೆ ತಾಳಿ ಪ್ರಬಲಿಸು ವೇಮಾ.**

ಗುರುವು ತನ್ನ ಶಿಷ್ಯ ಬಳಗಕ್ಕೆ ಮಾರ್ಗದರ್ಶಕನಾಗಿರಬೇಕು. ಅವರು ಹೋಗಬೇಕಾದ ಮುಕ್ತಿಯ ದಾರಿಯನ್ನು ಅರಿತಿರಬೇಕು, ಕಂಡುಕೊಂಡಿರಬೇಕು. ಆದರೆ ಶಿಷ್ಯರಿಗೆ ಶಿವರೂಪವನ್ನು ತಿಳಿಸದೇ, ಮತ–ಪಂಗಡ, ಗುಂಪುಗಾರಿಕೆಗಳನ್ನು ಕಟ್ಟಿ, ಅವರನ್ನು ಅಂಧಕಾರದಲ್ಲಿ ನೂಕುವವರಾಗಿರಬಾರದು. ಅಂಥವರು ಗುರುತರಿಯದೇ ಬೆಳೆದ ಕುರುಡ ಎತ್ತಿನಂತಿರುತ್ತಾರೆ ಎಂದು ವಿಡಂಬಿಸಿದ್ದಾರೆ. ಇನ್ನು ಕೆಲವರ ಗ್ರಹಿಕೆಯು ಹೀಗಿರುವುದೆಂದುದಾಗಿ ಕಂಡ ಸತ್ಯವನ್ನು ಬಿಚ್ಚಿಟ್ಟಿದ್ದುದು ಹೀಗೆ–ಗುರುವಾದವನು ಕಠಿಣ ತಪಸ್ಸು ಮಾಡುವವನಾಗಿರಬೇಕು. ಧ್ಯಾನ–ಯೋಗದ ಅಧ್ಯಯನವಿರಬೇಕು. ಮನೆ–ಮಾರು–ವಸ್ತು–ವಡವೆಗಳನ್ನು ತ್ಯಜಿಸಿ ಗುಡ್ಡ–ಗುಹೆಗಳಲ್ಲಿ ವಾಸವಾಗಿರುತ್ತಾನೆ. ಹೀಗೆ ಗುಹೆಯನ್ನು ಸೇರಿ, ಗುರುವನ್ನರಸುತ್ತ, ಹೋದರೆ, ಕ್ರೂರ ಮೃಗವು ಗವಿಯಿಂದ ಹಾರಿ ಬಂದು ಈ ಲೋಕದಿಂದ ಮುಕ್ತಿ ನೀಡಿ ಯಮ ಸದನಕ್ಕೆ ಸೇರುತ್ತದೆ. ಹಲವರು ಮಾಯಾಜಾಲದ ಅವಿದ್ಯೆಯ ತೋರಿ ಸಾಧಕರೂ ಸಾಧನೆಯಲ್ಲಿ ನಿರತರಾಗಿರುತ್ತಾರೆ. ಅವರು ಮಾಯೆಯನ್ನು ತೋರಿ ಜನಮನವನ್ನು ಮರುಳಗೊಳಿಸುತ್ತಾರೆ. ಮಾಯೆಗೆ ದೂರವಾಗಿ ಮನವನ್ನಿರಿಸಿ, ಗುರು ನಿಷ್ಠೆ ಹೊಂದಿ ಪ್ರಬಲನಾಗುವುದೇ ಸರಿಯಾದ ಮಾರ್ಗವಾಗಿದೆಯೆಂದುದು ಗಮನೀಯ ಮಾತು. ನಿಜ ಮಹಾತ್ಮರೊಡನೆ ನಿಜವನರಿತು ನಿಜವ ಮಾತುನಾಡಬೇಕು. ಸತ್ಯವ್ರತವೇ ಅವರ ನಡೆನುಡಿಯಾಗಿರಬೇಕು. ಅಂದರೆ ಗುರು–ಶಿಷ್ಯರಿಗಿಬ್ಬರಿಗೂ ಒಳಿತಾಗುವುದು ಮತ್ತು ಜನಹಿತಕಾರಿಯಾಗುವುದು ಎಂದಿದ್ದಾರೆ.

**ಕಲುಷಗಳನೆಲ್ಲ ಖಂಡಿಸಿ, ಗರಿಯರಿತು**
**ಚಿಣ್ಮಯಾನಂದ ಪಟ್ಟಾಭಿಷಿಕ್ತನಿರೆ**
**ಅವನನೆಣಿಸಲಳವೇ? ಅಬಬ ಅವನಿಯಲ್ಲಿ**
**ಪರಶಿವನೆಂದು ಬಣ್ಣಿಸುತಿಹರು ವೇಮ.**

ಅಂದರೆ ಎಲ್ಲ ದೋಷಗಳನ್ನು ಖಂಡಿಸಿ, ಕೊಚ್ಚಿ ಹಾಕಿ, ಸರಿಯಾದ ಹಾದಿಯನ್ನು ಹಿಡಿದು ಚಿನ್ಮಯಾನಂದ ಪಟ್ಟಾಭಿಷಿಕ್ತನಾಗಿರುವವನನ್ನು ತಿಳಿಯಬಹುದೆ? ಈ ಭೂಲೋಕದಲ್ಲಿ ಅವನನ್ನು ಪರಶಿವನೆಂದು ಬಣ್ಣಿಸುತ್ತಾರೆ. ಸತ್ಸಂಗದಲ್ಲಿ ಪಾಲ್ಗೊಂಡು ತನ್ನ ಶಿಷ್ಯಬಳಗಕ್ಕೆ ಮೋಕ್ಷ ಮಾರ್ಗದ ಶುಚಿ ರುಚಿಯನ್ನು ಬೋಧಿಸುತ್ತ ಶಿವ ಸಾಯುಜ್ಯ ಹೊಂದುವವನೇ ಸಮರ್ಥ ಸದ್ಗುರು ಎಂದು ವೇದ–ಶಾಸ್ತ್ರ–ಪುರಾಣಾಗಮ ಮತ್ತು ವೇಮನಲ್ಲಮರ ಪದ್ಯಗಳು ಮತ್ತು ವಚನಗಳು ಸಾರಿ ಸಾರಿ ಹೇಳಿರುವವು ಎಂಬುದನ್ನು ತಿಳಿಯಪಡಿಸಲಾಗಿದೆ. ಇಂತಿವರು ಮಹಾಯೋಗಿಗಳು ಲೋಕ–ಪೂಜ್ಯರಾಗಿ ಅರ್ಹ ಗುರುಗಳಾಗಿ ಮೋಕ್ಷ ಮಾರ್ಗದುಣಿಸನು ಭಕ್ತ ಸಮೂಹಕ್ಕೆ ನೀಡಿ ಅಮರರಾಗಿ ಮುಕ್ತಿಧಾಮವನ್ನೈದಿಹರು. ಇಂಥವರ ಮಹಾತ್ಮರ ನುಡಿಗಡಣಗಳನ್ನು ಓದಿ–ತಿಳಿದುಕೊಂಡು ಮುನ್ನಡೆಯಲು ಪ್ರಯತ್ನಿಸಿದರೆ ನಮ್ಮ ಜೀವನವೂ ಪಾವನವಾಗುವುದರಲ್ಲಿ ಸಂದೇಹವೇ ಇಲ್ಲವೆನ್ನಿ!

❖❖❖

# ಅಧ್ಯಾಯ–ಎಂಟು
# ದೇಹವೇ ದೇವಾಲಯ ಆತ್ಮವೇ ಪರಮಾತ್ಮ

ಸಾಯುವವರು ಯಾರೋ? ಸಾಯದವರು ಯಾರೋ?
ಸತ್ತು ಬದುಕಿರುವ ಸುಜನರಾರೋ?
ನಿಶ್ಚಯಿಸಿ ಕಂಡುಕೋ; ನೋಡು ನೀವವನನು
ವಿಶ್ವದಾಭಿರಾಮ ಕೇಳು ವೇಮ.

ದೇವ–ಗುಡಿಗಳಲ್ಲಿ, ತೀರ್ಥ ಕ್ಷೇತ್ರದಲ್ಲಿ
ಮೂಲವರಿಯದಿರಲು–ಮುಕ್ತಿಯಿಲ್ಲ,
ಆತ್ಮ ಮೂಲವರಿಯದೆ ಅದನೆಂತು ತಿಳಿವನು
ವಿಶ್ವದಾಭಿರಾಮ ಕೇಳು ವೇಮ.

– ವೇಮನ

ಕಾಲೇ ಕಂಬಗಳಾದವೆನ್ನ
ದೇಹವೇ ದೇಗುಲವಾಯಿತ್ತಯ್ಯಾ
ಎನ್ನ ನಾಲಗೆಯೇ ಗಂಟೆ,
ಶಿರ ಸುವರ್ಣದ ಕಳಸ ಇದೇನಯ್ಯಾ!
ಸರವೆ ಲಿಂಗಕ್ಕೆ ಸಿಂಹಾಸನವಾಗಿತ್ತಯ್ಯಾ
ಗುಹೇಶ್ವರಾ ನಿಮ್ಮ
ಪ್ರಾಣ ಲಿಂಗ ಪ್ರತಿಷ್ಠೆ ಪಲ್ಲಟವಾಗದಂತಿದ್ದೆನಯ್ಯಾ!

ಕಲ್ಲುದೇವರೆಂದು ಪೂಜಿಸುವರು–ಆಗದು ಕಾಣಿರೋ
ಅಗಡಿಗರಾದಿರಲ್ಲಾ!
ಮುಂದೆ ಹುಟ್ಟುವ ಕೂಸಿಂಗೆ
ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ!

ನಾ ದೇವನಲ್ಲದೆ ನೀ ದೇವನೆ?
ನೀ ದೇವನಾದಡೆ ಎನ್ನನೇಕೆ ಸಲಹೆ?
ಆರೈದು ಒಂದು ಕುಡಿತೆ ಉದಕವನೆರೆವೆ.
ಹಸಿದಾಗ ಒಂದು ತುತ್ತು ಓಗರನಿಕ್ಕುವೆ
ನಾ ದೇವ ಕಾಣಾ ಗುಹೇಶ್ವರಾ!

– ಅಲ್ಲಮಪ್ರಭು

## ವೇಮನಾಲ್ಲಮರ ಸಾಹಿತ್ಯದಲ್ಲಿ ದೇವರು (ಆತ್ಮ-ಪರಮಾತ್ಮ)!

ಈ ಪ್ರಪಂಚವೇ ದೇವನ ಮನೆ. ಇಲ್ಲಿ ವಾಸಿಸಿರುವ ಜೀವಿಗಳೆಲ್ಲಾ ನಾವು-ನೀವು ಬಾಡಿಗೆದಾರರು ಮಾತ್ರ 'ನಾವು ದೇವರಾದಲ್ಲದೇ. ದೇವರ ಕಾಣುವ ಬಗೆ ಯಾವುದಯ್ಯಾ? ಕರಣೇಂದ್ರಿಯ ವಿಕಾರ ದೂರವಾದಲ್ಲದೆ ಕಾಯವದು ನಿರ್ಮಲವಾಗುವ ಬಗೆ ಯಾವುದಯ್ಯಾ, ಎಂದುದಾಗಿ ಆಧುನಿಕ ವಚನಕಾರ ಬ.ಗಿ.ಯಲ್ಲಟ್ಟಿಯವರು ಹೇಳಿರುವುದನ್ನು ನಾವಿಂದು ಗಮನಿಸಬೇಕು. ಮೋಹ ಮದ, ಮತ್ಸರ-ಲೋಭ- ಈ ಮುಂತಾದ ಕರಣೇಂದ್ರಿಯ ವಿಕಾರ ಗುಣಗಳಿಂದ ದೂರವಾದರೆ, ಪರಿಪೂರ್ಣ ತ್ಯಜಿಸಿದರೆ ದೇಹವು ನಿರ್ಮಲವಾಗುತ್ತದೆ. ತನುವಿನಲ್ಲಿ ಪಂಚ-ಜ್ಞಾನೇಂದ್ರಿಯಗಳು ಪಂಚ ಕರ್ಮೇಂದ್ರಿಯಗಳು, ಪಂಚ ಅವಯವಗಳು, ಬುದ್ಧಿ-ಮನ-ಹೀಗೆ ಹದಿನೇಳು ತತ್ತ್ವಗಳಿಂದ ಕೂಡಿರುವುದು ಸ್ಥೂಲ ದೇಹ ಅಥವಾ ತನು. ಆದರೆ ದೇಹವನ್ನು ಧರಿಸಿದ ಮಾನವನಲ್ಲಿ ಸಪ್ತ ವ್ಯಸನಗಳು, ಅರಿಷಡ್ ವರ್ಗಗಳು, ಷಡೂರ್ಮಿಗಳು, ಷಡ್‌ಭ್ರಮೆ, ಅಷ್ಟಮದ ಮುಂತಾದವು ಯಾವುದೋ ಕಾರಣದಿಂದ, ಸಂಪರ್ಕದಿಂದ ಜೀವಿಯೊಳಗೆ ಸೇರಿಕೊಳ್ಳುವುದರಿಂದ ಆತನ ವರ್ತನೆ ಸಂತ-ಶರಣರಿಗಿಂತಲೂ ಭಿನ್ನವಾಗಿರುತ್ತದೆ. ನಾನೇ ಬೇರೆ ಪರಮಾತ್ಮ ಬೇರೆ ಎಂಬ ಭಾವದುಂಬಿದವನಾಗುತ್ತದೆ. ಈ ಎಲ್ಲ ಗುಣಾವಗುಣಗಳನ್ನು ಕೊಡ ಮಾಡಿದವನೇ ಆ ಪತಮಾತ್ಮನು (ದೇವನು) ಆದರೆ, ಯಾವವು ಗುಣಗಳು ಬೇಕು-ಬೇಡವೆಂಬುದನ್ನು ಆಯ್ಕೆ ಮಾಡಿಕೊಳ್ಳುವವನೇ ಜೀವಿಯು, ದೇಹಿಯು, ಜೀವನು. ಒಳ್ಳೆಯದನ್ನು ರೂಢಿಸಿಕೊಂಡು, ಒಳಿತಾದುದನ್ನು ಮಾಡಿಕೊಂಡು ತನ್ನೊಂದಿಗೆ ಪರರನ್ನು ತನ್ನಂತೆ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಎಂಬಂತೆ; ಒಳಿತು ಮಾಡಿದರೆ ಪುಣ್ಯದ ಪುಂಜ; ಕೇಡು ಮಾಡಿದರೆ ಪಾಪ ಬಿಕನಾಸಿಯಾಗುತ್ತಾನೆ ಮಾನವ. ಯಾವುದು ಹಿಡಿಯಬೇಕು-ಯಾವುದು ಬಿಡಬೇಕೆಂಬ ಆಯ್ಕೆಯ ವಿಚಾರವನ್ನು ಸೃಷ್ಟಿಸಿದಾತ ನಮಗೆ ಸ್ವಾತಂತ್ರ್ಯ ಕೊಟ್ಟಿರುವನೆಂದು ತಿಳಿದು ಇಲ್ಲ ಸಲ್ಲದ ವ್ಯಸನಾದಿಗಳಿಗೆ ಕರಣೇಂದ್ರಿಯಗಳನ್ನು ತೊಡಗಿಸಿಕೊಳ್ಳುವುದು ನಿಷ್ಪ್ರಯೋಜಕ, ಆದುದರಿಂದ ಸತ್ಯವಂತ ಶರಣರ-ಸಂತರ-ದಾಸವರೇಣ್ಯರ ಸತ್ಸಂಗದೊಳಿದ್ದು ಒಳ್ಳೆಯದನ್ನು ಪಡೆದು ಅಳವಡಿಸಿಕೊಂಡರೆ ನೀವೇ ದೇವರಾಗುತ್ತೀರಿ, ಪರಮಾತ್ಮರಾಗುತ್ತೀರಿ ಎನ್ನುತ್ತಾರೆ ವೇಮನಾಲ್ಲಮರು.

ಭಕ್ತಿ, ಧ್ಯಾನ ಜ್ಞಾನ-ಅಧ್ಯಾತ್ಮವನ್ನು ತೆಗೆದುಕೊಂಡು ನಾನೇನು ಮಾಡಲಿ ಎಂದು ಭೇದವೆನಿಸಿಕೊಂಡು ಸಿರಿ-ಸಂಪತ್ತಿನ ಬೆನ್ನುಹತ್ತಿ ಜೀವನವನ್ನು ಹಾಳು ಮಾಡಿಕೊಳ್ಳುತ್ತಾನೆ. ಆದರೆ ಹುಟ್ಟಿದ ಮೇಲೆ ಬದುಕು ಸಾರ್ಥಕವಾಗಬೇಕಾದರೆ ಸಜ್ಜನ-ಶರಣರ ಸಂಗದೊಡನಾಟದಲ್ಲಿರುವುದೇ ಸರ್ವೋತ್ತಮ ಗುಣವಾಗಿದೆ. ದಯವೇ ಧರ್ಮದ ಮೂಲ, ಆತ್ಮವೇ ಪರಮಾತ್ಮ, ದೇಹವೇ ದೇವಾಲಯ,

ಸತ್ಯವೇ ದೇವರು, ಸ್ಥಾವರಕ್ಕಳಿವುಂಟು–ಜಂಗಮಕ್ಕಳಿವಿಲ್ಲ, ನುಡಿ ಮುತ್ತಿನ ಹಾರದಂತಿರಬೇಕು.

ದೇವಲೋಕ–ಮರ್ತ್ಯಲೋಕ (ಇಹಲೋಕ) ವೆಂದೆಂಬುದಿಲ್ಲವೋ ನಾವು ನೆಲೆಸಿರುವ ತಾಣವೇ ದೇವ–ಇಹ–ಪರಲೋಕಗಳಿದ್ದಂತೆ. ನಮ್ಮ ನಡೆ–ನುಡಿ–ಆಚಾರ–ವಿಚಾರಗಳ ಆಚರಣೆಯಿಂದ ನಾವೇ ದೇವರು ಅಥವಾ ಮಹಾಮಾನವನಾಗುವ ಶಕ್ತಿ ಸಾಮರ್ಥ್ಯ ನಮ್ಮಲ್ಲಿದೆ ಎಂಬುದನ್ನು ತಮ್ಮ ಪದ್ಯ–ವಚನಗಳ ಮೂಲಕ ತಿಳಿಯಪಡಿಸಿದ್ದಾರೆ ವೇಮನಾಲ್ಲಮ ಮಹಾತ್ಮರು. ಇವನಾರವ ಇವನಾರವ ಎಂದು ಹೇಳುತ್ತ ಬಾಳಲಾರದೇ ಇವನು ನಮ್ಮವನು, ಇವನು ನಮ್ಮವರು ಎಂಬ ಭಾವ ಮೂಡಿಸಿಕೊಂಡು ಬಾಳಿದರೆ ಬದುಕು ಬಂಗಾರವಾಗುತ್ತದೆ ಎಂದು ಹೇಳಿದ ಶರಣರ ನುಡಿಗಳು ನಿತ್ಯವೂ ಸತ್ಯ! ಆದುದರಿಂದ ಅವರ ಹೇಳಿಕೆಯಂತೆ ನಡೆದರೆ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುತ್ತಾರೆ ಎಂದಂತೆ! ಪಾಪ ಮಾಡುವುದೇ ನರಕ–ಪುಣ್ಯಗೈಯ್ಯುವುದೇ ಸ್ವರ್ಗ ಪ್ರಾಪ್ತಿ ಎಂಬ ಸರಳ ಸೂತ್ರವನ್ನರಿತು ನಡೆದರೆ ದೇವನು ಮೆಚ್ಚಿ ಕರೆದೊಯ್ಯುತ್ತಾನೆ, ಗಣಪದವಿಯನ್ನಿತ್ತು ಕರುಣಿಸುತ್ತಾನೆ. ಇಲ್ಲದಿದ್ದರೆ ವ್ಯಸನದಲಿ ದೇಹವೇ ವ್ಯಸನವನು ಕಾಣುವುದು ಮತ್ತು ವ್ಯಸನಗಳನು ಬಿಟ್ಟು ಹಸನಾಗಿ ಬದುಕುವುದರಿಂದ ಅಶನ–ವಸನಗಳು ದೊರಕುವವು ಎಂದು ಹೇಳಿದ ಸರ್ವಜ್ಞ ಕವಿಯ ಮಾತನ್ನು ಮರೆಯುವಂತಿಲ್ಲ! "ಅಯ್ಯಾ ಎಂದರೆ ಸ್ವರ್ಗ–ಎಲ್ಲವೋ ಎಂದಡೆ ನರಕ "ಎಂದ ಬಸವಣ್ಣನವರ ಮಾತನ್ನು ನಾವು ಎಂದೆಂದಿಗೂ ಮರೆಯುವಂತಿಲ್ಲ. ಆನೆ–ಕಾರು–ವಿಮಾನವನ್ನೇರಿಕೊಂಡು ಹೋಗುತ್ತಿದ್ದೇವೆಯೆಂದು ಅಹಂಕಾರ ಪಡದಿರಿ ನೀವು! ಅವು ಯಾವವೂ ನಿನ್ನ ಅಧೀನವಲ್ಲ! ಅವುಗಳಲ್ಲಿರುವ ತಾಂತ್ರಿಕ ವಿದ್ಯೆ ಮತ್ತು ಎಣ್ಣೆ ತೀರಿದ ಮೇಲೆ ಭೂಮಿ–ಆಕಾಶ–ಗಾಳಿ–ನೀರೆನ್ನದೆಯೇ ಎಲ್ಲಿ ಬೇಕಾದಲ್ಲಿ ಬಿದ್ದು ಪ್ರಾಣ ಹಾನಿ ಮಾಡಬಹುದು. ಆದುದರಿಂದ ಈ ದೇಹ ಸುಖ–ದುಃಖಕ್ಕಾಗಿ ಹಪಹಪಿಪಡುವುದಕ್ಕಿಂತ ಪರಮಾತ್ಮನ ಸ್ತುತಿಗಾಗಿ ದೇವನ ಆಳಾಗಿ ಸೇವೆ ಮಾಡಬೇಕು! ಆತನ ಸ್ತುತಿ, ಸ್ಮರಣೆ, ಭಜನೆ, ಪ್ರಾರ್ಥನೆ, ಕೀರ್ತನೆ, ಪ್ರವಚನ, ಹಾಡುಗಾರಿಕೆ, ಧ್ಯಾನ, ತಪ–ಜಪ, ಮಾಡುತ್ತ ಸುಖ ಪಡೆ ಮಾನವಾ! ಎಂದುದಾಗಿ ಮಹಾತ್ಮರು ನುಡಿದು ನಡೆದು ಬಿಟ್ಟುಹೋದ ಅಪಾರವಾದ ಸಾಹಿತ್ಯದ ಪವಿತ್ರ ಗ್ರಂಥಗಳಿರುವಾಗ ನಾವು ಮೊಬಾಯಿಲ್, ಇಂಟರ್‌ನೆಟ್, ವಾಟ್ಸ್‌ಪ್ ಮುಂತಾದ ಮಾಧ್ಯಮದ ಸಲಕರಣೆಗಳ ಬೆನ್ನು ಹತ್ತಿ ಪುಸ್ತಕಗಳನ್ನೇ ಕೈಯಲ್ಲಿ ಹಿಡಿದು ಓದದಿದ್ದರೆ ಆ ದೇವನು ಮೆಚ್ಚುತ್ತಾನೆಯೆ? ನೀವೇ ವಿಚಾರಿಸಿರಿ! ದೆವರೇ ಇಲ್ಲವೆಂದು ವಾದ ಮಾಡುವ ನಾಸ್ತಿಕರೂ ಇದ್ದಾರೆ. ಆಸ್ತಿಕರಾದವರು ಇತ್ತ ಸ್ವಲ್ಪಾದರೂ ಚಿತ್ತ ಹರಿಸಬಹುದೇನೋ! ಆದುದರಿಂದ ಅಲ್ಲಮರು ಹೇಳಿರುವರು "ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ; ಹೆಣ್ಣು ಮಾಯೆಯೆಂಬರು ಹೆಣ್ಣು

ಮಾಯೆಯಲ್ಲ; ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ; ಇವಾವವೂ ಅಲ್ಲ ಆದರೆ, ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ!" ಎಂದು ನಮ್ಮಂಥವರನ್ನು ಕಂಡೇ ಹೇಳಿರಬೇಕು ಅಲ್ಲವೆ?

ಅವರೇ ಮುಂದುವರೆದು 'ಆಸೆಗೆ ಸತ್ತುದು ಕೋಟಿ–ಆಮಿಷಕ್ಕೆ ಸತ್ತುದು ಕೋಟಿ, ಹೊನ್ನು–ಹೆಣ್ಣು–ಮಣ್ಣಿಗಾಗಿ ಸತ್ತುದುಕೋಟಿ ಕೋಟಿ; ಆದರೆ ನಿನಗಾಗಿ ಸತ್ತವರಾರನೂ ಕಾಣೆ ಗುಹೇಶ್ವರಾ!' ಎಂದಿದ್ದಾರೆ. ಇದೆಂಥ ಬೀಜ ಮಾತಲ್ಲವೇ? ಆಸೆಯೇ ಸರ್ವದುಃಖಕ್ಕೆ ಕಾರಣ. ನಡೆ–ನುಡಿಯಲ್ಲಿದ್ದುಕೊಂಡು ಪವಿತ್ರ ಮನೋಭಾವನೆಯಿಂದ ನಡೆದು ಬಂದಲ್ಲಿ ಒಂದೇಯಾಗಿರಬೇಕು. ದುರಾಸೆ ಸತ್ತವರ ಖ್ಯಾತಿ. ಅದು ಕಾರಣ ನಿತ್ಯದ ವ್ಯಸನವನು ತೊರೆದು ಮಾನವೀಯ ಮೌಲ್ಯವಾಗಿರುವ ಸದ್ಗುಣಗಳನ್ನಳವಡಿಸಿಕೊಂಡು ಪ್ರಭುದೇವರು ಕರೆ ಕೊಟ್ಟಂತೆ ನಡೆಯಲು ಪ್ರಯತ್ನಿಸಬೇಕು. ಆಸೆ–ಆಮಿಷಕ್ಕೆ, ಧನ–ಕನಕ ದಾಹಕ್ಕೆ ಬೆನ್ನು ಹತ್ತಿದರೆ ಜ್ಞಾನ ಸಂಪಾದನೆ ಮತ್ತು ದೇವನ ಸನ್ನಿಧಾನ ದೊರಕುವುದು ಬಲುಕಷ್ಟವೆಂದು ಪ್ರತಿಪಾದಿಸಿದ್ದಾರೆ. ಅಲ್ಲಮರ ಈ ಕೆಳಗಿನ ವಚನವನ್ನರಿತು ನಡೆದರೆ ನಮ್ಮ ಬದುಕು ಸಾರ್ಥಕ ಮತ್ತು ಪರಿಪೂರ್ಣವಾಗುತ್ತದೆಯೆಂದು ನಾನೂ ನಂಬಿದವರ ಸಾಲಿನಲ್ಲಿರತಕ್ಕವನು ಎಂದು ಭಾವಿಸಬೇಕು.

**ನಾನೆಂಬಹಂಕಾರ ತಲೆದೋರಿದಲ್ಲಿ ಅಟಮಟ**
**ಕುಟಿಲ, ಕುಹಕವೆಂಬ ಬಿರುಗಾಳಿ ಹುಟ್ಟಿತು**
**ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನ ಜ್ಯೋತಿ ಕೆಟ್ಟಿತ್ತು**
**ಜ್ಞಾನ ಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ**
**ಅದು ಹಿರಿಯರೆಲ್ಲರೂ ತಾಮಸಕ್ಕೊಳಗಾಗಿ ಸೀಮೆ ತಪ್ಪಿ**
**ಕೊಟ್ಟರು ಕಾಣಾ ಗುಹೇಶ್ವರಾ!**

ಎಂದ ಅಲ್ಲಮರ ಈ ವಾಣಿಯನ್ನು ಗಮನಿಸಿ ನಾವಿಂದು ಮುಂದಡಿಯಿಡಬೇಕು. ಅರ್ಥ ಪ್ರಾಪ್ತಿಗಾಗಿ ನಾವು ಮಾಡುವ ಕಾರ್ಯ–ಕಾಯಕ ಸರಿಯಾಗಿದೆಯೇ ಎಂಬುದರ ಆತ್ಮಾವಲೋಕನ ಮಾಡಿಕೊಂಡು ನಡೆಯಬೇಕು ನಾವು ನಡೆಯುವ ನಡೆ–ನುಡಿಯಲ್ಲಿಯೇ, ಆಚಾರ–ವಿಚಾರಗಳಲ್ಲಿಯೇ ಆ ದೇವನ ಅನುಗ್ರಹದ ನೋಟ ಇದ್ದೇಯಿರುತ್ತದೆ ಎಂಬುದನ್ನು ನಾವಿಂದೂ ಮರೆಯಕೂಡದು. ಒಳಿತಾವುದು–ಕೇಡಾವುದು ಎಂಬುದನ್ನು ನೋಡುವವನೇ ಪರಮಾತ್ಮನು! ಆದಕಾರಣ, ಅನ್ಯ ಮಾರ್ಗದಿಂದ ಗಳಿಸಿ ಸಂಗ್ರಹಿಸಿಡದೇ ಸನ್ಮಾರ್ಗದಿಂದ ಸ್ವಕಾಯಕದಿಂದ ದುಡಿದು ಗಳಿಸಿ–ಉಳಿದರೆ ದಾಸೋಹ ಮಾಡಿದಡೆ ಆ ಪರಮಾತ್ಮ ಮೆಚ್ಚಿ ಉನ್ನತ ಪದವಿ ಕರುಣಿಸುತ್ತಾನೆಯೆನ್ನುವವರ ಸಂಖ್ಯೆಯೆ ಇಂದು ಹೆಚ್ಚಬೇಕಾಗಿದೆ. ಮಾನವನ ಬದುಕೆಂಬುದು ಶಾಶ್ವತದ ನಿಧಿಯಲ್ಲ! ಹೇಗಿದ್ದ, ಹೇಗಾದ, ಹೇಗೆ ಹೋದ ಎಂಬುದರ

ಬದುಕಿನ ಮುಖ್ಯವೆಂಬುದನ್ನು ಅರಿತುಕೊಂಡು ನಡೆಯಬೇಕಷ್ಟೇ! ಆದುದರಿಂದ **"ದೇಹವೇ ದೇವಾಲಯ-ಆತ್ಮವೇ ಪರಮಾತ್ಮ"** ಇವೆರಡರ ಬೆಸುಗೆಯೇ ಜೀವಾತ್ಮ ಜೀವಾತ್ಮವೇ ಪರಮಾತ್ಮ ಎಂಬುದರ ತಿಳುವಳಿಕೆಯಿಂದ ನಡೆದರೆ ಆತನೂ ದೇವರಾಗುವ, ಮಹಾಮಾನವನಾಗುವ ಶಕ್ತಿ ಪಡೆದಿದ್ದಾನೆ ಎಂದರ್ಥ. ಈಶನ ದಾಸನಾದವನು ಈಶ್ವರನೇ ಆಗುತ್ತಾನೆ. ಆತ್ಮ-ಹೃದಯವಿರದೇ ದೇಹವಿಲ್ಲ. ದೇಹವೆಂಬ ದೇವಾಲಯದಲ್ಲಿ ಆತ್ಮನಿರುವಾಗ ಆತನಿಗೆ ಧಕ್ಕೆ ಬಾರದ ರೀತಿಯಲ್ಲಿ ಶುದ್ಧ-ಪರಿಶುದ್ಧವಾಗಿಟ್ಟುಕೊಂಡು ಕರುಣಿಸಿದಾತನನ್ನು ಪೂಜಿಸುವುದೇ, ಸ್ತುತಿಸುವುದೇ ಪರಮಾತ್ಮನ ಸನ್ನಿಧಾನವಿದ್ದಂತೆ!

ಮನುಷ್ಯ ಅತ್ಯಂತ ವಸ್ತುವಾಗಿದ್ದಾನೆ. ಅದನ್ನು ಅರಿಯುವ ಅಗತ್ಯವಿದೆ. ಆತ್ಮಕ್ಕೆ ರೂಪ, ಆಕಾರ, ಬಣ್ಣವಿಲ್ಲ; ನಿಜ ಆದರೆ ಅದು ಇದೆ ದೇಹದಲ್ಲಿ ವಾಸವಿದೆ. ಆತ್ಮವಿರದೇ ದೇವರಿಲ್ಲ. ಆದರೆ ಅದು ಕಾಣುವ ವಸ್ತುವಲ್ಲ. ಆದರೆ, ಆತ್ಮವಿರದೇ ದೇಹವಿಲ್ಲ. ಅದು ಇಂದ್ರಿಯಗಳಿಗೆ ನಿಲುಕುವುದಿಲ್ಲ. ಅದನ್ನು ಸೂಕ್ಷ್ಮ ಭಾವದಿಂದ ಮತ್ತು ಗ್ರಹಣ ಸಾಮರ್ಥ್ಯವಿದ್ದರೆ ಅರಿಯಬಹುದಷ್ಟೇ! ದೇವರು ಪರಮ ಸತ್ಯವು ಹೇಗೋ ಹಾಗೆಯೇ ಆತ್ಮವೂ ಪರಮ ಸತ್ಯ! ದೇಹವಳಿದರೂ ಆತ್ಮ ಚಿರಂತನ ಶಾಶ್ವತ ಸತ್ಯ! ಆದರದೂ ಎಂದಿಗೂ ಕಾಣುವುದಿಲ್ಲ. ದೇಹದಲ್ಲಿನ ವಸ್ತುಗಳನ್ನು ನೋಡುತ್ತೇವೆ. ಆದರೆ ಆತ್ಮ ಮಾತ್ರ ಎಂದಿಗೂ, ಯಾರಿಗೂ ಕಾಣುವುದಿಲ್ಲ. ಅಂದರೆ ದೇಹಕ್ಕೆ ಬಣ್ಣವಿದೆ, ರೂಪ, ಆಕಾರವಿದೆ, ಆದರೆ ಆತ್ಮಕ್ಕೆ ಅಥವಾ ಶಕ್ತಿಗೆ ಬಣ್ಣವಿಲ್ಲ, ರೂಪ ಆಕಾರವಿಲ್ಲ. ಪ್ರಾಣ ಶಕ್ತಿ ಹೋದರೆ (ದೇಹ) ಎಲ್ಲವೂ ನಾಶವಾಗುತ್ತದೆ. ಪ್ರತಿಯೊಂದು ಕಣಕಣದಲ್ಲೂ ಶಕ್ತಿಯಿದೆ. ಅದು ವ್ಯಾಪಕ ಮತ್ತು ಶಕ್ತಿ ಪುರುಷನೂ ಅಲ್ಲ ಸ್ತ್ರೀಯೂ ಅಲ್ಲ! ಆತನೇ ಆತ್ಮನು-ದೇವನು. ದೇವರು ವಿಶ್ವವ್ಯಾಪಿಯಾಗಿದ್ದಾರೆ. ಆತನೇ ಆಜ್ಞಾನಧಾರಕ ಶಕ್ತಿ! "ತೃಣಮಪಿ ನ ಚಲತಿ ನಿನ್ನ ವಿನಾ" ಎಂದಂತೆ! ಆತನ ಇರವು, ಸೃಷ್ಟಿಯ ಕಣಕಣದಲ್ಲಿಯೂ ಆತ ವಾಸವಾಗಿದ್ದಾನೆಯೆಂದರ್ಥ! ನಮಗೆ ಕೊಡಮಾಡಿರುವದೆಲ್ಲವೂ ಆತನ ಅನುಗ್ರಹದಿಂದ ಎಂದಾಗಿರುವಾಗ ನಾವೇಕೆ ಆತನನ್ನು ನೆನೆಯಬಾರದು, ಪೂಜಿಸಿಸಬಾರದು. ಸ್ತುತಿಸಿ ಕೃತಾರ್ಥರಾಗಿ ಕೃತಜ್ಞತೆ ಸಲ್ಲಿಸಬಾರದು?

ಆತ್ಮವೇ ಪರಮಾತ್ಮ ಎಂದಾದ ಮೇಲೆ ಆತ್ಮನ ಸ್ವರೂಪದಲ್ಲಿಯೇ ನಮ್ಮ ಹೃದಯ ಮಂದಿರದಲ್ಲಿದ್ದಾನೆ. ಆತನಿಗೆ ವ್ಯಸನ-ಅರಿಷಡ್ವರ್ಗಗಳಂತಹ ಕಳಂಕ, ಧೂಳು ಹತ್ತದಂತೆ ನೋಡಿಕೊಳ್ಳುವುದು ದೇಹ ಧರಿಸಿದವನ ಕರ್ತವ್ಯ. ಆದ ಕಾರಣ ನಾವು ಮಹಾ ಪರಿಶುದ್ಧ ಸಮರ್ಪಿತವಾದ ಜೀವನವನ್ನು ಸಾಗಿಸುವುದರ ಮೂಲಕ ತಮ್ಮ ಇಡಿಯಾದ ಬದುಕನ್ನು ಸತ್ಯ ಚಿಂತನೆಗಾಗಿ ಅಭಿವ್ಯಕ್ತ-ಗೊಳಿಸಿಕೊಳ್ಳುವುದು ಮುಖ್ಯವಾಗುತ್ತದೆ. ಆತ್ಮಸಾಕ್ಷಿಯಾಗಿ ಹೇಳುತ್ತೇನೆಯೆಂದರೆ

ದೇವರ ಸಾಕ್ಷಿಯಾಗಿ ಎಂದಂತೆಯೇ! ಈ ವಿಶ್ವವು ದೈವತ್ವವನ್ನು ಹೊಂದಿದ್ದು, ಅದು ನಮ್ಮ ಹೃದಯದಲ್ಲಿ ಅಡಗಿದೆ. ಯಾವುದು ಸರಿ; ಯಾವುದು ತಪ್ಪು ಎಂಬುದನ್ನು ಅರಿತು ನಮ್ಮ ಬದುಕನ್ನು ಸಮರ್ಪಿಸಿಕೊಳ್ಳಬೇಕು, ಸುಂದರವಾಗಿಸಿಕೊಳ್ಳಬೇಕು ಎಂಬುದರ ವಿವೇಚನೆಯು ಮಾನವನಲ್ಲಿ ಮುಖ್ಯವಾಗಿರಬೇಕೆಂಬ ಕಾರಣಕ್ಕೆ ಇಂತಹ ಮಹಾಪುರುಷರು ಹೊತ್ತಗೆಗಳನ್ನು ಓದಿ–ಅರ್ಥೈಸಿಕೊಂಡು ನಡೆಯುವುದರ ಕಾಳಜಿಯೂ ನಮ್ಮಲ್ಲಿರಬೇಕೆಂಬ ಅರಿಕೆಯಿರಲಿ! ಇದುವೇ ನನ್ನ ಆತ್ಮ ಸಾಕ್ಷಿಯ ಮಾತು! ದೇವರು–ಬೇರೆ –ಎಲ್ಲಿಯೂ ಇಲ್ಲ! ನಮ್ಮೊಳಗೇ ಆತನಿದ್ದಾನೆ ಎಂಬ ತಿಳುವಳಿಕೆಯಾದರೂ ನಮ್ಮಲ್ಲಿರಬೇಕಲ್ಲವೇ? ಮೂರ್ತಿ ಪೂಜೆಯಿಂದ ಏನೂ ಪ್ರಯೋಜನವಿಲ್ಲ! ಗುಡಿ–ಗುಂಡಾರಗಳನ್ನು ಸುತ್ತಿದರೂ ಇಲ್ಲ.

ವೇಮನಾಲ್ಲಮರು ತಮ್ಮ ತಮ್ಮ ಪದ–ಪದ್ಯ–ವಚನಗಳಲ್ಲಿ ಹೇಳಿರುವ ಸಂಗತಿಗಳನ್ನೇ ಮುಂದಿಟ್ಟುಕೊಂಡು ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ. ವೇಮನ ಯೋಗಿಯು ಎಂದಂತೆ–

**ಆತ್ಮಶುದ್ಧಿಯಿರದ ಆಚಾರವದೇಕೆ?**
**ಮಡಿಕೆ ಶುದ್ಧಿಯಿರದ ಅಡುಗೆಯೇಕೆ?**
**ಭಾವ ಶುದ್ಧಿಯಿರದ ದೇವ ಪೂಜೆಯೇಕೆ?**
**ವಿಶ್ವದಾಭಿರಾಮ ಕೇಳು ವೇಮ.**

**ದೇಹದೊಳಗಿಪ್ಪ ದೇಹಿದೇವನನ್ನು**
**ಕಂಡುಕೊಂಡ ಬುಧರು ತೀರ್ಥಯಾತ್ರೆ**
**ಗೆಯ್ಯರಯ್ಯ ಜಗದಿ, ಆತ್ಮರೂಪ ತಿಳಿದು**
**ವಿಶ್ವದಾಭಿರಾಮ ಕೇಳು ವೇಮ.**

**ಬೊಮ್ಮಣಂಗೆ ನಮಿಸಲವನು ಹರಕೆಯೀವ**
**ಆತ್ಮ ಶುದ್ಧ ಹೊಂದಿಆತನಿರಲು**
**ಎಲ್ಲ ಸಫಲವಲ್ಲದಿರಲು ಕಂಠಶೋಷ**
**ವಿಶ್ವದಾಭಿರಾಮ ಕೇಳು ವೇಮ**

ನಮ್ಮ ಹೃದಯವು ಹಸನುಗೊಳ್ಳದೆ, ಹೊರಗೆ ಧರ್ಮದ ಆಚಾರ–ವ್ರತಗಳನ್ನು ಮಾಡಿದರೆ ಪ್ರಯೋಜನವಿಲ್ಲ. ಅದೆಂತೆಂದರೆ ಪಾತ್ರೆಯನ್ನು ಹಸನುಗೊಳಿಸದೆ ಅದರಲ್ಲಿ ಅಡುಗೆ ಬೇಯಿಸಲು, ಅದು ರುಚಿಸುವುದೇ? ದೇವರ ಪೂಜೆ ಮಾಡುವ ಮುನ್ನ ನಮ್ಮ ನಮ್ಮ ಮನಸ್ಸೂ ಹಸನಾಗಿರಬೇಕು. ದೇಹವೇ ದೇವಾಲಯವೆಂದು ಶಾಸ್ತ್ರ–ಪುರಾಣಾದಿಗಳು–ಶರಣರು–ಸಂತರು ಸಾರಿ ಸಾರಿ ಹೇಳಿದ್ದಾರೆ. "ದೇಹೋ ದೇವಾಲಯಃ=ಆತ್ಮವೇ ದೇವರು". ನಿಜವರಿತು ನೋಡಿದರೆ ಈ ತತ್ತ್ವದ ಪ್ರದರ್ಶನ

ಇಲ್ಲವೆ ಬಾಹ್ಯ ಸಂಕೇತವಾಗಿ ದೇವಾಲಯಗಳ ನಿರ್ಮಾಣವಾಯಿತು. ದೇವಾಲಯಗಳು ಮೊದಲು ಗುಹೆಯ ರೂಪದಲ್ಲಿ ಇದ್ದುದೂ ಇದನ್ನೇ ಪುಷ್ಟೀಕರಿಸುತ್ತವೆ. ಆದರೆ, ವೈಚಿತ್ರ್ಯವೆಂದರೆ ಪ್ರದರ್ಶನದ ಕಲ್ಪನೆಯು ಮೂಲ ಕಲ್ಪನೆಯನ್ನೇ ಮರೆಸಿತು, ಅನಿಶ್ಚಿತತೆ ಮೂಡಿಸಿತು. ಕಾರಣ ಅದು ತಪ್ಪು ಹಾದಿಯೆನ್ನಿಸಿತು. ಕಾರಣ ಯಾರು ಬುಧರು ಅಂದರೆ ತಿಳಿದವರು ಇರುವರೋ ಅವರು ಆತ್ಮದ ಸ್ವರೂಪವೇನು? ಎಂಬುದನ್ನು ತಿಳಿದಿರುತ್ತಾರೆ. ಅಂದರೆ ಕಟ್ಟಿಗೆಯಲ್ಲಿಯ ಅಗ್ನಿಯಂತೆ ಆತ್ಮ ಜ್ಯೋತಿಯು ಬೆಳಗಿದಾಗ ದೇಹ ಬೇರೆ ಆತ್ಮ ಬೇರೆ ಎಂಬುದೂ ಹೊಳೆಯುತ್ತದೆ. ಈ ತಿಳಿವು ಆದ ಅನುಭವ. ಆತ್ಮವು ಪರಮಾತ್ಮನ ರೂಪವೇ,ಎರಡೂ ಒಂದೇಯೆಂಬ ಅರಿವು–ಆ ಕ್ಷಣವೇ ಹೊಳೆಯುತ್ತದೆ. ದೇಹಿಯೇ ದೇವ. ದೇಹವೇ ಅವನ ವಾಸಸ್ಥಾನ. ದೇಹವೇ ದೇವಸ್ಥಾನ. ಅದುವೇ ಪವಿತ್ರ ತೀರ್ಥಸ್ಥಾನ ಎಂದು ತಿಳಿದುಕೊಂಡ ಬುಧರು ಬೇರೆ ತಿರುಗಾಟದ ತೀರ್ಥ ಯಾತ್ರ ಕೈಕೊಳ್ಳುವುದಿಲ್ಲ. ಆತ್ಮವೇ ದೇವರೆಂದು ಕಂಡುಕೊಳ್ಳುವ ಸಾಧನೆಯಲ್ಲಿ ನಿರತರಾಗುತ್ತಾರೆ.

ತಲೆ ನೆರೆತ ಮಾತ್ರಕ್ಕೆ ಹಿರಿಯನಾಗಲಿಲ್ಲ. ತೀರ ಚಿಕ್ಕವನಿದ್ದರೂ ಸಹ ವೇದಗಳನ್ನು ತಿಳಿದವನೇ ಹಿರಿಯನೆಂದು ದೇವರು ಗಣಿಸುತ್ತಾನೆಂದಿದೆ. ಆದರೆ, ಈ ರೀತಿಯ ಉಲ್ಲೇಖಗಳು ಆತ್ಮ ಶುದ್ಧಿ ಹೊಂದಿದ ಬ್ರಾಹ್ಮಣನನ್ನು ಕುರಿತಿವೆ. ಏಕೆಂದರೆ ಅವನು ಸರ್ವವನ್ನು ತನ್ನಂತೆ ಕಂಡು, ಸರ್ವ ಹಿತದಲ್ಲಿ ಸಂತೋಷ ಕಾಣುತ್ತಾನೆ. ಅಂಥ ಬ್ರಾಹ್ಮಣನಿಗೆ ನಮಿಸಿದರೆ, ಅವನು ನಮಗೆ ಉದಾತ್ತ ನೀತಿಯ ಉಪದೇಶ ನೀಡಿ ಸನ್ಮಾರ್ಗ ತೋರಿ ಬದುಕು ಯಶವಾಗಲೆಂದು ಹರಸುತ್ತಾನೆ. ಆದರೆ ಆ ಬ್ರಾಹ್ಮಣನಿಗೆ ಸರ್ವರ ಕಲ್ಯಾಣ ಬಯಸುವ ಆತ್ಮ ಶುದ್ಧಿಯಿಲ್ಲದಿದ್ದರೆ ಅವನ ಉಪದೇಶಗಳು ಕೇವಲ ಕಂಠ ಶೋಷಣೆಯಷ್ಟೇ! ಹಾಗೆಯೇ ಮುಂದುವರೆದು–

**ಬ್ರಹ್ಮ ತಿಳಿಯದಯ್ಯಾ ಭಾವಕಂಟಿ ಇರಲು,**
**ತನುವ ಗುಡಿಯ ಮಾಡಿ, 'ತನ್ನ' ನಿಲಿಸಿ**
**ಲೋಕ ಬುದ್ಧಿ ಬಿಟ್ಟು ಒಳ ನೋಟದಿ ನೋಡು**
**ವಿಶ್ವದಾಭಿರಾಮ ಕೇಳು ವೇಮ.**

ದೇಹವೇ ದೇಗುಲ, ಆತ್ಮವೇ ದೇವರು. ಅಲ್ಲಿ ಮನಸ್ಸನ್ನು ಕೇಂದ್ರೀಕರಿಸಿ, ಬಾಹ್ಯ ಪ್ರಪಂಚದ ದೃಷ್ಟಿ ತೊರೆದು ನಿರ್ಗುಣ, ನಿರಾಕಾರ, ನಿರಂಜನ, ಆನಂದಮಯ ಆತ್ಮನನ್ನು ಒಳನೋಟದಿಂದ ನೋಡಿದರೆ ಬ್ರಹ್ಮ ತಿಳಿಯುವುದು. ಯಾವುದರಿಂದ ಮನಸ್ಸು ಮನನ ಮಾಡುವುದೋ ಅದುವೇ ಬ್ರಹ್ಮ ಆದರೆ, ಬ್ರಹ್ಮ ಮನಸ್ಸಿನ ಗ್ರಹಿಕೆಯಲ್ಲ. ಮನಸ್ಸು ಅದನ್ನು ಗ್ರಹಿಸಲಾರದು. ಯಾವುದರಿಂದ ಕಣ್ಣು ನೋಡುವುದೋ, ಕಿವಿಗೆ ಕೇಳುವದೋ ಮತ್ತು ಪ್ರಾಣವು ಕಾರ್ಯ ಮಾಡುವುದೋ

ಅದೇ ಬ್ರಹ್ಮ. ಆದರದು ಕಣ್ಣಿಗೆ ಕಾಣಲಾರದು, ಕಿವಿಗೆ ಕೇಳಲಾರದು. ಪ್ರಾಣನಿಂದ ಕ್ರಿಯೆ ನಡೆಸದು. ಇದುವೇ ಬ್ರಹ್ಮ ಯಾವುದು ಅಂದರೆ, ಶರೀರಾದಿ ಬ್ರಹ್ಮನ ಉಪಾಸನೆ ಮಾಡುವುದೋ ಅದು ಬ್ರಹ್ಮವಲ್ಲವೆಂದು ನಿರೂಪಿಸಿದ್ದಾರೆ.

ಬ್ರಹ್ಮನೆಲ್ಲಿಯೆಂದು ಬಲು ಬಾರಿ ಎನುವರು, ವಿಚಿತ್ರ ಮತಿಯ ಜನರು. ಆದರೆ ಅವರು ಅದರ ವಿಧವನರಿಯರು. 'ಈಶಾವಾಸ್ಯಮಿದಂ ಸರ್ವಂ' ಎಂದರೆ ಆತ ವಿಶ್ವವ್ಯಾಪಿಯಾಗಿರುವನೆಂಬುದನು ಅರಿಯದವರೂ ಇದ್ದಾರೆ. ಬ್ರಹ್ಮವಿಲ್ಲದ ಜಗತ್ತಿಲ್ಲ. ಬ್ರಹ್ಮ ಎಲ್ಲರಲ್ಲಿ ಪರಿಪೂರ್ಣವಾಗಿದ್ದಾರೆ! ಪರಿಪೂರ್ಣವಾದ ಪರಮಾತ್ಮ ಮೂಲದಿಂದ ಪೂರ್ಣವಾದ ಆತ್ಮವಾಗಿದ್ದು, ಪರಮಾತ್ಮ ಎಲ್ಲೆಡೆ ಉಂಟು ಎಂದಿದ್ದಾರೆ ವೇಮನರು.

**ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ**
**ನಿಶ್ಚಲವಾಗಿ ಭಕ್ತಿ ನಿಲಿಸಿದವನು;**
**ಸರ್ವ ಮುಕ್ತನಹನು, ಸರ್ವ ತಾನಾಗುವ**
**ವಿಶ್ವದಾಭಿರಾಮ ಕೇಳು ವೇಮ**

**ಕಾಯ ಪಣತೆ ಮಾಡಿ, ಗುಣವ ಬತ್ತಿ ಮಾಡಿ**
**ತಮ್ಮ ಕರ್ಮ ಕುಲವ ತೈಲ ಮಾಡಿ,**
**ಮೂಲವೊಂದೇ ಜ್ಯೋತಿ ಮುಟ್ಟಿ ನೋಡಿದಾಗ**
**ವಿಶ್ವದಾಭಿರಾಮ ಕೇಳು ವೇಮ**

ಈ ಪದ್ಯಗಳನ್ನು ಗಮನಿಸಿದಾಗ ಹೊರಡುವ ತಾತ್ಪರ್ಯವಿಷ್ಟೇ "ಜೀವಶ್ಶಿವಃ" ಅಂದರೆ ಜೀವವೇ ಬ್ರಹ್ಮ, ಜೀವವೇ ಶಿವ. ಪ್ರತೀಕಗಳಲ್ಲಿ ಆತ್ಮ ಬುದ್ಧಿಯನ್ನಿಡಕೂಡದು. ಏಕೆಂದರೆ ಆ ಉಪಾಸಕನು ಅದನ್ನು ಆತ್ಮವೆಂದು ತಿಳಿಯಲಾರನು. ಏಕೆಂದರೆ ಪ್ರತೀಕವೂ ಬ್ರಹ್ಮನ ಕಾರ್ಯವಾದುದರಿಂದ ಅದೂ ಬ್ರಹ್ಮವೇ! ಶಿವನೇ ಎಂದು ತಿಳಿಯುವುದು ತಪ್ಪು. ಕರ್ತೃತ್ವಾದಿ ಸಂಸಾರ ಧರ್ಮ ನಿರಾಕರಿಸಿದ ಮೇಲೆಯೇ ಬ್ರಹ್ಮವು ಆತ್ಮವೆಂದು ಉಪದೇಶಿಸಬೇಕಾಗಿದೆ. ಆದರೆ ಇಂಥ ನಿರಾಕರಣೆಯ ಪೂರ್ವದಲ್ಲಿಯೇ ಉಪಾಸನೆ ಮಾಡಬೇಕಾಗಿರುವುದರಿಂದ ಉಪಾಸಕನು ಪ್ರತೀಕಗಳಿಗೆ ಸಮನಾಗುವನು. ಕಾರಣ ಅವನು ಪ್ರತೀಕಗಳಲ್ಲಿ ಆತ್ಮ ಬುದ್ಧಿಯನ್ನಿಡಲು ಸಾಧ್ಯವಿಲ್ಲವೆಂದು ಶಂಕರಾಚಾರ್ಯರು ಹೇಳಿರುವುದನ್ನು ಗಮನಿಸಲಾಗಿದೆ. ಅಂದ ಮೇಲೆ ಚೆನ್ನಾಗಿ ಶೋಧಿಸಿದರೆ, ಆತ್ಮದಲ್ಲಿಯೇ ಶಿವನು ಎಂಬುದು ತಿಳಿಯಬೇಕು. ಹಾಗೆ ಕಂಡುಕೊಂಡ ಪ್ರಪಂಚದ ವಸ್ತುಗಳಾಕರ್ಷಣೆಯ ಆಸಕ್ತಿಯನ್ನು ಬಿಟ್ಟು ಸದ್

ವಸ್ತುವಿನ ಬಗ್ಗೆ ಆಕರ್ಷಣೆ ಹೊಂದಿ, ಭಕ್ತಿ ತಾಳಿ, ಸ್ಥಿರ ಭಾವದಿಂದಿರಬೇಕು. ಅಂಥವನು ಸುಖ–ದುಃಖ, ಆಸೆ–ನಿರಾಸೆಗಳ ದ್ವಂದ್ವಗಳಿಂದ ಮುಕ್ತನಾಗುವನು. ಎಲ್ಲೆಡೆಯಿಂದ ಸರ್ವವ್ಯಾಪಿಯಾಗಿರುವ ಬ್ರಹ್ಮನನ್ನು ಕಂಡು ಅದರೊಂದಿಗೆ ತಾನೂ ಸೇರಿ ಹೋಗುವನು.

ಇದೇ ರೀತಿ ಎರಡನೆಯ ಪದ್ಯದಲ್ಲಿ ಶರೀರವನ್ನೇ ಹಣತೆಯನ್ನಾಗಿ ಮಾಡಿ ಗುಣವನ್ನು ಬತ್ತಿಯವನ್ನಾಗಿಸಿಕೊಂಡು, ಕರ್ಮ–ಕುಲ–ವ್ರತವ ತೈಲವನ್ನಾಗಿ ಜ್ಯೋತಿ ಹಚ್ಚುವುದರಿಂದ ಬೆಳಕು ಕಾಣುವುದು. ಈ ಪರಿಕರಗಳಿಲ್ಲದೇ ಪ್ರಣತಿ ಅದ್ಹೇಗೆ ಉರಿಯಲು ಸಾಧ್ಯ? ಇದೇ ರೀತಿ ಪ್ರಣತೆಯಂತೆ ಶರೀರಗಳು ಬೇರೆ ಬೇರೆಯಾಗಿರಬಹುದು. ಬತ್ತಿಯ ಎಳೆಗಳಂತೆ. ಸತ್ವ–ರಜೋ–ತಮೋ ಗುಣಗಳು ಹೆಚ್ಚೂ ಕಡಿಮೆಯಿರಬಹುದು; ಎಣ್ಣೆಯಂತೆಯೇ ಕರ್ಮ ಸಂಚಯವು ಪಾಪ–ಪುಣ್ಯಮಯವಾಗಲಿದ್ದು; ಬೇರೆ ಬೇರೆಯಾಗಿರಬಹುದು. ಆದರೆ, ಗಮ್ಯ ಸದ್ ವಸ್ತುವಾದ ಆತ್ಮನ ತಿಳುವಳಿಕೆಯ ಹಂತ ಮುಟ್ಟಿ ನೋಡಿದಾಗ ಮೂಲವಾದುದು ಆತ್ಮವೇ! ಇದೂ ಒಂದೇ ತೆರನಾಗಿದೆಯೆಂಬುದು ಇವರಿಂದ ತಿಳಿದು ಬಂದಂಥ ಸತ್ಯವಾಗಿದೆ. ಇನ್ನೂ ಮುಂದುವರೆದು ವೇಮನರು ಹೇಳಿದ್ದು ವಿವರಣಾತ್ಮಕವಾಗಿದೆ – ಹಾಗಾದರೆ ನೋಡಿ–

**ಉತ್ತಮೋ ಬ್ರಹ್ಮ ಸದ್ಭಾವೋ**
**ಮಧ್ಯಮಾ ಧ್ಯಾನ ಧಾರಣಾ**
**ಜಪ ಸ್ತುತಿಯಧಮಾ ಚ**
**ಮೂರ್ತಿ ಪೂಜಾ ಅಧಮಾಧಮಾ**

ಋಷಿಮುನಿಗಳು, ಶರಣರು–ಸೂಫಿಗಳು ಮೂರ್ತಿ ಪೂಜೆಯನ್ನು ತ್ಯಾಜ್ಯವೆಂದು ತಿರಸ್ಕರಿಸಿದ್ದಾರೆ. ಮೂರ್ಖರಲ್ಲಿ, ಮೂಢರಲ್ಲಿ ದೇವರು ಕಟ್ಟಿಗೆ, ಕಲ್ಲು, ಮಣ್ಣು, ಹಿತ್ತಾಳೆ, ತಾಮ್ರ, ಕಂಚು ಮುಂತಾದ ಲೋಹಗಳಲ್ಲಿದ್ದಾನೆಂದು ಹೇಳಿದರೆ; ಜ್ಞಾನಿಗಳ, ಯೋಗಿ–ಮಹಾಯೋಗಿಗಳ ದೇವರು ಪ್ರತಿಯೊಬ್ಬರ ಹೃದಯ ಮಂದಿರದಲ್ಲಿರುವವನೇ ಆತ್ಮ–ಪರಮಾತ್ಮನೆಂದು ಹೇಳಿರುವರು.

**ಶಿವನು ಎಲ್ಲೆಡೆಯಲ್ಲಿ ಸಾಕ್ಷಿ ನುಡಿಯುತಿರಲು,**
**ಇಲ್ಲ ಇಲ್ಲೆಂಬ ನುಡಿ ಸಾಧನೇಕೆ?**
**ಗಗನ ಸನ್ನಿಧಿಯಲ್ಲಿ ಗುರಿಯ ಹಿಡಿದು ನೋಡು**
**ವಿಶ್ವದಾಭಿರಾಮ ಕೇಳು ವೇಮ.**

**ಶಿವನ ಮೇಲೆ ಮನಸು ಸ್ಥಿರತೆಯಿಂದ ನೆಲಸು;**
**ಅಹುದು ಮೋಕ್ಷವರಿಯೆ, ಅಹುದು, ಅಹುದು**
**ಶಿವನ ಮೇಲೆ ಮನಸ್ಸು ಇರುವೆಯಷ್ಟು ತಪ್ಪೆ**
**ಅಲ್ಲ ಅಲ್ಲ ಮುಕ್ತಿ ಅಲ್ಲ ವೇಮ.**

**ದೇವ-ಗುಡಿಗಳಲ್ಲಿ, ತೀರ್ಥ ಕ್ಷೇತ್ರದಲ್ಲಿ**
**ಮೂಲವರಿಯದಿರಲು, ಮುಕ್ತಿಯಿಲ್ಲ**
**ಆತ್ಮ ಮೂಲವರಿಯದೆ ಅದನೆಂತು ತಿಳಿವನು**
**ವಿಶ್ವದಾಭಿರಾಮ ಕೇಳು ವೇಮ.**
**ಸುತ್ತಿ ಗೋಪುರಗಳ, ಸ್ನಾನಗಟ್ಟೆ, ತೇರು,**
**ಪತ್ರಿವನ ಗುಡಿಗಳು ಪೊಳೆಯುತಿಹವು**
**ದೇವ ಬಳಿಗೆ ಹೋಗೆ ದೈನ್ಯಪಟ್ಟುಕೊಳುವ**
**ವಿಶ್ವದಾಭಿರಾಮ ಕೇಳು ವೇಮ**

ಶಿವನು ಎಲ್ಲೆಡೆಯಲ್ಲಿಹನು. ಆತ-ವಿಶ್ವವ್ಯಾಪಿ. ಅವನಿರದೆ ಯಾವದೂ ನಡೆಯದು, ಚಲಿಸಲಾರದು-ಗಗನ ಸನ್ನಿಧಿಯಲ್ಲಿ ಗುರಿಯಿಟ್ಟು ನೋಡು! ಮನವನ್ನು ಪೂಜೆಗೊಳಿಸಿದರೆ ಉಳಿಯುವುದೇ ದೇವರು. ಮಾನಸ ಪೂಜೆಗೆ ನೆರವಾಗುವಂತೆ ಶಿವನನ್ನು ಪೂಜಿಸಬೇಕು. ಇಂಥ ಶಿವಾನುಭಾವದಿಂದ ದೇವನನ್ನು ಹೊಂದಬೇಕು. ಶಿವನ ಮೇಲೆ ನಿತ್ಯ ಮನಸ್ಸಿಟ್ಟು ಭಕ್ತಿ ಶ್ರದ್ಧೆಯಿಂದ ಪೂಜಿಸಬೇಕು. ಆತನ ಸ್ಮರಣೆಯಿರದೇ ಮುಕ್ತಿ ಸಿಗಲಾರದು. ಶಿವನು ಮಣ್ಣು, ಶಿಲೆ, ಧಾತು, ಕಟ್ಟಿಗೆಗಳಿಂದ ಮಾಡಿದ ಮೂರ್ತಿಗಳಲ್ಲಿ ಇರುವನೆಂದು ಮೂರ್ಖರು, ಅಧಮರು ಬಗೆಯುತ್ತಾರೆ. ಆದರೆ ತಪಸಿನಿಂದ ಜ್ಞಾನ ಪಡೆಯದೇ ಅವರು ಎಂದೂ ಮೋಕ್ಷ ಹೊಂದಲಾರದು. ಆದುದರಿಂದ ವೇಮನರು ಶಿಲೆಯಲ್ಲೇ ದೇವರನ್ನು ಕಾಣಬೇಕೆಂಬ ಲವಲವಿಕೆಯುಳ್ಳವರಿಗೆ ಈ ಪದಗಳಲ್ಲಿ ತಿಳಿಯ ಹೇಳಿದ್ದಾರೆ. ಲೋಹದಿಂದಾಗಲಿ, ಶಿಲೆಯಿಂದಾಗಲಿ ಮೂರ್ತಿಯನ್ನು ಮಾಡುವ ವಿಧಾನಗಳನ್ನು ತಿಳಿಸಿ, ಪೊಳ್ಳು ತುಂಬಿ ಮಾಡಿದ ಲೋಹದ ಮೂರ್ತಿಯಾಗಲಿ, ಇಲ್ಲವೆ ಶಿಲೆಯ ಕಲ್ಲನ್ನು ಕಾಲಿನಿಂದ ಮೆಟ್ಟಿ ಕಟೆದ ಶಿಲಾಮೂರ್ತಿ, ಕಟ್ಟಿಗೆಯಿಂದ ಕೆತ್ತಿದ ಮೂರ್ತಿಯಾಗಲಿ ಹೇಗೆ ದೇವರಾಗಬಲ್ಲುದು? ಅದರಲ್ಲಿ ಪ್ರಾಣ ಪ್ರತಿಷ್ಠಾಪಿತವಾದೀತು? ಇದನ್ನು ತಿಳಿಯದೇ ತಮ್ಮ ಮೂಢನಂಬಿಕೆ ಮತ್ತು ಮನೋರಂಜನೆಗಾಗಿ ರಂಗು-ರಂಗಿನ ವಸ್ತ್ರ-ಆಭರಣ ಉಡಿಸಿ ತೊಡಿಸಿ ಇಂದ್ರಿಯ ವ್ಯಾಪಾರದ ರೂಢಿಯನ್ನು ಜಾರಿಗೊಳಿಸಿ ಪ್ರಬಲಗೊಳಿಸಿದರೆ ಅವರನ್ನು ಅಧಮಾಧಮರೆಂದು ಕರೆಯಬಹುದಷ್ಟೇ ಎಂದು ವೇಮನರು ಟೀಕಾಸ್ತ್ರ ಪ್ರಯೋಗಿಸಿದ್ದಾರೆ.

ಇಂಥ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಗುಡಿ–ಗೋಪುಗಳನ್ನು ಕಟ್ಟಿ ಕುಳ್ಳಿರಿಸಿ ಹಣ–ಸಮಯ–ಶರೀರ ಶ್ರಮ ಹಾಳು ಮಾಡಿಕೊಳ್ಳುವವರೇ ಹೊರತಾಗಿ ಅಂತರಂಗದಲ್ಲಿರುವ ಆತ್ಮನನ್ನು ಅರಿತು ಆಚರಿಸಲಾರರು ಅಲ್ಲವೆ? ಆತ್ಮದ ಮೂಲಾರ್ಥವನರಿಯಲಾರದೇ ಮೋಕ್ಷ ಅವರಿಗೆ ಪ್ರಾಪ್ತಿಯಾಗಲಾರದು. ಅಂಥ ತಾವೇ ಕಟ್ಟಿದ ಗುಡಿ–ಗೋಪುರ–ದೇವಾಲಯಗಳನ್ನು ಸುತ್ತಿ ದಣಿಯುವುದಕ್ಕಿಂತ ಒಂದೇ ಸ್ಥಳದಲ್ಲಿ ಕುಳಿತುಕೊಂಡು ಅನನ್ಯ ಭಕ್ತಿ ಶ್ರದ್ಧೆಯಿಂದ ಆತ್ಮನೇ ಪರಮಾತ್ಮನೆಂದು ಭಾವಿಸಿ ತಪ–ಧ್ಯಾನಗೈದಿದ್ದಾರೆ. ಮೋಕ್ಷ ಸಿಕ್ಕುತ್ತದೆಯೆಂದು ಮೇಲ್ಕಾಣಿಸಿದ ಪದ್ಯಗಳಲ್ಲಿ ವೇಮನರು ತಿಳಿಸಿದ್ದಾರೆ.

**ಇಲ್ಲಿಲ್ಲವೆನಲು ಇಲ್ಲವೇನು ಇಲ್ಲ;**
**ಅಲ್ಲ ಅಲ್ಲವೆನಲು ಅಲ್ಲವಲ್ಲ;**
**ಸೇರು ಸೇರುವೆನಲು ಸೇರಿಸೇರುತಿಹನು**
**ವಿಶ್ವದಾಭಿರಾಮ ಕೇಳು ವೇಮ.**

ಎಲ್ಲ ಧರ್ಮದವರಲ್ಲಿರುವ ವಾದ–ವಿವಾದವೆಂದರೆ ಆಸ್ತಿಕ–ನಾಸ್ತಿಕದ ಕುರಿತು. ದೇವರು ಇದ್ದಾನೆಂದು ಕೆಲವರು ಹೇಳಿದರೆ; ಮತ್ತೆ ಕೆಲವರು ಧರ್ಮವಿಲ್ಲವೆನ್ನುವರು. ಆದರೆ ಶಿಸ್ತಿನ ನಡೆಗೆ–ನಡತೆಗೆ ದೇವನ ಭಯ ಅಸ್ತಿತ್ವವಿರಬೇಕು. ಅಂದರೆ ಒಬ್ಬ ಸರ್ವಶಕ್ತನಾದ ಪರಮಾತ್ಮ, ಪರಶಿವ ಇರುವನೆಂಬ ಭಾವನೆ ಇಟ್ಟು ನಡೆದರೆ ಸಂಸಾರ ಸುಖವಾಗುತ್ತದೆ. ಯೋಗಿ–ಸನ್ಯಾಸಿಗಳಿಗೆ ತೃಪ್ತಿ–ಸಂತೃಪ್ತಿ ಸಿಗುತ್ತದೆ. ಪಾಪ–ಪುಣ್ಯಗಳ ತೌಲನಿಕ ವಿವೇಚನೆ ಮನುಕುಲಕ್ಕೆ ಆಗುತ್ತದೆ. ಆದರೆ, ಯೋಗ–ದೃಷ್ಟಿಯುಳ್ಳ ವೇಮನಾಲ್ಲಮನಂಥವರು ಪರಮಾತ್ಮ ಸತ್ಯ ಶಾಶ್ವತನೆಂದು ತಿಳಿಯುತ್ತಾರೆ. ಅವನು ಹೃದಯಾಕಾಶದಲ್ಲಿ ವಾಸಿಸುವವನೆಂದೂ, ಶರೀರದ ಉಪಾಧಿಯಿಂದ ಪರಬ್ರಹ್ಮ ಆತ್ಮಗಳು ಭಿನ್ನವಾಗಿವೆಯಷ್ಟೇ. ಪರಬ್ರಹ್ಮನಲ್ಲಿ ಸೇರು ಎಂದು ಉಪಾಸನೆ ಮಾಡುವ ಸಾಧಕನು ಯೋಗಿಯಾಗುವನು. ಮೂರು ವೇಳೆಯಲ್ಲಿ ಮುದದಲಿ ಶಿವನಾತ್ಮ ಪೂಜಿಸುವವನೇ ಪುಣ್ಯ ಮೂರ್ತಿ ಎಂದು ವೇಮನರೇ ನುಡಿದ ಮಾತಿದು. ಬೆಟ್ಟದ ಕಲ್ಲಿನಿಂದ ಬಯಕೆ ಕೋರಲೇಕೆ? ಕಟ್ಟಿದ ಗುಡಿಗಳಲಿ ಕರುಬಲೇಕೆ? ಶಿವನು ಸಕಲ ಜೀವರಾಶಿ–ಪ್ರಾಣಿಗಳಲ್ಲಿಯೂ ಇರುತ್ತಾನೆಂಬುದು ನಿರೂಪ! ಅವರದೊಂದು ಮಹತ್ವದ ಪದ್ಯವಿಂತಿದೆ–

**ಸಾಯುವವರು ಯಾರೋ? ಸಾಯದವರು ಯಾರೋ?**
**ಸತ್ತು ಬದುಕಿರುವ ಸುಜನರಾರೋ?**
**ನಿಶ್ಚಯಿಸಿ ಕಂಡುಕೊ; ನೋಡು ನೀವವನದು**
**ವಿಶ್ವದಾಭಿರಾಮ ಕೇಳು ವೇಮ**

ದೇಹದಲ್ಲಿರುವ ಆತ್ಮನು ಇದ್ದೂ ಇಲ್ಲದಂತಿಹನು, ಅಂದರೆ ಆತ್ಮಧರ್ಮಗಳ ಕಂಡು ಬರುವುದಿಲ್ಲ. ಸಾವು–ಜನನಗಳು ದೇಹ ಧರ್ಮವಷ್ಟೇ. ಆದರೆ, ಆತ್ಮ ಧರ್ಮವು ಅವ್ಯಕ್ತವಾಗಿರುವುದು. ಅದು ಜನ್ಮಾತೀತ–ಮರಣಾತೀತ. ಯಾರು ಆತ್ಮ ಧರ್ಮವನ್ನು ಅರಿತು ಆಚರಿಸುವರೋ ಇವರು ಜನನ ಮರಣಗಳಿಂದ ದೂರವಿರುತ್ತಾರೆ. ಬಿಡುಗಡೆ ಹೊಂದುತ್ತಾರೆ. ಅವರಿಗೆ ಸಾವು ಎಂಬುದಿಲ್ಲ, ಸಾಯದವರು. ಅವರು ಆತ್ಮವರಿಯದೆ, ಇರುವವರಿಗೆ ಸಾವು ಉಂಟು! ಸಂಸಾರ ಉಂಟು! ಯಾಕೆಂದರೆ ಸಾಯುವವರು ಅವರು. ಇನ್ನು ಕೆಲವರು ಸತ್ಕೀರ್ತಿಯನ್ನು ಅಪೇಕ್ಷಿಸಿ ಪುಣ್ಯ ಕರ್ಮ ಮಾಡುತ್ತಾರೆ. ಪರೋಪಕಾರ ಮಾಡಿ ಪುಣ್ಯವಂತರೆನಿಸಿಕೊಳ್ಳುತ್ತಾರೆ. ಅಂಥವರ ದೇಹ ಸತ್ತ ನಂತರ ಮರಳಿಯಾದರೂ, ಇವರ ಸತ್ಕೀರ್ತಿ ಸ್ಮರಣೀಯವಾಗಿ ಉಳಿಯುವುದು, ಇವರು ಸತ್ತು ಬದುಕುವವರು. ನಿಶ್ಚಯ ಶಕ್ತಿ ಇರುವ ಬುದ್ಧಿಯಿಂದ ಎಲ್ಲ ವಿವರಗಳನ್ನು ಅರಿತು ನಿರ್ಣಯಿಸಿ ನಡೆಯಬೇಕು ಎನ್ನುತ್ತಾರೆ ವೇಮನರು.

ಹುಟ್ಟಿದವನಿಗೆ ಮರಣವು ನಿಶ್ಚಯವು. ಸತ್ತವನಿಗೆ ಜನ್ಮ ನಿಶ್ಚಯವು. ಆದುದರಿಂದ ಪರಿಹರಿಸಲಾಗದ ಈ ವಿಷಯದಲ್ಲಿ ನೀನು ಶೋಕಿಸಬಾರದು ಎಂದಿದೆ ಗೀತಾ ರಹಸ್ಯ (ಪು–454). ಏಕೆಂದರೆ ಜನನ–ಮರಣವೆಲ್ಲ ಸ್ವಪ್ನ ನಿದ್ರೆಯಂತೆ! ಭೂಮಿಯ ಮೇಲೆ ತೋರುವ ಬಿಸಿಲುಗುದುರೆಯಂತೆ. ಮಾನಸಿಕ ಶರೀರ ಮತ್ತು ಭೌತಿಕ ಶರೀರಗಳ ಸಮನ್ವಯವೇ ಜನನ, ಯಾವಾಗ ಈ ಹೊಂದಾಣಿಕೆ ತಪ್ಪುವುದೋ ಆಗ ಮರಣವೆಂದಿದ್ದಾರೆ ವೇಮನರು.

**ಆತ್ಮದೊಳಿಹ ವಸ್ತು ಅಂಜನದಿಂ ಕಂಡು**
**ಅಂಟಿ ತಿರುಗುವಂಥ, ಅವನೇ ಯೋಗಿ**
**ಹುಂಜ ಗೂಡೊಳಿದ್ದು ಹೊತ್ತು ತಿಳಿಯುವಂತೆ**
**ವಿಶ್ವದಾಭಿರಾಮ ಕೇಳು ವೇಮ.**

ಹುಗಿದಿಟ್ಟ ಧನ–ಕನಕ ಬರಿಗಣ್ಣಿಗೆ ಕಾಣುವುದಿಲ್ಲ. ಈ ಬಂಗಾರದ ಶೋಧಕರು ಕಣ್ಣಿಗೆ ಅಂಜನ ಹಚ್ಚಿಕೊಳ್ಳುತ್ತಾರೆ. ಆಗ ಅವರಿಗೆ ಅಲ್ಲಿರುವ ಸಂಪತ್ತೇ ಕಾಣುವುದೆಂದು ಹೇಳುವರಷ್ಟೇ! ಆತ್ಮನನ್ನು ನೋಡುವುದೂ ಇದೇ ರೀತಿಯಿಂದಲೇ! ಅದು ಬರಿಗಣ್ಣಿಗೆ ಕಾಣುವುದಿಲ್ಲವೆಂದು ಹೇಳಿದ್ದಾರೆ ವೇಮನರು.

**ಜೀವಿಗಳೊಳು ಮುನ್ನ ಜೀವಾತ್ಮ–ಪರಮಾತ್ಮ**
**ಜೋಡು ತಿಳಿಯೆ, ಪಾಪ! ಜಲಧಿಮುಳುಗೆ**
**ನಾವು ನಡೆಸುವವನು ನೀರೊಳು ಮುಳುಗುವನೇ?**
**ವಿಶ್ವದಾಭಿರಾಮ ಕೇಳು ವೇಮ.**

ಸಂಸಾರವನ್ನು ಸಾಗರಕ್ಕೆ ಹೋಲಿಸಿದ್ದಾರೆ. ಸಂಸಾರ ಸಾಗರವು ಶಿರದುದ್ದ ನೋಡಾ ಎಂದಿದ್ದಾರೆ ಶರಣರು. ಸಮುದ್ರವು ಜಲಸಮೂಹ, ಜಲಧಿ, ಜನನ ಮರಣ ಚಕ್ರವು ಮನಸ್ಸಿನ ಶುದ್ಧಿಯ ಮೇಲೆ ಅವಲಂಬಿಸಿದೆ. ಸಾಗರವನ್ನು ದಾಟುವವನು ಸಾಗರವಲ್ಲಿ ಮುಳುಗುವುದಿಲ್ಲ. ಏಕೆಂದರೆ ಅವನು ನಾವಿನಲ್ಲಿ ಕುಳಿತು ನಾವು ನಡೆಸಿ ಪಾರಾಗುವನು. ಜನನ–ಮರಣದಲ್ಲಿ ಸಿಲುಕಲು ಬಯಸಲಾರನು. ಸಂಸಾರದ ಜಲಧಿಯಲ್ಲಿ ಜೀವನು ಮುಳುಗಲಾರದೇ ಪ್ರತಿಯಾಗಿ ಜೀವನ ನೌಕೆಯನ್ನು ಸಂಸಾರವೆಂಬ ಸಾಗರದಲ್ಲಿ ನಡೆಸಿ ಪಾರಾಗುವನು. ಪ್ರತಿಯೊಂದು ಜೀವಾತ್ಮ–ಪರಮಾತ್ಮನ ಸಾಮರಸ್ಯವಿದ್ದೇ ಇರುತ್ತದೆ.

**ಅಲ್ಲಮರ ವಚನಗಳಲ್ಲಿ ದೇವರ ಪರಿಕಲ್ಪನೆ!**

ಅಂಗದ ಮೇಲೆ ಲಿಂಗ ಧರಿಸಿದ ಭಕ್ತನು ಲಿಂಗಾಂಗ ಸಾಮರಸ್ಯ ಹೊಂದುವ ಜವಾಬ್ದಾರಿ ಮುಖ್ಯವಾಗುತ್ತದೆ.  ದೀಕ್ಷಾ ಗುರುವಿನಿಂದ ಮೋಕ್ಷಾಪೇಕ್ಷಿತನಾಗುವ ಉದ್ದೇಶವದು.  ಆದುದರಿಂದ ಸದ್ಭಕ್ತನಾದವನು, ಶರಣನಾಗಬೇಕಾದವನು ವೀರಶೈವ ಧರ್ಮದ ತತ್ತ್ವತ್ರಯಗಳಾದ ಅಂಗವೇ ಅಷ್ಟಾವರಣಗಳು, ಕ್ರಿಯಾಚರಣೆಯಲ್ಲಿ ಪಂಚಾಚಾರವೇ ಪ್ರಾಣವಾಗಿ ಮತ್ತು ಷಟ್‌ಸ್ಥಲಗಳೇ ಆತ್ಮ ಸಾಕ್ಷಿಯಾಗಿ ಆಚರಿಸುವುದು ಮುಖ್ಯ! ಇದು ಸಿದ್ಧ–ಸಾಧಕ–ಯೋಗಿಗಳಿಗೂ ಅನ್ವಯವಾಗುವ ಮಾತು. ಅದರಂತೆ ನಡೆ–ನುಡಿಯಲ್ಲಿ ತೋರುವುದೂ ಪ್ರಮುಖ. ಇವುಗಳ ಆಚರಣೆಯಿಂದ ಶಿವನಾಗಬಲ್ಲ!

**ಶಿಲೊಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ**
**ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಯಬ್ದದಂತೆ**
**ಗುಹೇಶ್ವರಾ ನಿಮ್ಮ ಶರಣ ಸಂಬಂಧ"**

ಕಲ್ಲಿನೊಳಗಣ ಅಗ್ನಿ, ನೀರಿನೊಳಗಣ ಪ್ರತಿಬಿಂಬ, ಬೀಜದಲ್ಲಿರುವ ವೃಕ್ಷ ಹಾಗೂ ಶಬ್ದದೊಳಗಿರುವ ನಿಶ್ಯಬ್ದ ಈ ಮುಂತಾದ ಪ್ರಕೃತಿ ಸ್ಥರಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಜ್ಞಾನದ ಅಗತ್ಯಕತೆಯಿದೆ. ಹಾಗೆಯೇ ಈ ಪ್ರಕೃತಿಯ ಪರಿಣಾಮಗಳು ಅರಿಯಬೇಕಾದರೆ ಕ್ರಿಯೆಯ ಅವಶ್ಯಕತೆಯೂ ಮುಖ್ಯ! ಜ್ಞಾನ ಕ್ರಿಯೆಗಳ ಸಮ್ಮಿಶ್ರಣದ ಫಲಶ್ರುತಿಯೇ ಸಾಧನವಾಗಿ ಪರಿಣಮಿಸುವುದು ಎಂಬ ಭಾವವಿದರಲ್ಲಿದೆ. ಅಂದರೆ ಮಾನವನಲ್ಲಿ ದೇವನಾಗುವ ಶಕ್ತಿಯಿದೆ ಎಂದರ್ಥ. ಅದುವೇ ಆತ್ಮ ಪರಮಾತ್ಮನಾಗುವ ಅಂಶ.

**ನಾನು ಭಕ್ತನಾದಡೆ, ನೀನು ದೇವನಾದಡೆ**
**ನೋಡುವೆವೆ ಇಬ್ಬರ ಸಮರಸನೊಂದು ಮಾಡಿ**
**ಭೂಮಿಯಾಕಾಶವನೊಂದು ಮಾಡಿ**
**ಸೂರ್ಯ ಚಂದ್ರರಿಬ್ಬರ ತಾಳವ ಮಾಡಿ ಆಡುವೆವೆ?**

ಇದು ದೇವರಿಗೇ ಸವಾಲೆಸೆಯುವ ಪರಿಯಾಗಿದೆ, ವಿಶೇಷವೂ ಆಗಿದೆ. ತನ್ನ ತಾ ಅರಿತುಕೊಂಡ ಮೇಲೆ ಇನ್ನೇನು ಇನ್ನೇನು ಎಂಬ ಅನುಭಾವಿಗಳ ಆಡು ನುಡಿಯಂತೆ ತನ್ನ ಇರುವಿಕೆಯ ಅಸ್ತಿತ್ವದ ಅರಿವು ಉಂಟಾದ ಮೇಲೆ ತನ್ನೊಳಗಿರುವ ಸ್ವಯಂ ಪ್ರಭೆಯ ಚೇತನದ ಸಾಕ್ಷಾತ್ಕಾರವಾಗಲು ನೀ ಈ ಮೊದಲು ಎಲ್ಲಿದ್ದೆ? ಹಾಗೂ ನಾನು ಭಕ್ತನಾದರೆ, ನೀನು ದೇವನಾದರೆ ಇರುವ ದೈವತ್ವ ಮರೆದು ಸಮರಸನೊಂದು ಮಾಡಿ ನೋಡುವೆವು ಎಂಬ ರೀತಿ ದೇವನಿಗೇ ಪ್ರಶ್ನಿಸುವುದು ವಿಶಿಷ್ಟವಲ್ಲವೆ? ದೇಹವೇ ದೇವಾಲಯವಾಗಿರುವಾಗ ಮತ್ತೇಕೆ ಕಲ್ಲು–ಮಣ್ಣಿನ–ದೇವರ ಸೃಷ್ಟಿಸಿ, ಪೂಜಿಸಿ ದಣಿದು ಹೈರಾಣಾಗುವಿರಿ? ಎಂದಂತಿದೆ. ಕಲ್ಲು ದೇವರೆಂದು ಪೂಜಿಸುವುದು ಆಗದೋ, ಕಲ್ಲು ಮನೆಯ ಮಾಡಿ, ಕಲ್ಲ ದೇವರ ಮಾಡಿ, ಆ ಕಲ್ಲ ಮೇಲೆ ಕಲ್ಲ ಕೆಡೆದಡೆ ದೇವರೆತ್ತ ಹೋದರೋ? ಲಿಂಗ ಪ್ರತಿಷ್ಠೆಯ ಮಾಡಿದವರಿಗೆ ನಾಯಕ–ನರಕ ತಪ್ಪದು ಗುಹೇಶ್ವರಾ! ಎಂದಿರುವುದನ್ನು ನಾವಿಂದು ಅರ್ಥ ಮಾಡಿಕೊಳ್ಳಬೇಕಾಗಿದೆ.

ದೇಹದೊಳಗೆ ದೇವಾಲಯವಿದ್ದು; ಮತ್ತೆ ಬೇರೆ ದೇಗುಲವೇಕಯ್ಯ

**ಎರಡಕ್ಕೆ ಹೇಳಲಿಲ್ಲವಯ್ಯಾ ಗುಹೇಶ್ವರಾ! ನೀವು ಕಲ್ಲಾದಡೆ**
**ನಾನು ಏನಪ್ಪನು? ಎಂದೂ ಪ್ರಶ್ನಿಸಿದ್ದಾರೆ.**
**ಅಲ್ಲದೇ ಮುಂದುವರೆದು ಹೇಳಿದ್ದೇನೆಂದರೆ**
**ಭಾವದಲ್ಲೊಬ್ಬ ದೇವರ ಮಾಡಿ**

**ಮನದಲೊಂದು ಭಕ್ತಿಯ ಮಾಡಿದಡೆ**
**ಕಾಯದ ಕೈಯಲ್ಲಿ ಕಾರ್ಯವುಂಟೆ?**
**ವಾಯಕ್ಕೆ ಬಳಲುವರು ನೋಡಾ**
**ಎತ್ತನೇರಿ, ಎತ್ತನರಸುವರು, ಎತ್ತ ಹೋದರೈ ಗುಹೇಶ್ವರಾ!**

**ಕಾಲೇ ಕಂಬಗಳಾದವೆನ್ನ, ದೇಹವೇ ದೇಗುಲವಾಯಿತ್ತಯ್ಯಾ!**
**ಎನ್ನ ನಾಲಗೆಯೆ ಗಂಟೆ, ಶಿರ ಸುವರ್ಣದ ಕಳಸ–ಇದೇನಯ್ಯಾ!**
**ಸರವೆ ಲಿಂಗಕ್ಕೆ ಸಿಂಹಾಸನವಾಗಿತ್ತಯ್ಯಾ**
**ಗುಹೇಶ್ವರಾ ನಿಮ್ಮ ಪ್ರಾಣಲಿಂಗ ಪ್ರತಿಷ್ಠೆ**
**ಪಲ್ಲಟವಾಗದಂತಿದ್ದೆನಯ್ಯಾ!**

**ಕಲ್ಲು ದೇವರೆಂದು ಪೂಜಿಸುವರು – ಆಗದು ಕಾಣಿರೊ!**
**ಅಗಡಿಗರಾದಿರಲ್ಲಾ!**
**ಮುಂದೆ ಹುಟ್ಟುವ ಕೂಸಿಂಗೆ**
**ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ!**

**ಮರ್ತ್ಯ ಲೋಕದ ಮಾನವರು;**
**ದೇಗುಲದೊಳಗೊಂಡು ದೇವರ ಮಾಡಿದೊಡೆ**
**ಆನು ಬೆರಗಾದೆನು**
**ನಿಚ್ಚಕ್ಕೆ ನಿಚ್ಚ ಅರ್ಚನೆ ಪೂಜೆಯ ಮಾಡಿಸಿ,**
**ಭೋಗವ ಮಾಡುವರ ಕಂಡು ನಾನು ಬೆರಗಾದೆನು**
**ಗುಹೇಶ್ವರಾ ನಿಮ್ಮ ಶರಣರು, ಹಿಂದೆ ಲಿಂಗವನಿರಿಸಿ ಹೋದರು.**

**ತಾತ್ಪರ್ಯ:** ದೇಹವೇ ದೇವಾಲಯ ಅದರೊಳಗಿರುವ ಪ್ರಾಣ ಲಿಂಗವೇ ದೇವರು. ಬೇರೆ ದೇವರಿಲ್ಲ. ಬೇರೆಯೆಂದು ಹೇಳುವ ಭಾಷೆಗೆ ಅರ್ಥವಿಲ್ಲ. ಒಂದು ವೇಳೆ ದೇವನೇ ಜಡ ಶಿಲೆಯಾದರೆ ಅವನನ್ನು ನೆನೆದು ಆರಾಧಿಸಿ ಬೆರೆಯ ಬಯಸುವ ಸಾಧಕ ಏನಾಗಬೇಕಾದೀತು? ಅಂದರೆ ಮೊದಲು ದೇಹವೇ ತಾನೆಂದು ಭಾವಿಸಿದ ಸಾಧಕನು ಆ ಭಾವನೆಯನ್ನು ಕಳೆದುಕೊಂಡು ಸರ್ವ ಸಾಕ್ಷಿಯಾದ, ಸರ್ವ ವ್ಯಾಪಕನಾದ ಶಿವನೇ ನಾನು – ಶಿವೋಹಂ ಎಂಬ ಪವಿತ್ರ ಅನುಭವ ಪಡೆದುಕೊಳ್ಳಲು ಸಾಧನೆ ಮಾಡುತ್ತಾನೆ. ಹೀಗಿದ್ದಾಗ ಅವನು ಅರ್ಚಿಸುವ ದೇವನೇ ಕಲ್ಲಾಗಿ ಬಿಟ್ಟರೆ ಸಾಧಕನ ಗತಿಯೇನು? ಜಡದಲ್ಲೇ ಬೆರೆದು ಜಡವಾಗಬೇಕು ಅಷ್ಟೇ! ಎಂದಿದ್ದಾರೆ ಅಲ್ಲಮರು.

ಲಿಂಗಾನುಭವಿಯ ದೃಷ್ಟಿಯಲ್ಲಿ ದೇಹವು ಒಂದು ದೇಗುಲ. ಕಾಲುಗಳೇ ಕಂಬಗಳು, ನುಡಿವ ನಾಲಗೆಯೇ ಘಂಟೆ. ಜ್ಞಾನದ ತಾಣವಾದ ಶಿರವೇ ಸುವರ್ಣದ ಕಲಶ. ಇದೆಂಥ ಅದ್ಭುತ! ಇದರೊಳಗೆ ಓಂಕಾರನಾದದ ಭಾವ ಸಿಂಹಾಸನ, ಅದರ ಮೇಲೆ ತೇಜೋಮಯ ಲಿಂಗ. ಪ್ರಾಣಲಿಂಗವೆಂಬುದು ಅದರ ವಿಶೇಷಾಭಿಧಾನ. ಈ ದೇಗುಲದ ನಿವಾಸಿಯಾದ ಅನುಭಾವಿಯಲ್ಲಿ ಪ್ರಾಣಲಿಂಗ ಪ್ರಜ್ಞೆ ಸದೈವ ಜಾಗೃತ ಅದರಲ್ಲಿ ವ್ಯತ್ಯಾಸವಾಗುವ ಪ್ರಮೇಯವೇ ಇಲ್ಲವೆಂದಿದ್ದಾರೆ ಅಲ್ಲಮರು.

ಕಲ್ಲೇದೇವರೆಂದು ಪೂಜಿಸುವವರಿದ್ದಾರೆ. ಅದು ಸರಿಯಾದುದಲ್ಲ. ಏಕೆಂದರೆ ಅದರಿಂದ ಲಿಂಗಯೋಗ ಸಾಧ್ಯವಾಗದು. ಅದನ್ನರಿಯಲಾರರು ಜನ, ಮುಂದೆ ಜನಿಸುವ ಕೂಸಿಗೆ ಇಂದು ಹಾಲು ಕುಡಿಸುವ ಪ್ರಯತ್ನವು ಎಷ್ಟು ಅರ್ಥಹೀನವೋ ಅಷ್ಟು ಅರ್ಥಹೀನ ಇವರ ಪ್ರಯಾಸವಾಗಿದೆ. ಅಂದರೆ ಕಲ್ಲನ್ನೇ ದೇವರೆಂದು ಭಾವಿಸಿ ಅಷ್ಟೋಪಚಾರಗಳಿಂದ ಪೂಜಿಸುತ್ತಾರೆ ಅಸಂಖ್ಯಾತರು. ಅವರಿಗೆ ಪೂಜೋಪಚಾರಗಳೇ ಮಹತ್ವದವು ವಿನಾ ಲಿಂಗ ಸಾಧನೆಯಲ್ಲ. ಆದ್ದರಿಂದ ಅವರು ಸಾಧನೆಯ ಉತ್ತರೋತ್ತರ ಸೋಪಾನಗಳನ್ನೇರಲಾರರು. ಪ್ರಾಣಲಿಂಗಿಗಳ ದರ್ಶನ ಮತ್ತು ಸಾಮರಸ್ಯ ಸಿದ್ಧಿಯನ್ನು ಪಡೆಯಲಾರರು. ಆದುದರಿಂದ ಅವರ ವೈಭವೋಪಿತ ಪೂಜಾ ಪ್ರಯಾಸವೆಲ್ಲವೂ ವ್ಯರ್ಥ ಎಂದಿದ್ದಾರೆ ಅಲ್ಲಮರು.

ಮತ್ತೊಂದು ವಚನದಲ್ಲಿ ಈ ಭೂಲೋಕದ ಮಾನವರು ದೇಗುಲ ಕಟ್ಟುತ್ತಾರೆ. ಒಳಗೆ ದೇವರನ್ನು ಸ್ಥಾಪಿಸುತ್ತಾರೆ. ನಿತ್ಯ ನಿತ್ಯ ಅರ್ಚನೆ–ಪೂಜನೆಗಳನ್ನು ಆಚರಿಸಿ ನೈವೇದ್ಯವನ್ನರ್ಪಿಸುತ್ತಾರೆ. ಅವರ ಈ ವರ್ತನೆಯನ್ನು ಕಂಡು ಅಲ್ಲಮರಿಗೆ ಎಲ್ಲಿಲ್ಲದ ಅಚ್ಚರಿ! ಶರಣರು, ಹಾಗಲ್ಲ, ಅವರು ಲಿಂಗದ ನಿಜವಾದ ಜ್ಞಾನವನ್ನು, ಲಿಂಗಾನುಭವದ ಸಾಧನೆಯ ವಿಧಾನವನ್ನು ಲೋಕದವರಿಗೆ ಕೊಟ್ಟು ಹೋಗಿದ್ದಾರೆ. ಅವರು ತೋರಿದ ಮಾರ್ಗವನ್ನನುಸರಿಸಿದರೆ ಮರ್ತ್ಯನು ಅಮೃತನಾಗುತ್ತಾನೆಯೆಂದಿದ್ದಾರೆ ಅಲ್ಲಮರು. ಮರ್ತ್ಯದಲ್ಲಿರುವ ಮಾನವರ ಭವ ಅಳಿದು ಅಮರತತ್ವ ಸಿದ್ಧಿಸಬೇಕಾದರೆ ಶರಣರು ಇರಿಸಿ ಹೋದ ಈ ಲಿಂಗಪಥದಲ್ಲಿ ನಡೆಯಬೇಕು.

ಜಗನ್ನಿಯಾಮಕನು ಇಷ್ಟಲಿಂಗದಲ್ಲಿ ನಿರೂಪಿತನಾಗಿದ್ದಾನೆ. ಅಂಗದ ಮೇಲೆ ಗುರುವಿನ ಹಸ್ತ ಮಸ್ತಕ ಸಂಯೋಗದ ದೀಕ್ಷೆಯಿಂದ ದೀಕ್ಷಿತನಾದ ಬಳಿಕ ಮತ್ತಾವ ದೇವರ ದರ್ಶನ ನಗಣ್ಯವಾದುದು. ಆದುದರಿಂದ ಬರಿ ಲಿಂಗಧರಿಸಿ ಭಕ್ತರಾರೆದೆಂದು ಹೇಳಬೇಡಿರೆಂದು ಬೋಧಿಸಿದ್ದಾರೆ.

ಮಾನವನ ದೇಹವೇ ದೇವನ ಆಸ್ತಿ, ದೇವನ ವಸತಿ, ಈ ವಿಶ್ವವು ಒಂದು ತೋಟ, ಶಿವನ ಸಾನಿಧ್ಯದಲ್ಲಿನ ಶಕ್ತಿಯು ಇಲ್ಲಿ ಅಸಂಖ್ಯ ದೇಹಗಳನ್ನು ಸೃಷ್ಟಿಸಿದೆ, ನಿರ್ಮಿಸಿದೆ. ಶಿವನು ಪ್ರತಿದೇಹದಲ್ಲೂ ಜ್ಞಾನದ ದೀಪ ಹೊತ್ತಿಸಿದ್ದಾನೆ. ಆ ದೇಹಗಳ ಮಧ್ಯದಲ್ಲಿರುವ ಜ್ಞಾನ ದೀವಿಗೆಯಾದ ಜೀವಾತ್ಮನು ಆ ಅನಿತ್ಯ ದೇಹಗಳ ಮೂಲಕ ಭೋಗೋಪಭೋಗಗಳಲ್ಲಿ ತೊಡಗಿದ. ಅದರ ಆಸೆಯಿಂದ ಆತನ ಸಂಸಾರವು ಹೆಚ್ಚಿತು. ಸಮಯ ವ್ಯರ್ಥವಾಗಿ ಹೋಯಿತು. ಪರಶಿವನು ಹೊತ್ತಿಸಿಟ್ಟ ಜ್ಞಾನದ ಕಿಚ್ಚು ವಿಕಸಿತವಾಗಲಿಲ್ಲ. ಅದನ್ನು ಬಳಸಿ ಆ ಜೀವ ಅಮೃತ ಆಹಾರವನ್ನು ಅಟ್ಟು ಉಣ್ಣಲೂ ಆಗಲಿಲ್ಲ, ಎಂದುದಾಗಿ 'ತೋಟವ ಬಿತ್ತಿದರೆಮ್ಮವರು; ಕಾಹ ಕೊಟ್ಟರು ಜವನವರು' (ವಚನ–44 ರಲ್ಲಿ ನೋಡಿ). ಎಂಬ ವಚನದಲ್ಲಿ ಹೇಳಿರುವರು.

ಬಸವಣ್ಣನವರು ಹೇಳಿದಂತೆ 'ಕಾಲುಗಳೇ ಕಂಬ ದೇಹವೇ ದೇಗುಲ ಶಿರವೇ ಹೊನ್ನ ಕಳಸವಯ್ಯಾ' ಎಂದಂತೆ ಅಲ್ಲಮರು ತಮ್ಮದೊಂದು ವಚನದ ಮುಖಾಂತರ ಹೇಳಿದ್ದು ಹೀಗಿದೆ.

**ಕಾಲುಗಳೆಂಬುವು ಗಾಲಿ ಕಂಡಯ್ಯಾ**
**ದೇಹವೆಂಬುದು ತುಂಬಿದ ಬಂಡಿಕಂಡಯ್ಯಾ**
**ಬಂಡಿಯ ಹೊಡೆವರೈವರು ಮಾನಿಸರು!**
**ಒಬ್ಬರಿಗೊಬ್ಬರು ಸಮವಿಲ್ಲವಯ್ಯಾ!**
**ಅದರಿಚ್ಛೆಯನರಿದು ಹೊಡೆಯದಿದ್ದಡೆ**
**ಅದರಚ್ಚು ಮುರಿಯಿತ್ತು ಗುಹೇಶ್ವರಾ!**

84 ಲಕ್ಷ ಜೀವರಾಶಿಗಳನ್ನು ಸೃಷ್ಟಿಸಿ ಜೀವದಾನವಿತ್ತು ರಕ್ಷಿಸಿದವನು ಪರಮಾತ್ಮನು, ಮನುಷ್ಯನಾಕೃತಿಯ ಸ್ವರೂಪವನ್ನರಿತವನವನೇ ಶಿವನು ಅಂತಾತನನ್ನು ನೆನೆಯುವುದೇ ಬೇಡವೇ? ಸಂಕಟ–ಆಪತ್ತುಗಳು (ಕೊರೋನಾದಂತಹ ವೈರಸ್) ಬಂದಾಗ ಮಾತ್ರ ಆತನನ್ನು ನೆನೆಯುವುದೇ? ಅದಕ್ಕೇ ಅಂದಿರಬೇಕು ಜನಪದರು 'ಸಂಕಟ ಬಂದಾಗ ವೆಂಕಟರಮಣ' ಎನ್ನುತ್ತಾರೆ ಭಕ್ತರು ಎಂದು. ಈ ವಚನವನ್ನು ನಿರುಕಿಸಿದರೆ ಈ ದೇಹವು ಒಂದು ತುಂಬಿದ ಬಂಡಿ (ಚಕ್ಕಡಿ), ಕಾಲುಗಳೇ ಇದರ ಎರಡುಗಾಲಿಗಳು, ಆಸೆ, ಆಮಿಷ, ಭಾವನೆ, ವಿಚಾರಗಳು ಇವೆಲ್ಲ ಅನುಭವದ ಸರಕುಗಳು, ಇವುಗಳಿಂದ ಬಂಡಿ ತುಂಬಿದೆ. ಈ ಬಂಡಿಯ ಚಾಲಕರ್ಯೆವರು ನಡೆಸುವವರು, ಐವರು ಪುರುಷರೆಂದರೆ ಐವರು ಪಂಚೇಂದ್ರಿಯಗಳು. ಅವರು ಹೇಳಿದಂತೆ ಕೇಳುವ ಮನಸ್ಸು ಬಂದತ್ತೆ ಹೊರಡುವವರೇ, ಒಬ್ಬರಿಗೊಬ್ಬರು ಸಮವಿಲ್ಲದವರು. ಬಯಕೆ, ಸೆಳೆತ ಭಿನ್ನ ಭಿನ್ನ ಅವರಿಗೆ ಇರುವಾಗ ಆ ಬಂಡಿಯನ್ನುತಮ್ಮ ಒಲವಿನ ದಿಕ್ಕಿನಲ್ಲಿಯೇ ನಡೆಸುವ ಛಲ ಅವರಿಗೆ. ಈ ಐವರು ಪುರುಷರು ಆ ಬಂಡಿಯನ್ನು ಮನ ಬಂದತ್ತ ನಡೆಸಿದರೆ ಬಂಡಿಯ ಅಚ್ಚು ಮುರಿದು ಬಿಡುತ್ತದೆ. ಅಮೂಲ್ಯವಾದ ಬಂಡಿಯೆಂಬ ಮನುಷ್ಯನ ಬದುಕು ಹಾಳಾಗುತ್ತದೆ. ಆದರೂ ಮಾಯಾ–ಮೋಹ ವಿಲಾಸಕ್ಕೊಳಗಾಗದೇ ದೇವನು ಕೊಡ ಮಾಡಿದ ದೇಹ–ಪಂಚೇಂದ್ರಿಯಗಳನ್ನು ಸುಯೋಗ್ಯವಾಗಿ ಬಳಸಿಕೊಂಡು ಶಿವಪಥದಲ್ಲಿ ಕ್ರಮಿಸಬೇಕೆಂದುದಾಗಿ ಅಲ್ಲಮರ ಹಿತೋಕ್ತಿಯಾಗಿದೆ. ಆದರೆ ಮರ್ತ್ಯ ಲೋಕದಲ್ಲಿ ಕೆಲವರು ದೇವರ ನಿರ್ಮಾಣ ಮಾಡಿ ಪೂಜಿಸುವ ಬಗೆಯನ್ನು ಹೀಗೆ ಹೇಳಿದ್ದಾರೆ.

**ಕಿಚ್ಚಿನ ದೇವರು, ಕೆಂಡದ ದೇವರು**
**ಮಾರಿಯ ದೇವರು, ಮಸಣದ ದೇವರು**
**ತಿರುಕ ಗೊರವನೆಂದು ಅಲ್ಲಲ್ಲಿ ಒಂದೊಂದನಾಡುತ್ತಿಪ್ಪರಯ್ಯಾ**
**ನಾ ನಿಮ್ಮ ಪೂಜಿಸಿ ನಷ್ಟ ಸಂತಾನವಾಗಿ**
**ಬಟ್ಟ ಬಯಲಲ್ಲಿ ಬಿದ್ದು ಕೆಟ್ಟೆನು ಗುಹೇಶ್ವರಾ!**

ಲೋಕದ ಜನರು ಕಿಚ್ಚಿನ, ಕೆಂಡದ, ಮಾರಿ–ಮಸಣಿಯ, ತಿರುಕಗೊರವ ದೇವನೆಂದು ಹಲವು ನಾಮಗಳಿಂದ ಕರೆದು ಪೂಜಿಸುವುದನ್ನು ನಾನು ಬೆರಗಾದೆ. ವಿವಿಧ ರೂಪಗಳನ್ನು ಕಲ್ಪಿಸಿ, ಆರಾಧಿಸಿ ಸ್ತುತಿಸುತ್ತಾರೆ. ಅದು ಗುಣಾತ್ಮಕ ಆರಾಧನೆಯೇ ವಿನಾ ಅದು ಅವರನ್ನುಜನನ–ಮರಣ ಚಕ್ರದಿಂದ ಪಾರು ಮಾಡಲಾರದು. ಆದರೆ, ನಾನು ಮಾತ್ರ ನಾಮರೂಪಗಳಿಲ್ಲದೇ ಇರುವ ನಿಮ್ಮ ನಿಜರೂಪವನ್ನು ಆರಾಧಿಸಿ ಭವಮುಕ್ತನಾದೆನೆಂದು ಹೇಳಿದ್ದಾರೆ ಅಲ್ಲಮರು. ಈ ಮಾತಿಗೆ ಪೂರಕವೆಂಬಂತೆ ಹೇಳಿದ ಅಲ್ಲಮರ ಅಭಿಪ್ರಾಯವಿಂತಿದೆ.

**ಎನ್ನಲ್ಲಿ ನಾನು ನಿಜವಾಗಿ ನಿಮ್ಮನರಿದಿಹೆನೆಂದಡೆ**
**ಅದು ನಿಮ್ಮ ಮತಕ್ಕೆ ಬಪ್ಪುದೇ?**
**ಎನ್ನ ನಾನು ಮರೆದು ನಿಮ್ಮನರಿದಡೆ**
**ಅದು ನಿಮ್ಮ ರೂಪೆಂಬೆ**
**ಎನ್ನ ನಿಮ್ಮೊಳು ಮರೆದಡೆ,**
**ಕನ್ನಡಿಯೊಳಗಣ ಪ್ರತಿಬಿಂಬದಂತೆ**
**ಭಿನ್ನವಿಲ್ಲದಿದ್ದೆನು ಕಾಣಾ ಗುಹೇಶ್ವರಾ!**

ನಾನು ಎಂದರೆ ಅಹಂಕಾರದ ಮಾತಾದೀತು, ನೀನು ಎಂದರೆ ನಿಮ್ಮ ನಿಜದ ಅರಿವು ಮತ್ತು ಕಣ್ಮುಂದೆ ಪ್ರತ್ಯಕ್ಷರಾಗುತ್ತೀರೆಂಬ ಅನುಭವಾನಂದ, ನಾನು ಅರಿಯುತ್ತೇನೆಂಬ ಭಾವವನು ತ್ಯಜಿಸಿಬೇಕು. ನನ್ನ ನಾನು ಮರೆತು ನಿಮ್ಮನ್ನು ಅರಿಯಬೇಕು. ಆಗ ನಿಮ್ಮ ನಿಜ ಸ್ವರೂಪ ದರ್ಶನವಾದೀತು. ಎನ್ನ ಮರೆದು ನಾನು ಅರಿದೆ ನಿಮ್ಮನು ಎಂಬ ಮಾತಿನೊಳಗೆ ಅರಿದೆನು ಎಂಬ ಭಾವವಿದೆ. ಆ ಭಾವ ಕೂಡ ನಿಮ್ಮ ನಿಜ ಸ್ವರೂಪದಲ್ಲಿ ಅಡಗಿ ಹೋದರೆ ನಾನು ನಿಮ್ಮೊಡನೆ ಅಭಿನ್ನ, ಅದು ಪ್ರತಿಬಿಂಬವು ಕನ್ನಡಿಯೊಳಗಿರುವಂತೆ ಪ್ರತಿಮೆಯ ಮುಖಾಂತರ ಪ್ರತಿಪಾದಿಸಿದ್ದಾರೆ.

ವೇಮನ ಯೋಗಿಗಳು ತಮ್ಮ ಪದಗಳಲ್ಲಿ ಹೀಗೆ ಹೇಳುತ್ತಾರೆ. "ದೇವನೊಬ್ಬ ನಾಮ ಹಲವು" ಎಂಬಂತೆ ಇರುವ ದೇವರೊಬ್ಬನೇ ಹಲವು ದೇವರನು ನಿರ್ಮಿಸಿಕೊಂಡು ಆರಾಧಿಸುವವರ ಕಂಡು ನಾನು ಬೆರಗಾದೆನೆಂಬುದಿಲ್ಲಿ ವ್ಯಕ್ತವಾಗಿದೆ. ಅವ್ಯಕ್ತವಾಗಿರುವ ಶಕ್ತಿಯನ್ನು ವ್ಯಕ್ತ ರೂಪದಲ್ಲಿ ತೋರಿ ಕಾಣುವುದು ವ್ಯತಿರಿಕ್ತವಾದುದು ಎಂಬುದವರ ನಿಲುವೆ.

**ಎಷ್ಟು ದೇವತೆಗಳು! ಏನೀ ರಹಸ್ಯ!!**
**ಚಿನ್ಹೆಗಳ ಹೊಂದಿ ಕಾಣ ಚಿನ್ಮಯಾತ್ಮ**
**ತನ್ನ, ತನ್ನೊಳು ಕಾಣಲು ತನ್ಮಯವಾದ**
**ಚೆನ್ನುಮೀರಲದು ಬಹಳ ಮೇಲು ವೇಮ.**

**ಮೇಣ ಒತ್ತಿ ಬರೆದು ಮತ್ತೆ ರೂಪ ಮಾಡಿ**
**ತಾಮ್ರ ಕರಗಿಸಿಟ್ಟು ತತ್ರ ಸುರುವಿ,**
**ಮನುಜರೆಲ್ಲ ಕೂಡಿ ಮತ್ತೆ ದೇವನೆಂಬರು**
**ವಿಶ್ವದಾಭಿರಾಮ ಕೇಳು ವೇಮ**

**ಮಣ್ಣು, ಲೋಹಗಳಲಿ, ಮರ ಶಿಲಾದಿಗಳಲಿ**
**ಪಟ–ಗೋಡೆಗಳಲಿ, ಪ್ರತಿಮೆಗಳಲಿ**
**ತನ್ನ ನೆನಪು ಕೊಡಲು ತವಕಿಸ ಪರಮಾತ್ಮ**
**ವಿಶ್ವದಾಭಿರಾಮ ಕೇಳು ವೇಮ**

**ಮಣ್ಣು ಎತ್ತಿ ಹಾಕಿ, ಮತ್ತೆ ರೂಪುಗೊಳಿಸಿ**
**ಗುಂಡಿ ತುಂಬಿ ಹೂಳಿ, ಗುರುತು ನಿಲಿಸಿ**
**ಮನುಜರೆಲ್ಲ ಕೂಡಿ ಮತ್ತೆ ದೇವನೆಂದರು**
**ವಿಶ್ವದಾಭಿರಾಮ ಕೇಳು ವೇಮ**

ಮೊದಲು ನಮಗೆ ಇಚ್ಚಿತವಾದ ರೂಪದಲ್ಲಿ ಮೇಣದ ಮೇಲೆ ಅಥವಾ ಮಣ್ಣಿನ ಅರಲಿನ ಮೇಲೆ ಅಚ್ಚೊತ್ತಿ ಬೊಂಬೆ ತಯಾರಿಸುತ್ತಾರೆ. ಶಿವ–ಪಾರ್ವತಿ,ಹರಿ–ಹರ, ವಿಷ್ಣು, ಆಂಜನೆಯ, ಲಕ್ಷ್ಮೀ ಸರಸ್ವತಿ, ಗಣಪತಿ ಈ ಮುಂತಾದ ರೂಪಗಳಲ್ಲಿ ಪಡಿಯಚ್ಚಿನ ಮೂಲಕ ದೇವರ ಮೂರ್ತಿಗಳನ್ನು ತಯಾರಿಸುತ್ತಾರೆ. ಸುಂದರವಾದ ಬಣ್ಣ ಬಳಿಯುತ್ತಾ ಅಂದ–ಚಂದ ಮಾಡಿ ಮೂರ್ತೀಕರಿಸಿ ಆರಾಧಿಸುತ್ತಾರೆ. ಎಷ್ಟೋ ದೇವಾನು–ದೇವತೆಗಳ ಸೃಷ್ಟಿ ಕಾರ್ಯ ಮತ್ತು ಆರಾಧನೆ ನಡೆದೇಯಿದೆ. ಅಚ್ಚಿನ ಗೊಂಬೆಗಳ ಮೇಲೆ ಜಿಗುಟು ಮಣ್ಣು ಇಲ್ಲವೆ ಮೇಣದ ಪದಾರ್ಥ ಮೆತ್ತಿ ಒಣಗಿಸುತ್ತಾರೆ. ಈ ರೀತಿ ಒಣಗಿದ ಮೇಣಾಸಹಿತ ಮಣ್ಣಿನ ಮುದ್ದೆಯನ್ನು ಕಾಯಿಸುತ್ತಾರೆ. ಆಗ ಒಳಗಿನ ಮೇಣವು ಕರಗಿ ಮೂರ್ತಿಯ ಆಕಾರದ ಪೊಳ್ಳು ಮಾತ್ರ ಮಣ್ಣಿನಲ್ಲಿ ಉಳಿಯುತ್ತದೆ. ಇದರಲ್ಲಿ ಕರಗಿದ ಲೋಹವನ್ನು ತುಂಬಿ ಮಣ್ಣು ತೊಡೆದರೆ ಮೂರ್ತಿ ತಯಾರಾಗುವುದು. ಈ ವಿಧದಲ್ಲಿ ಪ್ರತಿಮೆ ತಯಾರಿಸಿ, ಜನರೆಲ್ಲ ಕಲೆತು ಪ್ರಾಣ ಪ್ರತಿಷ್ಠಾಪನೆಯ ನಾಟಕಗೈದು ಆ ಲೋಹದ ಬೊಂಬೆಗೆ ದೇವರೆಂದು ಕರೆದು ಪೂಜಿಸಿ ನಮಿಸುತ್ತಾರೆ. ಎಂಥ ನಾಸ್ತಿಕನೂ ಮರುಳಾಗುವಂತೆ ಮೂರ್ತಿಯ ತಯಾರಿಕೆಯಿರುತ್ತದೆ. ಇದೊಂದು ತಯಾರಿಸುವ ಕಲೆಯೇ ಸಾಕ್ಷಾತ್ ದೇವರಲ್ಲ–ದೇವತೆಯಲ್ಲವೆಂದು ಅಂಧಾಚಾರಿಗಳಿಗೆ ಅರುಹಿದ್ದಾರೆ ವೇಮನರು.

ಮೂರ್ತಿ ಪೂಜೆಯೆಂದೂ ಫಲ ಕೊಡಲಾರದು ಎಂದು ಜನರಿಗೆ ತಿಳುವಳಿಕೆ ನೀಡಿದ ವೇಮನರ ಪದಗಳಲ್ಲಿಂತಿವೆ.

**ಶಿವನೆಂದು ಭ್ರಮಿಸಿ ಶಿಲೆಗಳಿಗೆ ಶರಣೆಂಬಿರಿ**
**ಮೂರ್ಖ ಜೀವಿಗಳೇ ಮೋಹ ಬಿಡಿರಿ!**
**ಜೀವದೊಳಿರುತಿಹುದು, ಶಿಲೆಯೊಳಗೇನುಂಟು?**
**ವಿಶ್ವದಾಭಿರಾಮ ಕೇಳು ವೇಮ**

**ಶಿವನು ಇರುವನೆನುತೆ, ಶಿಲೆಗಳಿಗೆ ಮಣಿಯುವ**
**ಮುರ್ಖ ಜೀವಿಗಳೇ ಮೋಹ ಬಿಡಿರಿ!**
**ಜೀವಿಯಲ್ಲೆ ಹೊರತು, ಶಿಲೆಯೊಳೇನುಂಟು?**
**ವಿಶ್ವದಾಭಿರಾಮ ಕೇಳು ವೇಮ**

ಕಲ್ಲಿನಲ್ಲಿ, ಕಟ್ಟಿಗೆಯ ಮೂರ್ತಿಗಳನ್ನು ಕೆತ್ತಿಸಿಟ್ಟು ಗುಡಿಯ ಕಟ್ಟಿಸಿ ಅದಕ್ಕೆ ಹಣೆ ಬಡಿದರೆ ಗುಬುಟಿಯಲ್ಲದೇ ಮತ್ತೇನೂ ಸಿಗದು, ಮೂರ್ಖರೇ ಅದು ನಿರ್ಜೀವ ವಸ್ತು ಅದು ನಿಮಗೇನು ಕೊಡಬಲ್ಲದು? ಹೃದಯದೊಳಿರುವ ಬ್ರಹ್ಮನ, ಆತ್ಮನ ತಿಳಿದು ನಡೆಯೆಂದು ಅರುಹುದ ವೇಮನರ ಈ ಪದಗಳೆರಡನು ಅರಿತು ನಡೆಯಬೇಕಾಗಿದೆಯೆಂದು ನಾವು ನೀವೆಲ್ಲ!

**ಗಟ್ಟಿ ಕಲ್ಲು ತಂದು ಕಾಲು–ಬೆರಳಿನಿಂದ**
**ಒತ್ತಿ ಉಳಿಯ ಬಳಸಿ ಗಾಸಿಗೊಳಿಸಿ,**
**ಬಂಡೆಗಲ್ಲಿಗೆರಪುತಿಪ್ಪನೆಂಥ ಮೂರ್ಖ**
**ವಿಶ್ವದಾಭಿರಾಮ ಕೇಳು ವೇಮ**

**ಕಲ್ಲು ಬಸವನಿಗತಿ ರಂಗು ಪೂಜಾರ್ಚನ**
**ರೂಢಿ ಬಸವ ಕಂಡು ಉಗುಳುತಿಹರು**
**ಬಸವ ಭಕುತುರೆಷ್ಟು ಪಾಪಿಯರಿತುನೋಡು**
**ವಿಶ್ವದಾಭಿರಾಮ ಕೇಳು ವೇಮ**

**ಬೆಟ್ಟಕಲ್ಲಿನಿಂದ ಬಯಕೆ ಕೋರಲೇಕೆ?**
**ಕಟ್ಟಿದ ಗುಡಿಗಳಲಿ ಕರುಬಲೇಕೆ?**
**ಬಿಡಲಾರದ ಶಿವನು ಪ್ರಾಣಿಗಳಲ್ಲಿಹನು**
**ವಿಶ್ವದಾಭಿರಾಮ ಕೇಳು ವೇಮ**

**ಸಂಗಮವರಿತಂದು ಗುಡಿಕಟ್ಟಿ**
**ಹೊಳೆವ ಶಿಲೆಗೆ ಸೇವೆ ಸಲಿಸಬೇಕೆ?**
**ಶಿಲೆಯ ಸೇವೆಯಿಂದ ಫಲವೇನು ಬಪ್ಪುದು?**
**ವಿಶ್ವದಾಭಿರಾಮ ಕೇಳು ವೇಮ**

**ಕಲ್ಲು ದಿನ್ನೆಯಿಂದ ಕಟ್ಟಿ ಗುಡಿಯ, ಮತ್ತೆ**
**ಬೇರೆ ಶಿಲೆಯ ಕೊರೆದು, ವಿಗ್ರಹವೆಂದು**
**ಪೂಜೆ ಮಾಡಿದಾಗ ಪೂಜ್ಯ ಬರುವುದೇನು?**
**ವಿಶ್ವದಾಭಿರಾಮ ಕೇಳು ವೇಮ**

**ಶಿಲೆಯ ನೋಡಿ ನರರು ಶಿವನೆಂದು ಭಾವಿಪರು**
**ಶಿಲೆಯು ಶಿಲೆಯೆ ಹೊರತು ಶಿವನುಅಲ್ಲ.**
**ತನ್ನೊಳಿರುವ ಶಿವನ ತಾನು ತಿಳಿಯನೇಕೋ!**
**ವಿಶ್ವದಾಭಿರಾಮ ಕೇಳು ವೇಮ**

**ಶಿಲೆಯ ದೇವತೆಗಳ, ಸ್ಥಿರವಾಗಿ ರೂಪಿಸಿ,**
**ಮಣ್ಣು ಪಾಲಾದರು ಮನುಜರೆಲ್ಲ!**
**ಮಣ್ಣಿನಲ್ಲಿ ಕಲ್ಲು; ಮನದೊಳಗೆ ತಿಳಿಯರು**
**ವಿಶ್ವದಾಭಿರಾಮ ಕೇಳು ವೇಮ**

**ಪ್ರಾಣ ಪ್ರತಿಷ್ಠೆಯು ಪ್ರಪಂಚವೇ ಹೊರತು**
**ಬೇರೆಯಲ್ಲ ಜಗದಿ ಪರಿಕಿಸಿದೊಡೆ**
**ಪ್ರಾಣ ಪ್ರತಿಷ್ಠೆಯಿಂ ಪ್ರತಿಮೆ ನುಡಿವುದೇನು?**
**ವಿಶ್ವದಾಭಿರಾಮ ಕೇಳು ವೇಮ**

ಈ ಎಲ್ಲಾ ಪದಗಳಲ್ಲಿ(ಇನ್ನು ಸಾಕಷ್ಟಿದೆ ಕೇವಲ ದೃಷ್ಟಾಂತಕ್ಕಾಗಿ ಈ 8ನ್ನು ಆಯ್ದುಕೊಂಡು ವಿವರಿಸಿದ್ದೇನೆ). ಕಲ್ಲು, ಮಣ್ಣು, ಶಿಲೆ,ತಾಮ್ರ, ಹಿತ್ತಾಳೆಯ ಪ್ರತಿಮೆ ಅಥವಾ ಮೂರ್ತಿಗಳನ್ನು ಕೆತ್ತಿಸಿ ಅಂದಗೊಳಿಸಿ, ವಿವಿಧ ಬಣ್ಣ ಬಣ್ಣದ ಕಲ್ಲು-ಮಣ್ಣುಗಳಿಂದ ಗುಡಿ ಕಟ್ಟಿ ಪ್ರತಿಷ್ಠಾಪಿಸಿ ಪ್ರಾಣ ಕಳೆ ತುಂಬಿ ಪೂಜೆ ಮಾಡುವ ಮನುಜರು ಇಂದಿಗೂ ಇದ್ದಾರೆ. ಅದೊಂದು ಮೂಢ ಭಕ್ತಿ, ಮೂರ್ಖತನದ ಪರಮಾವಧಿ- ಈ ದೇಹದೊಳಿರುವ ಆತ್ಮನೇ ಪರಮಾತ್ಮನಿರುವುದನು ಮರೆತಿರುವಿರೇನು? ಎಂದು ಪ್ರಶ್ನಿಸುತ್ತ ತನ್ನೊಳಿರುವ ಶಿವನನ್ನು ತಾನು ತಿಳಿಯುವ ಪ್ರಯತ್ನ ಮಾಡು, ಬಿಡು ಬಿಡು ಈ ಬಾಹ್ಯದಾಡಂಬರವ, ವಿಗ್ರಹ ಪೂಜೆ ಮಾಡಿದವರನೇಕರು ಮಣ್ಣು ಪಾಲಾಗಿ ಹೋಗಿಹರು. ಮತ್ತೆ ಇವುಗಳ ಪೂಜನೆಯಿಂದ ಏನೇನೂ ಪ್ರಯೋಜನವಿಲ್ಲವೆಂದು ಹೇಳಿದ ವೇಮನಾಲ್ಲಮರ ಮಾತುಗಳನ್ನು ಅಲ್ಲಗಳೆದು ಮೂರ್ತಿ ಪ್ರತಿಷ್ಠಾಪನೆ ಮಾಡುತ್ತಿರುವುದು ನಿಂತಿಲ್ಲ! ಇಂಥ ಮೂರ್ತಿಗಳನ್ನು

ಇಸ್ರೇಲ್ ಪ್ರಧಾನಿ ಸದ್ದಾಂ ಹುಸೇನನು ಬುಡ್ಡೋರ್ಜರದ ಮೂಲಕ ಮುದ್ದಾಂ ಉರುಳಿಸಿ ಭಗ್ನಗೊಳಿಸಿದ ಇತಿಹಾಸವನ್ನು ನಾನಂತೂ ಮರೆತಿಲ್ಲ. ಇದು ದೇವತೆಗಳಿಗೆ, ರಾಷ್ಟ್ರ ಪುರುಷರಿಗೆ, ದೇಶಕ್ಕಾಗಿ ಮಡಿದ ಯೋಧರಿಗೆ ಮಾಡಿದ ಅನ್ಯಾಯವೇ ಅಲ್ಲವೇ?

ಈ ಕಾರಣದಿಂದಲಾದರೂ ಮೂರ್ತಿ ಪೂಜೆ ಸಲ್ಲದು, ಬಸವ, ಸರ್ವಜ್ಞ, ಕನಕದಾಸ,ಮಹಾತ್ಮಾ ಗಾಂಧೀಜಿ, ಶಾಸ್ತ್ರೀಜಿ ಈ ಮುಂತಾದ ಮೂರ್ತಿ ಅಥವಾ ಪುತ್ಥಳಿಗಳಿಗೆ ಮಾಡುವ ಅಪಚಾರಗಳನ್ನು ನೋಡಿದರೆ ಇಂಥವರ ಮೂರ್ತಿಗಳನ್ನೇ ಪ್ರತಿಷ್ಠಾಪಿಸಬಾರದು. ಅವರ ಸಾಧನೆ-ಸಿದ್ಧಿಯ ಗುರುತುಗಳು ಇತಿಹಾಸ ನಿರ್ಮಾಣವಾಗಿ ಅಮರವಾಗಿವೆ. ಗ್ರಂಥಗಳ ರೂಪದಲ್ಲಿ ಅವರನ್ನು ಗುಣಗಾನ ಮಾಡಿ ಇಂದಿನ ಪೀಳಿಗೆಗೆ ಪರಿಚಯಿಸುವುದು ಉತ್ತಮವಾದ ಕಾರ್ಯವಾಗಿದೆ ಎಂದುದು ನನ್ನ ಆಲೋಚನೆಯಾಗಿದೆ. ಇಂಥ ಸಂಭವನೀಯ ಪ್ರಸಂಗಗಳನ್ನು ವೇಮನಾಲ್ಲಮರು ಈಗ ಇದ್ದರೆ ಅದೇನು ವಾಣಿ ಪ್ರಕಟಿಸುತ್ತಿದ್ದರೇನೋ ಎನಿಸುತ್ತದೆ. ಆದುದರಿಂದ ತಮ್ಮ ತಮ್ಮ ಪದ್ಯ-ವಚನಗಳಲ್ಲಿ ಅಂದಂದಿನ ಕಾಲಘಟ್ಟದ ಜನರು ಮಾಡುವ ಮೂಢ ನಂಬಿಕೆಗಳನ್ನು ಅನಾವರಣಗೊಳಿಸಿದ್ದಾರೆ. ಅದೂ ಒಂದು ನಂಬಿಕೆಯೇ ಎಂದು ಹೇಳಿದರೂ ಸಮಯ, ಶ್ರಮ, ಹಣ ಮುಂತಾಗಿ ಹಾಳು ಹಾಳಲ್ಲವೇ? ಎಂದು ಯಾರಿಗಾದರೂ ಅನ್ನಿಸದಿರದು! ಇಂಥ ಆಚರಣೆಗಳು ಮೊಟಕುಗೊಂಡಷ್ಟು ಒಳ್ಳೆಯದು ಎಂದು ಹೇಳಬಹುದು. ಇದು ಪರಂಪರೆಯಿಂದ ಬಂದ ಬಳುವಳಿಯಾಗಿದೆಯಾದರೂ ಹೊಸ ಸಮಾಜದಲ್ಲಿ ಸುಧಾರಣೆ ಹೊಂದಬೇಕಾಗಿದೆಯೆಂಬ ಕಾರಣಕ್ಕಾಗಿ ಈ ವಿಚಾರಗಳು ಪ್ರಮುಖವೆನಿಸಿದವು ಅಷ್ಟೇ!

ಆದುದರಿಂದ ವೇಮನರು ಹೇಳುವ ಈ ಪದ-ಪದ್ಯಗಳ ಮೂಲಕ ಹೇಳುವ ಜಾಗೃತ ನುಡಿಗಳು ನಮ್ಮ ಭಾವೀ ಭವಿಷ್ಯತಿನ ಬದುಕಿಗೆ ತೋರುದೀಪವಾಗಿವೆ ಎಂದು ಭಾವಿಸಿ ಅನುಸರಿಸಬೇಕು. ಏಕೆಂದರೆ ಶಿಲ್ಪಿಯು ಬೆಟ್ಟದ ಕಲ್ಲುಗಳಿಂದ, ಅದರ ಮೇಲೆ ಕುಳಿತುಕೊಂಡು, ಕೈ ಕಾಲುಗಳನ್ನು ಬಳಸಿಕೊಂಡು ಮೂರ್ತಿ ಕೆತ್ತನೆಯ ಕೆಲಸವನ್ನು ಮಾಡುತ್ತಾನೆ. ಆತನ ಕರಕುಶಲ ಕಲೆಯಿಂದ ಸುಂದರವಾದ ಶಿವನ ಮೂರ್ತಿ ಪೂರ್ವ ನಿಯೋಜಿತ ಆಕಾರದಲ್ಲಿ ಮೂರ್ತಗೊಂಡಿತು. ಇಂಥ ಕಲ್ಲು ಮೂರ್ತಿಗೆ ನಮಿಸುತ್ತ ಬಂದಿರುವೆವು. ನಾನು ಇದರಲ್ಲಿರುವ ಎರಡನೆಯ ಪದ್ಯವನ್ನು ಗಮನಿಸುತ್ತಾ ಉಲ್ಲೇಖಿಸುವುದೇನೆಂದರೆ – "ಮನುಷ್ಯನಲ್ಲಿರುವ ತಾಮಸಿಕ, ಸಾತ್ವಿಕ, ರಾಜಸಿಕ ಪ್ರವೃತ್ತಿಗಳಲ್ಲಿದ್ದು ಅವುಗಳನ್ನೇ ದೇವರಿಗೆ ಆರೋಪಿಸಿ ಬ್ರಹ್ಮ, ವಿಷ್ಣು, ರುದ್ರರೆಂಬ ನಾಮರೂಪವನ್ನು ಕಲ್ಪಿಸಿಕೊಂಡನು. ಜಗದ ಸೃಷ್ಟಿ, ಸ್ಥಿತಿ,

ಲಯಗಳ ಕಾರ್ಯವನ್ನು ಒಬ್ಬೊಬ್ಬರು ಅನುಕ್ರಮವಾಗಿ ನಿರ್ವಹಿಸುವರೆಂದೂ ಕಲ್ಪಿಸಿದ, ವಾಹನವೇರುವುದು ಮಾನ–ಮರ್ಯಾದೆ ಎಂಬ ತನ್ನ ಕಲ್ಪನೆಗೆ ತಕ್ಕಂತೆ ಕಮಲ ಪುಷ್ಪ, ಗರುಡ, ನಂದಿಗಳೆಂಬ ವಾಹನಗಳನ್ನು ಕಲ್ಪನೆಯನ್ನು ದೇವರಿಗೆ ಆರೋಪಿಸಿದ, ಇದರಿಂದಾಗಿ ಎತ್ತು (ವೃಷಭ) ಶಿವನ ವಾಹನವಾಯಿತು.

ಶಿವನ ನಂದಿ ವಾಹನವಾಯಿತು.ಎತ್ತಿನ ಮೂರ್ತಿಯನ್ನು ಮೂಢ ಭಕ್ತರು ಸಿಂಗಾರ ಮಾಡಿ, ಫಲ–ಪುಷ್ಪ ಅರ್ಪಿಸಿ ಪೂಜೆಗೈಯ್ಯುವರು. ಆದರೆ, ಆ ಕಲ್ಲಿನ ಮೂರ್ತಿಯು ಏನನ್ನು ಪ್ರತಿನಿಧಿಸುವುದೋ, ಆದರೆ ಆ ಜೀವಂತ ಎತ್ತಿನ ಮೇಲೆ ಉಗುಳುತ್ತಾರೆ. ಎತ್ತು ರೈತನ ಜೀವ–ಜೀವಾಳ–ಸಂಗಾತಿ. ಎತ್ತಿಲ್ಲದೇ ಎತ್ತು–ಬಿತ್ತಾಗುತ್ತಿತ್ತೇ? ನಂದಿಯಿಂದಲೇ ನಾವು ಅನ್ನವನ್ನು ಉಣ್ಣುವುದು (ಮಹಾನ್ ಸಂಶೋಧಕರೊಬ್ಬರು ಬಸವಣ್ಣನವರನ್ನು ಎತ್ತಿಗೆ ಹೋಲಿಸಿ ಭಾಷಣ ಮಾಡಿದ್ದು ತುಂಬಾ ಅವಮಾನದ ಸಂಗತಿ. ಅದು ಲಾಕ್‌ಡೌನ್ ಸಂದರ್ಭದಲ್ಲಿ ಲೇಖನವೂ ಪ್ರಕಟವಾಯಿತು. ಬಹುದೊಡ್ಡ ಸಂಶೋಧಕರು ಈ ಮಾತು ಬರಹಗಳಿಂದ ಬಹಳ ಸಣ್ಣವರಾದರೆಂದು ಹೇಳಲಡ್ಡಿಯಿಲ್ಲ) ಈ ರೀತಿಯ ವರ್ತನೆಯುಳ್ಳ ನಂದಿಯ ಭಕ್ತರು ಪಾಪಿಗಳಲ್ಲವೇ? ಇದೆಲ್ಲವನ್ನೂ ಸಂಪೂರ್ಣವಾಗಿ ಅರಿತು ವಿಚಾರಿಸಬೇಕೆಂದುದಾಗಿ ವೇಮನರು ಹೇಳಿದ ಮಾತು ನಿತ್ಯ ಸತ್ಯ!!

ಅಲ್ಲಮರು ಹೇಳುತ್ತಾರೆ :

**ದೇವರೆಲ್ಲರ ಹೊಡೆತಂದು ದೇವಿಯರೊಳಗೆ ಕೂಡಿತ್ತು ಮಾಯೆ**
**ಹರಹರಾ ಮಾಯೆ ಇದ್ದೆಡೆಯ ನೋಡಾ**
**ಶಿವಶಿವಾ ಮಾಯೆ ಇದ್ದೆಡೆಯ ನೋಡಾ**
**ಎರಡೆಂಭತ್ತು ಕೋಟಿ ಪ್ರಮಥ ಗಣಂಗಳು ಅಂಗಾಲ ಕಣ್ಣವರು**
**ಮೈಯೆಲ್ಲಾ ಕಣ್ಣವರು, ನಂದಿವಾಹನ ರುದ್ರರು ಇವರೆಲ್ಲರೂ**
**ಮಾಯೆಯೆಂದು ಕಾಲಗಾಹಿನ ಸರಮಾಲೆ ಕಾಣಾ ಗುಹೇಶ್ವರಾ!**

ಮಾಯೆ ಸರ್ವ ಸಮರ್ಥ. ಅದಿಲ್ಲದ ಸ್ಥಾನವಿಲ್ಲ. ಅದು ಮಾಡದ ಕಾರ್ಯವಿಲ್ಲ ದೇವದೇವರೆಲ್ಲರನ್ನು ಅಚ್ಚಿಸಿ ತಂದು ದೇವಿಯರೊಳು ಕೂಡಿಸುತ್ತದೆ. ಕೊಟ್ಯಾಂತರ ಪ್ರಮಥ ಗಣಂಗಳು, ಅಂಗಾಲ ಕಣ್ಣವರು, ಮೈಯೆಲ್ಲ ಕಣ್ಣವರು, ನಂದಿ ವಾಹನ ರುದ್ರರು, ಅದರ ಪರಿಚಾರಕರು, ಸಾಲುಗಟ್ಟಿದ ಪಾದ ಸೇವಕರು. ಆ ಮಾಯೆಯೆಂದು ವಿಲಾಸ ವೈಚಿತ್ರ್ಯವನ್ನು ಕಲ್ಪಿಸಲಾಗದು. ಅಂದರೆ ಮಾಯೆಯಮೋಹಕ್ಕೆ ಸಿಲುಕಿ ಅನೇಕ ದೇವತೆಗಳನ್ನು ಸೃಷ್ಟಿ ಮಾಡಿಕೊಂಡು ಪೂಜಿಸುವವರನ್ನು ನಾನು ಕಂಡೆನು. ಈ ಬದುಕಿನ ಜಂಜಾಟದಲ್ಲಿ ಹೊರಳಾಡುತ್ತಿರುವವರ ಸಂಸಾರಸ್ಥರನ್ನು ಕಂಡು

ಹೇಳಿದಂತಿದೆ ಭಯಭೀತಿಯ ವಾತಾವರಣದಿಂದಾಗಿ ಅನೇಕ ದೇವತೆಗಳನ್ನು ಪೂಜಿಸುವ ಸಂಪ್ರದಾಯವು ಈಗಲೂ ನಿಂತಿಲ್ಲ. ಇದಕ್ಕೆ ಸಂಬಂಧ ಮತ್ತು ಸಂವಾದಿಯಾಗಿ ಅಲ್ಲಮರು ಹೇಳಿದ ಈ ಕೆಳಗಿನವನ್ನು ಸ್ಪಷ್ಟಪಡಿಸುತ್ತದೆ.

**ದೇವಲೋಕದವರೆಲ್ಲರ ವ್ರತಗೇಡಿಗಳೆಂಬೆ**
**ಮರ್ತ್ಯ ಲೋಕದವರೆಲ್ಲರ ಭಕ್ತ ದ್ರೋಹಿಗಳೆಂಬೆ**
**ದೇವ ಸಂಭ್ರಮ ಗಣ ಪದವಿಯ ಕಂಡವರೆಲ್ಲರ**
**ಕುಂಭಕರ್ಣನಂತೆ ಅತಿ ನಿದ್ರೆಗಳೆಂಬೆ**
**ಅನಂತ ಶೀಲರ ಕಂಡಡೆ ಕೈಕೂಲಿಕಾರರೆಂಬೆ**
**ಗುಹೇಶ್ವರಾ ಲಿಂಗೈಕ್ಯನರಿಯರಾಗಿ**

ಕಠೋರ ಆಚರಣೆಗಳನ್ನು ಆಚರಿಸಿ ಕೆಲವರು ದೇವಲೋಕಕ್ಕೆ ಗಮಿಸುತ್ತಾರೆ. ಕೆಲವರು ಅಲ್ಲಿಯ ಸುಖೋಪಭೋಗಗಳನ್ನು ಯಥೇಚ್ಛವಾಗಿ ಅನುಭವಿಸುತ್ತಾರೆ. ಆದರೇನು ಇದು ಕ್ಷಣಿಕ ಮಾತ್ರ. ಪುಣ್ಯ ಸಂಚಯ ತೀರಿದ ಬಳಿಕ ಅವರು ದೇವಲೋಕದಿಂದ ಚ್ಯುತರು. ಆದುದರಿಂದಲೇ ವ್ರತಗಳನು ಆಚರಿಸಿದರೂ ಅವರು ವ್ರತಗೇಡಿಗಳು. ಕೆಲವರು ಮರ್ತ್ಯದ ಮಾನವರು ಸಕಾಮ ಭಕ್ತಿಯಿಂದ ತಮ್ಮ ತಮ್ಮ ಇಷ್ಟ ದೇವತೆಗಳನ್ನು ಆರಾಧಿಸುತ್ತಾರೆ. ಆದರೆ, ಅವರದು ದೇವ ಭಕ್ತಿಯಲ್ಲ, ಕಾಮಭಕ್ತಿ, ಅಂಥವರು ನಿಜವಾದ ಭಕ್ತರಲ್ಲ ವ್ರತ–ಭಕ್ತ ದ್ರೋಹಿಗಳು. ಕೆಲವರು ಉಗ್ರತರ ಉಪಾಸನೆಗೈದು ವೈಭವದ ದಿವ್ಯ ಗಣಪದವಿಗಳನ್ನು ಪಡೆಯುತ್ತಾರೆ. ಅಂಥವರಿಗೆ ದೇವನ ಭಾವನೆ ಉಳಿಯದು. ಅಂಥವರು ಅತೀಂದ್ರಿಯ ನಿದ್ರಿಗಳು. ಇನ್ನು ಕೆಲರು ಸಣ್ಣ–ಪುಟ್ಟ ಚಿಕ್ಕ ಚಿಕ್ಕ ಫಲಗಳನ್ನಾಶಿಸಿ ಕರ್ಮಾಚರಣೆಯಲ್ಲಿ ತೊಡಗುವವರು. ಅಂಥವರ ಆಶೆಗಳು ಪೂರೈಕೆಯಾದವೆಂದರೆ ಶೀಲಾಚರಣೆ ಕೊನೆಗೊಳ್ಳುತ್ತದೆ. ಅವರ ಬದುಕು ಕೈ ಕೂಲಿಕಾರರಂತೆ ಈ ನಾಲ್ವರು ವಿವಿಧ ಸಾಧನೆಗಳನ್ನು ಮಾಡುವರಾದರೂ ಆಸೆ–ಆಮಿಷಗಳಿಗೊಳಗಾಗುವುದರಿಂದ ಭವಬದ್ಧರು. ಆತ್ಮನಾತ್ಮದ ಅರಿವಿಲ್ಲವಾಗಿ ಶಿವ ಸಾಮರಸ್ಯವನ್ನು ಪಡೆಯಲಾರದು. ವಿಮಲ ಮುಕ್ತಿಯನ್ನು ಅನುಭವಿಸಲಾರರು. ಶರಣರಂತಿವರ ಹಸನಾದ ಬದುಕಲ್ಲ ಪ್ರಾಪಂಚಿಕನಾದರೂ ಪರಿಶುದ್ಧವಾದ ಬದುಕಿಗೆ ನಾಂದಿಯನ್ನು ಹಾಡಿದಂತಿದೆ ಈ ವಚನ. ಅಂದರೆ ದೇವಲೋಕದ ದೇವಗಣಂಗಳೆಲ್ಲ ಎನ್ನ ಹೊರಗೆಂಬರು, ಅದುದಿಟವೆ. ಸತ್ಯ ಸಾತ್ವಿಕ ಭಕ್ತರು, ಸದ್ಭಕ್ತರು ಎನ್ನ ಹೊರಗೆಂಬರು. ಅದು ದಿಟವೆ ಹದಿನಾಲ್ಕು ಭುವನದೊಳಗೆ ಅವರು ತಾವಿರಲಿ, ನಾ ನಿಮ್ಮೊಳಗು ಗುಹೇಶ್ವರಾ ಎಂದಿರುವ ಪ್ರಭುದೇವರ ವಾಣಿಯನ್ನು ಗಮನಿಸಬೇಕು. ನಾವೇ ದೇವರಾಗುವ ಶಕ್ತಿಯಿರುವಾಗ ಕಲ್ಲಿಗೇಕೆ ಕೈಮುಗಿಯುವಿರಿ? ಅಂದರೆ ಗುಹೇಶ್ವರ ಅಂಗವೇ ತಾನಾಗಬೇಕೆಂದಿದ್ದಾರೆ. ಅದು ಹೀಗಿದೆ–

**ನಾ ದೇವನಲ್ಲದೆ ನೀ ದೇವನೆ?**
**ನೀ ದೇವನಾದಡೆ ಎನ್ನನೇಕೆ ಸಲಹೆ?**
**ಆರೈದು, ಒಂದು ಕುಡಿತೆ ಉದಕವನೆರೆವೆ**
**ಹಸಿದಾಗ ಒಂದು ತುತ್ತು ಓಗರವನಿಕ್ಕುವೆ**
**ನಾ ದೇವ ಕಾಣಾ ಗುಹೇಶ್ವರಾ**

ಈ ವಚನವು ತಾನು ದೇವನಾದ ಬಗೆಯನ್ನು ಸೂಚಿಸುತ್ತದೆ. ವೀರಶೈವದ ಪ್ರಕಾರ ಷಟ್‌ಸ್ಥಲ ಜ್ಞಾನದಲ್ಲಿ ನಡೆಯುವವರಿಗೆ ದೇವನ ದಿವ್ಯ ದರ್ಶನವಾಗುವುದರಲ್ಲಿ ಸಂದೇಹವಿಲ್ಲವೆನ್ನುತ್ತಾರೆ. ನಡೆ–ನುಡಿಗಳೊಂದಾದ ಬದುಕು ಜೀವನ ಮೌಲ್ಯವನ್ನು ತಂದು ಕೊಡುತ್ತದೆ ಎಂದಿದ್ದಾರೆ. ಭಕ್ತರನ್ನು ಸಲಹುವವ ದೇವ. ಶರಣನು ತನ್ನ ಕರಸ್ಥಲದಲ್ಲಿ ದೇವನನ್ನಿರಿಸಿ ನೀರೆರೆದು, ಪೂಜಿಸಿ, ನೈವೇದ್ಯವನ್ನೀಯುತ್ತಾನೆ. ಇದನು ಮಾಡುವವನೇ ಲಿಂಗಭಕ್ತನು, ಲಿಂಗವಲ್ಲ. ಇದು ಶರಣನ ನಿಷ್ಠೆಯ ಮಾತು. ಇದು ಶರಣನಾದವನ ಮಹಿಮೆಯಲ್ಲವೇ? ಮಾತು ಮನಗಳಿಂದ. ತೀತವಾದ ನಿರ್ಬಯಲ ದೇವನನ್ನು ನಿರ್ಮಲ ಮನದಿಂದ ಪೂಜಿಸುತ್ತಾನೆ. ಕರಸ್ಥಲದ ಲಿಂಗವೇ ದೇವನೆಂಬ ಭಾವವನ್ನು ಮನದಲ್ಲಿ ಮೂಡಿಸಿಕೊಂಡು ಅವನಲ್ಲಿ ದೇವನನ್ನು ಕಾಣಲು ಹಂಬಲಿಸುತ್ತಾನೆ. ಲೋಕದ ಜನರಿಗೂ ಕಲಿಸಲು ಮುಂದಾಗುತ್ತಾನೆ. ಇಂಥವನಿಗೆ ದೇವನ ದರ್ಶನವಾಗದಿರದು. ಮುಂದೆ ಆತ ದೇವರ ಪ್ರತಿನಿಧಿಯಾಗಿ ಲೋಕದವರಿಗೂ ತಿಳಿಸಿಕೊಡುವ ಪುಣ್ಯ ಕಾರ್ಯ ಮಾಡುತ್ತಾನೆ. ಆದುದರಿಂದ ನಿಜವಾದ ಸದ್ಭಕ್ತನು ದೇವರಿಗೂ ಮಿಗಿಲಾದದವನು ಎಂದರೂ ಸರಿಯಾದ ಮಾತೆನಿಸುತ್ತದೆ. ಸಂಸಾರಸ್ಥರಿಗೆ ಅಲ್ಲಮರು ಹೇಳುವ ಮತ್ತೊಂದು ವಚನದ ಮೂಲಕ ಹೇಳಿರುವುದು ತುಂಬಾ ಹಿತವನ್ನುಂಟು ಮಾಡುವಂತಿದೆ.

**ನೆಲದ ಬೊಂಬೆಯ ಮಾಡಿ,ಜಲದ ಬಣ್ಣನವನುಡಿಸಿ**
**ಹಲವು ಪರಿಯಾಶ್ರಮದಲ್ಲಿ ಉಲಿವ ಗೆಜ್ಜೆಯ ಕಟ್ಟಿ**
**ವಾಯುವನಲನ ಸಂಚಕ್ಕೆ ಅರಳೆಲೆಯ ಶೃಂಗಾರವ ಮಾಡಿ**
**ಆಡಿಸುವ ಯಂತ್ರವಾಹಕನಾರೋ?**
**ಬಯಲ ಕಂಬಕ್ಕೆ ತಂದು ಸಯವೆಂದು ಪರವ ಕಟ್ಟಿದೊಡೆ**
**ಸಯವದ್ವಯವಾಯಿತ್ತು ಏನೆಂಬೆನು ಗುಹೇಶ್ವರಾ!**

ಎಂಥ ಅದ್ಭುತ ಉಪಮೆಯಿದು? ದೇಹವಿದು ಮಣ್ಣಿನ ಗೊಂಬೆ ಅದಕ್ಕೆ ಜಲದ ಬಣ್ಣ. ಆಕರ್ಷಕವಾದ ರೂಪು–ರಂಗು. ಹಲವು ಪರಿಯಾಗಿ ವ್ಯವಹರಿಸುವ ವಿವಿಧ ಇಂದ್ರಿಯಗಳೇ ಉಲಿವ ಗೆಜ್ಜೆಗಳು ಆ ದೇಹದೊಳಗೆ ವಾಯುವಿನ ಸಂಚಾರ,

ಅಗ್ನಿಯ ಕಾವು, ಆ ದೇಹಕ್ಕೊಂದು ಆಯುಷ್ಯ ಮತ್ತು ಭೋಗಗಳನ್ನು ನಿರ್ಧರಿಸುವ ಸಾಮರ್ಥ್ಯವೇ ಪ್ರಾರಬ್ಧ. ಇಂಥ ದೇಹದೊಳಗೆ ಪ್ರವೇಶಿಸಿ ಅದರೊಂದಿಗೆ ತಾದ್ಯಾತ್ಮ ಹೊಂದಿದ ಜೀವ. ಇಂಥ ವ್ಯಷ್ಟಿ ಸೃಷ್ಟಿಯನ್ನು ನಿರ್ಮಿಸಿದವರು ಯಾರು ಅವನು ಅಂತರ್ಯಾಮಿ. ಮಾಯಿನ್ ಎನಿಸುವ ಮಹೇಶ್ವರ. ಯಾವಾಗ ಜೀವನು ಈ ಮಾಯಾಕೃತವಾದ ದೇಹವು ಅಗತ್ಯವಾಗಿದೆ ಎಂದು ನಿರ್ಧರಿಸಿಕೊಳ್ಳುತ್ತಾನೆಯೋ ಹಾಗೂ ಪರವಸ್ತುವೇ ನಿತ್ಯವಾಗಿದೆ ಎಂದು ನಿಶ್ಚಯಿಸಿಕೊಳ್ಳುತ್ತಾನೋ, ಆಗ ಅವನು ಪರ ವಸ್ತುವಿನಲ್ಲಿ ಒಂದಾಗುತ್ತಾನೆ. ಇದು ಮಾಯೆ ವಿಲಾಸವನ್ನು ಮೀರುವ ರೀತಿ. ಮಾಯೆಯನ್ನುಳಿದು ಈಶನ ದಾಸನಾದವನೇ ಮಹಾಮಾನವನಾಗಲು ಸಾಧ್ಯವಾಗುತ್ತದೇ ಹೊರತು ಶಿಲಾ ಮೂರ್ತಿಯರ್ಚನೆಯಿಂದ ಪ್ರಯೋಜನವಾಗದು ಎಂದು ಹೇಳಿದ್ದಾರೆ ಅಲ್ಲಮರು.

ಹೀಗೆ ಕಲ್ಲು–ಮಣ್ಣು–ಲೋಹದ ಮೂರ್ತಿಗಳನ್ನು ಮಾಡಿ ದೇವರು ದೇವರು ಎಂದು ಹಪಹಪಿಸುವುದರಿಂದ, ಪೂಜಿಸುವುದರಿಂದ ಏನೂ ಪ್ರಯೋಜನ–ವಾಗಲಾರದು. ದೇಹದೊಳಿರುವ ಆತ್ಮನ್ನೇ ಪರಮಾತ್ಮನೆಂದು ಭಾವಿಸಿ ನಿರ್ಮಲ ಮನದಿಂದ ಹುಟ್ಟಿಸಿದಾತನನ್ನು ನೆನೆದಡೆ ಆ ಪರಮಾತ್ಮನು ತಾನಿರುವಲ್ಲಿಗೇ ಪ್ರತ್ಯಕ್ಷನಾಗಿ ತನ್ನ ಕೈಲಾಸ ಪರ್ವತಕ್ಕೊಯ್ದು ಗಣಪದವಿಯನ್ನಿತ್ತು ಕರುಣಿಸುತ್ತಾನೆ ಎಂಬುದು ಅಲ್ಲಮರ ನೀತಿ ಬೋಧನೆಯಾಗಿದೆ.

ತೀರ್ಥಯಾತ್ರೆ ಮಾಡುವುದರಿಂದ ದೇವನ ದರ್ಶನವಾಗುತ್ತದೆಯೆ? ಎಂಬುದಕ್ಕೆ ಯೋಗಿದ್ವಯರ ಅನುಭವದ ನುಡಿಗಳಿಂತಿವೆ

ಇಲ್ಲಿಯ ತನಕ ಚರ್ಚಿಸಿದ್ದು; ದೇಹದೊಳಗೆ ಶಿವನ ಸ್ವರೂಪದ ಆತ್ಮನಿರುವಾಗ ಆವ ತೀರ್ಥಯಾತ್ರೆ ಕೈಕೊಂಡರೂ ವ್ಯರ್ಥ ಎನ್ನುವುದಕ್ಕೆ ವೇಮನರ ಪದ್ಯಗಳಲ್ಲಿಂತಿವೆ.

**ದೇವ ಭೂಮಿಯಲ್ಲಿ, ದೇವಾಲಯಗಳಲಿ**
**ದೇವನಿರುವೆನೆಂದು ಮಣಿದು ಸೇವೆ ಮಾಡಿ,**
**ತಿಳಿಯೆ, ವಿಶ್ವಕರ್ಮ, ದೇವಾದಿದೇವನು**
**ವಿಶ್ವದಾಭಿರಾಮ ಕೇಳು ವೇಮ**

**ತೀರ್ಥಯಾತ್ರೆಗೆಂದು ತಿರುಗಲು ಹೋಗುವವ**
**ಪಾಮರನಷ್ಟೇ ಹೊರತು ಭಕ್ತನಹನೆ?**
**ತೀರ್ಥಯಾತ್ರೆಯಿಂದ ದಿವ್ಯನಾಗಬಹುದೆ?**
**ವಿಶ್ವದಾಭಿರಾಮ ಕೇಳು ವೇಮ**

**ಸರ್ವವು ತಾನದ ತಿಳಿಯಲು**
**ನಿರ್ವಾಣಿಗೆ ಇರದು ಮುಕ್ತಿನಿಲುವಿಕೆ ವಶವೆ?**
**ಉರ್ವಿಯನೆಲ್ಲ ತಿರುಗಿ ತಾ**
**ಪರ್ವತ ಬಲ ಜಲಧಿಗಳಲಿ ಬೀಳುವ ವೇಮಾ**

ದೇವಾಲಯಗಳಲ್ಲಿ ದೇವನಿರುವನೆಂದು ಬಗೆದು ತೀರ್ಥ ಯಾತ್ರೆಯನ್ನು ಕೈಕೊಳ್ಳುವುದು ಉಚಿತವಲ್ಲ. ಅದು ಪಾಪನಂಥವನ ಗ್ರಹಿಕೆಯೇ ಹೊರತು ಭಕ್ತನಾದವನ ಲಕ್ಷಣವಲ್ಲ. ತೀರ್ಥಯಾತ್ರೆಯಿಂದ ಯಾರೂ ದಿವ್ಯತೆ ಹೊಂದಿದವರಿಲ್ಲ. ವಿಶ್ವವೆಲ್ಲದರಲ್ಲಿ ಇರುವಾ ವಿಶ್ವದಾಭಿರಾಮನನ್ನು ನೀವಿರುವಲ್ಲಿಯೇ ಭೂಮಿಯಲ್ಲಿಯೇ, ನೀವು ನೆಲೆಸಿರುವುಲ್ಲಿಯೇ ಇರುವಾಗ ಯಾಕೆ ಪರ್ವತ, ಜಲವ ಸುತ್ತಿ ದಣಿಯುವಿರಿ ಎಂದಿದ್ದಾರೆ ವೇಮನರು. ಮುಂದುವರೆದು ಅವರೇ ಹೇಳುವುದೇನೆಂದರೆ–

**ಕಾಶಿ ಕಾಶಿ ಎಂದು ಕಡು ಹರ್ಷಿಸಿ ಹೋಹರು**
**ಅಲ್ಲಿ ಇರುವ ದೇವರು ಇಲ್ಲಿಲ್ಲವೆ?**
**ಇಲ್ಲು, ಅಲ್ಲು ಉಂಟು; ಹೃದಯ ಲೇಸಾಗಿದೆ**
**ವಿಶ್ವದಾಭಿರಾಮ ಕೇಳು ವೇಮ**

**ಕಾಶಿಯಾತ್ರೆಗೆಯ್ದು ಗಾಸಿ ಪಡುವುದೇಕೆ?**
**ಹೊಲಸು ಗುಣ ವಿಕಾರ ಹೊಳಹು ತೊರೆದು**
**ಮೋಸ ಹೋಗದರಿವು ಮೂಲ ಕಂಡುಕೊಳ್ಳು**
**ವಿಶ್ವದಾಭಿರಾಮ ಕೇಳು ವೇಮ**

**ಕಾಶಿನೀರು ಹೊತ್ತು ಕಾಲು–ಮುಖವ ತೊಳೆದು**
**ಕಾಣದಲ್ಲೊ ಸುಖವ ಕೊರಗಿ ಕೊರಗಿ**
**ಸತ್ತ ಬಳಿಕ ಮುಕ್ತಿ ಸಾಧಿಸುವರೇನೋ?**
**ವಿಶ್ವದಾಭಿರಾಮ ಕೇಳು ವೇಮ**

**ಕಾಶಿ, ಮಧುರೆ ಕಂಚಿ ಗಯೆ ಪ್ರಯಾಗ ಸೇತು**
**ಅಲೆದು ಅಲೆದು ತನ್ನ ಆತ್ಮಕಂಡು,**
**ವಾಸನೆಗಳಳಿಯದಿರೆ ವ್ಯರ್ಥ ವಿಧಗಳಷ್ಟೆ**
**ವಿಶ್ವದಾಭಿರಾಮ ಕೇಳು ವೇಮ**

**ತಿರುಪತಿಗೆ ಹೋದೊಡಲ್ಲಿ ತುರುಕ ದಾಸ**
**ಕಾಶಿಗೆ ಹೋಗೆ, ಗರತಿ ಗಣಿಕೆಯಲ್ಲ**
**ಶ್ವಾನಸಿಂಹ ಅಹುದೆ ಗೋದಾವರಿ ಸೇರಲು?**
**ವಿಶ್ವದಾಭಿರಾಮ ಕೇಳು ವೇಮ**

**ತಿರುಪತಿ ಯಾತ್ರೆಗೆ ಕೋರಿ, ತಲೆಗೂದಲನ್ನು ಇತ್ತು**
**ವೆಂಕಟೇಶನ ಕೋರಿ ಬಿಡಲೇಕೆ?**
**ಅಲ್ಲಿಹ ಶ್ರೀ ಹರಿ ಇಲ್ಲಿಯೇನಿರನೆ?**
**ವಿಶ್ವದಾಭಿರಾಮ ಕೇಳು ವೇಮ**

**ತಾವವಿರುವ ತಾಣ ದೈವವಿಲ್ಲವೇನು?**
**ಪಾಮರ ಜನರು ತಿರುಪತಿಗೆ ಅತಿಯೆ,**
**ಜೋಗಿಯಾಗಿ ಕೈಯ್ ಸೊತ್ತು ಹೊರಟುಹೋಯ್ತು**
**ವಿಶ್ವದಾಭಿರಾಮ ಕೇಳು ವೇಮ**

**ಕಳ್ಳ ತೀರ್ಥಕ ಹೋಗಿಗಂಟು ಬಿಚ್ಚುವ ಹೊರತು**
**ಮಣಿಯೆ ವೇಳೆ ಇರದು ಮತ್ತೆ ಕೊನೆಗು**
**ಹೊಕ್ಕು ಮನೆಯ ನಾಯಿಹುಡುಕದೇ ಗಡಿಗೆಯ?**
**ವಿಶ್ವದಾಭಿರಾಮ ಕೇಳು ವೇಮ**

ಕಾಶಿ ಕಾಶಿ ಎಂದೇಕೆ ಪೇಚಾಡುವಿರಿ? ಕಾಶಿ ಕುಂತಾಳ ಮನಿಯಾಗ ಇರುವ ಆಕೆಯ ಪಾದವಿಡಿದು ಪುಣ್ಯದ ಗಳಿಸಿಕೊಳ್ಳಿರಿ ಎಂದು ಜನಪದ ಗರತಿಯರು ಹೇಳಿದ ಮಾತಿದು. ತಂದೆ–ತಾಯಿಗಳೇ ಕಾಶಿ–ರಾಮೇಶ್ವರ ದರ್ಶನ ಪಡೆಯುವ ಪುಣ್ಯಕ್ಕಿಂತಲೂ ಹೆಚ್ಚಿನದು ಅಂದರೆ ತಂದೆ–ತಾಯಿಗಳೇ ನಿಜವಾದ ತಂದೆ–ತಾಯಿಗಳು. ಎನ್ನ ತಂದೆ–ತಾಯಿಗಳೇ 'ಮಕ್ಕಾ ಮದೀನಾ' ಇದ್ದಂತೆಯೆಂದು ಶಿಶುನಾಳ ಶರೀಫ ಸಾಹೇಬರು ಹೇಳಿರುವರು. ಆದುದರಿಂದ ಹೇ ಮನುಜನೇ ಕಾಶಿ ಕಾಶಿ ಎಂದು ಏಕೆ ಎದೆ ಬಡಿದುಕೊಂಡು ತಿರುಗುವಿ? ಕಾಶಿ–ಕೇದಾರ, ಶ್ರೀಶೈಲ, ತಿರುಪತಿ,ಕಂಚಿ, ಮಧುರೆ, ಮುಂತಾಗಿ ತೀರ್ಥಯಾತ್ರೆಗಳ ಕೈಗೊಂಡು ಘಾಸಿಪಡುವಿ? ಮನದಲ್ಲಿರುವ ಕಳಂಕ ಗುಣಂಗಳಾದ ಮೋಸ–ವಂಚನೆ, ಲೋಭ–ಮೋಹ ಮುಂತಾದ ಹೊಲಸು, ಕೊಳೆ ದುರ್ಗುಣಗಳನ್ನು ತೊರೆದು ಅರಿವಿನ ಮೂಲವನ್ನು ಕಾಣಲು ಕಾಶಿಗೇ ಹೋಗಬೇಕೇನು? ಎಂದು ಪ್ರಶ್ನಿಸಿದ್ದಾರೆ ವೇಮನರು. ಪ್ರವಾಸದಿಂದ ದೃಷ್ಟಿ

ವಿಶಾಲವಾಗುತ್ತದೆಯೇನೋ ನಿಜ. ಅಲ್ಲಲ್ಲಿರುವ ಸತ್ಯ ಚಿತ್ರ ಕಂಡು ಹೃದಯ ಮಿಡಿಯುತ್ತದೆ. ಸ್ವಂತದ ಸ್ಥಾನಮಾನದ ಅರಿವೂ ಆಗಿ ಒಣ ಬಿಮ್ಮು ಇಂಗುತ್ತದೆ. ಆದರೆ, ನೀರಿನ ತಂಬಿಗೆಯನ್ನು, ಥಾಲಿಯನ್ನೋ, ಚಿಕ್ಕ ಕುಂಭವನ್ನೋ, ಮೂರ್ತಿ ಚಿತ್ರಗಳನ್ನೋ, ಪ್ರಸಾದ–ಪೊಟ್ಟಣಗಳನ್ನೇ ಹೊತ್ತು ತರುವುದು ಶುದ್ಧ ಮೂರ್ಖತನ. ನಮ್ಮ ದೃಷ್ಟಿಗೆ ಸಂಬಂಧಿಸಿದ್ದು ಯಾತ್ರೆಯ ಪ್ರಭಾವ, ಆದರೆ, ಅಲ್ಲಿರುವ ದೇವರು ತಮ್ಮ ಹೃದಯ ಮಂದಿರದಲ್ಲಿ ಇಲ್ಲವೇ? ನಮ್ಮ ಹೃದಯ ವಿಶಾಲವಾಗಿಸಿಕೊಂಡು ನೋಡಿದರೆ, ಅಲ್ಲಿ ಇರುವ ದೇವರು ಇಲ್ಲಿಯೂ, ಎಲ್ಲೆಲ್ಲಿಯೂ ಇದ್ದಾನೆ ನೋಡಿದರೆ, ಅಲ್ಲಿಇರುವ ದೇವರುಇಲ್ಲಿಯೂ, ಎಲ್ಲೆಲ್ಲಿಯೂ ಇದ್ದಾನೆ ಎಂದುದಾಗಿ ಅರೆಭಕ್ತ ಜನರಿಗೆ ತಿಳುವಳಿಕೆ ನೀಡಿದ್ದಾರೆ ವೇಮನರು.

ಅದೇ ರೀತಿಯಾಗಿ ತಿರುಪತಿ ಬೆಟ್ಟ ಹತ್ತಿ ಬಂದರೆ ಅಜ್ಞಾನ ಭಕ್ತನು ಹರಿದಾಸನಾಗಿ ಬದಲಾಗಲಾರ. ಅಂತೆಯೇ ಶೀಲಗೆಟ್ಟ ಹೆಣ್ಣು ಗಂಡಾಗಲಿ ಕಾಶಿಗೆ ಹೋಗಿ ಬಂದರೇನು ಸುಶೀಲವಂತರಾಗಲಾರರು. ಹಾಗೆಯೇ ಗೋದಾವರಿಯಲ್ಲಿ ಮುಳುಗಿ ಬರುವುದರಿಂದ ನಾಯಿಯು ಸಿಂಹವಾಗಲಾರದು. ಅಂದರೆ ಮಾಡಿದ ಪಾಪಕ್ಕೆ ತೀರ್ಥ ಯಾತ್ರೆಯಲ್ಲಿಯೇ ಪರಿಹಾರವೆಂದು ಹೇಳುವವರನ್ನು ಕೇಳುವವರನ್ನು ನಂಬಿಸುವುದು ನಿಂತಿಲ್ಲವೆಂದೂ ಕನಿಕರ ಪಟ್ಟಿದ್ದಾರೆ ವೇಮನರು! ತಿರುಪತಿ ತಿಮ್ಮಪ್ಪನಿಗೆ ಮುಡಿಕೊಡುವ, ತಲೆಗೂದಲನ್ನು ಅರ್ಪಿಸುವ (ಕೇಶಮುಂಡಣ) ಪದ್ಧತಿಯನ್ನು ಹೀಗಳೆದಿದ್ದುದಲ್ಲದೇ ತೀರ್ಥಯಾತ್ರೆ ಕೈಕೊಂಡವನಿಗೆ ದಣಿವು, ಆಯಾಸ, ಸುಸ್ತು, ಜೀವ ಹಾನಿಯೇ ಹೊರತು ಸುಖದ ಬುಗ್ಗೆಯಲ್ಲವೆಂಬುದನ್ನರಿತುಕೋ ಮನುಜ? ಗಂಟೆ ಹಾಳು, ಗಂಟೂಹಾಳು, ಜೀವನವೂ ಹಾಳಾಗುತ್ತದೆ. ಆದುದರಿಂದ ನೀವಿರುವ ತಾಣದಲ್ಲಿಯೇ ಆ ದೇವನಿರುವಾಗ, ನಿಮ್ಮ ನಿಮ್ಮ ದೇಹದೊಳಿರುವ ಆತ್ಮನೇ ಪರಮಾತ್ಮನ ಸ್ವರೂಪಿಯಾಗಿರುವಾಗ ಮರ್ತ್ಯಕೆ ತೀರ್ಥಯಾತ್ರೆಗೆಂದು ತಿರುಗಿ ತಿರುಗಿ ಹೈರಾಣಾಗುವಿರಿ? ಎಂದುದಾಗಿ ವೇಮನರ ವಾಣಿ ಅಮರವಾಣಿಗಳಂತಿವೆ. ಅರಿತು ಆಚರಿಸುವುದೇ ನಮ್ಮದಾಗಬೇಕಷ್ಟೇ!

❖❖❖

# ಅಧ್ಯಾಯ–ಒಂಭತ್ತು

# ವೇಮಾನಾಲ್ಲಮರ ಸಾಹಿತ್ಯದಲ್ಲಿ ಮೋಕ್ಷ

ಧರ್ಮಾರ್ಥಕಾಮ ಮೋಕ್ಷವ
ಉರ್ಮಿಯಲಿ ಮನದಿ ತಿಳಿದೊಡೆ ಆಮೋದಂ
ನಿರ್ಮಲ ಗತಿ ಕಾಣಬೇಕು
ಕರ್ಮಿಗಳಿಗಿರದು ಮುಕ್ತಿಯು ಅಲ್ಲವೇ ವೇಮಾ?

ನರ ಜನ್ಮವ ತಾನೆತ್ತಿಯೂ
ಪರಮಾತ್ಮನರಿಯದಿರಲು ಪಾಪಾತ್ಮನೂ
ಬರೀ ದುರಿತ ಕರ್ಮಗೆಯ್ದೊಡೆ
ಮರಳಿ ಅಧೋಗತಿ ಪಡೆವನು ಅರಿಯೈ ವೇಮಾ!

ತಾನು ಸಕಲವಿರಲು, ತನ್ನೊಳಗೆ ಸಕಲವು
ತನ್ನ ಒಳಗೆ ಬೆಳಗಿ ತಾನೆ ತಿಳಿದು
ಇಂಥ ಮಾನವನಿಗೆ ಇಹುದು ಒಪ್ಪ ಮುಕ್ತಿ
ವಿಶ್ವದಾಭಿರಾಮ ಕೇಳು ವೇಮ!

– ವೇಮನ

ಸತ್ತ ಬಳಿಕ ಲಿಂಗದೊಳಗಾದೆಹೆವೆಂಬುದು ಎತ್ತಣ ವಾರ್ತೆ?
ಅದು ಹುಸಿ ನೋಡಾ!
ಸಾಯದ ಮುನ್ನ ನಿಜವನರಿದು ಸ್ವಯವಾಗಿ ನಡೆಯಬಲ್ಲಡೆ
ಗುಹೇಶ್ವರ ಲಿಂಗವನರಿದ ಶರಣರು ಒಲಿದರು ಕಾಣಾ
ಸಿದ್ಧರಾಮಯ್ಯ!

ಸತ್ಯ ಶುದ್ಧ ದೇವರ ನಂಬಲರಿಯದೆ
ಮಿಥ್ಯ ದೈವಂಗಳನೆ ನಂಬಿ
ಸತ್ತು ಹೋದರು ನಿತ್ಯವನರಿಯದೆ
ಎತ್ತಲೆಂತರಿಯರು ಗುಹೇಶ್ವರ ಲಿಂಗವನು.

**ಸತ್ಯವೂ ಇಲ್ಲ ಅಸತ್ಯವೂ ಇಲ್ಲ**
**ಸಹಜವೂ ಇಲ್ಲ ಅಸಹಜವೂ ಇಲ್ಲ**
**ನಾನೂ ಇಲ್ಲ ನೀನೂ ಇಲ್ಲ**
**ಇಲ್ಲ ಇಲ್ಲ ಎಂಬುದು ತಾನಿಲ್ಲ**
**ಗುಹೇಶ್ವರನೆಂಬುದು ತಾ ಬಯಲು.**

– ಅಲ್ಲಮಪ್ರಭು

ಭಕ್ತಿಯೋಗದಿಂದಲೇ ಪ್ರಾರಂಭವಾಗುವ ಭಕ್ತನ ಸಾಧನೆ ಮೋಕ್ಷದ ಹಂತ ತಲುಪುವುದರವರೆಗೂ ನಿಲ್ಲಬಾರದು. ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮದಿಂದ ಅರ್ಥ; ಅರ್ಥದಿಂದ ಕಾಮ; ಕಾಮದಿಂದ ಮೋಕ್ಷದತ್ತ ಪ್ರಯಾಣ ಮಾಡುವುದಾಗಿದೆ ಎಂಬುದು ಅಧ್ಯಾತ್ಮದತ್ತ ಸಾಗುವವರ ಸಹಜ ಗುಣಧರ್ಮ ಅಥವಾ ನೀತಿಯ ನಿಯಮ. ಭಕ್ತಿಯುಳ್ಳೆಡೆಗೆ ಪರಮೇಶ್ವರನಿಹನು. ಭಕ್ತಿಯಿಂದಲೇ ಮುಕ್ತಿಯು ಸಾಧ್ಯವು ಎಂದುದಾಗಿ ಹನ್ನೆರಡನೆಯ ಶತಮಾನದ ಶರಣರೂ ಹೇಳಿದ್ದುದು ಕಂಡು ಬಂದ ಸತ್ಯ! ಮೋಕ್ಷ, ಮುಕ್ತಿ, ಕೈವಲ್ಯ, ಸ್ವರ್ಗ, ಕೈಲಾಸ, ಪರಲೋಕ ಪರಂಧಾಮ ಎಂಬಿತ್ಯಾದಿ ಪದಗಳಿಂದ ಕರೆಯುತ್ತ ಬಂದಿರುವರು. ಒಂದರ್ಥದಲ್ಲಿ ನಿಜದ ಅರಿವು. ಸತ್ಯದ ತಿಳುವಳಿಕೆ, ಬೆಳಕಿನ ಕಿರಣ, ಜ್ಯೋತಿಪುಂಜ, ಪರಂಜ್ಯೋತಿ, ಎಂದುದಾಗಿಯೂ ಕರೆಯಲಾಗಿದೆ. ಆದರೆ ವಿಚಾರ ಮಾಡಿದೊಡೆ ಸದ್ಗುಣಗಳನ್ನು ಆಚರಿಸುತ್ತ ನಡೆಯುವುದೇ ಸದ್ಗತಿ, ಪರಲೋಕದತ್ತ ಹೋದರೆ ಸ್ವರ್ಗ ಪ್ರಾಪ್ತವಾಗುವುದೆಂದು ತತ್ತ್ವವೇತ್ತರ ಮಾತು. ಅಂಥವರು ಇಲ್ಲಿಯೂ ಅಲ್ಲಿಯೂ ಎಲ್ಲೆಲ್ಲಿಯೂ ಸಲ್ಲುತ್ತಾರೆಂಬುದು ಸತ್ಯ. ಸತ್ಯವಂತರ ಸಂಘ ಪರಿವಾರದಲ್ಲಿದ್ದುಕೊಂಡು ಸಮಾಜಕ್ಕೆ ದೇಶಕ್ಕೆ, ನಾಡಿಗೂ ನುಡಿಗೂ ಹಿತವನ್ನುಂಟು ಮಾಡುವವನೇ ನಿಜವಾಗಿಯೂ ಸ್ವರ್ಗ ಸುಖವನ್ನು ಹೊಂದಬಲ್ಲ. ಅಂಥವರನ್ನು ಪರಮಾತ್ಮನೂ ಮೆಚ್ಚಿಕೊಂಡು ಗಣ ಪದವಿಯನ್ನಿತ್ತುದು ಸಾಕಷ್ಟು ಕಥೆ ಉಪಕಥೆಗಳುಂಟು, ದೃಷ್ಟಾಂತಗಳುಂಟು! ಆದುದರಿಂದ ಮೋಕ್ಷ ಬೇಕೆನ್ನುವವರು ಅನನ್ಯ ಭಕ್ತಿಯಿಂದ ದೇವರ ನಾಮ ಸ್ಮರಣೆ ಪೂಜೆ, ಅರ್ಚನೆ, ಸ್ತುತಿ ಮಾಡಬೇಕೆಂಬುದರ ಕುರಿತು ಇಲ್ಲಿಯವರೆಗೂ ಚರ್ಚಿಸಲಾಯಿತು.

ಭೂ–ಗಗನ ಮಧ್ಯೆ ಪರಮಾತ್ಮನೇ ರಕ್ಷಿಸುವಾಗ, ನಾವು–ನೀವೆಲ್ಲರೂ ಉಪಕರಣ ಮಾತ್ರ. ನಾವೆಲ್ಲರೂ ಸರಿಸಮ ಭಾವದಿಂದ ಬದುಕುವುದು. ಸಮಾನತೆಯ ಸೌಮ್ಯ ವಿನಯ–ಸದ್ಗುಣಗಳೇ ಪರಮಾತ್ಮನು ಅನುಸರಿಸಿದ ದಿವ್ಯ ಆಭರಗಣಗಳು. ಅವುಗಳನ್ನು ಧರಿಸಿಕೊಂಡು ನಡೆಯುವುದೇ ನಮ್ಮೆಲ್ಲರ ಕರ್ತವ್ಯವಾದರೆ ಶ್ರೇಯಸ್ಕರ. ಅಂತೆಯೇ ತಿರುವಳ್ಳುವರ ಮಹಾಕವಿಯು ಹೇಳಿದ್ದೇನೆಂದರೆ – ಧರ್ಮ, ಅರ್ಥ, ಕಾಮಗಳೆಂಬ

ಮೂರೂ ಪುರುಷಾರ್ಥಗಳನ್ನು ಸತ್ಯ, ಪ್ರಾಮಾಣಿಕತೆ, ನಿಷ್ಠೆ, ವ್ರತದ ನಡೆ–ನುಡಿಯಲ್ಲಿ ನಡೆದವರೂ, ಈ ಮೂರರಲ್ಲಿಯೂ ಯಶಸ್ವೀ ಬದುಕನ್ನು ಸಾಗಿಸಿದವರೇ ಸ್ವರ್ಗ ಅಥವಾ ಮೋಕ್ಷ ಹೊಂದುತ್ತಾರೆಯೆಂದು ಹೇಳಿದ್ದಾರೆ. ಅವರು ಸನ್ಯಾಸಿಯಾಗಿರಲಿ, ಯೋಗಿಯಾಗಿರಲಿ, ತ್ಯಾಗಿಯಾಗಿರಲಿ, ರಾಜ ಮಹಾರಾಜನಾಗಿರಲಿ, ಗೃಹಸ್ಥನಾಗಿರಲಿ, ಯಾರೇ ಆಗಿರಲಿ ಅವರು ಮೋಕ್ಷ ಹೊಂದುತ್ತಾರೆಯೆಂದುದಾಗಿ ತಿರುವಳ್ಳವರರು ಹೇಳಿದ್ದಾರೆ. ನೀತಿ–ವ್ರತದ ನಿಯಮದಡಿಯಲ್ಲಿ ಸಾಗಿದವನಿಗಿದು ದೊರಕೊಳ್ಳುವುದೆಂದು ಹೇಳಿದ ಇವರ ಮಾತನ್ನು ತಳ್ಳಿ ಹಾಕುವಂತಿಲ್ಲ. ಅದರಂತೆ, ಆಚರಿಸಿ ತೋರಿದ ಆಚಾರ್ಯ ಪುರುಷರವರು, ಇದೇ ಮಾತನ್ನು ಬಸವಾದಿ ಶಿವಶರಣರೂ ಆಚರಿಸಿ ತೋರಿದ ಆಚಾರವಂತರು. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ ಎಂದು ಹೇಳಿರುವುದು ಇದೇ ಅರ್ಥದಲ್ಲಿ ಅಂದರೆ ದೇವಲೋಕ–ಭೂಲೋಕ (ಮರ್ತ್ಯ–ಗಳೆಂಬಿವು ಬೇರೆಲ್ಲಿಯೂ ಇಲ್ಲ ಎಂದು ಹೇಳಿರುವುದು ಇದೇ ಕಾರಣಕ್ಕಾಗಿ. "ಅಯ್ಯಾ ಎಂದರೆ ಸ್ವರ್ಗ – ಎಲ್ಲವೋ ಎಂದರೆ ನರಕ' ಎಂಬ ಪರಿಕಲ್ಪನೆಯಲ್ಲಿ ಶರಣರು ಹೇಳಿರುವುದನ್ನು ನಾವಿಂದು ನೆನಪಿಸಿಕೊಳ್ಳಬೇಕು. ಇಂಥ ಆಶಯಗಳನ್ನೇ ತಿರುವಳ್ಳುವರ, ವೇಮನ ಅಲ್ಲಮ, ಸರ್ವಜ್ಞ ಕನಕ–ಪುರಂದರ ಮುಂತಾದ ಸಂತರು ಶರಣರು ಹೇಳಿದ್ದುದು ಇದೇ ಅರ್ಥದಲ್ಲಿಯೇ!

ಧರ್ಮ–ಅರ್ಥ–ಕಾಮಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಸಮರ್ಪಕ ಮಾಡುತ್ತ ಹೋದವನ ಬಾಳು ಬಂಗಾರದಷ್ಟು ಪರಿಶುದ್ಧವಾಗುತ್ತದೆ. ಹೆಚ್ಚು–ಕಡಿಮೆ ಮಾಡಿಕೊಂಡು ಬಾಳುವವನು ನರಕ ಸದೃಶ ಯಾತನೆ ಅನುಭವಿಸಬೇಕಾಗುತ್ತದೆ ಎಂಬ ಎಚ್ಚರಿಕೆ ನುಡಿಗಳನ್ನು ತಾವು ಆಡಿ ತೋರಿದ ನುಡಿಗಳೇ ನಮಗಿಂದು ಮಂತ್ರಗಳಾಗಿವೆ. ಅವುಗಳನ್ನು ಕೇವಲ ಮಂತ್ರಗಳಂತೆ ಪಠಿಸಿದರೆ ಆಗದು. ಪಾಲನೆಯಲ್ಲಿ ತಂದಾಗ ಮಾತ್ರ ಅದರ ಫಲವನ್ನು ಸವಿಯಲು ಸಾಧ್ಯ. ಹಿತಾಹಿತಗಳ ವಿವೇಚನಾ ಶಕ್ತಿಯಿರುವುದು ಮಾನವನಿಗೆ ಮಾತ್ರ ಮತ್ತು ಸತ್ಯ, ನೀತಿ, ಪ್ರಾಮಾಣಿಕತೆ, ಸದ್ಗುಣ, ಜ್ಞಾನ, ವೈರಾಗ್ಯ, ತ್ಯಾಗ – ಈ ಮುಂತಾದ ಒಳ್ಳೆಯ ಗುಣಗಳು ಎಲ್ಲ ಕಾಲ–ದೇಶಗಳಲ್ಲಿಯೂ ಒಂದೇ ತೆರನಾಗಿರುವುದು. ಆದುದರಿಂದ ಅಧ್ಯಾತ್ಮ ವಿದ್ಯೆಯ ಪ್ರಭಾವದ ಪ್ರಥಮ ಪಾಠಗಳಾದ ನೀತಿಯ ನಿಯಮಗಳನ್ನೇ ಪಾಲಿಸದಿದ್ದರೆ ಅಧ್ಯಾತ್ಮದ, ಮೋಕ್ಷ ವಿದ್ಯೆ ಅದ್ಹೇಗೆ ಪ್ರಾಪ್ತವಾದೀತು? ಅಧ್ಯಾತ್ಮ ಕ್ಷೇತ್ರದಲ್ಲಿ ಬುದ್ಧಿ ಬೆಳವಣಿಗೆಯ ಜೊತೆಗೆ ನೈತಿಕ ಬೆಳವಣಿಗೆಯ ಅವಶ್ಯಕತೆಯಿದೆ. ಅದನ್ನು ಕ್ರಮೇಣವಾಗಿ ಸಾಧಿಸಬಹುದು. ಆದರೆ, ಅದು ಅತ್ಯಗತ್ಯ ಕ್ರಮೇಣವಾಗಿ ನೀತಿ ಪಾಲನೆಯಿಂದ ವೈರಾಗ್ಯ ಬೆಳೆಯುತ್ತ ಹೋಗುವುದು. ನಂತರ ಆತ್ಮ ನಿರೀಕ್ಷಣೆಯು ಸುಲಭ ಸಾಧ್ಯವಾಗುವುದು. ಇದು ಮಾನವನ ಪುರುಷಾರ್ಥವಾದ ತೂರ್ಯಾವಸ್ಥೆಯನ್ನು

ಹೊಂದುವುದರ ಮುಖಾಂತರ ಸ್ವರೂಪಾವ ಸ್ಥಿತಿಯನ್ನು ಹೊಂದುವಂತೆ ಮಾಡುವುದು ಎಂದಿದ್ದಾರೆ ವಿರಾಗಿಗಳು.

ನಾವಿಂದು ಧರ್ಮ–ಅರ್ಥ–ಕಾಮಗಳನ್ನು ತೃಪ್ತಿಪಡಿಸುವಲ್ಲಿಯೇ ದೇಹವನ್ನು ಕಳೆದುಕೊಳ್ಳುತ್ತಲಿದ್ದೇವೆ. ಆದರೆ, ಧರ್ಮ ನೀತಿಯಿಂದ ನಡೆಯುವವನು ಕಾಮನನ್ನೂ ತಡೆಯುವ, ತ್ಯಜಿಸುವ ಶಕ್ತಿ ಗಳಿಸಿಕೊಳ್ಳುವುದು ಅಗತ್ಯ. ನಮಗೆ ಯಾವುದರ ಬಗೆಗೆ ಉತ್ಕಟವಾದ ಇಚ್ಛೆ ಇದೆಯೋ ಅದು ಈಡೇರುವುದು. ವೈರಾಗ್ಯ ತಾಳುವುದೆಂದರೇನು ಅದೇನು ಅಷ್ಟು ಸುಲಭವೂ, ಹಗುರವಾದುದಲ್ಲ. ಯಾವುದಕ್ಕೂ ಉತ್ಕಟವಾದ ಇಚ್ಛೆಯೇ ಮುಖ್ಯ! ಮನಸ್ಸು ಮಾಡಿದರೆ ಮೋಕ್ಷವನ್ನು ಹೊಂದಲು ಸಾಧ್ಯ! ಅದರತ್ತ ಗಮನ ಹರಿಸುವುದೇ ಮುಖ್ಯ ವಿಷಯಾದಿಗಳನ್ನು ಮನಸ್ಸಿನಲ್ಲಿ ಅವು ಅಹಿತವೆಂದು ತಿಳಿದು ಅವುಗಳ ಮೋಹವನ್ನು ವಿಷವತ್ ತ್ಯಾಗ ಮಾಡಬೇಕು. ಶಾಶ್ವತ ಸುಖ ಹೊಂದುವುದೇ ನಮ್ಮ ಆ ಜನ್ಮ ಸಿದ್ಧ ಹಕ್ಕು ಎಂದು ಭಾವಿಸಿ ಸನ್ನದ್ಧರಾಗಬೇಕು. It is the birth right of every soul ಎಂಬಂತೆ. ಇದಕ್ಕೆ ಅಂತಃಕರಣ ಪರಿಪಕ್ವತೆ ಮಾತ್ರ ಅತ್ಯಗತ್ಯ! ಈ ಅಂತಃಕರಣ ಪರಿಪಕ್ವತೆಯ ಕಾರ್ಯ ಕೈಕೊಳ್ಳಲು ಹೊರಗಿನ ಯಾವ ವಿಷಯವೂ ಅಡ್ಡಿಯಾಗಬಾರದು. ಇಹ –ಪರಗಳ ಆಸಕ್ತಿ ಹೋಗಿ ಪೂರ್ಣ ವೈರಾಗ್ಯ ಬರಬೇಕು. ಶಾಶ್ವತ ಸುಖ (ಮೋಕ್ಷ) ಹೊಂದಲು ಅರ್ಹತೆಯೆಂದರೆ ಉತ್ಕಟ ಇಚ್ಛೆ, ದೃಢ ನಿರ್ಧಾರ, ವಿವೇಕ, ವೈರಾಗ್ಯ ಮತ್ತು ಸತತಾಭ್ಯಾಸದಿಂದ ರಾಗ–ದ್ವೇಷಾದಿ ಮಲಿನತ್ವವನ್ನು ಕಳೆದುಕೊಂಡು ಅತಿ ಪರಿಶುದ್ಧವಾದ ಮನಸ್ಸು ಬೇಕಾಗುತ್ತದೆ. ನಿರ್ಮಲ ಶುದ್ಧ–ಪರಿಶುದ್ಧವಾದ ಮನಸ್ಸೇ ಮೋಕ್ಷ ಸಂಪಾದನೆಗೆ ಮೂಲ ಕಾರಣ ಎಂದಿದ್ದಾರೆ ಅನುಭಾವಿಗಳು. ಬಸವಣ್ಣನವರೆಂದಂತೆ 'ಕೂಡಲಸಂಗಮದೇವನೊಲಿಸ ಬಂದ ಪ್ರಸಾದ ಕಾಯವಿದನು ಕೆಡಿಸಲಾಗದು' ಎಂಬುದನ್ನು ಮಾನವನು ಅರಿತುಕೊಳ್ಳಬೇಕು. ಈ ದೇಹವನ್ನು ಅನುಷ್ಠಾನಗೊಳಿಸಿ ಯೋಗ ಸಾಧನೆ ಮಾಡುವುದು. ಷಟ್‌ಸ್ಥಲ ಆಚರಣೆಯನ್ನು ಮಾಡುತ್ತ ಮೋಕ್ಷ ಹೊಂದುವುದೇ ಮಾನವನ ಗುರಿಯಾಗಬೇಕೆಂದು ಹೇಳಿದ್ದಾರೆ. ಲಿಂಗಾಂಗ ಸಾಮರಸ್ಯ ಹೊಂದುವುದೇ ಶರಣರ ಸಿದ್ಧಾಂತ! ಅಂದರೆ ಮೋಕ್ಷ ಹೊಂದಲು ಬೇಕಾಗುವ ಮಾರ್ಗಸೂಚಿಗಳನ್ನು ಅನುಸರಿಸುವುದೆಂದರ್ಥ, ಶರಣ ಸತಿ–ಲಿಂಗಪತಿ' ಭಾವ ತಾಳುವುದು. ಅಂಥವನು ಷಟ್‌ಸ್ಥಲದ ಭಕ್ತ–ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ ಈ ಐದೂ ಸ್ಥಲ (ತತ್ತ್ವ)ಗಳನ್ನು ತನ್ನಲ್ಲಿ ಅಳವಡಿಸಿಕೊಂಡೂ ತನ್ನ ಕರ್ತವ್ಯವನ್ನು ನಿರ್ವಹಿಸಿದ ಅನುಭಾವಿ ಎಂದೆನ್ನಬಹುದು. ಅದ್ವೇಗೆಂದರೆ – "ಘೃತ ಘೃತವ ಬೆರೆತಂತೆ, ಕ್ಷೀರ–ಕ್ಷೀರವ ಬೆರಸಿದಂತೆ, ತೈಲ–ತೈಲವ ಬೆರಸಿದಂತೆ, ಜ್ಯೋತಿ–ಜ್ಯೋತಿಯ ಬೆರಸಿದಂತೆ, ಬಯಲು–ಬಯಲು

ಬೆರಸಿದಂತೆ" ಪ್ರಾಣ–ಪ್ರಾಣ ಸಂಯೋಗವಾಗಿ ಲಿಂಗ ಸಮರಸವಾಗಿರುತ್ತದೆ. ಇದಕ್ಕೆ ಬಸವಣ್ಣನವರ ಒಂದು ವಚನದ ದೃಷ್ಟಾಂತದೊಂದಿಗೆ ಸ್ಪಷ್ಟಪಡಿಸಬಹುದು "ಭಕ್ತಿಯೆಂಬ ಪೃಥ್ವಿಯ ಮೇಲೆ... ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೇ ಬೇಕೆಂದು ಎತ್ತಿಕೊಂಡ" ಎನ್ನುವ ಮಾತಿನಲ್ಲಿಯೂ ಶಿವನ ಹೃದಯಕ್ಕೆ ಅರ್ಪಿತವಾಗಿ, ಅಲ್ಲಿ ಸಾಮರಸ್ಯವನ್ನು ಪಡೆದು ಹಣ್ಣಾಗಿ ಪರಿಣಮಿಸಿರುವುದು ಕಂಡು ಬರುತ್ತದೆ. ಇದು ಒಂದು ಬಗೆಯ ನಿವೃತ್ತಿ ಮಾರ್ಗ, ತನು–ಮನ–ಪ್ರಾಣ–ಭಾವಗಳು ನಿವೃತ್ತಿಯಾದಂತೆಲ್ಲ ಗುರು–ಲಿಂಗ–ಜಂಗಮಗಳೂ ಒಂದಾಗಿ ತನ್ನಲ್ಲಿ ಐಕ್ಯವಾಗುತ್ತವೆ ಎಂಬುದೇ ಮೋಕ್ಷ ಸಂಪಾದನೆಯಾಗುತ್ತದೆ.

ಹುಟ್ಟು–ಸಾವು, ಜೀವಾತ್ಮ–ಪರಮಾತ್ಮ, ಪಂಚಭೂತ, ಸೃಷ್ಟಿ, ಸ್ಥಿತಿ, ಲಯ, ಶಿವಯೋಗ, ಶಿವೋಹಂ ತತ್ತ್ವಗಳೇನೂ ಸುಳ್ಳಲ್ಲ. ಇವುಗಳಿಲ್ಲದೇ ಬದುಕಿಲ್ಲ, ಸ್ವಾರ್ಥವಾದ ಬದುಕು ನಿರರ್ಥಕ. ಅದು ಹಾವು ಏಣಿಯಾಟವಿದ್ದಂತೆ! ಯೋಗಿಗಳು, ತಪಸ್ವಿಗಳು ಯೋಗಾನುಸಂಧಾನ ಮಾಡಿದುದರ ಫಲವಾಗಿ ಅವರ ಮನದ ಕೊನೆಯ ಮೊನೆಯ ಮೇಲೆ ಹೊಳೆದಂಥ ದರ್ಶನವಿದು. ಬರೀ ಮಾತಿನ ಮೋಡಿಯಲ್ಲ, ಅಹಂಕಾರವಳಿದು, ನಿರಹಂಕಾರ ಸಾಧನೆ ಮಾಡಿ, ನಿಜದ ನೆಲೆಯನ್ನು ಕಂಡಾಗ ಉಕ್ಕಿ ಬಂದ ಪರಮಾನಂದದ ಉದ್ಗಾರವಿದು, ಐಕ್ಯಸ್ಥಲ ಮುಟ್ಟಿದವರ ಅನುಭಾವವಿದು, ಐಕ್ಯಸ್ಥಲ ಶಿವ–ಜೀವರ ಐಕ್ಯಜೀವ ಶಿವನಲ್ಲಿ ಒಂದಾಗುವುದು, ಸತ್ತ ಮೇಲೆ ಅನುಭವಿಸುವ ಸ್ಥಿತಿಯೆಂದು ಕೆಲವರ ಗ್ರಹಿಕೆಯಾಗಿದೆ. ಆದರೆ, ಅದು ಬದುಕಿದ್ದಾಗ ಸಾಧಿಸಬಹುದಾದ ಪರಮೋನ್ನತ ಸ್ಥಿತಿಯದು. ಜಿಜ್ಞಾಸೆಯಿಂದ ಯೋಗ ಸಾಧನೆ ಮಾಡಿ ಸಿದ್ಧಿ ಪಡೆದ ಯೋಗಿಗಳಿಗೆ ಸಿಗುವುದೇ ಐಕ್ಯ ಸ್ಥಲದ ನೆಲೆಬೆಲೆ, ಅದೊಂದು ಸಚ್ಚಿದಾನಂದದ ಸ್ಥಿತಿ. ಆಚರಿಸಿ ಅನುಭವಿಸುವ ಸ್ಥಿತಿ. ಈ ಐಕ್ಯಸ್ಥಲ ಮುಟ್ಟಿದವನು ಪ್ರಾಪಂಚಿಕನಾಗಿದ್ದರೂ ವಿರಕ್ತನೇ ಆಗುವನು. ಅದ್ಹೇಗೆಂದರೆ –

**ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರುವ ನೋಡಾ**
**ಬೆಳಗಿಗೆ ಬೆಳಗು ಸಿಂಹಾಸನವಾಗಿ**
**ಕೂಡಲ ಸಂಗಯ್ಯ ತಾನೇ ಬಲ್ಲ!**

ಈ ವಚನದಂತೆ ಅನುಭಾವದ ನುಡಿಯೊಂದಿಗೆ ನಡದು ತೋರಿದ ಮಹಾನುಭಾವರು, ಮಹಾತ್ಮರು. ಅವರ ಹಾದಿಯಲ್ಲಿ ಶ್ರಮಿಸಿ ಯೋಗಿ–ಮಹಾಯೋಗಿಗಳಾದವರು ವೇಮನಾಲ್ಲಮರು.

ಐಕ್ಯದ ಸ್ಥಿತಿ ಅಥವಾ ಮೋಕ್ಷ ಎಲ್ಲರಿಗೂ ಒಲಿಯುವ ನಿಧಿಯಲ್ಲ. ಅದು ಸಾಧಕರ ಸಿದ್ಧಿಯ ಸ್ಥಿತಿ, ಷಟ್‌ಸ್ಥಲದಲ್ಲಿರುವ ಕೊನೆಯ ಅವಸ್ಥೆ. ಯೋಗಾಂಗದಲ್ಲಿ

ಎರಡನೆಯದೇ ಐಕ್ಯ! ಐಕ್ಯನಿಗೆ ಆತ್ಮನೇ ಅಂಗ. ಆತ್ಮಾನಂಗನಾದ ಐಕ್ಯನು ಪರಮಾತ್ಮನೊಡನೆ ಸಮರಸವಾಗುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಆತ್ಮ ಬೇರಿಲ್ಲ, ದೂರು ಇಲ್ಲ. ಆತ್ಮ ತಾನೇ! ತಾನೇ ತನ್ನನ್ನು ಅರಿತಿಲ್ಲ. ಅನುಭವ ಪಡೆದಿಲ್ಲ. ಭಾಗ್ಯ ಎಂಬುದು ತನ್ನರಿವಿಗಿಂತ ಬೇರಿಲ್ಲ. ತನ್ನೊಳಗೆ ತಾನಿರುವುದಕ್ಕಿಂತ ಬೇರೆ ಇಲ್ಲವೇ ಇಲ್ಲ ಸೌಖ್ಯವೆಂಬುದು. ತನ್ನ ಗಳಿಕೆಯೇ ಗಳಿಕೆ. ಆ ಗಳಿಕೆಯಿಂದ ಮನೆ ತುಂಬುವುದಿಲ್ಲ; ಮನ ತುಂಬುತ್ತದೆ. ಅಂತೆಯೇ ಅದಕ್ಕೆ ಶರಣರು ಶೂನ್ಯ ಸಂಪಾದನೆಯೆಂದರು. ಸರ್ವಾತ್ಮ ಭಾವದಿಂದ ಸತ್ಯದತ್ತ ಸಾಗುವಿಕೆ, ಸಮದರ್ಶಿಯಾಗಿ ಬಾಳುವಿಕೆ. ಇದುವೇ ಶಾಶ್ವತ ಸತ್ಯ, ಮೋಕ್ಷ ಅಥವಾ ಕೈವಲ್ಯದ ನಿಧಿ–

**ಏನಾದಡೆಯೂ ಸಾಧಿಸಬಹುದು**
**ಮತ್ತೇನಾದಡೆಯೂ ಸಾಧಿಸಬಹುದಯ್ಯಾ**
**ತಾನಾರೆಂಬುದ ಸಾಧಿಸಬಾರದು**
**ಕೂಡಲಸಂಗಮದೇವರ ಕರುಣವುಳ್ಳಂಗಲ್ಲದೇ**

ಸದ್ಗುರುವಿನ ಕೃಪೆಯಿಲ್ಲದೆ ತಾನಾರೆಂಬುದನ್ನು ಸಾಧಿಸಲು ಆಗಲಾರದು ಅದನ್ನು ಸಾಧಿಸಲಾಗದಿದ್ದರೆ ಮಾನವನಾಗಿ ಹುಟ್ಟಿದ್ದು ಸಾರ್ಥಕವಾಗುವುದಿಲ್ಲ. ಸದ್ಗುಣಗಳೇ ಮಾನವನಿಗಿರುವ ದಿವ್ಯಾಭರಣಗಳು, ಸದ್ಗುಣಗಳಿಲ್ಲದೇಯಿದ್ದರೆ ಪುರುಷಾರ್ಥಕ್ಕೆ ಅರ್ಥ ಬರಲಾರದು. ಪೂರ್ವಜನ್ಮದ ಪುಣ್ಯದ ಫಲದಿಂದ ಅರಿವಿನ ಈ ಜನ್ಮವನ್ನು ಪಡೆದೂ ಪರಮಾತ್ಮನ ಜ್ಞಾನವನ್ನು ಸಂಪಾದಿಸದಿದ್ದರೆ ಮಾನವನಾಗಿ ಹುಟ್ಟಿದ್ದೂ ಸಾರ್ಥಕವಾದುದಲ್ಲ. ಆದುದರಿಂದ ಮಹಾಯೋಗಿದ್ವಯರಾದ ವೇಮನಾಲ್ಲಮರ ಪ್ರತಿಪಾದಿಸಿ ಪದ–ಪದ್ಯ–ವಚನಗಳಲ್ಲಿರುವ ಐಕ್ಯ ಸುಖದ, ಮೋಕ್ಷ ಸುಖದ ಅನುಸಂಧಾನವನ್ನು ಗಮನಿಸಿ ತಿಳಿಯಪಡಿಸಲು ಪ್ರಯತ್ನಿಸಲಾಗಿದೆ.

**ವೇಮನರು ಹೇಳುವ ಮೋಕ್ಷ ಮಾರ್ಗ:**

ಮೋಕ್ಷ–ಪರಲೋಕವೆಂಬುದು ಬೇರಿಲ್ಲ ಕಾಣಿರೋ ಎಂಬಂತೆ!

ಸದ್ಭಕ್ತನದವನು, ಭಕ್ತಿಯ ಪಾರಮ್ಯದಲ್ಲಿ ಮಿಂದೇಳುವಲ್ಲಿ ಶ್ರದ್ಧೆ ಸದ್ಗುಣಗಳನ್ನು ಹೊಂದಿದವನಾಗಿರಬೇಕು. ಉತ್ತಮ ಸಾಧಕನಾಗುವವನು ಯೋಗಿಯಾಗಿರಬಹುದು, ಗೃಹಸ್ಥನಾಗಿರಬಹುದು, ಸನ್ಯಾಸಿಯಾಗಿರಬಹುದು. ಈಗಾಗಲೇ ಇವರಿಬ್ಬರಲ್ಲಿಯೂ (ವೇಮನಾಲ್ಲಮರ ಸಾಹಿತ್ಯ) ಚರ್ಚಿತವಾಗಿರುವಂತೆ ಜೀವನದ ಪರಮ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮಗಳನ್ನು ಮತ್ತು ಮೋಕ್ಷವೆಂಬ ಅಪವರ್ಗವನ್ನು ಮನದಲ್ಲಿ ತಿಳಿಯಬೇಕು, ನಿರ್ಮಲ ಮತಿಯಲ್ಲಿ ಇವು ಆಚರಿಸುವಂತಹವುಗಳಾಗಿವೆ. ಮೋಕ್ಷ ಗುರು ಯೋಗವನ್ನು ಬೋಧಿಸಿ ಮುಕ್ತ

ಮಾಡುತ್ತಾನೆ. ಚಿತ್ತ ಶುದ್ಧವಾದ ಬಳಿಕ ಶಿವನ ಪೂಜೆಗೆ ತೊಡಗಬಹುದು. ಆತ್ಮ ಶುದ್ಧವಾದ ಕ್ರಿಯೆಯಿದು. ಅದಕ್ಕೆ ಶುಚಿಯಾದ ಮನಸ್ಸು ಮುಖ್ಯವಾಗಿಬೇಕು. ಮೂಢರಿಗೆ, ಮೂರ್ಖರಿಗಿದು ಹೊಳೆಯದು, ತಿಳಿಯದು. ಸದ್ಗುಣಗಳ ಖಣಿಯಂತಿರುವ ಜನರು ಜ್ಞಾನವನ್ನು ಗ್ರಹಿಸಿ, ಜೀವನಕ್ಕೆ ಹೊಂದಿಸಿಕೊಳ್ಳುವರು. ಅಂಥವರೇ ಮುಕ್ತಿಗೆ ಅರ್ಹರಾಗುತ್ತಾರೆ ಎಂದಿದ್ದಾರೆ ವೇಮನರು. ಜಗತ್ತಿನಲ್ಲಿ ವಿವಿಧ ಬಗೆಯ ಜನರು ತುಂಬಿರುತ್ತಾರೆ. ತತ್ತ್ವ ಹೀನರು ಎಲ್ಲೆಲ್ಲಿಯೂ ಕಾಣಸಿಗುತ್ತಾರೆ. ಆದರೆ, ತತ್ತ್ವ ತಿಳಿದವರು ಸಿಗುವುದು ತೀರ ವಿರಳ. ವೇಮನರ ಕೆಲವು ಪದ್ಯಗಳಲ್ಲಿ ಹೇಳಿದ್ದು ಹೀಗೆ–

**ಧರ್ಮಾರ್ಥಕಾಮ ಮೋಕ್ಷವ**
**ಊರ್ಮಿಯಲಿ ಮನದಿ ತಿಳಿದೊಡೆ ಆಮೋದಂ,**
**ನಿರ್ಮಲ ಗತಿ ಕಾಣಬೇಕು.**
**ಕರ್ಮಿಗಳಿಗಿರದು ಮುಕ್ತಿಯು ಅಲ್ಲವೇ ವೇಮಾ?**

ಪ್ರಾರಂಭದಲ್ಲಿ, ಮೇಲ್ಕಾಣಿಸಿದಂತೆ ಕರ್ಮಿಗಳಿಗೆ, ಮಡ್ಡರಿಗೆ ಯೋಗ ಫಲಿಸಲಾರದು, ಅವನಿ ಪರಮಯೋಗಿ ಅರಿತಿಹನು ಎಂದಿದ್ದಾರೆ. ಅದಕ್ಕೆ ಮನೋವಾಕ್ ಕಾಯ ಶುದ್ಧತೆಯಿರಬೇಕು, ಮನೋಶುದ್ಧಿಗೆ ವಿಷಯಗಳೇ ಆಹಾರ. ವಿಷಯ ದೂರವಾಗಿರುವುದೇ ಮನೋಶುದ್ಧಿ. ಶುದ್ಧಿಯೆಂದರೆ ಶೋಧಿಸುವುದು, ಯಾವುದು ಕೆಡಕು, ಯಾವುದು ಒಳಿತೆಂಬುದರ ಹುಡುಕಾಟ!

ದುರ್ಗುಣಗಳನ್ನು ಅಳಿಸಿ ಹಾಕುವುದು, ಒಳಿತಾದುದನ್ನೇ ವಿಚಾರಿಸುವುದು ಮತ್ತು ಸತ್ಕಾರ್ಯಗಳನ್ನೆಸಗುವುದಾಗಿದೆ. ಅಂದರೆ ಅಗತ್ಯ ವಿಷಯಗಳನ್ನು ಹೊರತುಪಡಿಸಿ ಉಳಿದವುಗಳನ್ನು ಮನದಲ್ಲಿಯೂ ಕೂಡ ನೆನೆಯದಿರುವುದೇ ಮನೋಶುದ್ಧಿ ಅಂದರೆ ಮನಸ್ಸಿನ ಬಂಧ ಮತ್ತು ಮೋಕ್ಷಕ್ಕೆ ಕಾರಣವೇ ಮನಸ್ಸು, ಅಂತೆಯೇ ಮನುಷ್ಯ ಮನಸ್ಸು ಮಾಡಿದರೆ ಮಹಾದೇವನಾಗುತ್ತಾನೆ ಎನ್ನಲಾಗಿದೆ. ವಿವೇಕದ ಹಾದಿ ಹಿಡಿಯಬೇಕು. ಸಂತ–ಮಹಂತರ ಹೇಳಿಕೆಗಳನ್ನು ಅನುಸರಿಸಿ ಸಾಧಕನಾಗಬೇಕು. ಪವಿತ್ರ ಭಾವನೆ ತಾಳಬೇಕು. ವೇಮನರು ಹೇಳುವಂತೆ–

**ಆಸೆಗಿಂತ ದುಃಖ ಅತಿಶಯವಾಗಿಲ್ಲ**
**ಸಮೀಕ್ಷಿಸದೆ ಇರಲು ಸುಖವೇ ಇಲ್ಲ**
**ಮನಸುನಿಲಿಸದಿರಲು ಮತ್ತೆ ಮುಕ್ತಿಯಿಲ್ಲ**
**ವಿಶ್ವದಾಭಿರಾಮ ಕೇಳು ವೇಮ**

**ಅರಿಷಡ್ವರ್ಗಗಳಿಂದ ನರರು**
**ಎಲ್ಲರು ಸಿಕ್ಕು ಸೊರಗಿ ನಯಗತಿತೊರೆದರ್**
**ಅರಿಯದೇ ಹೋದರು ತತ್ತ್ವವನು**
**ಅರಿತುಕೊಳರವರಿನಿತು ಅದರೊಳು ವೇಮಾ**

**ಆರುಗಳನು ಕೊಂಡು, ಹರನ ಮೇಲೆ ಧ್ಯಾನ**
**ನಿಲಿಸಿ ನಿಶ್ಚಲವಿದೆ ನಿಕಟವಾತ್ಮ,**
**ಅವುಗಳನೊಂದುಗೆಯ್ಯೆ, ಆತನಪ್ಪ ಯೋಗಿ**
**ವಿಶ್ವದಾಭಿರಾಮ ಕೇಳುವೇಮ.**

ಮನೋಶುದ್ಧಿಗೆ ಇವು ಆತಂಕ ಮಾಡುವಂತಹವು! ಆದುದರಿಂದ ಶ್ರೀಗುರುವಿನ ಉಪದೇಶಗಳನ್ನಾಲಿಸಲು ಇಂಥ ಅವಗುಣಗಳನ್ನು ತೊರೆಯಬೇಕು. ಆರುಗಳನ್ನು ಕೊಂದು ಹರನ ಧ್ಯಾನ ಮಾಡುವಲ್ಲಿಯೇ ಸುಖವಿದೆಯೆಂಬುದನ್ನು ಅರಿತುಕೊಂಡು ನಡೆಯೆಂದು ಮೇಲಿನ ಮೂರೂ ಪದ್ಯಗಳಲ್ಲಿ ಹೇಳಿದ ನೀತಿ ಪಾಠಗಳಂತಿವೆ. ಬುದ್ಧದೇವನೂ ಇದೇ ಮಾತನ್ನು ಹೇಳೀದ. ಆಸೆಯೇ ದುಃಖಕ್ಕೆ ಮೂಲ ಕಾರಣವೆಂದು ಆಸೆಯನಳಿದು ಈಶನ ದಾಸರಾಗಿರೆಂದು ಶರಣರೂ ಹೇಳಿದ್ದಾರೆ. ಆದುದರಿಂದ ಮೋಕ್ಷ ಮಾರ್ಗಾನುಯಾಯಿಗಳಿಗಿವು ಮಾರ್ಗದರ್ಶಿಕೆಗಳಂತಿವೆ.

ಗುರು ಮಾರ್ಗದರ್ಶನದ ಮೂಲಕ ಆತ್ಮ ತತ್ತ್ವವನರಿತು ನಡೆಯೆಂದು ಬೋಧಿಸಿದ್ದಿದೆ, ಆತ್ಮ ವಸ್ತು ಹೃದಯದಲ್ಲಿರುವುದು, ಬೇರೆ ಕಡೆಗೆ ಹುಡುಕಿದರೆ ಅದೆಂತು ಸಿಗಬಲ್ಲದು? ಭವ ಸಾಗರವು ಅಪಾರ, ಅದನ್ನು ಈಜಿ ದಾಟುವುದು. ಗುರು ಚಕ್ರದಲ್ಲಿ ಧ್ಯಾನಿಸಿ, ತನ್ಮಯತೆ ಹೊಂದಿ ಮನದ ಸ್ಥಿರತೆಯನ್ನು ಕಾಣುವುದೇ ಮುಖ್ಯ ದೃಷ್ಟಿಯು ಪರಿಪೂರ್ಣವಾಗಬೇಕು. ಶುದ್ಧವಾಗಬೇಕು; ಸುಸ್ಥಿರವಾಗಬೇಕು. ಆಗ ಮಾತ್ರ ನಿರ್ಗುಣವನ್ನು ಧ್ಯಾನಿಸಿ, ಗದ್ದುಗೆಯೇರಿ ಬ್ರಹ್ಮವನ್ನು ಕಾಣಬಹುದು. ಅದನ್ನು ಗುರುವನ್ನು ಸೇರಿ ಅರಿಯಬೇಕು. ಪರತತ್ತ್ವದಲ್ಲಿ ಸೇರಿ ಮೋಹರ ಪರದೆಯನ್ನು ಹರಿದೊಗೆಯಬೇಕು ಎಂದಿದ್ದಾರೆ ವೇಮನರು

**ಇಹವ ತೊರೆದು ಫಲವು ಇಹುದು ಎನ್ನುವವರು**
**ಮಹಿಯೊಳು ಪೇಳುತಿಹ, ಮತವಯೋಗ್ಯ;**
**ಇಹದಲ್ಲಿಯೆ ಪರವು ಇಹುದೆಂದರಿಯರು**
**ವಿಶ್ವದಾಭಿರಾಮ ಕೇಳು ವೇಮ.**

ಮರಣ ಸಮಯದ ವರೆಗೂ ಉಪಾಸನೆಯನ್ನು ಮಾಡುತ್ತಿರಬೇಕು. ಆದರೆ, ಕರ್ಮ ಫಲವು ಇಹಲೋಕದಲ್ಲೊ ಪರಲೋಕದಲ್ಲೋ ಸಿಗುವುದೋ? ಇಲ್ಲವೋ ಎಂಬ ಭಾವ ಭ್ರಮೆ ಬೇಡ. ಇಹವೂ ಪರಲೋಕವಿರುವುದು ಒಂದೇ! ಈ ಜೀವನು ಯಾವ ಚಿತ್ತದಿಂದ ಕೂಡಿರುವನೋ ಅದರಿಂದ ಪ್ರಾಣವನ್ನು ಹೊಂದುತ್ತಾನೆ. ಪ್ರಾಣನು ತೇಜಸ್ಸಿನಿಂದ ಕೂಡಿ ಆತ್ಮನೊಂದಿಗೆ ಅವನ ಸಂಕಲ್ಪಕ್ಕೆ ಅನುಸಾರವಾಗಿ ಲೋಕಕ್ಕೆ ಒಯ್ಯುತ್ತಾನೆಯೆಂದು ಹೇಳುವುದರಲ್ಲಿ ಆತ್ಮ ಸಂಕಲ್ಪ, ಚಿತ್ತಿನ ಅವಸ್ಥೆಯ ಲೋಕ ತಿಳಿಸುತ್ತದೆ ಎಂದಿದ್ದಾರೆ.

ಜೀವನು ದೇಹ ಭಾವದಿಂದ ದೇಹಾಭಿಮಾನದಿಂದ ಮನಸ್ಸಿನ ಉಪಾಧಿಯಿಂದ ದೂರವಾಗಿ, ನಿರಪೇಕ್ಷವಾಗಿ ತದ್ ಬಯಲು ಸೇರಿ, ಸಗುಣ ಬ್ರಹ್ಮನಲ್ಲಿ ಲಯಿಸಿದರೆ, ಮುಕ್ತಿ ಇಲ್ಲವೆ ಬಿಡುಗಡೆ ಎನ್ನುತ್ತಾರೆ.

**ನರ ಜನ್ಮವ ತಾನೆತ್ತಿಯೂ**
**ಪರಮಾತ್ಮನರಿಯದಿರಲು ಪಾಪಾತ್ಮನೂ**
**ಬರೀ ದುರಿತ ಕರ್ಮಗೆಯ್ದೊಡೆ**
**ಮರಳಿ ಅಧೋಗತಿ ಪಡೆವನು ಅರಿಯೈ ವೇಮಾ**

ಜನರು ಹುಟ್ಟಿ; ಸಾಯುತ್ತಾರೆ. ಇದು ವ್ಯಕ್ತ ಸ್ಥಿತಿ. ಜನನ–ಮರಣಗಳು ಇಳೆಯಲ್ಲಿ ಹೋಗಿ–ಬರುವ ಜಂಗಮಗಳಂತೆ. ಇದರಾಚೆಗೆ ಅವ್ಯಕ್ತವಾದ ಸುಷುಪ್ತಿ ಸ್ಥಿತಿಯುಂಟೆಂದು ತಿಳಿಸುತ್ತ ವೇಮನರು ಜನನ–ಮರಣಗಳು ವಿಧಿ ವಶವಾಗಿವೆ. ಮಾನವನು ಇಲ್ಲಿ ಸ್ವತಂತ್ರನಾಗಿಲ್ಲ. ತನುವು ಕ್ಷಣ ಭಂಗುರವಾದದ್ದು. ತನುವಿನಲ್ಲಿ ಸಿದ್ಧವಾದದ್ದು ಆತ್ಮವೊಂದೇ. ಭೌತಿಕ ದೇಹಕ್ಕೆ ನಾಶವುಂಟು ಆದ್ದರಿಂದ ಸ್ಥಿರವಾವುದು? ಅಸ್ಥಿರವಾದುದು? ಎಂಬುದನ್ನೆಲ್ಲ ವಿವೇಚಿಸಿ ನೋಡಬೇಕು. ಈ ವಿವೇವಚನೆಯಿಂದ ಆತ್ಮನಿಷ್ಠನಾಗಿ ಬಾಳುವವನು ಆತ ಪರಮಾತ್ಮನೇ ಸರಿ ಎಂದಿದ್ದಾರೆ. ನರಜನ್ಮವನ್ನು ತಾನೆತ್ತಿ ಬಂದರೂ ಈ ದೇಹವು ಅರಿವಿನಲ್ಲಿಯೇ ಉದಿಸಿದೆ. ಆದರೆ ಅದು ಬರೀ ಹೊಲಸಿನಲ್ಲಿಯೇ ಬಿದ್ದು ಹೊರಳಾಡುತ್ತಲಿದೆ. ತನುವಿನ ಮೂಲಕ ಬಾಳಿ, ಅರಿವನ್ನು ಕೂಡಿದರೆ ಬೇರೆ ತನು ಬಾರವು. ಮರಣಾದಿ ಅವಸ್ಥೆಗಳ ಜಾಡನ್ನು ತಿಳಿದು, ತನ್ನನ್ನು ಕುರಿತು ತಾನೇ ಮರುಕಪಟ್ಟು ತತ್‌ಮಯ ಆಕೃತಿ ಹೊಂದುವುದೇ ತತ್ತ್ವದರ್ಶನವಾಗಿದೆ. ಆದ ಕಾರಣ ಮಾನವ ಜನ್ಮ ಧರಿಸಿ ಬಂದ ಮೇಲೆ ಸದಾ ಅರಿವು ಹೊಂದಿರಬೇಕು. ಇದರಿಂದ ಇಹ–ಪರಗಳ ಅಂತರ ಉಳಿಯಲಾರದು. ಪ್ರಳಯವಾದರೂ ಪ್ರಾಣಿ ಹಾನಿಯಾಗದು; ಪ್ರಳಯವಿರಲು ಪರಮಾತ್ಮನನ್ನು ಸೇರುವನು.

**ತನುವು ತನುವು ಎನ್ನುತ ತಪಿಸುತ್ತಿಪ್ಪ ಜನರೆ!**
**ತನುವು ಅಸ್ಥಿರವೆಂದು ತಿಳಿಯರೇಕೆ?**
**ತನುವು ಕಾಣಬರದೆ, ತಿಳಿಯುವುದೇ ಮೋಕ್ಷ**
**ವಿಶ್ವದಾಭಿರಾಮ ಕೇಳು ವೇಮ.**

ಈ ದೇಹವೆಂಬುದು ಸ್ಥಿರವಾದುದಲ್ಲ. ನೀರ ಮೇಲಿನ ಗುಳ್ಳೆಯಂತೆ ಯಾವಾಗಲಾದರೂ ಪಟ್ಟೆಂದು ಒಡೆದು ಹೋಗಬಹುದು. ಅಂದರೆ ಸಾವು ಬರಬಹುದು. ಆದರೆ ಆತ್ಮ ಶಾಶ್ವತವಾದುದು ಎಂದು ಪರಿಭಾವಿಸಿ ಪರಮಾತ್ಮನ ಧ್ಯಾನ ಮಾಡಿ ಮೋಕ್ಷ ಪಡೆಯಿರೆಂದು ವೇಮನರು ಹೇಳಿದ್ದಾರೆ.

ತನುವಿನೊಳಗೆ ಆತ್ಮ ತತ್ತ್ವವಿರಲು ಅದನ್ನು ಅರಿಯದೇ ಇರುವವರನ್ನು ಕಂಡು ವೇಮನರು ಬೆಳಕಿನಂತಹ ಭಾನುವಿರಲು ದೀಪ ಬೆಳಗಿ ಹುಡುಕಬಹುದೇ? ಎಂದು ಪ್ರಶ್ನಿಸಿದ್ದಾರೆ. ಬಯಲ ಸರ್ವವೂ ಹುಟ್ಟಿತು. ಬಯಲಲ್ಲಿಯೇ ಲೀನವಾಗುವುದು ಆ ಬ್ರಹ್ಮನು ಬಯಲೇ ಮುಕ್ತಿಯ ಧಾಮವೆಂದು ಪ್ರತಿಪಾದಿಸಿದ್ದಾರೆ. ಮೋಹ ತೊರೆದು ಆತ್ಮ ತತ್ತ್ವವನ್ನರಿತುಕೊಂಡು ಬಯಲಿನಲಿ ಒಂದಾಗುವುದೇ ಮೇಲು. ಮಣ್ಣಿನ ಗಡಿಗೆಯಂಥ ಮಾಯದ ಈ ಶರೀರ ಸಾಯುವುದೇ ಖಚಿತ. ಸಾಯಲಾರದ್ದೇ ಆತ್ಮವೆಂದು ಅರಿತು ನಡೆದುಕೋ ಎಂದು ತಿಳಿ ಹೇಳಿರುವರು.

**ಬಯಲಲಿ ಬಂಧವ ಬೆರೆಸದೆ**
**ಪಾಲಿಪ ಪರಮಾತ್ಮನಿಗೇ ವಾಂಛಿತನಪ್ಪ**
**ಬೈಲಲಿ ಬಂಧವ ಬೆರೆಸಿದೆ**
**ಕೈಲಾಸವ ಸೇರಿ ಮುಕ್ತಿ ನೋಳ್ಪರು ವೇಮಾ**

**ಮರಣವು ಹತ್ತಿರದಲ್ಲಿದೆ**
**ಸ್ಥಿತ ಬುದ್ಧಿಯಲಿ ಪರಮ ಕಾಣೆ, ಲಭ್ಯ ಮೋಕ್ಷಂ**
**ಅರಿವುದು ಪುರದಲಿ ಮಿಂಚಲು**
**ಪರಮಾರ್ಥವೇ ಬಟ್ಟ ಬಯಲು, ಮುನ್ನವೇ ವೇಮಾ**

ಹುಟ್ಟು–ಸಾವು ತಪ್ಪಿದಲ್ಲ, ಸ್ಥಿರತೆಯ ಬುದ್ಧಿಯಿದ್ದರೆ ಮಾತ್ರ ಪರಮಾತ್ಮನನ್ನು ಕಾಣಲು ಸಾಧ್ಯ! ಜನನ–ಮರಣವೆಂಬುದು ಮರೀಚಿಕೆಯಂತೆ! ಅಂದರೆ ಜನನ–ಮರಣಗಳ ಮಧ್ಯದ ಕಾಲವು ಮಾನಸಿಕ ಕಲ್ಪನೆಯಾಗಿದೆ. ಗಡಿಯಾರದ ಮುಳ್ಳಿನ ಮೂಲಕ ದಿನ, ರಾತ್ರಿ, ಮಾಸಗಳು ಭೌತಿಕ ಕಾಲವೆನಿಸುತ್ತದೆ. ಹುಟ್ಟು–ಸಾವುಗಳ

ಮಧ್ಯದಲ್ಲಿಯ ಬಾಳಿನಲ್ಲಿಯೇ ಪರಮಾತ್ಮನನ್ನು ಅರಿಯುವ ಸಾಧನೆ ಮಾಡಬೇಕು. ಅರಿತು ಬಾಳಿ ಪರಮನ ಸೇರಬೇಕು ಅಂದರೆ ಮೋಕ್ಷ ಹೊಂದಬೇಕು.

ತನ್ನೊಳಗೇ ಆತ್ಮವಿರಲು ಪರಮಾತ್ಮನ ಸ್ವರೂಪರು ನೀವಾಗಿರುವಾಗ ಮತ್ತೇಕೆ ಹುಡುಕಾಟದ ಪರದಾಟ ಮಾಡುವಿರಿ? ಅದಕ್ಕೇ ವೇಮನರು ಹೇಳುತ್ತಾರೆ–

**ತಾನು ಸಕಲವಿರಲು, ತನ್ನೊಳಗೆ ಸಕಲವು**
**ತನ್ನ ಒಳಗೆ ಬೆಳಗಿ ತಾನೆ ತಿಳಿದು**
**ಇಂಥ ಮಾನವನಿಗೆ ಇಹುದು ಒಪ್ಪ ಮುಕ್ತಿ**
**ವಿಶ್ವದಾಭಿರಾಮ ಕೇಳು ವೇಮ.**

**ಜೀವನ ತಿಳಿದರೆ, ತನುವೇ**
**ದೇವನು ಭ್ರಮೆ ಕಳೆದು ನರನೇ ದೇವನು, ನೆನೆವೋಲ್**
**ಜೀವನು ಎನುವುದ ವಿವರಿಸಿ**
**ಭಾವಿಪುದೆ ಮುಕ್ತಿಯು, ಬಟ್ಟ ಬಯಲೈ ವೇಮಾ**

ಮುಕ್ತಿ ಸಿಗುವುದು ಪರಿಶುದ್ಧ ಸಿದ್ಧ–ಬದ್ಧ ನೈತಿಕತೆಯನು ಬಿಡದೇ ಆಚರಿಸುವವನಿಗೆ ಮಾತ್ರ. ಇದು ಮಾನವನಿಗೆ ದೊರೆತ ವರದಾನವೇ ಸರಿ! ಜೀವನೇ–ಶಿವನು, ನರನೇ ನಾರಾಯಣ ಅಥವಾ ದೇವನಾಗುವನು. ಅಂತಹ ಮಾನವನಿಗೆ ಮುಕ್ತಿಯು ಲಭಿಸುವುದು ಖಚಿತವೆಂದಿದ್ದಾರೆ ವೇಮನ ಯೋಗಿ.

**ಬ್ರಹ್ಮವೆನಲು ಬೇರೆ ಪರದೇಶದೊಳಿಲ್ಲ**
**ಬ್ರಹ್ಮವೆನಲು ತಾನು ಬಟ್ಟಬಯಲು**
**ತನ್ನ ತಾನರಿಯಲು ತಾನೇ ಹೋಗು ಬ್ರಹ್ಮ!**
**ವಿಶ್ವದಾಭಿರಾಮ ಕೇಳು ವೇಮ.**

ಬಯಲೇ ಬ್ರಹ್ಮವಾಗಿರಲು, ತನ್ನೊಳಗೇ ಆ ಬ್ರಹ್ಮನಿರಲು ತನ್ನ ತಾನರಿತು ನೀತಿ–ನಿಯತಿಯಲಿ ನಡೆದೊಡೆ ಸ್ವರ್ಗವೇ ತಾನಿದ್ದಲ್ಲಿ ಬರುವುದು ಕೇಳು ಮನುಜಾ! ಎಂದಿದ್ದಾರೆ. ಅಷ್ಟಾಂಗ ಯೋಗಗಳನು ನಿಷ್ಠೆಯಿಂದಲಿ ಪಾಲಿಸಿದಾತನಿಗೆ ನಿಶ್ಚಿತವಾಗಿಯೂ ಮೋಕ್ಷ ದೊರಕೊಳ್ಳುವುದು!

ಈ ಜಗತ್ತು ಭಗವಂತನ ಪ್ರತಿಬಿಂಬವೇ ಆಗಿದೆ. ಆ ದೇವನು ಸರ್ವಾಂತರ್ಯಾಮಿ, ಆತ ಎಲ್ಲೆಡೆಗೂ ಇರುವವನು, ಜೀವನೇ ಶಿವನಾಗಿರುವನು. ಹೀಗಿರುವಾಗ ಶಿವನು ಬೇರೆಯೇಕೆಂದು ಹುಡುಕುವುದು. ಜೀವ ಭಾವವನ್ನು ಅರಿತುಕೊಂಡರೆ ಮತಿ ಭ್ರಮೆಯಾಗದು. ದೈವವನ್ನು ಅರಿತು ಬಿಟ್ಟರೆ ತನ್ನ ಮತಿಯ

ನಿಶ್ಚಿತವಾಗುವುದು. ಅಷ್ಟಾದರೆ ತೀರಿತು. ಜೀವ ಭಾವವು ನಶಿಸುತ್ತದೆ. ನಾನು ನೀನಾಗುವುದೆಂದರೆ ಪರಮಾತ್ಮನಾಗುವುದು. ಮನುಷ್ಯನಾದರೂ ಯೋಗ ತತ್ತ್ವದ ಹಾದಿಯಲ್ಲಿ ನಡೆದು ಮುಕ್ತಿಯನ್ನೈದುವವನು. ತಾನೇ ಶಿವನು–ಶಿವನೇ ತಾನು ಎಂದವನು ಶಿವಯೋಗಿ. ಮನಸ್ಸಿನಲ್ಲಿರುವ ಮಹಿಮೆಯನ್ನರಿಯುವವನೇ ಯೋಗಿ, ಶಿವಯೋಗಿ! ಮಾನವ ಮಹಾಮಾನವನಾಗುವ ಮಾರ್ಗವಿದೆ ಎಂಬುದಕ್ಕೆ ವೇಮನರೇ ದೃಷ್ಟಾಂತರು! ಮೋಕ್ಷಾಪೇಕ್ಷಿತನಾಗುವುದೇ ಮನುಕುಲದ ಧ್ಯೇಯಧೋರಣೆಯಾಗಬೇಕು. ಮನುಷ್ಯನಾಗಿ ಹುಟ್ಟಿ ಬಂದ ಮೇಲೆ ಹೇಗೋ ಬಾಳು ಸವೆಯಿಸುವುದಲ್ಲ. 'ಸತ್ಯಂ ಶಿವಂ ಸುಂದರಂ' ವನ್ನು ಕಾಣುವ ಹಂಬಲವಿದ್ದರೆನೇ ಮಾನವ ಜನ್ಮ ಸಾರ್ಥಕವಾಗುತ್ತದೆ ಎಂಬುದು ವೇಮನರ ನುಡಿನೈವೇದ್ಯವಾಗಿದೆ.

ಅಲ್ಲಮರು ಪ್ರತಿಪಾದಿಸಿದ ಮೋಕ್ಷ ಮಾರ್ಗ, ಐಕ್ಯಸ್ಥಲಃ ಷಟ್‌ಸ್ಥಲವೆಂದರೆ ಆತ್ಮ ವಿಕಾಸಯೋಗ ಇಲ್ಲವೆ ಲಿಂಗಾಂಗ ಸಾಮರಸ್ಯವೆನ್ನಲಾಗಿದೆ. ಆರು ಸ್ಥಲಗಳ ಕೊನೆಯ ಮೆಟ್ಟಲೇ ಐಕ್ಯಸ್ಥಲವಾಗಿದೆ. ಮೊದಲಿನ ಭಕ್ತ, ಮಾಹೇಶ್ವರ, ಪ್ರಾಣಲಿಂಗಿ, ಪ್ರಸಾದ, ಶರಣ ಎಂಬೈದು ಸ್ಥಲಗಳನ್ನು ಸಂಪೂರ್ಣವಾಗಿ ಪೂರೈಸಿಕೊಂಡು ಶರಣನಾದವನು ಅಂತಿಮ ಸ್ಥಲದತ್ತ ಪಯಣಿಸುವನು. ಅಲ್ಲಿಯೇ ಆತ ಐಕ್ಯ ಸ್ಥಿತಿಯನ್ನು ಹೊಂದುವನು ಪರಿಪೂರ್ಣನಾಗುವನು ಎಂದರ್ಥ! ದೇವನೇ ತಾನಾಗವನು ಎಂಬುದು ಪ್ರಾಜ್ಞರು ತತ್ತ್ವಜ್ಞಾನಿಗಳು, ಅಲ್ಲಮನಂಥವರು ಹೇಳಿದ ಮಾತು.ಅಲ್ಲಮರ ಪ್ರಸಿದ್ಧವಾದ ವಚನದಲ್ಲಿಂತಿದೆ–

**ಸತ್ತ ಬಳಿಕ ಲಿಂಗದೊಳಗಾದೆಹೆವೆಂಬುದು ಎತ್ತಣ ವಾರ್ತೆ?**
**ಅದು ಹುಸಿ ನೋಡಾ!**
**ಸಾಯದ ಮುನ್ನ ನಿಜವನರಿದು ಸ್ವಯವಾಗಿ ನಡೆಯಬಲ್ಲಡೆ**
**ಗುಹೇಶ್ವರ ಲಿಂಗವನರಿದ ಶರಣರು ಒಲಿವರು ಕಾಣಾ**
**ಸಿದ್ಧರಾಮಯ್ಯ**

**ಸತ್ತು ಮುಂದೆ ದೇವರ ಕೂಡಿಹೆವೆಂಬಿರಿ**
**ಸಾಯದ ಮುನ್ನ ಸತ್ತಿಪ್ಪಿರಿ**
**ಎಂತಯ್ಯ ನಿಮ್ಮ ಲಿಂಗೈಕ್ಯದ ಪರಿ?**
**ಎಂತಯ್ಯ ನಿಮ್ಮ ಪ್ರಮಥರ ಪರಿ?**
**ಅಂಗದ ಅವಸ್ಥೆಯಲ್ಲದೆ ಲಿಂಗದ ಅವಸ್ಥೆ ಆರಿಗೂ ಇಲ್ಲ**
**ಗುಹೇಶ್ವರಾ!**

**ಸತ್ಯ ಶುದ್ಧ ದೇವರ ನಂಬಲರಿಯದೆ**
**ಮಿಥ್ಯ ದೈವಂಗಳನೆ ನಂಬಿ,**
**ಸತ್ತು ಹೋದರು ನಿತ್ಯವನರಿಯದೆ**
**ಎತ್ತ ಲೆಂತರಿಯರು ಗುಹೇಶ್ವರ ಲಿಂಗವನು**
**ಸತ್ಯವೂ ಇಲ್ಲ, ಅಸತ್ಯವೂ ಇಲ್ಲ**
**ಸಹಜವೂ ಇಲ್ಲ, ಅಸಹಜವೂಇಲ್ಲ**
**ನಾನೂ ಇಲ್ಲ, ನೀನೂ ಇಲ್ಲ**
**ಇಲ್ಲ ಇಲ್ಲ ಎಂಬುದು ತಾನಿಲ್ಲ**
**ಗುಹೇಶ್ವರನೆಂಬುದು ತಾ ಬಯಲು**

ಹುಟ್ಟು-ಸಾವು ಜೀವಿಗಿರುವ ದ್ರವ್ಯಗಳು, ಆದರೆ, ಹುಟ್ಟು-ಸಾವುಗಳ ಮಧ್ಯದ ಬದುಕು ಪ್ರಮುಖವಾದುದು. ಈ ಸಾವು-ಜೀವ ಸಂಬಂಧದ ಡಾವ (ಮಾರ್ಗ) ತೋರಬಲ್ಲವನೇ ಗುರು. ಗುರು ಮಾರ್ಗದರ್ಶನವಿಲ್ಲದೆ ಶಿಷ್ಯನಿಗೆ, ಶರಣನಿಗೆ ಮುಕ್ತಿ ಕಾಣದು ಎಂದಿದ್ದಾರೆ. ಸಾಯದ ಮುನ್ನ ಸತ್ಯ (ನಿಜ) ವನರಿದು ಸ್ವಯಂ ಪೂರ್ಣರಾಗಿ ನಡೆಯುವವರಿಗೆ ಮಾತ್ರ ಸತ್ಯ ಶರಣರು ಒಲಿಯುತ್ತಾರಲ್ಲದೇ ಲಿಂಗ-ಅಂಗದ ಸಾಮರಸ್ಯ ಹೊಂದಬಲ್ಲರು! ಇದಕ್ಕೆ ಲಿಂಗೈಕ್ಯದ ಪರಿ ಎನ್ನಬಹುದು; ಸತ್ತ ಬಳಿಕ ಲಿಂಗೈಕ್ಯನಾದವನಿಗೆ ಅರಿವು ಇರಲು ಸಾಧ್ಯವೆ? ಕುರುಹುವಿಡಿದು ಲಿಂಗೈಕ್ಯವಾದೆವೆಂದು ಹೇಳುವುದು ಶುದ್ಧ ತಪ್ಪು ಎಂದಿರುವುದು. ಸತ್ಯ ಶುದ್ಧ ದೇವರನ್ನರಿಯದೇ ಮಿಥ್ಯ ದೈವಗಳಿಗೆ ನಂಬಿ ಸತ್ತು ಹೋದವರು ಗುಹೇಶ್ವರ ಲಿಂಗವನರಿಯಲಾರರು ಎಂದಿದ್ದಾರೆ ಅಲ್ಲಮರು. ಸತ್ಯ-ಅಸತ್ಯಗಳ ಲೋಕದಲ್ಲಿದ್ದೇವೆ ಎಂಬ ಭಾವ ಭ್ರಮೆಯೇ ಬೇಡ. ಲಿಂಗ ದೇವನಂತೆ ಸಹಜವಾಗಿ ಅಸಹಜವಾಗಿ ಇರುವಂತೆ ರೂಢಿಸಿಕೊಂಡು ಬದುಕಬೇಕು. "ನಾನೂ ಇಲ್ಲ-ನೀನೂ ಇಲ್ಲ" ಎಂಬುದನ್ನು ಮರೆತು ಬಯಲಿನಲ್ಲಿಯೇ ಬಯಲಾಗುವ ವಿದ್ಯೆಯನ್ನು ಸಂಪಾದಿಸಿಕೊಂಡು ಬಯಲಾಗಿರಿ ಎಂಬುದಾಗಿ ಅಲ್ಲಮರ ಬೋಧೆಯಿದಾಗಿದೆ. ಅದಕ್ಕೆ ಸ್ಪಷ್ಟೀಕರಣ ನೀಡಿದ ಅವರ ವಚನದಲ್ಲಿಂತಿದೆ-

**ಸರ್ವಶೂನ್ಯ ಆದಿ ಅನಾದಿ 'ಭಕ್ತ'ಸ್ಥಲ**
**ನಾದ ಬಿಂದು 'ಮಹೇಶ್ವರ' ಸ್ಥಲ**
**ಕಳೆ ಬೆಳಗು 'ಪ್ರಸಾದಿ' ಸ್ಥಲ**
**ಅರಿವು ನಿರವಯವು 'ಪ್ರಾಣಲಿಂಗಿ' ಸ್ಥಲ**
**ಜ್ಞಾನ ಸುಜ್ಞಾನ 'ಶರಣ'ಸ್ಥಲ**
**ಭಾವವಿಲ್ಲದ ಬಯಲು ಬಯಲಿಲ್ಲದ ಭಾವ, ಆಗಮ್ಯದ 'ಐಕ್ಯ'ಸ್ಥಲ**
**ಇಂತೀ ಷಡುಸ್ಥಲದ ಕೊರಡ ಮೆಟ್ಟಿ ನಿಂದಂಗೆ**

ಹೆಸರಿಲ್ಲ ಕುರುಹಿಲ್ಲ ತನಗೆ ತಾನಿಲ್ಲ ಗುಹೇಶ್ವರಾ! ಎಂಥ ಅದ್ಭುತ ಬೋಧನೆಯಿದು! ಅಷ್ಟಾಂಗ ಯೋಗಗಳ ಮೂಲಕ ಆಚರಿಸಿ ಮುಕ್ತಿ ಹೊಂದಬಲ್ಲಿರೆಂದು ವೇಮನರು ಹೇಳಿದರೆ ಲಿಂಗ ಆರಾಧನೆಯ ಮೂಲಕ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ ಶರಣ, ಐಕ್ಯಸ್ಥಲಗಳೆಂಬ ಆರು ಮೆಟ್ಟಿಲುಗಳನ್ನು ಹಂತ ಹಂತವಾಗಿ ಮೇಲೇರುತ್ತ, ಪೂರೈಸಿಕೊಳ್ಳುತ್ತ ಮುಕ್ತಿ ಹೊಂದುವ ವಿಧಾನವೇ ಷಡುಸ್ಥಲದ ಧರ್ಮ ನೀತಿಯಾಗಿದೆ. ಬಯಲು ಬಯಲನೇ ಕೂಡಿದಂತೆ ಎಂದರೆ ದೇವನಲ್ಲಿ ಒಂದಾದಂತೆ ಎಂಬುದಿದರ ಭಾವ, ಇಲ್ಲಿ ತಾನಿಲ್ಲ, ದೇಹವಿಲ್ಲ, ಕುರುಹಿಲ್ಲ, ತನಗೆ ತಾನಿಲ್ಲ ಬಯಲನೇ ಪೂಜಿಸಿ ಬಯಲಾದರು ಎಂಬಂತೆ! ಅಲ್ಲಮರ ಈ ತಾತ್ತ್ವಿಕ ಚಿಂತನೆ ಅತ್ಯದ್ಭುತ!!

ಸದ್ಭಕ್ತನು, ಶರಣನು ತ್ರಿಕಾಲ ಪೂಜಾನಿರತನಾಗಬೇಕು. ಲಿಂಗದೀಕ್ಷೆ ಹೊಂದಿದ ಶರಣನು ಭಾವಲಿಂಗವನ್ನು ಸಮರಸ ಭಕ್ತಿಯಿಂದ ಅರ್ಚಿಸುತ್ತಾನೆ. ಸದ್ಭಾವ ಹಸ್ತದಿಂದ ತೃಪ್ತಿ ಪದಾರ್ಥವನ್ನು ಅರ್ಪಿಸುತ್ತಾನೆ. ಭಾವಲಿಂಗದಲ್ಲಿ ಮನವನ್ನು ಉನ್ಮನಗೊಳಿಸಿ ಅಂಗ–ಲಿಂಗ (ಲಿಂಗಾಂಗ) ಸಾಮರಸ್ಯ ಅನುಭವವನ್ನು ಪಡೆಯುತ್ತಾನೆ. ಇದುವೇ ಆತನ ಐಕ್ಯ ಸ್ಥಲದ ಮಹಿಮೆ. ಭಕ್ತಿಯಿಂದ ಐಕ್ಯ ಸ್ಥಲದವರೆಗೆ ನಡೆಯುವ ಬದುಕು ಪವಿತ್ರವಾಗಿರುತ್ತದೆ. ಅರ್ಥಾತ್ ತಾನೇ ದೇವನಾಗುತ್ತಾನೆಂದಿದ್ದಾರೆ ಅಲ್ಲಮರು ಹಾಗೂ ಅಂತಹ ಸತ್ಯವುಳ್ಳ ಶರಣರಿಗೆ ಮಾರ್ಗಾನುಯಾಯಿಗಳಿಗೆ ಜಾಗೃತಿಯ ನುಡಿಗಳನ್ನು ಹೇಳಿದ್ದು ಹೀಗೆ–

**ಸತ್ತು ಹುಟ್ಟಿ ಕೆಟ್ಟವರೆಲ್ಲರು ದೇವಲೋಕಕ್ಕೆ ಹೋದರೆಂಬ**
**ಬಾಲ ಭಾಷೆಯ ಕೇಳಲಾಗದು,**
**ಸಾಯದ ಮುನ್ನ ಸ್ವಯವನರಿದಡೆ**
**ದೇವನೊಲಿವ ನಮ್ಮ ಗುಹೇಶ್ವರನು** **614**

**ಎರಡೆಂಬರಯ್ಯ ಕರಣದ ಕಂಗಳಲ್ಲಿ ನೋಡಿದವರು**
**ಎರಡುವನತಿಗಳೆದು ಒಂದೆಂಬರಯ್ಯಾ**
**ಕಾಮಿಸೂದಿಲ್ಲಾಗಿ ಕಲ್ಪಿಸೂದಿಲ್ಲ**
**ಭಾವಿಸೂದಿಲ್ಲಾಗಿ ಬಯಸೂದಿಲ್ಲ**
**ಗುಹೇಶ್ವರನೆಂಬುದಿಲ್ಲಾಗಿ ಮುಂದೆ ಬಯಲೆಂಬುದೂ ಇಲ್ಲ** **615**

**ಪೃಥ್ವಿಯೊಳಗಿಲ್ಲ, ಆಕಾಶದೊಳಗಿಲ್ಲ**
**ಚತುರ್ದಶ ಭುವನಾದಿ ಭುವನಂಗಳೊಳಗೆಯೂ ಇಲ್ಲ**

**ಹೊರಗೆಯೂ ಇಲ್ಲ–ಏನಾಯಿತ್ತೆಂದರಿಯೆನಯ್ಯಾ**
**ಗುಹೇಶ್ವರ ಅಂದೂ ಇಲ್ಲ ಇಂದೂ ಇಲ್ಲ ಎಂದೂ ಇಲ್ಲ 621**

**ಹುಟ್ಟುವಾತ ನಾನಲ್ಲವಯ್ಯಾ, ಹೊಂದುವಾತ ನಾನಲ್ಲವಯ್ಯಾ**
**ಅದೇನೆಂಬೆನಯ್ಯಾ ಎಂತೆಂಬೆನಯ್ಯಾ?**
**ನಿಜವನರಿದ ಬಳಿಕ ಮತ್ತೆ ಹುಟ್ಟಲುಂಟೆ ಗುಹೇಶ್ವರಾ! 622**

**ಅರಿದೆನೆಂಬುದು ತಾ ಬಯಲು**
**ಅರಿಯೆನೆಂಬುದು ತಾ ಬಯಲು**
**ಅರುಹಿನ ಕುರುಹಿನ ಮರಹಿನೊಳಗೆ**
**ಗುಹೇಶ್ವರನೆಂಬುದು ತಾ ಬಯಲು 623**

**ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು**
**ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು 624**

**ವಾಯುವಿನ ಸಂಚದ ಪರಿಮಳದ ನಿಲವಿನಂತೆ**
**ಲಿಂಗೈಕ್ಯ ಸಂಬಂಧವದು ಗುಹೇಶ್ವರಾ**

**ಎರಡೆಂಭತ್ತು ಕೋಟಿ ವಚನವ ಹಾಡಿ**
**ಹಲವ ಹಂಬಲಿಸಿತ್ತೆನ್ನ ಮನವು**
**ಮನ ಘನವನರಿಯದು, ಘನ ಮನವನರಿಯದು**
**ಗುಹೇಶ್ವರನೆಂಬ ಲಿಂಗವನರಿದ ಬಳಿಕ**
**ಮನ ಘನವನರಿಯದು, ಘನ ಮನವನರಿಯದು**
**ಗುಹೇಶ್ವರನೆಂಬ ಲಿಂಗವನರಿದ ಬಳಿಕ**
**ಗೀತೆವೆಲ್ಲ ಒಂದು ಮಾತಿನೊಳಗು 627**

**ತಾತ್ಪರ್ಯ:** ಹುಟ್ಟು–ಸಾವಿಗೆ ಒಳಗಾದವರು ಭವ ಬಂಧಿತರು, ಭವ ದುಃಖಿತರು. ಅವರು ಮರಣ ಹೊಂದಿದರೆ 'ದೇವ ಲೋಕಕ್ಕೆ ಹೋದರು' ಎಂದು ಜನರಾಡುವುದು ಸರ್ವಸಾಮಾನ್ಯ. ಅವರದು ಅರ್ಥವಿಲ್ಲದ ಮಾತು ಅಂಥ ಮಾತುಗಳನ್ನು ಆಡಲೂ ಬಾರದು, ಕೇಳಲೂ ಬಾರದು, ಸಾಯುವ ಮುನ್ನವೇ ಸಾಧನೆಯ ಮಾಡಬೇಕು. ಸ್ವಯವನರಿಯಬೇಕು, ಆತ್ಮ–ಪರಮಾತ್ಮರ ನಿಜ ಸ್ವರೂಪವನ್ನು ಅವಗ್ರಹಿಸಬೇಕು.

ಅವೆರಡರೊಳಗಿರುವ ಏಕತ್ವವನ್ನು ಅವಧಾನಿಸಬೇಕು. ಆಗಲೇ ದೇವನೊಲುಮೆ; ದೇವನೊಳು ಸಾಮರಸ್ಯವಾಗುತ್ತದೆಯೆಂದಿದ್ದಾರೆ.

ಬಾಹ್ಯ ದೃಷ್ಟಿಯಿಂದ ನೋಡಿದಾಗ ಅಂಗ–ಲಿಂಗ ಎಂಬ ದ್ವೈತ ಕಲ್ಪನೆ. ಅಂತರ್ ದೃಷ್ಟಿಯಿಂದ ನೋಡಿದಾಗ ಅಂಗವೆಂಬುದಿಲ್ಲ. ಇರುವದೆಲ್ಲ ಲಿಂಗವೆ ಎಂಬ ಅದ್ವೈತ ಭಾವನೆ. ಎಲ್ಲಿ ಭಾವನೆ ಕಲ್ಪನೆಯಿದೆಯೋ ಅಲ್ಲಿ ಪೂಜಿಸಿ ಅನುಗ್ರಹವ ಪಡೆಯಬೇಕೆಂಬ ಕಾಮನೆ; ಬೆರೆತು ಬಯಲಾಗಬೇಕೆಂಬ ಬಯಕೆ. ಯಾವಾಗ ಈ ದ್ವೈತ–ಅದ್ವೈತ ಎಂಬ ಭಾವ ನಿರ್ಭಾವಗೊಳ್ಳುತ್ತದೆಯೋ ಆಗ ಅಂಗವಿಲ್ಲ; ಅಂಗವಿಲ್ಲಾಗಿ ಲಿಂಗವಿಲ್ಲ. ಏನಿದೆಯೋ ಅದೆಲ್ಲ ಇಲ್ಲದಂತಿರುವ ಬಟ್ಟ ಬಯಲು. ಅಲ್ಲಿ ಯಾವ ಬಗೆಯ ಕಾಮನೆಯೂ ಇಲ್ಲ. ಅದು ಐಕ್ಯ ಸ್ಥಲದ ನಿರ್ಭಾವದ ನೆಲೆಯೆಂದು ಉಪದೇಶಿಸಿದ್ದಾರೆ.

ಅನಂತವಾಗಿ ಹರವಿದ ಆಕಾಶ. ಪೃಥ್ವಿ ಅಪ್ಪು, ಅಗ್ನಿ, ವಾಯು ಎಂಬ ಚತುರ್ಭೂತಗಳು, ಅಸಂಖ್ಯ ಭೂಮಂಡಲಗಳು. ಇದು ವಿಶ್ವ ಭಕ್ತನ ದೃಷ್ಟಿಯಲ್ಲಿ ದೇವನು ಈ ವಿಶ್ವದಲ್ಲಿದ್ದಾನೆಂದು ಆತ ವಿಶ್ವದೊಳಗೂ ಹೊರಗೂ ಇದ್ದಾನೆ. ಆದರೆ ಲಿಂಗೈಕ್ಯನ ಸ್ಥಿತಿ ಬೇರೆ. ಅವನೊಳಗೆ 'ನಾನು–ದೇವ' ಎಂಬ ಭೇದ ಭಾವವಿಲ್ಲ. ದೇವನೊಳಗೆ ಬೆರೆದು ಒಂದಾಗಿದ್ದಾನೆ. ಭೇದಗೆಟ್ಟಿದ್ದಾನೆ. ಆದುದರಿಂದ ಅವನ ದೃಷ್ಟಿಯಲ್ಲಿ ದೇವರು ವಿಶ್ವದ ಹೊರಗೂ ಇಲ್ಲ, ಒಳಗೂ ಇಲ್ಲ ಹಿಂದೆಯೂ ಇರಲಿಲ್ಲ. ಮುಂದೆ ಎಂದೆಂದಿಗೂ ಇರುವುದಿಲ್ಲ. ಈಗಲೂ ಇಲ್ಲ ಎಲ್ಲವೂ ಬರಿಯ ಬಯಲು–ಬಯಲು, ಭೇದಾಶ್ರಿತ ಭಾವನೆಗಳಿಗೆ ತಿಲಮಾತ್ರವೂ ಅವನಲ್ಲಿ ಅವಕಾಶವಿಲ್ಲ ಎಂದಿದ್ದಾರೆ ಅಲ್ಲಮರು.

ಹಾಗೆಯೇ ಮುಂದುವರೆದು ನಾನು ಹುಟ್ಟುವವನೂ ಅಲ್ಲ. ನನ್ನ ಸ್ವರೂಪವದು ಏನು? ಎಂತು? ಯಾವುದನ್ನು ನಾನು ಹೇಳಲಾರೆ. ಅಲ್ಲಿ ಶಬ್ದಗಳು ನಿಶ್ಯಬ್ದ. ಅದು ನನ್ನ ನಿಜದ ನಿಲವು 'ನಾನು' ಎಂಬುದು ಅಡಗಿದ, ನಾನು ನಾನಾದ ನಿರ್ವಯಲ ಸ್ಥಿತಿ. ಅಲ್ಲೆಲ್ಲಿ ಜನನ–ಮರಣ? ಇದು ಲಿಂಗೈಕ್ಯನ ಅನುಭಾವ ಭಾಷೆ. ಆದುದರಿಂದ ನಾನು ಎಂಬುದಾಗಲಿ, ನಾನು ಅರಿತಿದ್ದೇನೆ ಎಂದಾಗಲಿ, ನಾನು ಮರೆತಿದ್ದೇನೆ ಎಂದಾಗಲಿ ಲಿಂಗಾಂಗ ಸಾಮರಸ್ಯ ಹೊಂದಿದ ಶರಣನು ಹೇಳಲಾರ. ಮರೆವಿನ ಕುರುಹಾದ "ಅಹಂ" ಎಂಬ ಭಾವವು ಅವನೊಳಗಿಲ್ಲ. ಅದು ಬಯಲಾಗಿದೆ. ಮಹಾ ಅರಿವಿನೊಳು ತಾನಡಗಿ ಹೋಗಿದೆ. ಅಷ್ಟೇ ಏಕೆ ಆ ಮಹಾ ಅರಿವಿನ ಮೂರ್ತಿಯಾದ ಘನಲಿಂಗವೂ ನಿರ್ಬಯಲುಗೊಂಡಿದೆ. ಅದು ಹೇಗೆಂದರೆ ಹೊಚ್ಚ ಹೊಸ ಮುತ್ತು ಹಾಗೂ ಅದರ ಹೊಳಪು, ಸ್ಫಟಿಕದ ಕಳಸ, ಮತ್ತು ಅದರೊಳಗಣ

ಪ್ರಭೆ, ವಾಯು ಹಾಗೂ ವಾಯುವಿನೊಳಗೆ ಬೆರೆದ ಪರಿಮಳ– ಇವು ಪರಸ್ಪರ ಅನ್ಯೋನ್ಯ; ಒಂದರೊಳಗೊಂದು ಸಮರಸ; ಬಿಡಿಸಿ ಬೇರ್ಪಡಿಸಲಾಗದ ಸಂಬಂಧ ಅವುಗಳಲ್ಲಿ ಹಾಗೆಯೇ ಲಿಂಗೈಕ್ಯ, ಮಹಾಲಿಂಗಕ್ಕೂ ಆ ಲಿಂಗದೊಳು ಬೆರೆದ ಶರಣನಿಗೂ ತಾದ್ಮಾತ್ಯ. ಲಿಂಗವೇ ಶರಣ, ಶರಣನೇ ಲಿಂಗ. ಲಿಂಗವು ಮುತ್ತಾದರೆ ಶರಣರು ಹೊಳಪು. ಲಿಂಗವು ಸ್ಫಟಿಕದ ಘಟವಾದರೆ ಶರಣನು ಪ್ರಭೆ. ಲಿಂಗವು ವಾಯುವಾದರೆ ಶರಣನು ಮಧುಮಧುರ ಪರಿಮಳವಿದ್ದಂತೆ ಎಂದಿದ್ದಾರೆ.

ತಮ್ಮ ವಚನ ರಚನೆಯ ಅಂಕಿ–ಅಂಶಗಳನ್ನು ಹೇಳಿದ್ದಾರೆ. ಎರಡೆಂಭತ್ತು ಕೋಟಿ ವಚನಗಳನ್ನು ರಚಿಸಿ ಹಾಡಿಯೇ ಹಾಡಿದ್ದೇನೆ. ಹಲವು ತೆರದಲ್ಲಿ ಹಂಬಲಿಸಿದೆನು. ಘನ ಲಿಂಗದ ದರ್ಶನಕಾಗಿ. ಆದರೂ ನನ್ನ ಮನ ಘನವನ್ನು ಅರಿಯಲಿಲ್ಲ. ಆ ಅರಿವಿನ ಮಹಾಘನವು ಮನವ ತುಂಬಲಿಲ್ಲ. ಬಳಿಕ ಹಲವು ಹಂಬಲವನ್ನೆಲ್ಲ ತ್ಯಜಿಸಿದೆ. ಮನವು ಆಗ ಅಮನಗೊಂಡಿತು. ಆ ಅಮನದೊಳು ಘನಲಿಂಗದ ಅರಿವು ಮೂಡಿತು. 'ನಾನು' ಎಂಬ ಭಾವ ಅಡಗಿತು. ಆಗ ಗೀತ ಇಲ್ಲ. ಘನಲಿಂಗವೆಂಬ ಒಂದು ಮಾತಿನೊಳು ಆ ಗೀತ ಶಾಂತವಾಗುತ್ತದೆ ಎಂದು ಅವ್ಯಕ್ತವಾದುದನ್ನು ವ್ಯಕ್ತಪಡಿಸಿದ್ದಾರೆ.

**ನೀರಿಲ್ಲದ ಒರಳಿಂಗೆ ನೆಳಲಿಲ್ಲದ ಒನಕೆ!**
**ರೂಹಿಲ್ಲದ ನಾರಿಯರು ಬೀಜವಿಲ್ಲದಕ್ಕಿಯ ತಳಿಸುತ್ತಲಿ**
**ಬಂಜೆಯ ಮಗನ ಜೋಗುಳವಾಡುತ್ತೈದಾರೆ**
**ಉರಿಯ ಚಪ್ಪರವನಿಕ್ಕಿ**
**ಗುಹೇಸ್ವರನ ಕಂದನು ಲೀಲೆಯಾಡಿದನು**

**ಅರಿದು ನೆನೆಯಲಿಲ್ಲ, ಮರೆದು ಪೂಜಿಸಲಿಲ್ಲ**
**ತೆರಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲ**
**ತನಗೆ ಗುರುವಿಲ್ಲ, ಗುರುವಿಗೆ ತಾನಿಲ್ಲ**

**ಗುರುವಿಗೆ ಶಿಷ್ಯನು ಹೊಡವಡುವ ಕಾರಣ ಮುನ್ನಿಲ್ಲ**
**ಬಯಲ ಬಿತ್ತಲಿಲ್ಲ, ಬೆಳೆಯಲಿಲ್ಲ, ಒಕ್ಕಲಿಲ್ಲ, ತೂರಲಿಲ್ಲ**
**ಗುಹೇಶ್ವರನೆಂಬ ಲಿಂಗಕ್ಕೆ ಕುರುಹು ಮುನ್ನಿಲ್ಲ**

**ನಿಜವನರಿಯದ ನಿಶ್ಚಿಂತನೆ, ಮರಣವ ಗೆಲಿದ ಮಹಂತನೆ**
**ಘನವ ಕಂಡ ಮಹಿಮನೆ, ವರವನೊಳಕೊಂಡ ಪರಿಣಾಮಿಯೆ,**
**ಬಯಲಲೊದಗಿದ ಭರಿತನೆ**
**ಗುಹೇಶ್ವರ ಲಿಂಗ ನಿರಾಳನನೊಳಕೊಂಡ ಸಹಜನೆ!**

**ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು**
**ಬಯಲು ಬಯಲಾಗಿ ಬಯಲಾಯಿತ್ತಯ್ಯಾ**
**ಬಯಲ ಜೀವನ ಬಯಲ ಭಾವನೆ**
**ಬಯಲ ಬಯಲಾಗಿ ಬಯಲಾಯಿತ್ತಯ್ಯಾ**
**ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು**
**ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ!**

**ಉಪಮೆ ಉಪಮಿಸಲರಿಯದೆ ಉಪಮಾತೀತವೆನುತ್ತಿದ್ದಿತ್ತು**
**ಅರಿವು, ಅರಿವಿನ ಮರೆಯಲ್ಲಿರ್ದುದನರಿಯಲರಿಯದೆ**
**ಪರಾಪರವೆಂದು ನುಡಿಯುತ್ತಿದ್ದಿತ್ತು**
**ಧ್ಯಾನ ಧ್ಯಾನಿಸಲರಿಯದೆ, ಧ್ಯಾನರೂಪಾತೀತವೆಂದು ತದ್ಧ್ಯಾನಗೊಂಡಿತ್ತು**
**ಜ್ಞಾತೃಜ್ಞಾನ ಜ್ಞೇಯಕ್ಕೆ ಇನ್ನಾವ ಜ್ಞಾನವೋ?**

**ವೇದ ವಿಜ್ಞಾನವೆಂದುದಾಗಿ, 'ತತ್ತ್ವಮಸಿ' ವಾಕ್ಯಂಗಳೆಲ್ಲವೂ**
**ಹುಸಿಯಾಗಿ ಹೋದವು**
**ಸಚ್ಚಿದಾನಂದವೆಂದುದಾಗಿ**
**ದ್ವೈತಾದ್ವೈತಿಗಳೆಲ್ಲ ಸಂಹಾರವಾಗಿ ಹೋದರು**
**ಬಂದೂಬಾರದ ನಿಂದ ನಿರಾಳ ಗುಹೇಶ್ವರ**

ನಿಶ್ಚಲವಾದ ಮನಸ್ಸು ಅದರಲ್ಲಿ ಏಕತಾನ ರೂಪ ಧ್ಯಾನವೃತ್ತಿ; ಅಭೌತಿಕವಾದ ಶ್ರದ್ಧಾದಿ ಭಕ್ತಿಗಳು ತಾರಕ ಶಕ್ತಿಗಳು ಧ್ಯಾನ ವೃತ್ತಿ ಭಕ್ತಿಯ ಮೂಲಕ ಆ ಭಕ್ತಿ ಶಕ್ತಿಗಳು ಅಜಾತನಾದ ಶಿವನ ಚಿಂತನೆಯಲ್ಲಿ ಹಾಗೂ ಶಿವತತ್ತ್ವವನ್ನು ಅಭಿವ್ಯಕ್ತಗೊಳಿಸುವ ಕಾರ್ಯದಲ್ಲಿ ತನ್ಮಯ. ಪರಮ ಆತ್ಮ ಗಾನದಲ್ಲಿ ಅವು ಅಭಿರತ ನಾನು ವಿಶುದ್ಧ 'ಆತ್ಮತತ್ತ್ವ-ಪರಬ್ರಹ್ಮ ಸತ್ಯ' ಎಂಬ ಮಹಾಜ್ಞಾನ ಪ್ರಭೆಯು ಛತ್ರ. ಅಲ್ಲಿ ಆತ್ಮರಾಮನಾಗಿ ಲೀಲೆಯಾಡುವವ ಲಿಂಗೈಕ್ಯ ಹರಣಿವೆಂದಿದ್ದಾರೆ ಅಲ್ಲಮರು. ಹಾಗೆಯೇ ಮುಂದುವರೆದು ನಿತ್ಯನಿರಂಜನ ಲಿಂಗವೇ ತಾನು ಎಂದು ಅರಿತ ಬಳಿಕ ನನೆವ ಕ್ರಿಯೆಯಿಲ್ಲ. ತಾನು ಬೇರೆ ಲಿಂಗ ಬೇರೆ ಎಂಬ ಭಾವ ಮರೆದ ಬಳಿಕ ಪೂಜೆಯಿಲ್ಲ. ಲಿಂಗವು ಘನ, ಪರಿಪೂರ್ಣ. ಆದ್ಯಂತಗಳಿಲ್ಲದ ನಿತ್ಯ ಸತ್ಯ. ಅದಕ್ಕೆ ನಾಮ ಸೀಮೆಗಳೆಲ್ಲಿ? ಆ ಘನದೊಳಗೆ ಸಂದು ಘನವಾಗಿ ನಿಂದ ಶರಣನಿಗೆ ಜೀವ ಭಾವದ ಮಿಸುಗಿಲ್ಲ, ಬಂಧ-ಮುಕ್ತಿಗಳೆಂಬವೂ ಇಲ್ಲ. ಹೀಗಿರುವಾಗ ಅವನಿಗೆ ಗುರುವೆಲ್ಲಿ? ಅವನೊಳಗೆ ಶಿಷ್ಯನೆಂಬ ಭಾವವೆಲ್ಲಿ? ಗುರು-ಶಿಷ್ಯರೇ ಇಲ್ಲವಾದ

ಬಳಿಕ ಮೊಡಮಡುವ ಆಚರಣೆವೆಲ್ಲಿ? ಬಟ್ಟ ಬಯಲನ್ನು ಬಿತ್ತಿ ಬೆಳೆಯಲೂ ಬರದು. ಒಕ್ಕಿ ತೂರಲೂ ಬರದು. ಅದು ಬಯಲು ತಾನೆ! ಅದು ಯಾವ ಕ್ರಿಯೆಗೂ ಅಳವಡದು, ಹಾಗೆಯೇ ಚಿದ್ಬಯಲ ಲಿಂಗ ಆ ಬಯಲೊಳಗೆ ಬಯಲಾದ ಶರಣ! ಆ ಚಿದ್ಬಯಲನ್ನು ಯಥಾವತ್ತಾಗಿ ಶಬ್ದ ಕುರುಹಿನಲ್ಲಿ ಇಡಲಾಗದು, ಭಾವಸಂಪುಟದ ಬಂಧಿಸಲಾಗದು ಎಂದು ಪ್ರತಿಪಾದಿಸಿದ್ದಾರೆ.

ಲಿಂಗವು ಪರಮ ಸತ್ಯ. ಅಮೃತ, ಜ್ಞಾನ ಘನ, ಪರಾತ್ಪರ ಚಿದ್ಬಯಲು, ನಿರಂಜನ ಆ ಲಿಂಗದೊಳು ಸಮರಸನಾದ ಶರಣನು ನಿಶ್ಚಿಂತ, ಮಹಂತ, ಮಹಾತ್ಮ, ಪರಮ ತೃಪ್ತ, ಪರಿಪೂರ್ಣಭಾವಿ ಹಾಗೂ ಸ್ವಾತ್ಮಾರಾಮನಹನು.

ಕಾರ್ಯರೂಪವಾದ ವಿಶ್ವ, ಕಾರಣರೂಪವಾದ ಮಹಾಲಿಂಗ ಇವೆರಡೂ ಕಾಲಾತೀತವಾದ, ಅಪರಿಣಾಮಶೀಲವಾದ ತತ್ತ್ವಗಳಲ್ಲ. ಇವೆರಡಕ್ಕೂ ಮೂಲ ಕಾರಣವಾದುದು ಪರವಸ್ತು. ಅದು ಬಯಲು. ನಿತ್ಯ ನಿರಂಜನ, ಅನಂತ ಶಾಂತಿಯ ನೆಲೆ. ಅದನ್ನು ಅಂತವ ಮತ್ತು ಅನುಭವಿಸಿದವ ಗುರು ಶಾಂತಿಯನ್ನೇ ಬಯಸಿ ಬಂದ ಶಿಷ್ಯನ ನಿರ್ಮಲಾಂತರಂಗದಲ್ಲಿ ಆತ ಆ ಬಯಲ ಜ್ಞಾನವೆಂಬ ಬೀಜವನ್ನು ಬಿತ್ತುತ್ತಾನೆ. ಶಿಷ್ಯನು ಭಕ್ತಿಜಲವನ್ನೆರೆದು ಆ ಜ್ಞಾನವೃಕ್ಷವನ್ನು ಬೆಳೆಸುತ್ತಾನೆ. ಬೆಳೆದ ಆ ಜ್ಞಾನ ವೃಕ್ಷದಲ್ಲಿ ಕಾಣಬಂದ ಪರವಸ್ತುವೇ 'ನಾನು' ಎಂಬ ಪ್ರಜ್ಞಾಫಲವನ್ನು ಆಶ್ವಾದಿಸುತ್ತಾನೆ. ಆಗ ಎಲ್ಲವೂ ಬಯಲು ಬಯಲಾಗುತ್ತದೆ. ಅವನ ಬದುಕು-ಭಾವನೆಗಳೂ ಬಯಲಾಗುತ್ತವೆ. ಅದು ಅವಿರಳ ಸ್ಥಿತಿ; ಅಂಗ ಲಿಂಗದೊಳು ಬೆರೆತು ಬಯಲಾದ ಬಯಲ ನಿಲುವು. ಹಿಂದಿನ ಮಹಾನುಭಾವರೆಲ್ಲ ಬಯಲಾದುದು ಹೀಗೆಯೇ. ಗುರುವಿನಿಂದ ಬಯಲನರಿತು, ಬಯಲನೇ ಪರಿಭಾವಿಸಿ ಆ ಬಯಲಿನೊಳಗೆ ತಮ್ಮನ್ನು ಅರ್ಪಿಸಿಕೊಳ್ಳುವುದೇ ಪೂಜೆ. ಅಂಥ ಪೂಜೆಗೈದವರವರು. ನಾನಾದರೂ ಅದನ್ನೇ ನಂಬಿದವ; ಅದನ್ನೇ ಪೂಜಿಸಿದವ; ಅದರಲ್ಲಿಯೇ ಬಯಲಾದವ ಎಂದು ಹೇಳಿದ್ದು ಕಂಡು ಬಂದ ಸತ್ಯ! ಶರಣನು ಬಯಲಾದುದು ಚಿದ್ಬಯಲಿನಲ್ಲಿ! ವಿಶ್ವದೊಳಗಿರುವ ಯಾವ ಉಪಮೆಯೂ ಅದನ್ನು ಉಪಮಿಸಲಾರದು. ಅಂದರೆ ಅದು ಉಪಮಾತೀತ. ವಿಶ್ವವನ್ನು ಅರಿಯುವ ಅರವಿನ ಹಿಂದೆ ಇರುವ ಮಹಾ ಅರಿವು ಅದು; ಅದು ಪರಾತ್ಪರ. ಜ್ಞಾತೃ-ಜ್ಞಾನ-ಜ್ಞೇಯ ಎಂಬ ಜ್ಞಾನ ತ್ರಿಪುಟಿಗೆ ಅದನ್ನು ಗ್ರಹಿಸುವ ಶಕ್ತಿಯಿಲ್ಲ; ಅಂದರೆ ಅದು ತ್ರಿಪುಟಿಗೆ ಮೀರಿದುದಾಗಿದೆ ಎಂದರ್ಥ. ಅದು ಅವೇದ್ಯ ಪರಮ ಜ್ಞಾನವೆಂದು ವೇದವೂ ಬಣ್ಣಿಸಿದೆ. ಹೀಗಾಗಿ 'ತತ್ತ್ವಮಸಿ' ಮುಂತಾದ ಮಹಾವಾಕ್ಯಗಳು ಅದನ್ನು ವೇದಿಸಲರಿಯದೆ ಶಾಂತವಾಗುತ್ತವೆ. ಅದು ಕೇವಲ ಅರಿವು-ಆನಂದಗಳ ಅಸ್ತಿತ್ವ. ಅಲ್ಲಿ ಒಂದು, ಎರಡೆಂಬ ಗಣನೆಗೆ ಅವಕಾಶವೇ ಇಲ್ಲ. ಆದುದರಿಂದ ದ್ವೈತಾದ್ವೈತಿಗಳೆಲ್ಲ ಅಲ್ಲಿ ಅಡಗಿ ಹೋಗುತ್ತಾರೆ.

ಅದನ್ನು ಭಾವಿಸಿಕೊಳ್ಳಿ; ಅದು ಭಾವಕ್ಕೆ ಬರದು. ಭಾವ–ನಿರ್ಭಾವಗೊಳ್ಳಲಿ; ಆ ಕ್ಷಣವೇ ಅಲ್ಲಿ ನಿರಾಳ ಮುಂದುವರೆದು–

**ಮನದ ಕೊನೆಯ ಮೊನೆಯ ಮೇಲೆ ನೆನೆದ ನೆನಹು**
**ಜನನ ಮರಣವ ನಿಲಿಸಿತ್ತು**
**ಜ್ಞಾನ ಜ್ಯೋತಿಯ ಉದಯ ಭಾನುಕೋಟಿಯ ಮೀರಿ**
**ಸ್ವಾನುಭವದ ಉದಯ ಜ್ಞಾನಶೂನ್ಯದಲಡಗಿದ**
**ಘನವನೇನೆಂಬೆ ಗುಹೇಶ್ವರಾ** **632**

**ಕರ್ಪೂರದ ಗಿರಿಯ ಉರಿ ಹಿಡಿದಡೆ ಇದ್ದಿಲುಂಟೆ?**
**ಮಂಜಿನ ಶಿವಾಲಯಕ್ಕೆ ಬಿಸಿಲ ಕಳಸವುಂಟೆ?**
**ಕೆಂಡದ ಗಿರಿಯ ಅರಗಿನ ಬಾಣದಲೆಚ್ಚಡೆ**
**ಮರಳಿ ಬಾಣವನರಸಲುಂಟೆ?**
**ಗುಹೇಶ್ವರನೆಂಬ ಲಿಂಗವನರಿದು**
**ಮರಳೀ ನೆನೆಯಲುಂಟೆ?** **683**

**ಸತ್ಯವನೊಳಕೊಂಡ ಮಿಥ್ಯಕ್ಕೆ ಭಂಗ**
**ಮಿಥ್ಯವನೊಳಕೊಂಡ ಸತ್ಯಕ್ಕೆ ಭಂಗ**
**ಸತ್ಯಮಿಥ್ಯವನೊಳಕೊಂಡ ಮನಕ್ಕೆ ಭಂಗ;**
**ಮನವನೊಳಕೊಂಡ ಜ್ಞಾನಕ್ಕೆ ಭಂಗ;**
**ಜ್ಞಾನವನೊಳಕೊಂಡ ನಿಜಕ್ಕೆ ಭಂಗವುಂಟೆ ಗುಹೇಶ್ವರಾ!** **686**

**ಘನವ ಕಂಡು ಮನ ಅವಗ್ರಾಹಕವಾಯಿತ್ತು**
**ಕಂಡು ಕಂಡು ಮನ ಮಹಾಘನವಾಯಿತ್ತು**
**ತಲ್ಲೀಯವಾಯಿತ್ತು ತದುಗತ ಶಬ್ದ**
**ಮುಗ್ಧವಾದುದನೇನೆಂಬೆ ಗುಹೇಶ್ವರಾ?** **688**

**'ನಾ' 'ನೀ' ಎಂಬ ಭೇದ ಅಂದೂ ಇಲ್ಲ, ಇಂದೂ ಇಲ್ಲ**
**ಸಾಲೋಕ್ಯನಲ್ಲ ಸಾಮೀಪ್ಯನಲ್ಲ ಶರಣ,**
**ಸಾರೂಪ್ಯನಲ್ಲ ಸಾಯುಜ್ಯನಲ್ಲ ಶರಣ**
**ಕಾಯನಲ್ಲ ಅಕಾಯನಲ್ಲ**
**ಗುಹೇಶ್ವರ ಲಿಂಗ ತಾನೆಯಾಗಿ** **689**

ಮೊದಲಿನ ವಚನ ಮೊದಲ ಸಾಲಿನಲ್ಲಿ 'ಮನದ ಕೊನೆಯ ಮೊನೆಯ ಮೇಲೆ ನೆನೆದ ನೆನಹು', ಮನೋಗತ ಭಾವದ ಹಾಗೂ ವೃತ್ತಿ ಜ್ಞಾನದ ತೆರೆಗಳೆಲ್ಲ ಅಡಗಿ ಹೋದರೆ ಅದು ಮನದ ಕೊನೆ, ಶಿವಯೋಗ ಸಮಾಧಿಯಿಂದುಂಟಾಗುವ ಮನೋನ್ಮನಿ ಸ್ಥಿತಿ. ಅಲ್ಲಿ ಇರುವುದು ಘನಲಿಂಗದ ನೆನಹು ಮಾತ್ರ. ದೇಹ ಭಾವವು ಅಲ್ಲಿ ಇಲ್ಲವಾಗಿ ಜನನ–ಮರಣಗಳ ಕಲ್ಪನೆ ಅಲ್ಲಿ ಉದಿಸದು. ಶರಣನು ಆ ಮನೋನ್ಮನಿ ಅವಸ್ಥೆಯಲ್ಲಿ ನಿಂದು ಕಾಣುವುದು ಪರಮ ಜ್ಯೋತಿರ್ಮಯ ಮಹಾಲಿಂಗವನ್ನು. ಅದರ ಬೆಳಗು ಹೇಗಿರುವುದೆಂದರೆ ಭಾನು ಕೋಟಿಯನ್ನು ಮೀರಿದುದು. ಅಂತಹ ಜ್ಯೋತಿರ್ಲಿಂಗದಲ್ಲಿ ಶರಣನು ತಾದ್ಯಾತ್ಮಗೊಂಡರೆ ಅದು ಸ್ವಾನುಭವ. ಲಿಂಗವೇ ತಾನಾಗಿ ನಿಂದ ನಿಲುವು. ಭಿನ್ನ ಜ್ಞಾನವೆಲ್ಲ ಶೂನ್ಯವಾದ ಸ್ಥಿತಿ ಎಂದು ಅಭಿವರ್ಣಿಸಿದ್ದಾರೆ ಅಲ್ಲಮರು. ಶರಣನು ಮಹಾಲಿಂಗೈಕ್ಯನಾದಾಗ ಭಿನ್ನ ಭಾವ. ಅವನಲ್ಲಿರದು ಅಲ್ಲಿ ಶಬ್ದ ನಿಶ್ಯಬ್ದ, ಮಾತು ಮೌನ.

ಕರ್ಪುರದ ಗಿರಿಯಿದೆ, ಅದಕ್ಕೆ ಉರಿ ತಗುಲಿದರೆ ಗಿರಿಯೆಲ್ಲ ಉರಿಯಾಗುತ್ತದೆ ಉರಿದ ಅನಂತರದಲ್ಲಿ ಇದ್ದಿಲೆಂಬುದೇ ಉಳಿಯಲಾರದು. ಮಂಜಿನ ಶಿವಾಲಯ ಅದಕ್ಕೆ ಬಿಸಿಲಿನ ಕಳಸವಿಟ್ಟರೆ ಮಂಜೆಂಬುದು ಉಳಿಯದು. ಕೆಂಡದ ಬೆಟ್ಟಕ್ಕೆ ಅರಗಿನ ಬಾಣದಿಂದ ಹೊಡೆದರೆ ಆ ಬಾಣವು ಕೆಂಡದಲ್ಲಿ ಅಡಗಿ ಹೋಗುತ್ತದೆ. ಹಾಗೆಯೇ ಶರಣ ಆತ! ಮಹಾಘನ ಲಿಂಗವನ್ನು ಅರಿಯುತ್ತಾನೆ. ಆ ಅರಿತ ಕ್ಷಣವೇ ಮರವೆಯಿಂದ ಬಂದ ಅಹಂ ಅಡಗಿ ಹೋಗುತ್ತದೆ. ಆಗ ಶರಣನಿರುವುದಿಲ್ಲ; ಏನಿರುವುದೆಲ್ಲ ಲಿಂಗ ಘನಲಿಂಗ ಮಾತ್ರ!

ಜಗವಿದು ಸತ್ಯ; ಶಾಸ್ವತ ಎಂದು ತಿಳಿವುದು ಮಿಥ್ಯಾ ಜ್ಞಾನವೃತ್ತಿ. ಜಗವಿದು ಸತ್ಯವಲ್ಲ, ಅಶಾಶ್ವತ ಎಂದು ತಿಳಿಯುವುದು ಸತ್ಯ ಜ್ಞಾನ ವೃತ್ತಿ. ಸತ್ಯ–ಮಿಥ್ಯಗಳೆರಡನ್ನು ಒಳಕೊಂಡುದು ಮನಸ್ಸು ಮಾತ್ರ. ಅಂಥ ಮರವನ್ನು ಅರಿವವನು ಜೀವಾತ್ಮ! ಅವನು ಜ್ಞಾನರೂಪ. ಆ ಜ್ಞಾನರೂಪದ ಜೀವಾತ್ಮನು ಪರ ವಸ್ತುವಿನಲ್ಲಿ ನಿರ್ವಯಲುಗೊಳ್ಳುತ್ತಾನೆ. ಆ ಪರ ವಸ್ತುವು ಅಂತಿಮ ಸತ್ಯ. ಮನೋಮುಕ್ತವಾದ ಜೀವಾತ್ಮನು ತನ್ನ ನಿಜ ಸ್ವರೂಪವಾದ ಪರ ವಸ್ತುವಿನಲ್ಲಿ ಬೆರೆದು ಬಯಲಾಗುತ್ತಾನೆ. ಶರಣನು ಆ ಸಾಧನೆಯನ್ನು ಮಾಡುತ್ತಾನೆ. ಕ್ರಮವಾಗಿ ಅವೆಲ್ಲವನ್ನು ಅಡಗಿಸಿ ಆ ಪರವಸ್ತುವಿನೊಳು ತಾನೇ ತಾನಾಗಿ ನಿಲ್ಲುತ್ತಾನೆ. ಅದು ಅವನ ಸಮರಸ ಸ್ಥಿತಿ ಎಂದು ಹೇಳಿರುವುದು ಸತ್ಯ! ಶರಣನ ಮನಸ್ಸು ಸಾಧನೆಯಿಂದ ಪರಿಶುದ್ಧವಾಗಿದೆ, ಉನ್ಮನಗೊಂಡಿದೆ. ಅದರ ಮೇರು–ಮಿತಿಗಳೆಲ್ಲ ಕಳಚಿ ಹೋಗಿವೆ. ಆದುದರಿಂದಲೇ ಅದಕ್ಕೆ ಮಹಾ ಘನ ವಸ್ತುವಿನ ದರ್ಶನ. ಆ ಘನ ವಸ್ತುವನ್ನು ಪೂರ್ಣವಾಗಿ

ಅವಗ್ರಹಿಸಿ, ಅದರೊಳಗೆಯೇ ತಲ್ಲೀಯಗೊಳ್ಳುತ್ತದೆ. ಆಗ ಮನವಿಲ್ಲ. ಮನೋಗತ ಜೀವಭಾವವಿಲ್ಲ. ಶರಣನು ಘನದೊಳಗೆ ಬೆರೆದು ಬೇರಿಲ್ಲದೆ ನೆಲೆಸುತ್ತಾನೆ. ಅಲ್ಲಿ ಯಾವುದರ ಸುಳಿವೂ ಇಲ್ಲ. ಶಬ್ದ ಮುಗ್ಧ ಸ್ಥಿತಿಯದು, ಮಾತಿಗೆ ನಿಲುಕದ ಘನಗಂಭೀರ ನಿಲುವದು ಎಂದಿರುವರು.

ಆದುದರಿಂದ, ಐಕ್ಯ ಸ್ಥಲವನ್ನೈದಿದ ಶರಣನೀಗ ಸಾಕ್ಷಾತ್ ಪರವಸ್ತು. ಅವನಿಗೂ ಈ ಘನ ವಸ್ತುವಿಗೂ ಭೇದವೆಂಬುದಿಲ್ಲ. ಸೃಷ್ಟಿಯ ಮುಂಚೆಯಾಗಲಿ, ಬಳಿಕವಾಗಲಿ ಸರಿ; ಎಂದೆಂದಿಗೂ ಅವರು ಅಭಿನ್ನರು; ಎರಡಲ್ಲ ಒಂದು. ಅಂತಹ ಶರಣನು ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ ಮತ್ತು ಸಾಯುಜ್ಯ ಎಂಬ ಚತುರ್ವಿಭ ಪದಸ್ಥನಲ್ಲ. ತನು ಭಾವವಿಲ್ಲವಾಗಿ ಅವನು ಕಾಯನಲ್ಲ; ನಾನು ಕಾಯ ಅಲ್ಲವೆಂಬ ಅಕಾಯ ಭಾವವಿಲ್ಲವಾಗಿ ಅಕಾಯನಲ್ಲ. ಅವನು ತಾನೇ ತಾನು. ಏನೂ ಏನೂ ಇಲ್ಲದ ನಿರುಪಮ ಲಿಂಗ ಇಂತು ಮಹಾಘನವು ಪರಮ ಸತ್ಯ! ಕಲ್ಪಿಸಲಾಗದ ನಿಜವಸ್ತು, ಭಿನ್ನ ಭೇದವಿಲ್ಲದ ಅಖಂಡ ವಸ್ತು. ಪರವಸ್ತುವದು ಬಟ್ಟ ಬಯಲು. ಅದು ಅದ್ಭುತ. ಅದರ ಸಮರಸ ಸುಖದ ಸವಿಯೂ ಅದ್ಭುತವೆಂದು ಇತ್ಯಾದಿಯಾಗಿ ಮೋಕ್ಷದ ಸುಖವನ್ನು ಅಲ್ಲಮರು ವರ್ಣಿಸಿದ್ದಾರೆ.

ಇದು ನಮ್ಮ ತುತ್ತಲ್ಲವೆಂದರೂ ಪ್ರಯತ್ನಿಸುವುದು ಮಾನವನ ಕರ್ತವ್ಯವಾಗಬೇಕೆಂದು ನನ್ನ ಕಳಕಳಿಯಿದೆ. ಹೀಗೆ ವೇಮನ ಅಲ್ಲಮರು ಮೋಕ್ಷ ಮಾರ್ಗದ ಅರಿವನ್ನು ತಮ್ಮ ತಮ್ಮ ಪದ-ಪದ್ಯ-ವಚನಗಳ ಮೂಲಕ ಗ್ರಂಥಸ್ಥಗೊಳಿಸಿದ್ದಾರೆ. ಅವು ನಮಗಿಂದು ದಾರಿದೀಪವಾಗಿವೆ. ಅರುಹಿನ ಜನ್ಮವನ್ನು ಧರಿಸಿದ ನಾವೆಲ್ಲ ಇವರಿಬ್ಬರೂ ಮಹಾಯೋಗಿಗಳ ಅನುಭವಾಮೃತವನ್ನು ಓದಿ ತಿಳಿದು ಪರಿಪಾಲಿಸಲು ಪ್ರಯತ್ನ ಮಾಡೋಣ!! ಇಂದಿನ ಕೊರೊನಾ ಮಹಾಮಾರಿಯ ನಿವಾರಣೆಗಿದು ತಕ್ಕ ಉಪಯುಕ್ತ, ವಿಚಾರ ಯೋಗ್ಯವಾಗಿದೆಯೆಂದು ನಾನು ಭಾವಿಸಿದ್ದೇನೆ.

❖❖❖

# ಅಧ್ಯಾಯ–ಹತ್ತು
# ಸಮಾರೋಪ

**"ಸತ್ಯ ಧರ್ಮ ವ್ರತಾಯ ಸಂಭವಾಮಿ ಉಘೇ ಉಘೇ"** ಎಂಬ ವ್ಯಾಕ್ಯೋಕ್ತಿಗೆ ಭಾರತ ದೇಶ ಅನ್ವರ್ಥಕವಾದುದು. ಧರ್ಮ ಸಂಸ್ಕೃತಿ, ಅಧ್ಯಾತ್ಮ, ಯೋಗ ಸಿದ್ಧಿ ಸಾಧನೆಗೆ ಮುಂಚೂಣಿಯಲ್ಲಿರುವ ದೇಶ ನಮ್ಮದು! ಅನೇಕ ಪುಣ್ಯ ಪುರುಷರು, ಋಷಿ–ವಹರ್ಷಿಗಳು, ಸಂತ–ಮಹಂತರು ಈ ಪುಣ್ಯ ನೆಲದಲ್ಲಿ ಆಗಿ ಹೋಗಿದ್ದಾರೆ. ಅವರೆಲ್ಲರೂ ತಮ್ಮ ಸಾಹಿತ್ಯ ಕೃತಿಗಳಲ್ಲಿ ಬರೆದಿಟ್ಟು ಅಮರರಾಗಿದ್ದಾರೆ. ಅವರು ಹಾಗೂ ಅವರ ಅಮರವಾಣಿಗಳೇ ನಮಗಿಂದು ಮಾರ್ಗದಶಿಕೆಗಳಾಗಿವೆ. ಇಡೀ ಪ್ರಪಂಚವೇ ಇಂಥ ಧಾರ್ಮಿಕ ರೀತಿ ನೀತಿ–ನಡಾವಳಿಗೆ ಮಾದರಿಯಾದ ದೇಶವಾಗಿದ್ದು ಎಲ್ಲರ ಚಿತ್ತ ಭಾರತದತ್ತ ಎನ್ನುವಂತಾಗಿದೆ. ಜನಸಂಖ್ಯಾ ದೃಷ್ಟಿಯಿಂದ ದ್ವಿತೀಯ ಸ್ಥಾನದಲ್ಲಿದ್ದರೂ ಬಹು ಭಾಷೆ, ಬಹುವೇಷಗಳಿದ್ದರೂ ಭಾವೈಕ್ಯತೆಯಲ್ಲಿ ನಾವೆಲ್ಲರೂ ಭಾರತೀಯರು ಒಂದೇ ದೇಶ–ಒಂದೇ ಭಾರತ ಎಂದು ನಡೆಯುತ್ತಿರುವ ಸಂಪ್ರದಾಯ ಬದ್ಧ ಸಂತ–ಶರಣರ ದೇಶವಿದು. ಭಕ್ತಿಗೆ ಮುಂಚೂಣಿಯಲ್ಲಿರುವ ದೇಶವೆಂದು ಖ್ಯಾತಿಯನ್ನು ಹೊಂದಿದೆ. ಕಾರಣ ಅನೇಕ ದಾರ್ಶನಿಕರು, ಬಾಳು ಬೆಳಗಿದ ಪುಣ್ಯಭೂಮಿ ಎಂಬ ಅಗ್ಗಳಿಕೆಗೆ ಪ್ರಸಿದ್ಧವಾಗಿರುವ ದೇಶ ನಮ್ಮದು! ಇಲ್ಲಿರುವಷ್ಟು ಯೋಗಿಗಳು, ತ್ಯಾಗಿಗಳು, ವಿರಾಗಿಗಳು, ದಾರ್ಶನಿಕರು, ತತ್ತ್ವವೇತ್ತರು, ವ್ಯಾಖ್ಯಾನಕಾರರು, ವಾಗ್ಗೇಯಕಾರರು, ತಪಸ್ವಿಗಳು, ಯೋಗವಾಸಿಷ್ಟರು. ಮಹಾಪುರುಷರು, ಸಾಧು–ಸಂತ–ಮಹಂತರು, ಧರ್ಮ ದೃಷ್ಟಾರರು ಮತ್ತೆಲ್ಲಿಯೂ ಸಿಗಲಾರರು, ದೊರಕಲಾರರು. ಅವರು ಬರೆದಿರುವ ವ್ಯಾಖ್ಯಾನಗಳು, ಉದ್ಗ್ರಂಥಗಳು, ವೇದೋಪನಿಷತ್ತುಗಳು, ವಚನಗಳು, ಕೀರ್ತನೆಗಳು, ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಪ್ರಸಾರಗೊಂಡು ಪ್ರಚಲಿತದಲ್ಲಿವೆ. ಅವುಗಳ ಆಧಾರದಿಂದ ಓದಿ ಅರಿತುಕೊಂಡು ಅನುಸರಿಸಿದರೆ ಇಡೀ ಪ್ರಪಂಚವೇ ನೀತಿ ಧರ್ಮಗಳ ಪರಂಧಾಮವಾಗುತ್ತದೆ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಅವರು ಬರೆದಿಟ್ಟ ಧಾರ್ಮಿಕ ಗ್ರಂಥಗಳು ಇಂದಿನವರ ಬದುಕಿಗೆ ದೀವಿಗೆಗಳಾಗಿ, ಮಾರ್ಗದರ್ಶಿಕೆಗಳಾಗಿ ಬೆಳಕು ನೀಡುತ್ತಲಿವೆ.

ಅವುಗಳತ್ತ ನಮ್ಮ ಗಮನ ಹರಿಸಬೇಕಾಗಿದೆ. ಕೊರೊನಾದಂತಹ ಮಹಾಮಾರಿಯನ್ನು ಓಡಿಸುವುದರ ಸಲುವಾಗಿ ಮತ್ತು ಶಾಂತಿ–ನೆಮ್ಮದಿ ಈ

ಪ್ರಪಂಚದಲ್ಲಿ ಅನವರತ ನೆಲೆಸಲಿ ಎಂಬುದರ ದೃಷ್ಟಿಯಿಂದಲಾದರೂ ನಾವೆಲ್ಲರೂ ಈ ದಿಸೆಯತ್ತ ಮುಖ ಮಾಡಬೇಕಾಗಿದೆ. ಇಂಥ ಪುಣ್ಯ ಪುರುಷರ ಉದ್ಗ್ರಂಥಗಳನ್ನು ಓದುತ್ತಾ ಕರಗತ ಮಾಡಿಕೊಳ್ಳುವುದರ ಜೊತೆಗೆ ಅನುಸರಿಸುವಂತಹ, ಪಾಲಿಸುವಂತಹ ಔದಾರ್ಯವನ್ನು ನಾವಿಂದು ಹೊಂದುವುದು ಅಗತ್ಯವಾಗಿದೆ. ಮನುಷ್ಯ ಬದುಕುವ ಈ ಭೂಮಿ ಸ್ವರ್ಗ ಧಾಮವಾಗಬೇಕಾದರೆ ಅವರಿತ್ತ ಸಾಹಿತ್ಯವನ್ನು ಓದುವ ಪ್ರಯತ್ನ ನಮ್ಮದಾಗಬೇಕು. ಕಲ್ಪನೆಗಳ ಸ್ವರ್ಗಕ್ಕಿಂತ ವಾಸ್ತವದ ಬದುಕು ನಮ್ಮದಾಗಬೇಕು. ಈ ಬದುಕಿನ ಪಯಣವು ಎಲ್ಲಿಂದ ಎಲ್ಲಿಯವರೆಗೆ ಎಲ್ಲಿಂದ ಆರಂಭವಾಗಿ ಎಲ್ಲಿಗೆ ಮುಕ್ತಾಯವಾಗುತ್ತದೆ. ಅಂದೇ ಈ ಜೀವನ ಎಲ್ಲಿಂದ ಪ್ರಾರಂಭವಾಗಿ ಎಲ್ಲಿಗೆ ಮುಕ್ತಾಯವಾಗುತ್ತದೆ ಎಂಬ ಅರಿವಾದರೂ ಮನುಷ್ಯನಿಗೆ ಇರಬೇಕಾಗುತ್ತದೆ. ಬದುಕು ಬರೀ ಬಂದು–ಹೋಗುವುದಲ್ಲ. ಮಾನವನ ಬದುಕು ಸಾರ್ಥಕವಾಗಬೇಕಾದರೆ ಧರ್ಮ ಮಾರ್ಗದತ್ತ ಭಕ್ತಿ–ಶ್ರದ್ಧೆಯಿಂದ ಸಾಗುವುದು, ಸಾಗಿಸುವುದು, ರೀತಿ ನೀತಿಯ ನಿಯಮಗಳನ್ನು ಅನುಸರಿಸುವುದು, ಮಾನವೀಯ ಮೌಲ್ಯಗಳನ್ನು ಅರಿತು ಆಚರಿಸುವುದು ಈ ಮುಂತಾದ ಸದ್ಗುಣಾಚಾರ–ವಿಚಾರಗಳನ್ನು ನಡೆಯಲ್ಲಿ ತೋರುವುದು. ಇದರಿಂದ ಮನಸ್ಸಿಗೆ ನೆಮ್ಮದಿ–ಸಂತಸ–ಸುಖ ಶಾಂತಿ ನೆಲೆಸುವುದು ಎಂದು ದಾರ್ಶನಿಕರು ಹೇಳಿರುವುದನ್ನು ಪಾಲನೆ ಮಾಡಿದೊಡೆ ನಾವೂ ಅವರಂತಾಗಲು ಸಾಧ್ಯವಿದೆ. ಈ ದೇಶದ ದಾರ್ಶನಿಕರು ಈ ಬದುಕಿನ ಕುರಿತು ಸಂಶೋಧನೆ ಮಾಡಿ ನಡೆದು ತೋರಿದರು. ಆದರೆ, ಅವರಿಗೆ ಸ್ವಾರ್ಥ ಇರಲಿಲ್ಲ. ಜೀವನದ ಎಳೆ ಎಳೆಗಳನ್ನು ಬಿಡಿಸಿ ನೋಡಿದರೆ, ನಿಸ್ವಾರ್ಥ ಸೇವೆಯೇ ನಮ್ಮ ಹಕ್ಕು ಎಂದು ಭಾವಿಸಿದರು. ಅವರಿಗಿದ್ದದ್ದು ಮಾನವನ ಕಲ್ಯಾಣ, ಲೋಕಕಲ್ಯಾಣ ಮನು ಕುಲದುದ್ಧಾರಕ್ಕೆಂದು ತಮ್ಮ ಬದುಕನ್ನೇ ಮುಡಿಪಾಗಿಟ್ಟವರವರು. ಮನು ಕುಲದ ಬದುಕಿನ ಸನ್ಮಾರ್ಗವನ್ನು ಜನರ ಕಣ್ಮುಂದೆ ತೆರೆದಿಡಬೇಕೆನ್ನುವುದು ಅವರ ಪರಮ ಉದ್ದೇಶವಾಗಿತ್ತು. ನರನು ನಾರಾಯಣನಾಗಬೇಕೆನ್ನುವ ಕನಸು ಕಂಡವರು. ಅವರ ಸನ್ಮಾರ್ಗದಲ್ಲಿ ಸಾಗುವುದೇ ಮನುಷ್ಯನ ನಿಜವಾದ ಬದುಕಿಗೆ ಅರ್ಥ ಬರುತ್ತದೆ ಎಂದು ಬಯಸಿದವರು. ಅಂಥ ದಿವ್ಯ ಮಹಾ ದಾರ್ಶನಿಕರ ಮಹಾ 'ಸಾಹಿತ್ಯ ರಾಶಿ' ನಮಗೀಗ ಲಭ್ಯವಾಗಿರುವಾಗ ನಾವು ಓದು ಬಲ್ಲವರಾದರೂ ಆ ದಿಸೆಯುತ್ತ ಸಾಗುವುದು ಉಚಿತ. ತಿಳಿದವರು ಈ ಕಾರ್ಯವನ್ನು ಮನಃಪೂರ್ವಕವಾಗಿ, ಹಸನು ಮನಸ್ಸಿನವರಾಗಿ ಸಾಧ್ಯವಿದ್ದಷ್ಟು ಸಾಧನೆಯತ್ತ ಚಿತ್ತ ಹರಿಸಿ ಮಾನವ ಧರ್ಮ ಜಾಗೃತಿಯ ಆಚಾರ–ವಿಚಾರಗಳನ್ನು ಇಂದಿನವರಲ್ಲಿ ಉತ್ತು ಬಿತ್ತುವುದು, ಒಳ್ಳೆಯ ಫಸಲು ಬರುವಂತೆ ಪ್ರಯತ್ನಿಸುವುದು ಇಂದಿನ ಕಾಲದ ಅಗತ್ಯವಾಗಿದೆ. ಚರಿತ್ರೆಗಿಂತಲೂ ಮನುಷ್ಯನ ಚಾರಿತ್ರ್ಯವೇ ಮುಖ್ಯ! ವ್ಯಕ್ತಿಗಿಂತ ವ್ಯಕ್ತಿತ್ವವೇ ಮುಖ್ಯ ಎಂಬವುಗಳ ಅರಿವು ಪ್ರತಿಯೊಬ್ಬರಲ್ಲಿಯೂ ಇರಬೇಕಾಗುತ್ತದೆ.

ಮಾನವ ಮಹಾಮಾನವನಾಗುವ ಶಕ್ತಿಹೊಂದಿದ್ದಾನೆ ಎಂದು ಅರುಹಿದ ಮಹಾತ್ಮರ ಅಮರವಾಣಿಗಳನ್ನು ಪಾಲಿಸಲು ಸನ್ನದ್ಧರಾಗುವುದೊಳಿತು. 'ಒಳಿತು ಮಾಡಿದರೆ ಪುಣ್ಯ ಪ್ರಾಪ್ತಿ–ಕೇಡು ಮಾಡಿದರೆ ಪಾಪ ಪ್ರಜ್ಞೆ ಬಿಡದೇ ಕಾಡುವುದು' ಎಂಬುದನು ಅರಿತುಕೊಂಡು ನಡೆ ಮನುಜ! ದೇವರು ಎಲ್ಲಿಲ್ಲ, ಎಲ್ಲದರಲ್ಲಿಯೂ ಆತನಿದ್ದಾನೆ. ಜಗದೊಳಗೆ ತಾನು ತನ್ನೊಳಗೆ ಜಗವಿಹುದು, ಜಗದೊಳಗಿದ್ದು ಇಲ್ಲದಂತಿರುವವನು ಆ ಪರಮಾತ್ಮ! ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳೆಂಬ ಪಂಚಮಹಾತತ್ತ್ವಗಳಲ್ಲಿರುವವನೂ ಅವನೇ! ಜಗತ್ತಿನ ಚರಾಚರ ವಸ್ತುಗಳೆಲ್ಲವೂ ಆತನ ಆಣತಿಯಂತೆಯೇ ನಡೆಯುವವು. ಇದು ಜಗದ ನಿಯಮ. ಅದುಕಾರಣ ನಾವು ಆತನನ್ನು ಕುರಿತು ಉಪಾಸನೆ, ಆರಾಧನೆ, ಧ್ಯಾನ, ಸ್ಮರಣೆ, ಮಾಡುವುದು. ಸನ್ಮಾರ್ಗ ಇದೆಲ್ಲವನ್ನು ಕರುಣಿಸಿದಾತನ ನಾಮ ಸ್ಮರಣೆ ಮಾಡಿದಡೆ ನಮಗೆ ಸನ್ಮಂಗಳವಾಗುವುದು. ನಮ್ಮೆಲ್ಲರ ದೇಹದಲ್ಲಿರುವ ಆತ್ಮನೇ ಪರಮಾತ್ಮನ ಸ್ವರೂಪನು. ಆದುದರಿಂದ ಆತ್ಮ ತತ್ತ್ವದ ಅರಿವು ಮೂಡಿಸಿಕೊಂಡು ನಡೆಯುವುದು ಎಲ್ಲರನ್ನು ತನ್ನಂತೆ ಕಾಣುವುದು. ಪರೋಪಕಾರ ಮಾಡುವುದು. ಭಕ್ತಿಯಿಂದ ಕರುಣಿಸಿದಾತನನ್ನು ನೆನೆನೆನೆದು ಸಕಲ ಪಡಿ ಪದಾರ್ಥಗಳನ್ನು ಆತನಿಗೇ ಅರ್ಪಿಸಿ ಕೃತಾರ್ಥರಾಗುವುದು. ಇವು ಮಾನವನಿಗಿರುವ ಮೌಲ್ಯವರ್ಧಕಗಳು ಎಂದು ಭಾವಿಸಿ ಆಚರಿಸಬೇಕು. ಗುರು ಹಿರಿಯರ ಸೇವೆ ಮಾಡುವುದು ಮಾನವನ ಆದ್ಯಕರ್ತವ್ಯವಾಗಬೇಕು. ವೇಮನರು ಹೇಳಿರುವಂತೆ–

**ತಾಯಿಯೇ ಪಾರ್ವತಿಯು, ತಂದೆಯೇ ಶಂಭುವು**
**ಪ್ರಮಥ ಗಣವು ಅಖಿಲ ಬಂಧು–ಬಳಗವು**
**ತಾನು ಹುಟ್ಟಿದ ಮನೆಯು ಕೈಲಾಸವು**
**ವಿಶ್ವದಾಭಿರಾಮ ಕೇಳು ವೇಮ**

**ತಾಯಿ ತಂದೆಯರೇ ತನಗೆ ಗುರು ದೈವ;**
**ತಾಯಿ ತಂದೆಯರೇ ತನಗೆ ಜೋಡು**
**ತಾಯಿ ತಂದೆಯಿಂದ ತನುವು ಆಯಿತಲ್ಲ**
**ವಿಶ್ವದಾಭಿರಾಮ ಕೇಳು ವೇಮ.**

ಕುಟುಂಬ ಜೀವನದಲ್ಲಿ ಕೂಡಿ ಬಾಳಿದರೆ ಸ್ವರ್ಗ ಸುಖವೆನ್ನುವಂತೆ ತಂದೆ–ತಾಯಿಯರನ್ನು ದೇವರೆಂದು ಅವರಿರುವಾಗಲೇ ಕಾಣಬೇಕು. ಅವರು ತೀರಿದಾಗ ಪೂಜಿಸುವುದಲ್ಲ. 'ಮಾತೃದೇವೋ ಭವಃ– ಪಿತೃದೇವೋ ಭವಃ' ಎಂದು ಶ್ರುತಿಯು ಇದನ್ನೇ ಹೇಳುತ್ತದೆ ಎಂಬುದಾಗಿ ಮೇಲಿನ ಪದ್ಯಗಳಲ್ಲಿ ವೇಮನರು ಅರುಹಿದ್ದಾರೆ.

ಆದುದರಿಂದ ನಾವೆಲ್ಲರೂ ಪ್ರಸನ್ನ ಮನಸ್ಕರಾಗಿ ಅನುದಿನವೂ ಕಾಯಕ ಮಾಡಿ, ತಂದೆ-ತಾಯಿ, ಗುರು-ಹಿರಿಯರ-ಜಂಗಮರ ಸೇವೆ ಮಾಡಿ ಪುಣ್ಯ ಪ್ರಾಪ್ತಿ ಮಾಡಿಕೊಳ್ಳಿರೆಂದುದಾಗಿ ಮೇಲಿನ ಪದ್ಯಗಳಲ್ಲಿ ಮಹಾಯೋಗಿ ವೇಮನರು ತಿಳಿಸಿದ್ದಾರೆ.

ಆದುದರಿಂದ ಪ್ರಸ್ತುತ ಗ್ರಂಥದಲ್ಲಿ ವೇಮನಾಲ್ಲಮರು ಪ್ರತಿಪಾದಿಸಿದ ಧರ್ಮ-ದೇವರು-ಗುರು-ಹಿರಿಯರುಗಳ ಸೇವೆ ಮಾಡುವುದರಲ್ಲಿಯೇ ದೇವರನ್ನು ಕಾಣುವುದು ಎಂದುದಾಗಿ ಹೇಳಿರುವುದನ್ನು ಅವರವರ ಪದ-ಪದ್ಯ ಹಾಗೂ ವಚನಗಳನ್ನು ಆಯ್ದುಕೊಂಡು ವಿವರಿಸಲು ಪ್ರಯತ್ನಿಸಲಾಗಿದೆ. ಇಂಥ ಸಂಕ್ಷಿಪ್ತ ಮಾಹಿತಿಯು ಮೊದಲನೆಯ ಅಧ್ಯಾಯ 'ವಿಷಯ ಪ್ರವೇಶ' ದಲ್ಲಿದೆ. ಎರಡನೆಯ ಅಧ್ಯಾಯದಲ್ಲಿ ಮಹಾಯೋಗಿ ವೇಮನ ಜೀವನ-ವೃತ್ತಾಂತವಿದ್ದು; ಮೂರನೆಯ ಅಧ್ಯಾಯದಲ್ಲಿ ಮಹಾಯೋಗಿ ವೇಮನರ ಪದಗಳ ವೈಶಿಷ್ಟ್ಯದ ಕುರಿತು ಹೇಳಲಾಗಿದೆ. ನಾಲ್ಕನೆಯ ಅಧ್ಯಾಯ ಅಲ್ಲಮ ಪ್ರಭುವಿನ ಜೀವನ ವೃತ್ತಾಂತದ ವಿವರಣೆಯಿದ್ದರೆ; ಐದನೆಯಧ್ಯಾಯವು ಅಲ್ಲಮಪ್ರಭುದೇವರ ವಚನಗಳ ವೈಶಿಷ್ಟ್ಯದ ಕುರಿತು ಹೇಳಲಾಗಿದೆ. ಆರನೆಯ ಅಧ್ಯಾಯದಲ್ಲಿ ವೇಮನಾಲ್ಲಮರ ಸಾಹಿತ್ಯದಲ್ಲಿ ಭಕ್ತ-ಭಕ್ತಿ ಇದೆ. ಏಳನೆಯ ಅಧ್ಯಾಯವು ವೇಮನಾಲ್ಲಮರ ಸಾಹಿತ್ಯದಲ್ಲಿ ಗುರು ಕಾರುಣ್ಯ ಸ್ಥಲ-ಗುರು ಮಹಿಮೆಯ ಕುರಿತಾಗಿದೆ. ಹಾಗೆಯೇ ಎಂಟನೆಯ ಅಧ್ಯಾಯದಲ್ಲಿ ವೇಮನಾಲ್ಲಮರ ಸಾಹಿತ್ಯದಲ್ಲಿ ದೇವರು (ಆತ್ಮ-ಪರಮಾತ್ಮ)! ಚರ್ಚೆಯಿದೆ. ಒಂಭತ್ತನೆಯ ಅಧ್ಯಾಯವು ವೇಮನಾಲ್ಲಮರ ಸಾಹಿತ್ಯದಲ್ಲಿ ಮೋಕ್ಷದ ಪರಿಕಲ್ಪನೆಯ ನೋಟವಿದೆ. ಕೊನೆಯ ಅಧ್ಯಾಯ ಹತ್ತರಲ್ಲಿ ಉಪಸಂಹಾರ ಅಥವಾ ಸಮಾರೋಪವಿದೆ.

ಹೀಗೆ ಒಟ್ಟು ಹತ್ತು ಅಧ್ಯಾಯಗಳಲ್ಲಿ ಇಬ್ಬರೂ ಮಹಾತ್ಮರ, ಮಹಾಯೋಗಿಗಳ ಪದ-ಪದ್ಯ ಹಾಗೂ ವಚನಗಳನ್ನು ಅವರವರ ಸಾಹಿತ್ಯ ಕೃತಿಗಳಿಂದಾಯ್ದುಕೊಂಡು ವಿವರಿಸಲು ಪ್ರಯತ್ನಿಸಲಾಗಿದೆ. ಇಬ್ಬರೂ ಮಹಾತ್ಮರುಗಳ ಆಚಾರ-ವಿಚಾರಗಳಲ್ಲಿ ಮೇಳವಿಕೆ, ಸಾಮ್ಯತೆಗಳೇ ಒಡೆದು ಕಾಣುತ್ತವೆ. ಇಬ್ಬರೂ ವಿರಾಗಿಗಳು, ತ್ಯಾಗಿಗಳು, ಸಂಸಾರದ ಜಂಜಾಟವನ್ನು ತಳ್ಳಿದವರು. ಚತುರ್ವಿಧ ಪುರುಷಾರ್ಥಗಳನ್ನು ಕಂಡು ಹೀಗಳೆದಿರುವರು. ಅವರು ಹೇಳಿದ ಸಂಸಾರ ಹೇಯ ಸ್ಥಲದ ಭಾಗದಲ್ಲಿ ಇಂಥ ಸಂಗತಿಗಳನ್ನು ಕಾಣಬಹುದು.ಇಬ್ಬರೂ ಮಹಾನುಭಾವರು ಮಾನವನ ಬದುಕಿಗೆ ಬೇಕಾಗಿರುವ ಜೀವನ ಮೌಲ್ಯಗಳನ್ನು ಕೊಟ್ಟಿದ್ದಾರೆ. ಅವರ ಸಾಹಿತ್ಯ ಮನುಕುಲದ ಉದ್ಧಾರದ ಕೈದೀವಿಗೆಗಳಂತಿವೆ. ಕತ್ತಲೆಯಿಂದ ಬೆಳಕಿನೆಡೆಗೆ ಸಾಗುವ ನುಡಿ ತೋರಣಗಳಂತಿವೆ. ಆದುದರಿಂದ ನಾವೆಲ್ಲರೂ ಅನನ್ಯ ಆಸಕ್ತಿ, ಭಕ್ತಿ ಶ್ರದ್ಧೆಯಿಂದ

ಓದಿ ಅರ್ಥ ಮಾಡಿಕೊಂಡು ಸನ್ಮಾರ್ಗದಲ್ಲಿ ನಡೆಯುವಂತಹ ಸದಾಶಯವು ನಮ್ಮದಾಗಬೇಕು. ಇವರಿಬ್ಬರೂ ಮಹಾತ್ಮರ ಕೊಡುಗೆ ಅಪಾರವಾಗಿದೆ. ಕಲ್ಪದಲ್ಲಿ ಅಲ್ಪವನ್ನು ನೀಡಲು ಪ್ರಯತ್ನಿಸಿದ್ದೇನೆ. ಅವರ ಪದ ಮತ್ತು ವಚನಗಳನ್ನು ಓದಿ ಅರ್ಥೈಸಿಕೊಂಡು ನನ್ನ ಮತಿಗೆ ಹೊಳೆದಂತೆ ಹೇಳಲು ಪ್ರಯತ್ನಿಸಿದ್ದೇನೆ. ಇಂದಿನ ವೈಚಾರಿಕತೆ ಮತ್ತು ವೈಜ್ಞಾನಿಕತೆಯ ಯುಗದಲ್ಲಿ ನಾವಿದ್ದರೂ ಅಧ್ಯಾತ್ಮದ ಅನುಸಂಧಾನದೊಂದಿಗೆ ಬಾಳಿದರೆ ಸ್ವರ್ಗ ಸುಖ ಪ್ರಾಪ್ತಿಯಾಗದಿದ್ದರೂ ಚಿಂತೆಯಿಲ್ಲ ಮನಸ್ಸಿಗೆ ನೆಮ್ಮದಿ–ಶಾಂತಿ ಮತ್ತು ಸಮಾಧಾನ ಸಿಗುತ್ತದೆ ಎಂಬ ಭಾವ ನನ್ನದು!! ಇಂತಿವರ ಸಾಹಿತ್ಯವನ್ನು ನಾವೆಲ್ಲ ಮೆಲಕು ಹಾಕುತ್ತ ಅದರಂತೆ ನಡೆಯಲು ಪ್ರಯತ್ನಿಸೋಣ!!

❖❖❖

# ಸಹಾಯಕ ಗ್ರಂಥಗಳು


1. ವೇಮನ ವಿಶ್ವಗೀತೆ–ಸಂಪಾದಕರು, ಶ್ರೀ ಎಸ್.ಆರ್.ಪಾಟೀಲ ಪ್ರಕಾಶಕರು– ಮಹಾಯೋಗಿ ವೇಮನ ಪೀಠ, ಕ.ವಿ.ವಿ. ಪ್ರಸಾರಾಂಗ ಧಾರವಾಡ 1998.
2. ವೇಮನ ಗೀತ–ಭಾಗ 1 ಮತ್ತು ಭಾಗ 2 ಪ್ರಕಾಶಕರು; ವಿಶಾಲ ಕರ್ನಾಟಕ ಪ್ರಕಟಣಾಲಯ, ಹುಬ್ಬಳ್ಳಿ.
3. ವೇಮನ ಮತ್ತು ತಿರುವಳ್ಳುವರ ಲೇಖಕರು: ಡಾ. ಆರ್.ಬಿ.ಚಿಲಮಿ ಪ್ರಕಾಶಕರು; ಮಹಾಯೋಗಿ ವೇಮನ ಪೀಠ, ಪ್ರಸಾರಾಂಗ, ಕ.ವಿ.ವಿ. ಧಾರವಾಡ 2019.
4. ವೇಮನ ಮತ್ತು ಸರ್ವಜ್ಞ; ಲೇಖಕರು; ಡಾ. ಆರ್.ಬಿ.ಚಿಲಮಿ. ಪ್ರಕಾಶಕರು: ಮಹಾಯೋಗಿ ವೇಮನ ಪೀಠ, ಕ.ವಿ.ವಿ. ಧಾರವಾಡ 2018.
5. ಮಹಾಯೋಗಿ ವೇಮನ ಚರಿತಾವೃತ: ಲೇಖಕರು ಡಾ. ಆರ್.ಬಿ.ಚಿಲಮಿ. ಪ್ರಕಾಶಕರು; ನಿವೇದಿತಾ ಪ್ರಕಾಶನ, ಬೆಂಗಳೂರು 2019.
6. ಅಲ್ಲಮಪ್ರಭುದೇವರ ವಚನ ಸಂಗ್ರಹ – ಸಂಪುಟ 2 ಸಂಪಾದಕರು: ಡಾ. ಬಿ.ವ್ಹಿ. ಮಲ್ಲಾಪುರ, ಪ್ರಕಾಶಕರು: ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರಕಾರ, ಬೆಂಗಳೂರು, 2001.
7. ಕಾಯಕವೇ ಕೈಲಾಸ ಕಾಣಿರೋ ಲೇಖಕರು; ಡಾ. ಆರ್.ಬಿ.ಚಿಲಮಿ, ಪ್ರಕಾಶರು ಎಸ್.ಎಲ್.ಎನ್.ಪಬ್ಲಿಕೇಶನ್, ಬೆಂಗಳೂರು, 2017.
8. ಅಲ್ಲಮಪ್ರಭುದೇವರ ವಚನ ನಿರ್ವಚನ(ಪೂಜ್ಯ) ಶ್ರೀಸಿದ್ಧೇಶ್ವರ ಸ್ವಾಮಿಗಳು, ಪ್ರಕಾಶಕರು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 2017.


❖❖❖